ಪಕ್ಕಕ್ಕೆ ಬಿದ್ದಿರುತ್ತವೆ. ಈ ಬಗ್ಗೆ ಪತ್ರ ಕೂಡಾ ನಾನು ಬರೆದಿದ್ದೇನೆ. ಈ ಬಗ್ಗೆ ಒಂದುಸಾರಿ ಮಾನ್ಯ ಚಂದ್ರಶೇಖರ್ ಅವರು ಮಡಿಕೇರಿಗೆ ಬಂದಿದ್ದಾಗ ಸ್ಥಳ ಪರೀಕ್ಷೆ ಮಾಡಿದ್ದಾರೆ. ಆದರೆ ಈ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆಜಾಗ ನಮ್ಮದು ಎಂದು ಕೆಲವರು ಅಲ್ಲಿ ಹೇಳುತ್ತಿದ್ದು ಆದು ಸರ್ಕಾರದ ಜಾಗ ಎಂದು ಸರ್ಕಾರ ಹೇಳುತ್ತದೆ. ಒಂದು ಪಕ್ಷ ಇದು ಖಾಸಗೀ ಜಾಗ ಆಗಿದ್ದರೆ ಆ ಬಗ್ಗೆ ಪರಿಹಾರ ಕೊಟ್ಟು ಅದನ್ನು ಪಡೆದುಕೊಂಡು ಅಲ್ಲಿನ ಸಾರ್ವಜನಿಕರಿಗೆ ಉಪಕಾರ ಮಾಡಿ ಕೊಡಬೇಕಾಗಿ ವಿನಂತಿ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಡಳಿತ ಸಚಿವರು).— ಆಗಬಹುದು ಅಧ್ಯಕ್ಷರೇ.

FINANCIAL BUSINESS

DISCUSSION AND VOTING ON THE DEMANDS FOR GRANTS FOR THE YEAR 1984-85

Demand No. 53 (Co-operation)

SRI. R. L. JALAPPA (Minister for Co-opration).—

Sir, on the recommendation of the Governor. I beg to move :

"that asum not execeeding Rs. 22·08,70,000 on Revenue Account and Rs. 22,53.70,000 on Capital Account to be Granted to the Covernment to defray the chrges which will come incouse of payment during the financial year ending 31st day of March 1985 in respect of Co-operation (Excluding Regulated Markets)."

Demand No. 54 (Regulated Market)

"That a sum not exceeding Rs. 4,77,30,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of regulated Markets."

The Question was proposed.

Demand No.55 (Rural Water Supply and Sanitation)

SRI A. LAKSHMISAGAR (Minister for law and Parlimentary Affairs).—Sir, on behalf of the Hon'ble Minister for Rural Development anq Panchayat Raj, on the recommendation of the Governor, I beg to move:

"That a sum not exceeding Rs. 66,78,00,000 on Revenue Account be granted to the Government to defray the charges which will come in course of payment during the financial year ending 3Ist day of march 1985 in respect of Rural Water Supply and Sanitation."

Demand No. 56 (Community Development)

"That a sum not exceeding Rs. 12,70,26,000 on Revenue Account and Rs. 16,00,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Community Development."

Demand No. 57 Integrated Rural Development Programme

"That a sum not exceed Rs. 41,40,89,000 on Revenue Accouunt be granted to the Government to defary the charges which will come in course of payment during the financial year ending 31st day of March 1985 in respect of Integrated Rural Development Programmes."

Demand No. 58 Rural Employment Programmes

"That a sum not exceeding Rs. 46,39,14,000 on Revenue Account be grented to the Government to defray the charges which will come in course of payment during the financial year ending 31st day of March 1985 in respect of Employment Affirmation Scheme."

The question was proposed.

MR. SPEAKER.—Motion moved. All the Demands are before the House for discussion. Sri H. D. Chowdaiah, will initiate the discussion.

(MR. DEPUTY SPEAKER SRI VEERANNA in the Chair)

†ಶ್ರೀ ಎಚ್. ಡಿ. ಚೌಡಯ್ಯ (ಕೆರಗೋಡು).—ಮಾನ್ಯ ಅಧ್ಯಕ್ಷರೇ, ಈಗ ಏನು ಸನ್ಮಾನ್ಯ ಮಂತ್ರಿಗಳು ಸದನದ ಮುಂದೆ ಆರು ಬೇಡಿಕೆಗಳನ್ನು ಇಟ್ಟಿದ್ದಾರೆ ಅವುಗಳ ಬಗ್ಗೆ ನನ್ನ ಕೆಲವಾರು ಅನಿಸಿಕೆಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಪ್ರಥಮವಾಗಿ ಸಹಕಾರಿ ಕ್ಷೇತ್ರದ ಬೇಡಿಕೆಗೆ ಸಂಬಂಧಪಟ್ಟಹಾಗೆ ಕೆಲವರು ಮಾತುಗಳನ್ನು ಆಡುತ್ತೇನೆ. ಸಹಕಾರಿ ಕ್ಷೇತ್ರ ಸಮಾಜದ ಸರ್ವತೋಮುಖವಾದ ಏಳಿಗೆಗೆ, ಅದರಲ್ಲೂ ಆರ್ಥಿಕವಾಗಿ ಸಾಮಾಜಿಕವಾಗಿ ಸಮಾಜದ ಉನ್ನತಿ ಆಗಬೇಕಾದರೆ ಸಹಕಾರಿ ಕ್ಷೇತ್ರ ಬಹಳ ಪ್ರಾಮುಖ್ಯವಾದುದು ಎನ್ನುವ ಮಾತನ್ನು ನಾನು ಒತ್ತಿ ಒತ್ತಿ ಹೇಳಬೇಕಾಗುತ್ತದೆ. ಸಹಕಾರಿ ಕ್ಷೇತ್ರಕ್ಕೆ, ಸಹಕಾರಿ ಚಳುವಳಿಗೆ, ಈ ರಾಜ್ಯದಲ್ಲಿ, ಈ ದೇಶದಲ್ಲಿ ಸುಮಾರು ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸ ಇದೆ, ಪರಂಪರೆ ಇದೆ. ಈ ಒಂದು ಇತಿಹಾಸ ಮತ್ತು ಪರಂಪರೆಯನ್ನು ನೋಡಿದ್ದೇ ಆದರೆ ನನಗಲ್ಲ ನನ್ನಂಥಾ ಈ ದೇಶದಲ್ಲಿ ಇರತಕ್ಕ ಸಾವಿರಾರು ಜನ ಸಹಕಾರಿಗಳು ಏನು ಇದ್ದಾರೆ, ಈ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ಜನ ಏನು ಇದ್ದಾರೆ ಇವರು ಒಂದಲ್ಲ, ಎರಡು ನಾಲ್ಕಾರು ಸಾರಿ ಯೋಚನೆ ಮಾಡಬೇಕಾದ ವಿಷಯ ಇದಾಗಿದೆ. ಇವತ್ತು ಸಹಕಾರಿ ಕ್ಷೇತ್ರ ಉದ್ದಗಲವಾಗಿ ವಿಸ್ತಾರಗೊಂಡಿದೆ. ಹಾಗೂ ಇದು ಇನ್ನೂ ಬೆಳೆಯಬೇಕಾಗುತ್ತದೆ. ಸಮಾಜದ ಒಂದು ಏಳಿಗೆಗೆ ಸಹಕಾರಿ ಕ್ಷೇತ್ರ ಎಷ್ಟು ಬೇರು ಬಿಟ್ಟಿದೆ ಎಂಬುದನ್ನು ಯೋಚನೆ ಮಾಡುವುದಾದರೆ ನಮಗೆ ಸ್ವಾತಂತ್ರ್ಯ ಬಂದು ೩೬–೩೭ ವರ್ಷಗಳಾದವು. ಈ ವರ್ಷಗಳಲ್ಲಿ ನಮ್ಮದೇ ಆದ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸರ್ಕಾರಗಳು, ನಮ್ಮದೇ ಎಂದರೆ ಬರೀ ಕಾಂಗ್ರೆಸ್ ಪಕ್ಷ ಎಂದಲ್ಲ ಅಥವಾ ಜನತಾ ಪಕ್ಷ ಎಂದಲ್ಲ ಜನರ ಪ್ರತಿನಿಧಿಗಳು ನಡೆಸುವ ಸರ್ಕಾರಗಳು ಈ ದೇಶದಲ್ಲಿ, ಈ ರಾಜ್ಯದಲ್ಲಿ, ಈ ಸಹಕಾರಿ ಕ್ಷೇತ್ರವನ್ನು ನಡೆಸಿಕೊಂಡು ಬಂದಿವೆ.

೧೧-೦೦ ಎ.ಎಂ.

ಈ ಒಂದು ಸಹಕಾರಿ ಕ್ಷೇತ್ರ ಗುಣಮಟ್ಟದಲ್ಲಿ ಎಷ್ಟು ಬೆಳೆಯಬೇಕಾಗಿತ್ತೋ ಆ ಮಟ್ಟದಲ್ಲಿ ಬೆಳೆದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಇದು ಗುಣಮಟ್ಟದಲ್ಲಿ ಬೆಳೆಯದೇ ಹೋಗಬೇಕಾದರೆ ಬಹುಶಃ ಈ ಸಹಕಾರಿ ಕ್ಷೇತ್ರದಲ್ಲಿ ರಾಜಕಾರಣ ಒಂದಲ್ಲ ಒಂದು ರೀತಿಯಲ್ಲಿ ಮೈಗೂಡಿಕೊಂಡು ಬಂದದ್ದು ಪ್ರಬಲವಾದ ಕಾರಣ ಎಂದು ನಾವೆಲ್ಲರೂ ಒಪ್ಪಬೇಕಾಗುತ್ತದೆ. ನಾಲ್ಕಾರು ದಿವಸಗಳ ಹಿಂದೆ ನಮ್ಮ ಸಹಕಾರಿ ತಿದ್ದುಪಡಿ ವಿಧೇಯಕವನ್ನು ಚರ್ಚೆಗೆ ತೆಗೆದುಕೊಂಡು ಬಂದ ಸಂದರ್ಭದಲ್ಲಿ ಮಾನ್ಯ ಸಹಕಾರ ಮಂತ್ರಿಗಳಿಗೆ, ಸ್ವಚ್ಛತೆಯಲ್ಲಿ ನಿಮಗೆ ಮನಸ್ಸು ಇದ್ದರೆ ನಾಮಕರಣವನ್ನು ಕೈಬಿಡಿ ಎಂದು ಹೇಳಿದಾಗ ಅವರು ಒಂದು ಮಾತನ್ನು ಹೇಳಿದರು, ವೈಯಕ್ತಿಕವಾಗಿ ನಾನು ಒಪ್ಪುತ್ತೇನೆ ಆದರೆ ನಾವೆಲ್ಲರೂ ರಾಜಕಾರಣದಲ್ಲಿರತಕ್ಕ ಕಾರಣ ಇದನ್ನು ನಮ್ಮ ಸಾರ್ವಜನಿಕರ ಜೊತೆಯಲ್ಲಿ ಸಮಾಲೋಚನೆ ಮಾಡಬೇಕಾಗುತ್ತದೆ ಎಂದು ಹೇಳಿದರು. ನಾನು ವೈಯಕ್ತಿಕವಾಗಿ ನಿಂದನೆ ಮಾಡುತ್ತಿಲ್ಲ, ಜನತಾ ಸರ್ಕಾರವನ್ನು ನಿಂದನೆ ಮಾಡುತ್ತಿಲ್ಲ, ಇದು ರಾಷ್ಟ್ರದಲ್ಲಿ ಪರಿಪಾಠವಾಗಿ ತಲೆ ತಲಾಂತರದಿಂದ ಬಂದಿರತಕ್ಕದ್ದು. ಈಗಲೂ ಸಹ ಸಹಕಾರ ಮಂತ್ರಿಗಳ ಬಗ್ಗೆ ವೈಯಕ್ತಿಕವಾದ ಗೌರವ ಇದೆ. ಈ ಸಹಕಾರಿ ಕ್ಷೇತ್ರವನ್ನು ಮುನ್ನಡೆಸಲು ಇದರಲ್ಲಿ ಸಾಧನೆಯನ್ನು ಸಾಧಿಸುವ ಬಗ್ಗೆ ಅವರಿಗೆ ಮನಸ್ಸು ಇದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ ಅವರಿಗೆ ಒಂದು ಮಾತನ್ನು ಬಹಿರಂಗವಾಗಿ ಹೇಳಬಹುದಾಗಿತ್ತು. ಸಹಕಾರ ಕ್ಷೇತ್ರದ ಬಗ್ಗೆ ನಿಜವಾಗಿ ಕೂಡ ನಮ್ಮೆಲ್ಲರ ಆತ್ಮಸಾಕ್ಷಿಯಾಗಿ ಹೇಳುವುದಾದರೆ, ಅದು ಸರಿಯಾದ ಫಲವನ್ನು ಕೊಡಬೇಕು. ನೂರಕ್ಕೆ ನೂರರಷ್ಟು ಫಲವನ್ನು ಕೊಡಬೇಕಾದರೆ ರಾಜಕೀಯ ದೂರ ಇರಬೇಕೆಂದು ನಾವೆಲ್ಲರೂ ಒಪ್ಪತಕ್ಕ ಸಂದರ್ಭದಲ್ಲಿ ನನಗಾದರೂ ಅನಿಸುತ್ತದೆ ಈ ಒಂದು ಖಾತೆ ಏನಿದೆ. ಈ ಖಾತೆಯನ್ನು ರಾಜಕಾರಣಿಗಳಲ್ಲದ ಮತ್ತು ಈ ಕ್ಷೇತ್ರದಲ್ಲಿ ಅನುಭವವನ್ನು ಪಡೆದಿರತಕ್ಕಂಥ ವ್ಯಕ್ತಿಗಳಿಗೆ ಇದನ್ನು ವಹಿಸಿದ್ದೇ ಆದರೆ ಸರಿಹೋಗುತ್ತದೆ. ನನ್ನಂತಹ ಶಾಸಕರ ಮಿತ್ರರ ಒತ್ತಡಕ್ಕೆ ಮಣಿಯದೆ, ಕೆಲಸ ಮಾಡಬೇಕಾಗುತ್ತದೆ. ನಾವು ಚುನಾವಣೆಯಿಂದ ಬಂದಿರುತ್ತೇವೆ, ಯಾರು ನಮಗೆ ನೂರಾರು ಓಟುಗಳನ್ನು ಕೊಡಿಸಿ ಈ ಒತ್ತಾಯವನ್ನು ನಮ್ಮ ಮೇಲೆ ತರುತ್ತಾರೋ ಅಂತಹ ಜನಗಳಿಗೆ ಮಣಿಯತಕ್ಕ ಅವಕಾಶ ಇಲ್ಲದಂತೆ, ರಾಜಕೀಯದಿಂದ, ರಾಜಕಾರಣದಿಂದ ದೂರವಾಗಿರತಕ್ಕ ವ್ಯಕ್ತಿಗಳಿಗೆ ಇದನ್ನು ವಹಿಸಬೇಕಾಗುತ್ತದೆ. ಪಂಡಿತ್ ಜವಹರ್‌ಲಾಲ್ ನೆಹರೂರವರು ಪ್ರಧಾನಿಯಾಗಿದ್ದಾಗ, ಅವರ ಮಂತ್ರಿ ಮಂಡಲದ ಅರ್ಥ ಖಾತೆಯಲ್ಲಿ ರಾಜಕಾರಣಿಗಳಲ್ಲದಂಥ ಅನೇಕ ಜನ ಪ್ರತಿಭಾವಂತರನ್ನು ಮಂತ್ರಿಗಳಾಗಿ ಪಡೆದಿದ್ದರು. ಆ ಕ್ಷೇತ್ರದಲ್ಲಿ ಗಣ್ಯರಾಗಿದ್ದಂಥ, ತಜ್ಞರಾಗಿದ್ದಂಥ ಮಂತ್ರಿಗಳನ್ನು ಅವರು ಹೊಂದಿದ್ದರು. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಇಲ್ಲಿ ಹಾಜರಿರುವುದಕ್ಕೆ ಸಾಧ್ಯವಿಲ್ಲದೇ ಇದ್ದರೂ ತಮ್ಮ ಮುಖೇನ ಅವರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಈಗ ಮಾನ್ಯ ಜಾಲಪ್ಪನವರಿಗೆ ದಕ್ಷತೆ ಇದೆ, ಶಕ್ತಿ ಇದೆ, ಅವರಿಗೆ ಇದಕ್ಕಿಂತಲೂ ಮಹತ್ತರವಾದ ಖಾತೆ, ಗೃಹ ಖಾತೆ ಇದೆ, ಅರ್ಥ ಖಾತೆ ಇದೆ, ಅವರಿಗೆ ಇನ್ನಾವುದಾದರೂ ಖಾತೆಯನ್ನು ಕೊಡುವುದು ಉತ್ತಮ. ಒಂದಾನೊಂದು ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹಕಾರ ಕ್ಷೇತ್ರದ ಈ ಖಾತೆಯನ್ನು ಹೊಂದಿದ್ದಂಥ ಸಚಿವರಾಗಿ ಈ ರಾಜ್ಯಸರ್ಕಾರದಲ್ಲಿದ್ದರು. ಇದರಲ್ಲಿ ಆಸಕ್ತಿ ಇದ್ದವರು ಇದನ್ನು ಬೆಳೆಸಬೇಕು. ಸಹಕಾರಿ ಕ್ಷೇತ್ರ ಯಾರೊಬ್ಬರ ಸ್ವತ್ತು ಅಲ್ಲ. ಇದು ಯಾರೊಬ್ಬರ ಗುತ್ತಿಗೆಯಲ್ಲ. ಇದು ಹಳ್ಳಿ, ಪಟ್ಟಣದವರ ಸ್ವತ್ತು ಅಲ್ಲ, ಸಮಾಜದ ಯಾವುದೇ ಒಂದು ವರ್ಗದ ಸ್ವತ್ತು ಅಲ್ಲ. ಸರ್ವವ್ಯಾಪಿ, ವಿಶ್ವವ್ಯಾಪಿ, ಈ ಕ್ಷೇತ್ರವನ್ನು ಬೆಳೆಸಬೇಕಾದರೆ ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಇವೊತ್ತು ನಮ್ಮ ಸಹಕಾರ ಇಲಾಖೆಯವರು ನಮಗೆ ಈ ವರದಿಯನ್ನು ಕೊಟ್ಟಿದ್ದಾರೆ. ತಹಲ್‌ವರೆಗಿನ ಪರ್‌ಫಾರ್‌ಮೆನ್ಸ್ ಬಡ್ಜೆಟ್‌ನ್ನು ಕೊಡಿ ಎಂದು ಇಂದು ಬೆಳಿಗ್ಗೆ ಈ ಸದನಕ್ಕೆ ಬರುವಾಗ ನೋಟೀಸ್ ಆಫೀಸಿಗೆ ಹೋಗಿ ಕೇಳಿದೆ, ನಿನ್ನೆ ಮೊನ್ನೆ ಹುಡುಕಿದೆ ಸಿಕ್ಕಲಿಲ್ಲ. ಆದರೂ ಕೂಡ ಚಿಂತೆ ಇಲ್ಲ. ತಾವು ಒದಗಿಸಿರತಕ್ಕ ವಾರ್ಷಿಕ ವರದಿ ಏನಿದೆ, ಇದನ್ನೇ ಆಧಾರವಾಗಿಟ್ಟುಕೊಂಡು ಕೆಲವಾರು ಅಂಶಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ತಾವು ಒದಗಿಸಿರತಕ್ಕ ವಾರ್ಷಿಕ ವರದಿಯಲ್ಲಿ ಸರ್ವಸಾಮಾನ್ಯವಾದಂಥ ಒಂದು ಪ್ರಗತಿ ಏನು ನಡೆದಿದೆ ಅದನ್ನು ಇಲ್ಲಿ ಚಿತ್ರೀಕರಿಸಿದ್ದಾರೆ. ಇದರಲ್ಲಿ ಒಂಭತ್ತು ಐಟಮ್‌ಗಳು ಇವೆ. ನಾನು ಈ ಸಂದರ್ಭದಲ್ಲಿ ಮುಖ್ಯವಾಗಿ ಉಲ್ಲೇಖ ಮಾಡುವುದು ಐಟಮ್ ನಂ. ೪ ಮತ್ತು ೫

ಡಿಪಾಸಿಟ್ ಅಂಡ್ ಅಡ್ವಾನ್ಸ್ ಬಗ್ಗೆ ೪೮೭ ಕೋಟಿ ರೂಪಾಯಿಗಳ ಡಿಪಾಸಿಟ್ ಇವೊತ್ತಿನ ದಿವಸ ಸಹಕಾರ ಕ್ಷೇತ್ರದಲ್ಲಿ ನೋಂದಣಿಯಾಗಿದೆ ಎಂದು ಹೇಳಿದ್ದಾರೆ. ಪ್ರಾವಿಜನಲ್ ಫಿಗರ್ ಅಡ್ವಾನ್ಸ್ ೫೧೧ ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಈ ಎರಡಕ್ಕೂ ಇರತಕ್ಕ ಅಂತರ ಏನಿದೆ, ಇದನ್ನು ಸ್ವಲ್ಪ ಆಳವಾಗಿ ಯೋಚನೆ ಮಾಡಿದ್ದೇ ಆದರೆ, ಅಭ್ಯಾಸ ಮಾಡಿದ್ದೇ ಆದರೆ, ಈ ಸಹಕಾರಿ ಕ್ಷೇತ್ರದಲ್ಲಿ ನಾವು ಏನನ್ನು ಸಾಧಿಸಿದ್ದೇವೆ ಅಂದರೆ ಸಾಧಿಸಬೇಕಾದ್ದು ಇನ್ನೂ ಬಹಳ ಇದೆ. ೪೮೭ ಕೋಟಿ ರೂಪಾಯಿ ಡಿಪಾಸಿಟ್ ಎಂದು ಏನು ಹೇಳಿದ್ದೀರಿ ಮತ್ತು ಅಡ್ವಾನ್ಸ್ ೫೧೧ ಕೋಟಿ ರೂಪಾಯಿ ಎಂದು ಏನು ಹೇಳಿದ್ದೀರಿ, ಇದರಲ್ಲಿ ನಿಜವಾದ ಡಿವಿಡೆಂಡ್ ಯಾವುದು ಎಂದು ಪ್ರತ್ಯೇಕ ಮಾಡಬೇಕಾಗುತ್ತದೆ. ಇಂಡಿವಿಜ್ಯುಯಲ್ ಯಾವುದು, ಇನ್ಸ್‌ಟಿಟ್ಯೂಷನ್ ಡಿಪಾಸಿಟ್ ಯಾವುದು ಎಂದು ಪ್ರತ್ಯೇಕ ಮಾಡಬೇಕಾಗುತ್ತದೆ. ನನ್ನ ಅನುಭವದಲ್ಲಿ ಇಂಡಿವಿಜುಯಲ್ ಅಂಡ್ ಇನ್ಸ್‌ಟಿಟ್ಯೂಷನ್ ಡಿಪಾಸಿಟ್ ಪ್ರತ್ಯೇಕ ಮಾಡಿದರೆ, ೪೮೭ ಕೋಟಿ ರೂಪಾಯಿಗಳಲ್ಲಿ ೬೫–೭೫ ಭಾಗ ಕಾನ್‌ಟಿಟ್ಯುಯೆಂಟ್ ಆಗಿರತಕ್ಕ ಡಿಪಾಸಿಟ್. ಇವೊತ್ತು ಕೋಆಪರೇಟೀವ್ ಇನ್ಸ್‌ಟಿಟ್ಯೂಷನ್ ಡಿಪಾಸಿಟ್ ಏನಿದೆ, ಅದು ಇವತ್ತು ೧೦ ಲಕ್ಷ ರೂಪಾಯಿ ಇಡಬಹುದು ಮತ್ತು ನಾಳೆ ಡ್ರಾ ಮಾಡಬಹುದು. ಅದನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಇಂತಹ ಡಿಪಾಸಿಟ್ ಮೇಲೆ ಅವಲಂಬನೆ ಆಗಲಿಕ್ಕೆ ಸಾಧ್ಯವಿಲ್ಲ. ನಿಮ್ಮ ಅಡ್ವಾನ್ಸ್ ೫೧೧ ಕೋಟಿ ರೂಪಾಯಿ ಏನಿದೆ, ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ೭೦ ರಿಂದ ೭೫ರಷ್ಟು ಹಣವನ್ನು ನಬಾರ್ಡ್‌ನಿಂದ ತರಲಿಕ್ಕೆ ಪ್ರಯತ್ನ ಮಾಡಿದ್ದೀರಿ. ಸಹಕಾರಿ ಕ್ಷೇತ್ರದಲ್ಲಿ ನಮ್ಮ ಕಾಲಿನ ಮೇಲೆ ನಿಲ್ಲತಕ್ಕ ವ್ಯವಸ್ಥೆ ಇವೊತ್ತಿನ ದಿವಸ ನಮ್ಮಲ್ಲಿ ಆಗಿದೆಯೇ? ಇಲ್ಲ. ಇದನ್ನು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ವಾಣಿಜ್ಯ ಬ್ಯಾಂಕುಗಳು ಇವೆ. ಎಲ್ಲಾ ವಾಣಿಜ್ಯ ಬ್ಯಾಂಕುಗಳಿಂದ, ಅವರು ಕ್ರೋಢೀಕರಿಸತಕ್ಕ, ನೋಂದಾಯಿಸಿರತಕ್ಕ, ಶೇಖರಣೆ ಮಾಡಿರತಕ್ಕ ಠೇವಣಾತಿ ಗುರಿ ಎಷ್ಟು ಇದೆ. ಸಹಕಾರಿ ಕ್ಷೇತ್ರದಲ್ಲಿ ಕಳೆದ ಒಂದು ಶತಮಾನದ ಚರಿತ್ರೆಯನ್ನು ಹೊಂದಿರತಕ್ಕ ನಾವು ನೋಂದಾಯಿಸಿರತಕ್ಕ ಠೇವಣಾತಿ ಎಷ್ಟು ಇದೆ ಎಂದು ಬಹುಶಃ ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿರಬಹುದು. ಈ ರಾಜ್ಯದಲ್ಲಿ ನ್ಯಾಷನಲೈಸ್ಡ್ ಬ್ಯಾಂಕುಗಳು ಏನಿವೆ, ನ್ಯಾಷನಲೈಸ್ಡ್ ಅಲ್ಲದೇ ಇರತಕ್ಕ ಬ್ಯಾಂಕುಗಳು ಏನಿವೆ ಇವುಗಳಲ್ಲಿ ಎಷ್ಟು ಠೇವಣಾತಿ ನೋಂದಾಯಿಸಿದ್ದೇವೆ, ಮತ್ತು ನಾವು ಈ ಕ್ಷೇತ್ರದಲ್ಲಿ ಠೇವಣಿ ನೋಂದಾಯಿಸಲು ಆಗದೇ ಇರುವುದಕ್ಕೆ ಕಾರಣ ಏನು? ಎಂಬುದನ್ನು ನಾವು ಇಲ್ಲಿ ಯೋಚನೆ ಮಾಡಬೇಕಾಗುತ್ತದೆ. ಯೋಚನೆ ಮಾಡಿ ಅದಕ್ಕೆ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರ ಆರ್.ಬಿ.ಐ. ನೆರವಿನಿಂದ, ಹೊರದೇಶಗಳ ನೆರವಿನಿಂದ, ಇಂಡಿಯಾ ಸರ್ಕಾರದ ನೆರವಿನಿಂದ ಎಲ್ಲಿಯವರೆಗೆ ನಾವು ಅವಲಂಬಿಸಿಕೊಂಡಿರುವುದಕ್ಕೆ ಸಾಧ್ಯ? ಹಾಗೆ ಅವಲಂಬಿಸಿಕೊಂಡು ನಾವು ಮುಂದುವರಿಯುವುದಕ್ಕೆ ಸಾಧ್ಯವೇ ಎಂಬುದನ್ನು ನೀವು ಯೋಚನೆ ಮಾಡಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಒಂದು ಠೇವಣಾತಿ ಸಂಗ್ರಹಣೆಯ ಕೆಲಸ ಏನಿದೆ ಇದು ಬಹಳ ಕಷ್ಟದ ಕೆಲಸ ನನಗೆ ಇದರ ಅನುಭವ ಇದೆ. ೭ ವರ್ಷಕಾಲ ನಾನು ಜಿಲ್ಲಾ ಬ್ಯಾಂಕ್‌ನ ಅಧ್ಯಕ್ಷನಾಗಿ, ಜಿಲ್ಲೆಯ ಜನರ ಹತ್ತಿರ ಓಡಾಡಿ ಸಾವಿರಾರು ರೈತರನ್ನು ಭೇಟಿಮಾಡಿದಾಗ ಈ ಕೆಲಸ ಎಷ್ಟು ಕಷ್ಟವಿದೆ ಎಂಬುದು ತಿಳಿದು ಬಂದಿದೆ. ಇದನ್ನು ಜನರು ಹೋಲಿಕೆ ಮಾಡಿದಾಗ ಮಾತ್ರ ಹಿಂದಿನ ಶಾಸಕರಿಗೂ, ಇಂದಿನ ಶಾಸಕರಿಗೂ ಏನು ವ್ಯತ್ಯಾಸ ಇದೆ ಎಂಬುದು ಗೊತ್ತಾಗುತ್ತದೆ. ನನ್ನ ಕ್ಷೇತ್ರವಾದ ನಾಗಮಂಗಲಕ್ಕೆ ೧೦ ಮೈಲಿ ದೂರದಲ್ಲಿ ಬಸರಾಳು ಎಂದು ಒಂದು ಊರು ಇದೆ. ಅಲ್ಲಿ ಜಿಲ್ಲಾ ಬ್ಯಾಂಕ್‌ನ ಶಾಖೆಯನ್ನು ತೆರೆದಿದ್ದಾರೆ. ಅಲ್ಲಿ ಕಳೆದ ೧೦ ವರ್ಷದಿಂದ ಕೆನರಾ ಬ್ಯಾಂಕ್ ಶಾಖೆ ಇದೆ. ನಾನು ಅವರಿಗೆ ಏನು ಹೇಳುತ್ತಿದ್ದೆ ಎಂದರೆ ಜಿಲ್ಲಾ ಬ್ಯಾಂಕ್ ನಮ್ಮದೇ ಆದಂಥ ಶಾಖೆ, ಕೆನರಾ ಬ್ಯಾಂಕ್ ಬೇರೆಯವರದ್ದು ಎಂದು ಹೇಳಿ ನಮ್ಮ ಜನರನ್ನು ಒತ್ತಾಯ ಮಾಡಿ ರಿಜಿಸ್ಟ್ರಾರ್‌ರವರಲ್ಲಿ ಪ್ರಾರ್ಥನೆ ಮಾಡಿಕೊಂಡು ಈ ಶಾಖೆಯನ್ನು ಪ್ರಾರಂಭ ಮಾಡಿದೆವು. ಆದರೆ ಅದರಿಂದ ಏನೂ ಆದಾಯ ಕಾಣುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅವರು ಕೇವಲ ಎಸ್.ಬಿ. ಅಕೌಂಟ್ ಇಡಿ, ರೆಕರಿಂಗ್ ಡಿಪಾಸಿಟ್ಸ್ ಇಡಿ, ಇನ್ನು ಬೇರೆ ಬೇರೆ ತರಹದ ಡಿಪಾಸಿಟ್‌ಗಳನ್ನು ಇಡಿ ಎಂದು ಕೇಳುತ್ತಿದ್ದಾರೆ. ಸ್ವಾಮಿ, ಕೆನರಾ ಬ್ಯಾಂಕ್‌ನವರು ಕೊಡುವ ಸೌಲಭ್ಯದಲ್ಲಿ ಅರ್ಧದಷ್ಟು ಸೌಲಭ್ಯವನ್ನಾದರೂ ನಮ್ಮ ಈ ಬ್ಯಾಂಕ್‌ನಲ್ಲಿ ಕೊಡದಿದ್ದರೆ ಏನು ಪ್ರಯೋಜನ? ಇದು ಅಗ್ರಿಕಲ್ಚರಿಸ್ಟ್ಸ್ ಬ್ಯಾಂಕ್ ಎಂದು ಅವರು ಹೇಳಬಹುದು. ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯಗಾರರಲ್ಲದಿರುವವರು ಎಷ್ಟು ಜನರಿದ್ದಾರೆ? ಅತಿ ಸಣ್ಣ ರೈತರಿದ್ದಾರೆ, ಮಾರ್ಜಿನಲ್ ಫಾರ್ಮರ್ಸ್ ಇದ್ದಾರೆ, ಇದೇರೀತಿ ಇನ್ನೂ ಅನೇಕ ರೀತಿಯ ಜನರಿದ್ದಾರೆ, ಸಾಮಾನ್ಯ ರೈತ ತನ್ನ ಎಲ್ಲ ವ್ಯವಹಾರಗಳನ್ನೂ ಈ ಬ್ಯಾಂಕ್‌ನ

ಮುಖಾಂತರವೇ ಮಾಡಬೇಕು. ಆದರೆ ವಾಣಿಜ್ಯ ಬ್ಯಾಂಕ್‌ಗಳು ಏನು ಸೌಲಭ್ಯಗಳನ್ನು ಕೊಡುತ್ತವೆ ಅಷ್ಟು ಸೌಲಭ್ಯಗಳನ್ನು ನಾವು ಕೊಡದಿದ್ದರೆ ಬಹುಶಃ ಈ ಸಹಕಾರಿ ಕ್ಷೇತ್ರದಲ್ಲಿ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ತಮ್ಮ ಗಮನ ಹರಿಸಬೇಕು. ಇಷ್ಟೇ ಅಲ್ಲದೆ ಇನ್ನೂ ಕೆಲವು ಅಂಕಿಅಂಶಗಳನ್ನು ಇದರಲ್ಲಿ ಕೊಟ್ಟಿದ್ದೀರಿ, ಇವರ ಪ್ರಕಾರ ತಾವು ಹಿಂದಿನ ವರ್ಷದ ಮಾಹಿತಿಗಳನ್ನು ತರಿಸಿನೋಡಿ. ನಾನು ಈ ಮಾತನ್ನು ಹೇಳುವಾಗ ಯಾವುದೇ ರೀತಿಯ ರಾಜಕೀಯ ಅಭಿಪ್ರಾಯ ಇಲ್ಲದೆ ಹೇಳುತ್ತಿದ್ದೇನೆ. ಇನ್ನು ಅಡ್ವಾನ್ಸ್ ವಿಚಾರದಲ್ಲಿ ಹೇಳುವುದಾದರೆ, ರೈತ ವರ್ಗಕ್ಕೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಏನು ವಿತರಣೆ ಮಾಡಿದ್ದೀರಿ ಅದನ್ನು ಇಲ್ಲಿ ಕೊಟ್ಟಿದ್ದೀರಿ. ೧೯೮೨–೮೩ ಮತ್ತು ೧೯೮೩–೮೪ರ ವ್ಯವಹಾರವನ್ನು ನೋಡಿದರೆ ವ್ಯತ್ಯಾಸ ಗೊತ್ತಾಗುತ್ತದೆ. ೧೯ ಜಿಲ್ಲಾ ಬ್ಯಾಂಕುಗಳ ಪೈಕಿ ೧೧ ಜಿಲ್ಲಾ ಬ್ಯಾಂಕ್‌ಗಳಲ್ಲಿ ಲೆಂಡಿಂಗ್ ಕಡಿಮೆ ಇದೆ. ತಾವು ಇದನ್ನು ಡಿಸೆಂಬರ್ ೧೯೮೩ರವರೆಗೆ ಎಂದು ಹೇಳಬಹುದು. ೧೧ ಜಿಲ್ಲಾ ಬ್ಯಾಂಕುಗಳು ಏನಿವೆ ಅವುಗಳ ಹೆಸರುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಉದಾಹರಣೆಗೆ ಮೈಸೂರು ಜಿಲ್ಲಾ ಬ್ಯಾಂಕನ್ನು ತೆಗೆದುಕೊಳ್ಳುವುದಾದರೆ ೧೯೮೩–೮೪ರಲ್ಲಿ ಅವರ ಕೇಪಣಿಗಳು ೨೬೧ ಲಕ್ಷ ಮಾತ್ರ. ೧೯೮೩ನೇ ಡಿಸೆಂಬರ್‌ವರೆಗೆ ೭೨ ಲಕ್ಷ. ನನ್ನ ಜಿಲ್ಲೆಯ ಜಿಲ್ಲಾ ಬ್ಯಾಂಕ್‌ನ ವಿಚಾರದಲ್ಲಿ ಹೇಳುವುದಾದರೆ ಈ ಜಿಲ್ಲಾ ಬ್ಯಾಂಕ್‌ಗಳ ಪೈಕಿ ಇದೂ ಒಂದು ಎಂದು ಹೇಳಬಹುದು. ೧೯೮೩–೮೪ರಲ್ಲಿ ಸಾಲ ಕೊಟ್ಟಿರುವುದು ಕೇವಲ ೮೩ ಲಕ್ಷ ರೂಪಾಯಿ ಮಾತ್ರ. ಇವತ್ತು ೧೯ ಜಿಲ್ಲೆಗಳ ಪೈಕಿ ೧೧ ಜಿಲ್ಲಾ ಬ್ಯಾಂಕ್‌ಗಳಲ್ಲಿ ಅಡ್ವಾನ್ಸ್ ಕುಸಿದಿದೆ. ಇದಕ್ಕೆ ಕಾರಣ ಏನೆಂಬುದನ್ನು ತಾವು ಯೋಚನೆ ಮಾಡಬೇಕು.

ಇನ್ನು ಸ್ಟೋರೇಜ್ ಕೋ–ಆಪರೇಟಿವ್ಸ್ ಎಂದು ಪೇಜ್ ೨೫ರಲ್ಲಿ ಬಹಳ ಪ್ರಮುಖವಾದ ಒಂದು ವಿಚಾರವನ್ನು ಹೇಳಿದ್ದೀರಿ. ನಾವು ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ಕೂಡ ನಾಲ್ಕಾರುಸಾರಿ ಬಹಳವಾಗಿ ಚರ್ಚೆಮಾಡಿದ್ದೇವೆ. ಈ ರಾಜ್ಯದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಅಪೂರ್ಣವಾಗಿರತಕ್ಕ ಗೋಡೌನ್‌ಗಳಿವೆ. ಇವು ೧೫–೨೦ ವರ್ಷಗಳ ಹಿಂದೆ ಕಟ್ಟುವುದಕ್ಕೆ ಪ್ರಾರಂಭಿಸಿರತಕ್ಕವು. ಅಷ್ಟು ವರ್ಷಗಳ ಹಿಂದೆ ಈ ಗೋಡೌನ್‌ಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನಮಾಡಿ ಅರ್ಧಕ್ಕೇ ಕೈಬಿಟ್ಟಿದ್ದಾರೆ. ಈಗ ನನ್ನ ಕ್ಷೇತ್ರದಲ್ಲಿ ೪ ಗ್ರಾಮಗಳಲ್ಲಿ ಇಂಥ ರೂರಲ್ ಗೋಡೌನ್‌ಗಳನ್ನು ೧೦–೨೦ ವರ್ಷಗಳ ಹಿಂದೆ ಕಟ್ಟುವುದಕ್ಕೆ ಪ್ರಾರಂಭಮಾಡಿ ಅರ್ಧಕ್ಕೇ ನಿಲ್ಲಿಸಿಬಿಟ್ಟಿದ್ದಾರೆ. ಇವತ್ತು ಆ ಗೋಡೌನ್‌ಗಳ ಮೇಲೆ ರೂಫಿಂಗ್ ಹಾಕುವುದಕ್ಕೆ ಹೋದರೆ ಏನೂ ಪ್ರಯೋಜನವಾಗುವುದಿಲ್ಲ, ಕಾರಣ ಆ ಗೋಡೆಗಳು ಮಳೆ, ಬಿಸಿಲಿಗೆ ಸಿಕ್ಕಿರುವುದರಿಂದ ಅವುಗಳಲ್ಲಿ ಏನೇನೂ ಬಲ ಇಲ್ಲದಂತಾಗಿದೆ. ಆದ್ದರಿಂದ ಈ ಗೋಡೆಗಳನ್ನು ಪ್ಲಿಂತ್ ಲೆವೆಲ್‌ವರೆಗೆ ಕೆಡವಿ ನಂತರ ಕಟ್ಟಡವನ್ನು ಪೂರೈಸಿ ರೂಫಿಂಗ್ ಹಾಕಬೇಕು. ನಮ್ಮ ಕ್ಷೇತ್ರದಲ್ಲಿರತಕ್ಕ ಈ ೪ ಗೋಡೌನ್‌ಗಳ ವಿಚಾರದಲ್ಲಿ ಸರ್ಕಾರದ ಜೊತೆ ವ್ಯವಹಾರ ಮಾಡುತ್ತಿದ್ದೇನೆ. ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಜಿಲ್ಲಾಧಿಕಾರಿಯವರು ಹೇಳಿದರು, ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ಅವರು ನಮ್ಮ ಹತ್ತಿರ ಹಣ ಇಲ್ಲವೆಂದು ಹೇಳುತ್ತಾರೆ ಎಂದು. ಇಲಾಖೆಯವರನ್ನು ಕೇಳಿದರೆ ಇವರ ಮೇಲೆ ಹೇಳುತ್ತಾರೆ. ಈ ರೀತಿ ಒಬ್ಬರ ಮೇಲೊಬ್ಬರು ತೋರಿಸುವುದು ಸರಿಯಲ್ಲ. ಇದೆಲ್ಲಾ ಸರ್ಕಾರದ ಆಸ್ತಿ, ಜನರ ಆಸ್ತಿ, ಆದ್ದರಿಂದ ಇಂಥ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ಕೋ–ಆಪರೇಟೀವ್ ಸೊಸೈಟಿಗಳು ಅದರಲ್ಲೂ ೨–೩ ಹಂತಗಳಲ್ಲಿ ಹೇಳಿದ್ದಾರೆ. Names of the Factories already commissioned, Letters of intent issued sugar factory under erection. ಸ್ವಾಮಿ ಈ ಒಂದು ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳು ಏನು ನಡೆಯುತ್ತಿದೆ. ಅವುಗಳ ಒಂದು ಶಕ್ತಿಯನ್ನು, ಅವುಗಳ ಒಂದು ಭದ್ರತೆಯನ್ನು ನಾವು ನೋಡಿದ್ದೇ ಆದರೆ ಅನೇಕ ಸಂದರ್ಭಗಳಲ್ಲಿ ಚರ್ಚೆ ಮಾಡಿದ್ದೇವೆ ಈ ಸದನದಲ್ಲಿ ಅಷ್ಟೇ ಅಲ್ಲ ಅನೇಕ ಫೋರಮ್‌ಗಳಲ್ಲಿ ನಾವು ಚರ್ಚೆ ಮಾಡಿದ್ದೇವೆ. ನಮ್ಮ ಅನಿಸಿಕೆಗಳನ್ನು ಹೇಳಿದ್ದೇವೆ. ಅನೇಕ ಜನ ಸಹಕಾರಿಗಳು ಅನೇಕ ವಿಚಾರಗಳನ್ನು ಇದರ ಬಗ್ಗೆ ಹೇಳಿದ್ದಾರೆ. ಅದು ಏನೆಂದರೆ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ನಡೆಸಲು ಅನುಮತಿಯನ್ನು ನೀಡತಕ್ಕಂಥ ಸಂದರ್ಭದಲ್ಲಿ ಪ್ರಧಾನವಾಗಿ ಯಾವ ವಿಷಯವನ್ನು ಪರಿಗಣನೆಗೆ ತೆಗೆದು ಕೊಳ್ಳಬೇಕು ಎಂಬುದನ್ನೆಲ್ಲವನ್ನು ಹೇಳಿದ್ದೇವೆ. ಅಲ್ಲಿ ಎಷ್ಟು ನೀರಾವರಿ ಭೂಮಿ ಇದೆ ಅಲ್ಲಿ ಅವಶ್ಯಕವಾಗಿ ಬೇಕಾಗತಕ್ಕ ಕಚ್ಚಾ ಮಾಲು (ಕಬ್ಬು ಬೆಳೆ) ಉತ್ಪಾದನೆಯಾಗುತ್ತದೆಯೋ ? ಸನ್ನಿವೇಶ ಪರಿಸರ ಭೂಮಿ, ನೀರು ಇವೆಲ್ಲ ಇದೆಯೋ, ಇಲ್ಲವೇ ಎನ್ನುವುದನ್ನೆಲ್ಲ ಪರಿಗಣನೆಗೆ ತೆಗೆದುಕೊಂಡು ಅನುಮತಿಯನ್ನು ಕೊಡಬೇಕೆಂದು ಹೇಳುತ್ತೇನೆ. ಈ

ರೀತಿ ಯಾವ ಒಂದು ಅವಶ್ಯಕತೆ, ನಾರಮ್ಸ್ ಇವೆಯೋ, ಯಾವ ಗೈಡ್‌ಲೈನ್ಸ್ ಇದೆಯೋ ಅದನ್ನೆಲ್ಲ ಕೈಬಿಟ್ಟು ರಾಜಕೀಯ ಒತ್ತಡಕ್ಕೆ ರಾಜಕೀಯ ಪ್ರಭಾವಕ್ಕೆ ಮಣಿದು ಅನುಮತಿಯನ್ನು ಕೊಟ್ಟರೆ ಸರ್ಕಾರದಲ್ಲಿ ದೋಷವಿದೆ ಎಂದು ಹೇಳಿದರೆ ತಪ್ಪಾಗಲಾರದು. ನಾನು ಮೊದಲಿನಿಂದಲೂ ಹೇಳು ತ್ತಿದ್ದೇನೆ, ರಾಜಕಾರಣ ಹಿನ್ನೆಲೆ ಇಲ್ಲದೆ ಮಾತನಾಡುತ್ತಿದ್ದೇನೆ. ಕಳೆದ ೩೦ ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ. ಇದು ತೊಲಗಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಈ ಕ್ಷೇತ್ರ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ನಿಷ್ಪಕ್ಷಪಾತದಿಂದ ಪಕ್ಷಾತೀತವಾಗಿ ಹಲವಾರು ತೀರ್ಮಾನಗಳನ್ನು ಕೈಗೆ ತೆಗೆದುಕೊಳ್ಳಬೇಕಾದರೆ ಈ ಕ್ಷೇತ್ರವನ್ನು ಚೆನ್ನಾಗಿ ಮುಂದುವರಿಸಬೇಕಾದರೆ ರಾಜಕೀಯದಿಂದ ದೂರವಿರಬೇಕು, ರಾಜಕಾರಣಿಗಳಿಂದ ದೂರವಿರಬೇಕು ಎನ್ನುವುದನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಮಹದೇಶ್ವರ ಸಕ್ಕರೆ ಕಾರ್ಖಾನೆಯನ್ನು ತೆಗೆದು ಕೊಂಡರೆ, ಗೌರಿಬಿದನೂರು, ಹಿರಿಯೂರು, ಶ್ರೀರಾಮಸಕ್ಕರೆ ಕಾರ್ಖಾನೆ ಚುಂಚನಕಟ್ಟೆ ಇನ್ನು ಅನೇಕ ಸಕ್ಕರೆ ಕಾರ್ಖಾನೆಗಳನ್ನು ತೆಗೆದುಕೊಂಡರೆ ಬಹುತೇಕ ಸಕ್ಕರೆ ಕಾರ್ಖಾನೆಗಳನ್ನು ತೆಗೆದು ಕೊಂಡರೆ ಸಾಕಷ್ಟು ನೀರಾವರಿ ಭೂಮಿ ಇಲ್ಲದೆ ಇರತಕ್ಕಂಥ ಪ್ರದೇಶಗಳಲ್ಲಿ ಇರುವುದೇ ಬಹು ಮುಖ್ಯ ವಾದ ಕಾರಣವಾಗಿದೆ, ರಾಜಕೀಯ ಒತ್ತಡಕ್ಕೆ ಈ ಕಾರ್ಖಾನೆಗಳನ್ನು ಪ್ರಾರಂಭ ಮಾಡಿ ಇವತ್ತಿನ ದಿವಸ ಏನಾಗಿದೆ ಎಂದರೆ ರಾಜ್ಯದ ಮೇಲೆ, ರಾಜ್ಯದ ಜನತೆಯ ಮೇಲೆ ಲಯಬಲೀಟೀಸ್ ಪರಿಣ ಮಿಸಿ ಸಾಲಗಾರರಾಗತಕ್ಕಂಥ ಪರಿಸ್ಥಿತಿ ತಂದು ಒಡ್ಡಿದೆ.

ಇನ್ನು ಈ ಸಹಕಾರಿ ಕೋ–ಆಪರೇಟೀವ್ ವಿಷಯವಾಗಿ ಹೇಳುವುದಾದರೆ ಸ್ವಾಮಿ ಬಹುಶಃ ಈ ಒಂದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥಾ.........

ಡಾ|| ವಿ ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ ಈ ಬೇಡಿಕೆಗೆ ಮಂಜೂರಾತಿಯನ್ನು ಪಡೆದ ನಂತರ ಆಹಾರ ಮತ್ತು ಅರಣ್ಯ ಖಾತೆಯ ಬೇಡಿಕೆಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಇಂಥ ಸಂದರ್ಭದಲ್ಲಿ ವೇಳೆಯನ್ನು ನಿಗದಿಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆ. ಏತಕ್ಕೆಂದರೆ ಆಹಾರ ಮತ್ತು ಅರಣ್ಯ ಖಾತೆ ಅವುಗಳು ಕೂಡ ಬಹಳ ಮಹತ್ವವಾದ ವಿಷಯವಾಗಿರುತ್ತದೆ. ಆದ್ದರಿಂದ ಗ್ರಾಮಾಭಿವೃದ್ಧಿ ಮತ್ತು ಸಹಕಾರ ಈ ಬೇಡಿಯನ್ನು ಸುಮಾರು ಎರಡೂವರೆ ಗಂಟೆ ಯೊಳಗೆ ಮುಕ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈ ವಿಷಯದ ಬಗ್ಗೆ ಮಾತನಾಡತಕ್ಕಂಥವರು ಇನ್ನು ೩–೪ ಜನರು ಮಾತ್ರ ಇರುತ್ತಾರೆ.

ಡಾ|| ವಿ.ಎಸ್ ಆಚಾರ್ಯ.—ಈವತ್ತು ಬಹುತೇಕ ಸದಸ್ಯರು ಡೆಲ್ಲಿಗೆ ಐದೂವರೆ ಗಂಟೆಗೆ ಹೋಗತಕ್ಕಂಥವರು ಇರುತ್ತಾರೆ.

ಶ್ರೀ ಹೆಚ್.ಡಿ. ಚೌಡಯ್ಯ.—ನಾನೂ ಕೂಡ ಡೆಲ್ಲಿಗೆ ಹೋಗುವವನಿದ್ದೇನೆ.

ಡಾ|| ವಿ.ಎಸ್.ಆಚಾರ್ಯ.—ನಾಳೆಯದಿವಸ ರಜಾ ಇರುತ್ತದೆ, ಈವತ್ತು ತಾವು ಈ ಸದನವನ್ನು ಎಷ್ಟು ಗಂಟೆಗೆ ಮುಕ್ತಾಯ ಮಾಡುವವರಿದ್ದೀರಿ ?

ಉಪಸಭಾಧ್ಯಕ್ಷರು.—ಈವತ್ತು ನಾಲ್ಕು ಗಂಟೆಗೆ ಮುಕ್ತಾಯ ಮಾಡಬೇಕಾಗಿರುತ್ತದೆ. ಎರಡು ಗಂಟೆಯೊಳಗೆ ಈ ಬೇಡಿಕೆ ಮುಕ್ತಾಯವಾಗಬೇಕು, ತಾವೆಲ್ಲರೂ ಸಹಕಾರವನ್ನು ಕೊಡಬೇಕು.

ಶ್ರೀ ಎಚ್.ಡಿ. ಚೌಡಯ್ಯ.—ಗ್ರಾಮಾಂತರ ಪ್ರದೇಶಗಳಲ್ಲಿ ಹೌಸಿಂಗ್ ಕೋ ಆಪರೇಟೀವ್ ಸೊಸೈಟಿಗಳು ಇವೆ. ಅದರ ವಿಷಯದಲ್ಲಿ ಹಲವಾರು ವಿಷಯಗಳನ್ನು ಹೇಳಬೇಕಾಗಿದೆ. ಈವತ್ತಿನ ದಿವಸ ಸಹಕಾರಿ ಇಲಾಖೆಯ ಒಂದು ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸಹಕಾರ ಮಂತ್ರಿಗಳಿಗೆ ತಮ್ಮ ಮೂಲಕ ಸವಾಲನ್ನು ಹಾಕಬೇಕಾಗಿದೆ. ಈ ರಾಜ್ಯದಲ್ಲಿ ಶೇಕಡ ೭೫ ರಿಂದ ೮೦ ಜನ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲ ವರ್ಗದ ಜನರು ವಾಸ ಮಾಡತಕ್ಕಂಥದ್ದು ಇದೆ. ಅವರು ಮುಖ್ಯವಾಗಿ ಮನುಷ್ಯರಾಗಿ ಬಾಳಬೇಕಾದರೆ ಅವರಿಗೆ ಬೇಕಾದಂಥ ಸವಲತ್ತುಗಳನ್ನು ಕೊಡುವುದರ ಜೊತೆಗೆ ವಾಸಕ್ಕೆ ಮನೆಗಳನ್ನು ಕೂಡ ಕಟ್ಟಿಸಿಕೊಡಬೇಕು, ಈ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಡಲು ಏನು ವ್ಯಾಪಕವಾದ ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ಎಂದು ಪ್ರಾಸ್ತಾವಿಕವಾಗಿ ಮಾನ್ಯ ಮಂತ್ರಿ ಗಳನ್ನು ಕೇಳಲು ಇಚ್ಛೆ ಪಡುತ್ತೇನೆ. ಪಟ್ಟಣ ಪ್ರದೇಶಗಳಲ್ಲಿ, ನಗರಗಳಲ್ಲಿ ೧೦೦ ಸಹಕಾರಿ ಕೋಆಪರೇ ಟೀವ್ ಸೊಸೈಟಿಗಳು ಇದ್ದು ಅವುಗಳು ಬೇರೆ ಬೇರೆ ಮಾರ್ಗಗಳನ್ನು ಹೊಂದಿರುತ್ತವೆ, ಅವುಗಳಿಗೆ

ಅನುಧಾನ ಕೊಡತಕ್ಕಂಥದ್ದು, ಸಾಲಗಳನ್ನು ಕೊಡತಕ್ಕಂಥ ವ್ಯವಸ್ಥೆಗಳು ಇರುತ್ತವೆ, ಆದರೆ ಶೇಕಡ ೭೫–೮೦ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಜನರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದರ ಬಗ್ಗೆ ಏನಾದರೂ ಒಂದು ಯೋಜನೆ ಇದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ, ತಾವು ಹೇಳುತ್ತೀರಿ ಕೋಆಪರೇಟೀವ್ ಹೌಸಿಂಗ್ ಫೆಡರೇಷನ್ ಇದೆ, ಅದಕ್ಕೆ ಸುಮಾರು ಸಾವಿರಾರು ಅಫಿಲಿಯೆಟೆಡ್ ಸಹಕಾರಿ ಸಂಘಗಳು ಇವೆ ಎಂದು ಯಾವ ತಾಲ್ಲೂಕಿನಲ್ಲಿರತಕ್ಕಂಥ ಸೊಸೈಟಿಗಳಿಗೆ ಯಾವ ಯಾವ ಜಿಲ್ಲೆಗಳಲ್ಲಿರತಕ್ಕಂಥ ಸೊಸೈಟಿಗಳಿಗೆ ಎಷ್ಟೆಷ್ಟು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೀರಿ ಎಂಬುವಕ್ಕೆ ದಯವಿಟ್ಟು ಅಂಕಿಅಂಶಗಳನ್ನು ಕೊಡಬೇಕು. ತಾವು ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ನೋಡಿದರೆ ತಾವು ಯಾವ ದಿಕ್ಕಿನಲ್ಲಿ ಈ ಇಲಾಖೆ ಕೆಲಸ ಮಾಡಬೇಕಾಗಿತ್ತೋ ಆ ದಿಕ್ಕಿನಲ್ಲಿ ಈ ಇಲಾಖೆ ಏನೇನು ಕೆಲಸ ಮಾಡಿಲ್ಲ ಎನ್ನುವ ಅಂಶವನ್ನು ತಾವೇ ಒಪ್ಪುತೀರಿ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

11-30 A.M.

ಮಾನ್ಯ ಅಧ್ಯಕ್ಷರೇ, ಮಾನ್ಯ ದೊಡ್ಡಬೋರೇಗೌಡರು ನಾನು ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ನನಗೆ ಸವಿಸ್ತಾರ ವಿಷಯವನ್ನು ಹೇಳಬೇಕೆಂದು ಹೇಳಿದರು. ಬಹುಶಃ ಮುಖ್ಯವಾಗಿ ಮಿಸ್ ಅಪ್ರೋಪ್ರಿಯೇಷನ್, ಬಗ್ಗೆ ದುರುಪಯೋಗದ ಬಗ್ಗೆ ಸವಿಸ್ತಾರವಾಗಿ ಹೇಳಬೇಕು ಎನ್ನುವ ಉದ್ದೇಶದಿಂದ ಅವರು ಕೇಳಿರುತ್ತಾರೆಂದು ನಾನು ಭಾವಿಸುತ್ತೇನೆ. ತಾವು ಮಿಸ್ ಅಪ್ರೋಪ್ರಿ ಯೇಷನ್‌ಗೆ ಸಂಬಂಧಪಟ್ಟಹಾಗೆ ಕೊಟ್ಟಿರತಕ್ಕಂಥ ತಖ್ತೆಯಿಂದ ನಮಗೆ ನಂಬಿಕೆ ಇಲ್ಲ. ಏತಕ್ಕೆ ನಂಬಿಕೆ ಇಲ್ಲವೆಂದರೆ ನಾನು ಭಾಷಣದ ದೃಷ್ಟಿಯಿಂದ ಹೇಳುತ್ತಿಲ್ಲ, ಏಳುವರ್ಷಗಳಕಾಲ ಜಿಲ್ಲಾ ಬ್ಯಾಂಕ್‌ನಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ, ಸಹಕಾರಿ ಕ್ಷೇತ್ರದಲ್ಲಿ ೩೦ ವರ್ಷಗಳಿಂದಲೂ ಕೆಲಸ ಮಾಡಿರುವುದರಿಂದ ಕಿಂಚಿತ್ತಾದರೂ ಅರಿತಿರತಕ್ಕಂಥ ಮನುಷ್ಯನಾಗಿರುತ್ತೇನೆ ಎಂದು ಹೇಳಿದರೆ ತಪ್ಪಾಗಲಾರದು. Prevention is better than cure. ಎಂದು ಹೇಳಿದಹಾಗೆ ೫ ಲಕ್ಷ ೧೦ ಲಕ್ಷ ರೂಪಾಯಿಗಳನ್ನು ತಿಂದಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದು ಏನು ಇರುತ್ತದೆ. ಮಿಸ್ ಅಪ್ರೋಪ್ರಿಯೇಷನ್ ಆಗದ ರೀತಿಯಲ್ಲಿ ಯಾವುದಾದರೂ ಒಂದು ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕು, ಈ ಪಿಡುಗನ್ನು ಸಮಾಜದಿಂದ ದೂರ ಮಾಡಲು ಏನು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದರ ಬಗ್ಗೆ ದಯವಿಟ್ಟು ಹೇಳಬೇಕು. ಸಹಕಾರಿ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಹಣ ದುರುಪಯೋಗ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು, ತಂದೆ ತಾಯಿ ಗಳು ಹೊಣೆಯನ್ನು ಅರಿತು ಕೊಳ್ಳಬೇಕು. ಎಚ್ಚರಿಕೆಯಿಂದ ಅವರ ಕರ್ತವ್ಯವನ್ನು ನಿರ್ವಹಿಸಬೇಕು ಇಷ್ಟಕ್ಕೂ ಈ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಣೆ ಮಾಡಲು ಯಾವ ವಿಧವಾದ ಗೈಡ್ ಲೈನ್ಸ್ ಕೊಡಲು ಯೋಚನೆಯನ್ನೇ ಮಾಡಿಲ್ಲ. ಸನ್ಮಾನ್ಯ ಮಂತ್ರಿಗಳು ಈ ಸಹಕಾರಿ ಖಾತೆಯನ್ನು ವಹಿಸಿ ಕೊಂಡು ಒಂದು ವರ್ಷ ಎರಡು ತಿಂಗಳಾಗಿರುತ್ತದೆ. ನಾನು ಅವರ ಮೇಲೆ ವೈಯುಕ್ತಿಕವಾಗಿ ಅಪಾ ದನೆಯನ್ನು ಮಾಡಲಿಕ್ಕೆ ಇಷ್ಟಪಡುವುದಿಲ್ಲ. ಸಹಕಾರ ಇಲಾಖೆಯಲ್ಲಿ ತಂಡೋಪ ತಂಡವಾದ ಅಧಿಕಾರಿಗಳಿದ್ದಾರೆ, ಆದರೆ ಅವರಲ್ಲಿ ಯಾರಾದರು ಇದನ್ನು ಯೋಚನೆ ಮಾಡಿದ್ದಾರೆಯೇ ? ತಲೆಕೆಡಿಸಿಕೊಂಡಿದ್ದಾರೆಯೇ ? ಅಂದರೆ ತಲೆಕೆಡಿಸಿಕೊಂಡು ಹುಚ್ಚಾಸ್ಪತ್ರೆಗೆ ಹೋಗಬೇಕೆಂದು ನಾನು ಹೇಳುತ್ತಿಲ್ಲ, ಆದರೆ ಇಂಥಾದ್ದನ್ನು ತಪ್ಪಿಸಲು ಮೇಲಾಧಿಕಾರಿಗಳು ಸರಿಯಾಗಿ ಇನ್ಸ್‌ಪೆಕ್ಷನ್ ಮಾಡುತ್ತಿದ್ದಾರೆಯೇ ? ಎನ್‌ಕ್ವೈರಿ ಮಾಡುತ್ತಿದ್ದಾರೆಯೇ ಮತ್ತು ಅನಿರೀಕ್ಷಿತ ವಾಗಿ ಭೇಟಿಕೊಟ್ಟು ತನಿಖೆ ಮಾಡುತ್ತಿದ್ದಾರೆಯೇ ? ಎಂದರೆ ಈ ಕೆಲಸವನ್ನು ಯಾರೂ ಮಾಡುತ್ತಿಲ್ಲ ಒಂದು ವೇಳೆ ಈ ಮಾತನ್ನು ನಾನು ರಾಜಕೀಯವಾಗಿ ಹೇಳಿದ್ದೇನೆಂದು ಯಾರಾದರೂ ಅಧಿಕಾರಿಗಳು ತಮಗೆ ಹೇಳಿದರೆ, ಅವರನ್ನು ಮತ್ತು ನನ್ನನ್ನು ತಾವು ಕರೆಸಿ ಯಾರು ಹೇಳಿದ್ದು ಸರಿ ಎಂಬುದನ್ನು ತನಿಖೆ ಮಾಡಬೇಕು. ಈಗ ನೀವು ಜಿಲ್ಲಾವಾರು ತನಿಖೆ ಮಾಡಲು ಹಾಗೂ ಇನ್ಸ್‌ಪೆಕ್ಷನ್ ಮಾಡಲು ಒಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರ್, ಒಬ್ಬರು ಸಿ.ಇ.ಒ. ಒಬ್ಬರು ಡೆಪ್ಯೂಟಿ ರಿಜಿಸ್ಟ್ರಾರ್ ರವರನ್ನೂ ಇಟ್ಟಿದ್ದೀರಿ ಅದೇ ರೀತಿ ಡಿವಿಜನಲ್ ಮಟ್ಟದಲ್ಲಿ ಜಾಯಿಂಟ್ ರಿಜಿಸ್ಟ್ರಾರ್ ಹಾಗೂ ರಿಜಿಸ್ಟ್ರಾರ್ ಅವರುಗಳಿದ್ದಾರೆ. ಈ ಅಧಿಕಾರಿಗಳಿಗೆ ಸಹಾಯ ಮಾಡಲು ಸಾಕಷ್ಟು ಸಿಬ್ಬಂದಿವರ್ಗವನ್ನು ಕೊಟ್ಟಿದ್ದೀರಿ. ಈ ಅಧಿಕಾರಿಗಳು ಎಷ್ಟು ಸಹಕಾರ ಸಂಘಗಳನ್ನು ಮತ್ತು ಎಷ್ಟು ಹಣಕಾಸಿನ ಸಂಸ್ಥೆ ಗಳನ್ನು ಹಾಗೂ ಜಿಲ್ಲಾ ಬ್ಯಾಂಕುಗಳನ್ನು ಇನ್ಸ್‌ಪೆಕ್ಷನ್ ಮಾಡಬೇಕೆಂದು ಹಾಗೂ ತನಿಖೆ ಮಾಡ ಬೇಕೆಂದು ನೀವು ನಿಗದಿ ಮಾಡಿದ್ದೀರೋ ಅಷ್ಟನ್ನು ಮಾಡಿದ್ದಾರೆಯೇ ನೀವು ಇವರಿಗೆ ವಹಿಸಿರುವ ಜವಾಬ್ದಾರಿಯ ಪ್ರಕಾರ ಕೆಲಸ ಮಾಡಿದ್ದಾರೆಯೇ? ಇವರೆಲ್ಲರೂ ಏನೇನು ಕೆಲಸ ಮಾಡಿದ್ದಾರೆ ಮತ್ತು ಇವರ ಕೆಲಸ ನಿಮಗೆ ಸಮರ್ಪಕವಾಗಿ ಕಂಡಿದಿಯೇ ಅಥವಾ ಅಸಮರ್ಪಕವಾಗಿ ಕಂಡಿದಿಯೇ

ಎಂಬುದನ್ನು ತಾವು ಹೇಳಿದರೆ ಬಹುಶಃ ಈ ಅಧಿಕಾರಿಗಳೆಲ್ಲಾ ಕನ್ನಡಿ ಮುಂದೆ ನಿಂತು ನೋಡಿಕೊಳ್ಳ ಬಹುದು. ಈ ದಿಸೆಯಲ್ಲಿ ತಾವು ಆಳವಾಗಿ ಯೋಚನೆ ಮಾಡಬೇಕಾಗಿದೆ. ಇಲ್ಲದಿದ್ದರೆ ಸಹಕಾರಿ ಕ್ಷೇತ್ರವನ್ನು ಚೆನ್ನಾಗಿ ಬೆಳೆಸುವುದಕ್ಕಾಗುವುದಿಲ್ಲ. ನಿಮ್ಮ ಪಕ್ಷದವರನ್ನೇ ಬೇಕಾದರೆ ನೀವು ನಾಮಿ ನೇಷನ್ ಮಾಡಿಕೊಳ್ಳಿ, ನಮ್ಮ ಪಕ್ಷದವರನ್ನು ಮಾಡಿ ಎಂದು ನಾವು ಬಂದು ನಿಮ್ಮನ್ನು ಕೇಳುವುದಿಲ್ಲ, ನಿಮ್ಮ ಪಕ್ಷದವರು ಬಂದು ಒತ್ತಾಯ ಮಾಡುತ್ತಾರೆ. ಆಗ ನೀವು ನಾಮಿನೇಷನ್ ಮಾಡುತ್ತೀರಿ ಅದು ಬೇರೆ ವಿಚಾರ. ಹಾಗೂ ಇದನ್ನೆಲ್ಲಾ ನೋಡಿಕೊಂಡು ಜನರು ಓಟು ಕೊಡುವುದಿಲ್ಲ. ಆ ವಿಷಯ ಬೇರೆ. ಆದರೆ ಈ ಕ್ಷೇತ್ರದಲ್ಲಿ ಹಣದ ದುರುಪಯೋಗ ಏನಾಗಿದೆ ಹಾಗೂ ಈ ಕ್ಷೇತ್ರದಲ್ಲಿ ರುವಂತಹ ಎಡರು ತೊಡರುಗಳು ಏನಿವೆ ಈ ಪಿಡುಗುಗಳನ್ನೆಲ್ಲಾ ಹೋಗಲಾಡಿಸ ಬೇಕಾದರೆ ಮತ್ತು ತಡೆಗಟ್ಟಬೇಕಾದರೆ ಆಳವಾದ ಪ್ಲಾನ, ಆಳವಾದ ಯೋಜನೆ ಹಾಗೂ ಸರಿಯಾದಂಥ ಕಾರ್ಯಕ್ರಮ ಅತ್ಯಗತ್ಯವೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಮತ್ತು ಅಪೆಕ್ಸ್ ಸಂಸ್ಥೆಗಳ ಬಗ್ಗೆ ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಇವುಗಳ ಬಗ್ಗೆ ಕೊಟ್ಟಿರುವಂತಹ ಚರಿತ್ರೆಗಿಂತಲೂ ಹೆಚ್ಚು ವಿಷ ಯಗಳನ್ನು ನಾವು ಸಹಕಾರಿ ಕ್ಷೇತ್ರದಲ್ಲಿ ಮೊದಲಿನಿಂದಲೂ ಇದ್ದುಕೊಂಡು ತಿಳಿದುಕೊಂಡಿದ್ದೇವೆ. ಆದ್ದರಿಂದ ಇವುಗಳ ಒಂದು ಗುಣಮಟ್ಟವನ್ನು ಹೆಚ್ಚು ಮಾಡುವ ಬಗ್ಗೆಯಾಗಲೀ ಮತ್ತು ನಮ್ಮ ಜನರ ಒಂದು ನೈತಿಕತೆಯನ್ನು ಹೆಚ್ಚು ಮಾಡುವ ಬಗ್ಗೆಯಾಗಲೀ ಕೆಲವೊಂದು ಕಾರ್ಯಕ್ರಮಗಳ ಅಗತ್ಯವಿದೆ ಎಂಬುದು ಯಾರ ತಲೆಗೂ ಹೊಳೆದಿಲ್ಲವೆಂದು ಕಾಣುತ್ತಿದೆ. ಮಾನ್ಯ ಮಂತ್ರಿಗಳೇ ಇವುಗಳಿಗೆ ಒಂದು ರೀತಿಯ ಮೆರುಗು ಕೂಡ ಬೇಕಾಗುತ್ತದೆ. ಈ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ತಾವು ಮಂತ್ರಿಗಳಾದ ಮೇಲೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮತ್ತು ಇಲಾಖಾ ಅಧಿಕಾರಿಗಳಿಗೆ ನಾನು ಮೊದಲಿನಿಂದಲೂ ಹೇಳುತ್ತಿದ್ದುದು ಏನೆಂದರೆ ಯಾವುದೇ ಒಂದು ಹಳ್ಳಿಗೆ ಹೋಗಲಿ, ಅಲ್ಲಿ ಒಂದು ವಿಲೇಜ್ ಸೊಸೈಟಿ ಇರುತ್ತದೆ. ಆಗ್ರೋ ಕೇಂದ್ರಗಳಿರುತ್ತವೆ ಮತ್ತು ಖಾಸಗಿ ವ್ಯಾಪಾರಿ ಗಳಿರುತ್ತಾರೆ. ಈ ಮೂರು ಜನರು ರಾಸಾಯನಿಕ ಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ. ಆದರೆ ದುರದೃಷ್ಟವಶಾತ್ ಮಾರಾಟದ ಬೆಲೆಯಲ್ಲಿ ವ್ಯತ್ಯಾಸಗಳಿರುತ್ತವೆ. ಈ ಮೂರು ಜನರು ಊರ ಮುಂಭಾಗದಲ್ಲಿಯೇ ಅಂಗಡಿಗಳನ್ನು ಇಟ್ಟಿರುತ್ತಾರೆ, ರೈತರು ಗೊಬ್ಬರ ಕೊಳ್ಳಲು ಹೋದಾಗ ಖಾಸಗಿ ವ್ಯಾಪಾರಿ ಹತ್ತಿರ ಇಲ್ಲವೇ ಆಗ್ರೋ ಕೇಂದ್ರಗಳಿಗೆ ಹೋಗುತ್ತಾರೆಯೇ ಹೊರತು ನಿಮ್ಮ ಸೊಸೈಟಿಗಳಿಗೆ ಯಾರೂ ಸಹ ಹೋಗುವುದಿಲ್ಲ, ಇದಕ್ಕೆ ಕಾರಣವೆಂದರೆ ದರಗಳಲ್ಲಿ ನಾಲ್ಕರಿಂದ ಆರು ರೂಪಾಯಿಗಳವರೆಗೆ ವ್ಯತ್ಯಾಸವಿರುತ್ತದೆ. ಇದನ್ನು ತಾವು ಯೋಚನೆ ಮಾಡಿದ್ದೀರಾ ? ಅಧಿಕಾರಿಗಳ ಗಮನಕ್ಕೆ ನಾನು ತಂದಾಗ ಯೋಚನೆ ಮಾಡುತ್ತೇವೆಂದು, ಪರಿಶೀಲನೆ ಮಾಡುತ್ತೇವೆಂದು ಹೇಳು ತ್ತಾರೆಯೇ ಹೊರತು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಒಂದು ಮೀಟಿಂಗ್ ಕರೆದು ಎಲ್ಲರ ಅಭಿಪ್ರಾಯ ಪಡೆದು ಒಂದು ತೀರ್ಮಾನ ತೆಗೆದುಕೊಳ್ಳಿ ಎಂದು ಸಲಹೆ ಮಾಡಿದೆ, ಇದರ ಪ್ರಕಾರ ಅವರು ಮೀಟಿಂಗ್ ಕರೆದಾಗ ನಾವು ಬೇರೆ ಕೆಲಸದ ನಿಮಿತ್ತ ಹಾಜರಾಗ ದಿರ ಬಹುದು. ಅದು ಏನೇ ಇರಲಿ, ಇವೊತ್ತಿನ ದಿವಸ ಹತ್ತು ಗುಂಟೆ ಜಮೀನು ಇರುವವರು, ಒಂದು ಎಕರೆಯಿಂದ ಹತ್ತು ಎಕರೆಯವರೆಗೆ ಜಮೀನು ಇರುವವರು, ನೀರಾವರಿ ಪ್ರದೇಶಗಳಲ್ಲಿ ವರ್ಷದಲ್ಲಿ ಎರಡು ಬೆಳೆ ಬೆಳೆಯುವವರೂ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆಯುವವರು ಏನಿದ್ದಾರೆ, ಇವರೆಲ್ಲರೂ ಸಾವಿರಾರು ರೂಪಾಯಿಗಳನ್ನು ಅನಾವಶ್ಯಕವಾಗಿ ದಂಡದ ರೂಪದಲ್ಲಿ ಗೊಬ್ಬರಕ್ಕಾಗಿ ಕೊಡುತ್ತಿದ್ದಾರೆ. ಇದನ್ನು ನೀವು ತೀವ್ರವಾಗಿ ವಿಚಾರ ಮಾಡಿದ್ದೀರಾ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಇನ್ನು ಆಡಿಟ್ ವಿಚಾರ ಸನ್ಮಾನ್ಯ ಮಂತ್ರಿಗಳಿಗೇ ಗೊತ್ತಿದೆ. ನಾವು ಕಳೆದ ೨೫-೩೦ ವರ್ಷ ಗಳಿಂದಲೂ ಸಹ ಸಹಕಾರ ಸಂಘಗಳಲ್ಲಿ ಜಾಗ್ರತೆ ಆಡಿಟ್ ಆಗಬೇಕೆಂದು ಅನೇಕ ಕಾನ್‌ಫೆರೆನ್ಸ್‌ಗಳಲ್ಲಿ ಹೇಳಿದ್ದೇವೆ. ಜನರಲ್ ಬಾಡಿ ಮೀಟಿಂಗ್ ನಡೆಯುವ ವೇಳೆಗಾದರೂ ಆಡಿಟ್ ಆಗಿರಬೇಕು. ಸಾಧ್ಯ ವಾದರೆ ಕನ್‌ಕರೆಂಟ್ ಆಡಿಟ್ ಆದರೂ ಆಗಬೇಕೆಂದು ನಾವು ಬೇಕಾದಷ್ಟು ಸಲ ಹೇಳಿದ್ದೇವೆ. ಈ ವಾರ್ಷಿಕ ವರದಿಯಲ್ಲಿ ಎಷ್ಟು ಪರ್ಸೆಂಟ್ ಆಡಿಟ್ ಆಗಿದೆ ಎಂಬ ವಿವರವನ್ನು ಕೊಟ್ಟಿದ್ದಾರೆ. ಆದರೆ ಇದು ಯಾರಿಗೆ ಬೇಕು ? ಪ್ರತಿಸೊಸೈಟಿಯ ಆಡಿಟ್ ಜನರಲ್ ಬಾಡಿ ಮೀಟಿಂಗ್ ವೇಳೆಗೆ ಆಗಿರಬೇಕು. ಮತ್ತು ಸದಸ್ಯರಿಗೆಲ್ಲಾ ಬ್ಯಾಲೆನ್ಸ್ ಷೀಟನ್ನು ಒದಗಿಸಬೇಕು. ಈ ರೀತಿ ಮಾಡಿದಾಗ ಮಾತ್ರ ಬಹು ಮಟ್ಟಿಗೆ ಹಣ ದುರುಪಯೋಗವಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ವಿಲೇಜ್ ಸೊಸೈಟಿಯಲ್ಲಿಯಾಗಲೀ ಮಾರ್ಕೆಟಿಂಗ್ ಸೊಸೈಟಿಯಲ್ಲಿಯಾಗಲಿ. ಜಿಲ್ಲಾ ಬ್ಯಾಂಕ್‌ಗಳಲ್ಲಿ

ಯಾಗಲೀ ಹಳ್ಳಿಗಳ ಮಟ್ಟದಲ್ಲಿರುವ ವಿವಿಧ ಸಹಕಾರ ಸಂಘಗಳಲ್ಲಿಯಾಗಲಿ, ಕ್ರೆಡಿಟ್ ಸೊಸೈಟಿಗಳಲ್ಲಿ ಯಾಗಲೀ, ಕನ್‌ಸ್ಯೂಮರ್ಸ್ ಸೊಸೈಟಿಗಳಲ್ಲಿಯಾಗಲಿ, ಹ್ಯಾಂಡ್-ಲೂಂ ಕೋಆಪರೇಟಿವ್ ಸೊಸೈಟಿಗಳಲ್ಲಿ ಯಾಗಲೀ, ಇಂಡಸ್ಟ್ರಿಯಲ್ ಕೋಆಪರೇಟೀವ್ ಸೊಸೈಟಿಗಳಲ್ಲಿ ಯಾಗಲೀ ಒಟ್ಟಿನಲ್ಲಿ ಯಾವುದೇ ಒಂದು ಸೊಸೈಟಿಯಲ್ಲಿಯಾದರೂ ಕೂಡ ಪ್ರತಿ ಮೂರು ತಿಂಗಳಿಗೊಮ್ಮೆ ಆಡಿಟ್ ಆಗಬೇಕು. ಕನ್‌ಕರೇಂಟ್ ಆಡಿಟ್ ಮಾಡಲು ಸಿಬ್ಬಂದಿ ಇಲ್ಲವೆಂದು ತಾವು ಹೇಳಬಹುದು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಹಣ ಇಲ್ಲ ಎಂದು ಹೇಳಬಹುದು ಆದರೆ ತಾವು ಪ್ರತಿ ಸಹಕಾರದಿಂದ ೫೦೦ ರಿಂದ ಒಂದು ಸಾವಿರ ರೂಪಾಯಿಗಳವರೆಗೆ ಏನು ವಸೂಲಿ ಮಾಡುತ್ತಿದ್ದೀರಿ ಅದನ್ನು ಒಂದಕ್ಕೆ ಎರಡ ರಷ್ಟು ವಸೂಲಿ ಮಾಡಿ ನಾವು ಕೊಡಲು ಅಂಜುವುದಿಲ್ಲ ಮತ್ತು ಹಿಂತೆಗೆಯುವುದಿಲ್ಲ. ಆದರೆ ಈ ಕೆಲಸ ಮಾತ್ರ ಕಡ್ಡಾಯವಾಗಿ ಆಗಲೇ ಬೇಕು. ಇಂತಹ ಒಂದು ಬಹು ಮುಖ್ಯವಾದ ವಿಷಯವನ್ನು ಈ ವಾರ್ಷಿಕ ವರದಿಯಲ್ಲಿ ಪ್ರಸ್ತಾಪ ಮಾಡದೆ ಕೈಬಿಟ್ಟಿದ್ದಾರೆಂದು ನಾನು ವಿಧಿ ಇಲ್ಲದೆ ಹೇಳಬೇಕಾಗಿದೆ. ಇನ್ನು ಈ ವಾರ್ಷಿಕ ವರದಿಯಲ್ಲಿ ನಿಷ್ಕ್ರಿಯವಾಗಿರುವ ಸೊಸೈಟಿಗಳು ನಾಲ್ಕು ಸಾವಿರ ಚಿಲ್ಲರೆ ಇವೆ ಎಂಬುದಾಗಿ ಹೇಳಿದ್ದಾರೆ. ಇವೊತ್ತು ನಮ್ಮಲ್ಲಿ ಲಿಕ್ವಿಡೇಷನ್‌ಗೆ ಬಂದಿರುವಂತಹ ಸೊಸೈಟಿಗಳು ಮತ್ತು ಕೆಲಸ ಮಾಡಿರುವಂತಹ ಸೊಸೈಟಿಗಳು ಜಾಸ್ತಿ ಇವೆ. ಇಂತಹ ಸೊಸೈಟಿಗಳನ್ನು ಪುನಶ್ಚೇತನಗೊಳಿಸಲು ತಾವು ಏನಾದರೂ ಯೋಚನೆ ಮಾಡಿದ್ದೀರಾ ? ಇದರ ಬಗ್ಗೆ ತಾವು ಏನನ್ನೂ ಹೇಳಿಲ್ಲ, ಇಪ್ಪೊಂದು ಕೋಟಿ ರೂಪಾಯಿಗಳಿಗೆ ನಾವು ನಿಮಗೆ ಮಂಜೂರಾತಿ ಕೊಡುವ ಕಾಲದಲ್ಲಿ ನಿಮ್ಮಲ್ಲಿ ನಮಗೆ ವಿಶ್ವಾಸ ಹಾಗೂ ನಂಬಿಕೆ ಇರಬೇಕಾಗುತ್ತದೆ. ತಾವು ಜನರ ನಾಡಿಯ ಮಿಡಿತದಂತೆ ಹಾಗೂ ಸಂಧರ್ಭೋಚಿತವಾಗಿ ಕಾರ್ಯಕ್ರಮಗಳನ್ನು ಕೈಕೊಳ್ಳುವುದಾದರೆ ೨೦ ಕೋಟಿ ರೂಪಾಯಿಗಳಿಗೆ ಮಾತ್ರವಲ್ಲ ನೂರು ಕೋಟಿ ರೂಪಾಯಿಗಳಿಗೆ ಬೇಕಾದರೂ ಮಂಜೂರಾತಿ ಕೊಡುತ್ತೇವೆ.

ಸನ್ಮಾನ್ಯ ಅಧ್ಯಕ್ಷರೇ ಇನ್ನು ನಾವು ರೆಗ್ಯುಲೇಟೆಡ್ ಮಾರ್ಕೆಟ್ಸ್ ಬಗ್ಗೆ ಪ್ರಸ್ತಾಪ ಮಾಡು ವುದಾದರೆ ಈ ವಿಷಯದಲ್ಲಿ ನನಗೆ ಅಷ್ಟು ಅನುಭವ ಇಲ್ಲ. ಆದರೂ ಕೂಡ ಇವತ್ತು ನಮ್ಮ ಮಂಡ್ಯ ಜಿಲ್ಲೆಯಲ್ಲಿ ಒಂದು ರೆಗ್ಯುಲೆಟೆಡ್ ಮಾರ್ಕೆಟ್‌ನ್ನು ಹೊಸದಾಗಿ ಸ್ಥಾಪನೆ ಮಾಡಿದ್ದಾರೆ. ಈ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆ ಮಾಡಿ ಸುಮಾರು ಒಂದು ವರ್ಷವಾಯಿತು. ಆದರೆ ಈ ರೆಗ್ಯುಲೇಟೆಡ್ ಮಾರ್ಕೆಟ್ ಅಭಿವೃದ್ಧಿಯನ್ನು ಮಾಡುವುದಕ್ಕೆ ಆಗಲಿಲ್ಲ. ಅಲ್ಲಿ ಇನ್ನು ಮೊದಲೇ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆ ಮಾಡಲು ಸ್ಥಳದ ಅಭಾವ ಇತ್ತು. ಆದರೂ ಕೂಡ ಈಗ ಸ್ಥಾಪನೆ ಮಾಡಿ ರೈತರ ಅಭಿವೃದ್ಧಿ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಿದ್ದಾರೆ. ಅಷ್ಟು ಮಾತ್ರ ನಾನು ಈ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇನ್ನು ನಮ್ಮ ಮಾನ್ಯ ಗ್ರಾಮೀಣ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳ ಖಾತೆಗೆ ಸಂಬಂಧಪಟ್ಟ ಹಾಗೆ ಕೆಲವಾರು ವಿಷಯಗಳನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನಮಗೆ ಕೊಟ್ಟಿರತಕ್ಕಂಥ ವಾರ್ಷಿಕ ವರದಿಯನ್ನು ನೋಡಿದಾಗ ನಮಗನ್ನಿಸುತ್ತದೆ ಈ ಗ್ರಾಮೀಣ ಅಭಿವೃದ್ಧಿ ಕೆಲಸ ಕಾರ್ಯಗಳು ಯಾವ ರೀತಿಯಲ್ಲಿ ನಡೆಯುತ್ತಿವೆ, ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಎಂದು? ಆದರೆ ನಮಗೆ ಕೊಟ್ಟಿರತಕ್ಕಂಥ ವರದಿಯಲ್ಲಿ ಸುಮಾರು ೧೭ ಯೋಜನೆಗಳನ್ನು ಇವರು ನಾನಾ ರೀತಿಯ ಹೆಸರಿನಲ್ಲಿ ಹಾಕಿಕೊಂಡಿದ್ದಾರೆ. ಆದರೆ ನಾನು ಆ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗು ವುದಿಲ್ಲ. ಆದರೆ ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಮಾಡಿರತಕ್ಕಂಥ ಸಾಧನೆಯ ಬಗ್ಗೆ ಅಂಕಿ ಅಂಶಗಳನ್ನು ಸಹ ಕೊಟ್ಟಿದ್ದಾರೆ. ಆದರೆ ನಾನು ಆ ಎಲ್ಲಾ ೧೭ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕಾದರೆ ಸುಮಾರು ೧೭ ಗಂಟೆಗಳಾದರೂ ಸಹ ಬೇಕಾಗುತ್ತದೆ. ಆದ್ದರಿಂದ ಕೆಲವೇ ವಿಷಯಗಳಿಗೆ ಸೀಮಿತವಾಗಿ ನಾನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಬಹಳ ಶ್ರಮವನ್ನು ಸಹ ತೆಗೆದುಕೊಂಡಿದ್ದಾರೆಂದು ನನ್ನ ಅನೇಕ ಜನ ಮಾನ್ಯ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಆದರೆ ನಾನು ನನ್ನ ಅನಿಸಿಕೆಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತೇನೆ. ಮೊದಲನೆಯದಾಗಿ ಐ. ಆರ್. ಡಿ. ಪಿ. ಪ್ರೋಗ್ರಾಂನಲ್ಲಿ ನಮ್ಮ ಮಾನ್ಯ ಮಂತ್ರಿಗಳು ಸುಮಾರು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಆದರೆ ಹಿಂದಿನ ಸರ್ಕಾರದವರು ಕೂಡ ಈ ಯೋಜನೆಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಈ ಯೋಜನೆ ಜಾರಿಗೆ ತಂದು ಸುಮಾರು ೪ ವರ್ಷಗಳು ಮುಗಿದು ನಾವು ಈಗ ೫ನೇ ವರ್ಷಕ್ಕೆ ಹೆಜ್ಜೆಯನ್ನು ಇಡುತ್ತಿದ್ದೇವೆ. ಆದರೆ ಮಾನ್ಯ ಮಂತ್ರಿಗಳು ಕೊಟ್ಟಿರ ತಕ್ಕಂಥ ವರದಿಯಲ್ಲಿ ಏನು ಇದೆ ಅದನ್ನು ನಾವು ನೋಡಿದಾಗ ನಮಗನಿಸುತ್ತದೆ ಪ್ರತಿ ವರ್ಷ ಪ್ರತಿ ತಾಲ್ಲೂಕಿನಲ್ಲಿ ೬೦೦ ಕುಟುಂಬಗಳನ್ನು ಸರ್ಕಾರದವರು ತೆಗೆದುಕೊಂಡು ಅವರಿಗೆ ನಾನಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನಾನು ಇದನ್ನು ಸುಳ್ಳು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಪಟ್ಟಣಗಳಲ್ಲಿ ವಾಸ ಮಾಡತಕ್ಕಂಥ ಜನ ಹಳ್ಳಿಗಳಿಗೆ ಬರಬೇಕಾದರೆ

ಬಲು ಅಪರೂಪ. ಆದರೆ ನಾವು ಪ್ರತಿ ದಿವಸ ಹಳ್ಳಿಯಲ್ಲಿ ವಾಸ ಮಾಡತಕ್ಕಂಥ ಜನರ ಮಧ್ಯೆ ವಾಸ ಮಾಡುತ್ತಿದ್ದೇವೆ. ಅವರ ಸಂಪರ್ಕವನ್ನು ನಾವು ಇಟ್ಟುಕೊಂಡಿರುತ್ತೇವೆ. ಆದ್ದರಿಂದ ಹಳ್ಳಿಯಲ್ಲಿ ವಾಸ ಮಾಡತಕ್ಕಂಥ ಜನರ ಕಷ್ಟನಷ್ಟಗಳು ಏನು ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ತಾವು ಪ್ರತಿ ವರ್ಷ ಪ್ರತಿಯೊಂದು ತಾಲ್ಲೂಕಿನಲ್ಲಿ ೬೦೦ ಕುಟುಂಬಗಳನ್ನು ಗುರುತಿಸುತ್ತೇವೆಂದು ಹೇಳುತ್ತೀರಿ? ಆದರೆ ಆ ೬೦೦ ಕುಟುಂಬಗಳನ್ನು ಯಾವ ಒಂದು ಆಧಾರದ ಮೇಲೆ ತಾವು ಆಯ್ಕೆ ಮಾಡುತ್ತೀರಿ? ಸ್ವಾಮಿ ಈಗ ನಾನು ಉದಾಹರಣೆಗೆ ಹೇಳಬೇಕಾದರೆ ನನ್ನ ಕ್ಷೇತ್ರದಲ್ಲಿ ಸುಮಾರು ೬೩ ಪಂಚಾಯಿತಿಗಳು ಇವೆ. ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುವಾಗ ಇಡೀ ಸದನವೇ ಈ ಕಡೆ ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿ ತಾವು ಒಂದು ವರ್ಷದಲ್ಲಿ ೬೦೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳುತ್ತೀರಿ. ಆದರೆ ನನ್ನ ಮಂಡ್ಯ ತಾಲ್ಲೂಕಿನಲ್ಲಿ ಸುಮಾರು ೧೨ ಪಂಚಾಯಿತಿಗಳನ್ನು ಮಾತ್ರ ತಾವು ಆಯ್ಕೆ ಮಾಡಿ ಅದರಲ್ಲಿ ಒಂದು ಪಂಚಾಯಿತಿಯ ೫೦ ಕುಟುಂಬಗಳಿಗೆ ಮಾತ್ರ ತಾವು ಹೋದ ವರ್ಷ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೀರಿ. ಆದರೆ ಅದರ ಮುಂದಿನ ವರ್ಷದಲ್ಲಿ ತಾವು ಆ ಕಾರ್ಯಕ್ರಮವನ್ನು ಸಹ ಕೈಗೊಳ್ಳಲಿಲ್ಲ. ಆ ಪಂಚಾಯಿತಿಯನ್ನು ಸಂಪೂರ್ಣವಾಗಿ ಕೈ ಬಿಟ್ಟಿದ್ದೀರಿ. ಒಂದು ಪಂಚಾಯಿತಿಯಲ್ಲಿ ೫೦೦ ಕುಟುಂಬಗಳು ಇದ್ದು ತಾವು ಬರೀ ೫೦ ಕುಟುಂಬಗಳಿಗೆ ಸಹಾಯವನ್ನು ಮಾಡಿದರೆ ಇನ್ನು ಉಳಿದ ೪೫೦ ಕುಟುಂಬಗಳ ಗತಿ ಏನಾಗಬೇಕು? ಆದರೆ ಇವತ್ತು ಈ ಒಂದು ಐ. ಆರ್. ಡಿ. ಪಿ. ಪ್ರೋಗ್ರಾಂನ್ನು ಜನತೆಯ ಕಣ್ಣಿಗೆ ಮಣ್ಣು ಎರಚುವ ರೀತಿಯಲ್ಲಿ ಮಾಡುತ್ತಿದ್ದೀರಿ. ಇದು ನಿಮ್ಮ ಸರ್ಕಾರದ ತಪ್ಪು ಇರಬಹುದು, ಅಥವಾ ಕೇಂದ್ರ ಸರ್ಕಾರದ ತಪ್ಪು ಇರಬಹುದು. ಆದರೆ ಜನತೆ ಮಾತ್ರ ಇದರಲ್ಲಿ ತೊಂದರೆ ಪಡುತ್ತಿದ್ದಾರೆ. ಜನತೆ ನಿಮ್ಮನ್ನು ಕೇಳುವುದಿಲ್ಲ. ನಾವು ಯಾವಾಗಲೂ ಜನತೆಯ ಮಧ್ಯದಲ್ಲಿ ವಾಸ ಮಾಡುತ್ತಿರುವುದರಿಂದ ಜನತೆ ನಮ್ಮನ್ನು ಕೇಳುತ್ತಿದ್ದಾರೆ. ನಾವು ಆ ಜನತೆಗೆ ಏನು ಉತ್ತರ ಹೇಳಬೇಕು. ಆದರೆ ತಾವು ಒಂದು ಪ್ರಶ್ನೆಯನ್ನು ಕೇಳಬಹುದು. ಒಂದೇ ವರ್ಷದಲ್ಲಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಆಗುತ್ತದೆಯೇ ಎಂದು ಆದರೆ ತಾವು ಒಂದೇ ವರ್ಷದಲ್ಲಿ ಮಾಡಿ ಎಂದು ನಾನು ಹೇಳಲಿಲ್ಲ. ಆದರೆ ಅದನ್ನು ೫ ವರ್ಷಗಳಲ್ಲಿ ಮಾಡುತ್ತೇವೆಂದು ಹೇಳಿ, ಇಲ್ಲ ೧೦ ವರ್ಷಗಳಲ್ಲಿ ಮಾಡುತ್ತೇವೆಂದು ಹೇಳಿ, ಇವತ್ತು ಹಳ್ಳಿಗಳಲ್ಲಿ ಈ ಬಡಕುಟುಂಬಗಳನ್ನು ಸೆಲೆಕ್ಷನ್ ಮಾಡುವವರು ಯಾರು? ಸಾಮಾನ್ಯವಾಗಿ ವಿಲೇಜ್ ಅಕೌಂಟೆಂಟ್, ಆದರೆ ಅವರಿಗೆ ಈ ಪ್ರೋಗ್ರಾಂ ಬಗ್ಗೆ ಏನೇನು ಗೊತ್ತಿಲ್ಲ. ಆದರೆ ತಾವು ಹೇಳುತ್ತೀರಿ ಆ ಕ್ಷೇತ್ರದ ಶಾಸಕರನ್ನು ಸಂಪರ್ಕ ಮಾಡಿ ಸೆಲೆಕ್ಷನ್ ಮಾಡಬೇಕೆಂದು. ಆದರೆ ಈಗ ಈ ಪ್ರೋಗ್ರಾಂನ್ನು ಮಾಡುವವರು ತಮ್ಮ ಸೆಕ್ರೆಟರಿಯೇಟ್‌ನಲ್ಲಿರುವ ಡೆಪ್ಯುಟಿ ಸೆಕ್ರೆಟರಿ ಅಥವಾ ಅಡಿಶನಲ್ ಸೆಕ್ರೆಟರಿ ಯೋಜನೆಯನ್ನು ಹಾಕುತ್ತಾರೆ. ಆದರೆ ಆ ಯೋಜನೆಯ ಒಂದು ಗೈಡ್ ಲೈನ್ಸ್‌ನ್ನು ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು ಮಾರ್ಗದರ್ಶನ ಮಾಡಿದರೆ ಒಳ್ಳೆಯದು. ಸ್ವಾಮಿ ನಮ್ಮ ಹಳ್ಳಿಗಳಲ್ಲಿರತಕ್ಕಂಥವರು ಸಾಮಾನ್ಯವಾಗಿ ವಿಲೇಜ್ ಅಕೌಂಟೆಂಟ್, ತಹಸೀಲ್ದಾರ್‌ಗಳು, ಮತ್ತೆ ಬಿ. ಡಿ. ಓ. ಗಳು ಇವರಿಗೆ ಈ ಪ್ರೋಗ್ರಾಂ ಬಗ್ಗೆ ಅಷ್ಟೊಂದು ತಿಳುವಳಿಕೆ ಇಲ್ಲ. ಆದ್ದರಿಂದ ತಾವು ಅವರಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆಯನ್ನು ಕೊಡಬೇಕು. ಐ.ಆರ್.ಡಿ.ಪಿ. ಪ್ರೋಗ್ರಾಂ ಎಂದರೆ ಅವರಿಗೆ ಏನೇನು ಗೊತ್ತಿಲ್ಲ. ನನಗನಿಸುತ್ತದೆ ಒಂದು ವರ್ಷದಲ್ಲಿ ಒಂದು ಪಂಚಾಯಿತಿಯಲ್ಲಿ ೫೦ ಕುಟುಂಬಗಳನ್ನು ಗುರುತಿಸಿ ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಅಲ್ಲಿಗೆ ಆ ಪಂಚಾಯಿತಿಯ ಕೆಲಸ ಮುಗಿದು ಹೋಯಿತು. ಬೇರೆಯವರಿಗೆ ಆ ಸೌಲಭ್ಯ ಇಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಸರ್ಕಾರದವರು ಯಾವ ಯಾವ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಹಾಕಿಕೊಳ್ಳುತ್ತದೆಯೋ ಆ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಕಡುಬಡವರಿಗೆ ತಲುಪುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಆದರೆ ಸರ್ಕಾರದವರು ಇವತ್ತು ಕಡುಬಡವರಿಗೆ ಯಾವ ಸಹಾಯವನ್ನು ಮಾಡಬೇಕೆಂದು ಹೊರಟಿದೆಯೋ ಆ ಸಹಾಯ ಕಡುಬಡವರಿಗೆ ದೊರೆಯುತ್ತಿಲ್ಲ. ಇನ್ನು ತಮ್ಮ ವಾರ್ಷಿಕ ವರದಿಯಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಅಂತ್ಯೋದಯ ಕಾರ್ಯಕ್ರಮದಲ್ಲಿ ತಾವು ಹೋದ ವರ್ಷ ಅಂದರೆ ೧೯೮೩–೮೪ನೇ ಸಾಲಿನಲ್ಲಿ ಸುಮಾರು ೪೫ ತಾಲ್ಲೂಕುಗಳನ್ನು ಗುರುತಿಸಿದ್ದೀರಿ. ಅದರಲ್ಲಿ ನಮ್ಮ ಜಿಲ್ಲೆಯ ಮಳವಳ್ಳಿ, ನಾಗಮಂಗಲ ಇವುಗಳನ್ನು ಸಹ ಸೇರಿಸಿದ್ದೀರಿ. ಆದರೆ ಇದರಲ್ಲಿ ಮಾನ್ಯ ಮಂತ್ರಿಗಳು ಯಾವ ಒಂದು ರಾಜಕೀಯವನ್ನು ಸಹ ಮಾಡಿಲ್ಲವೆಂದು ನನಗನಿಸುತ್ತದೆ. ಆದರೆ ರಾಜಕೀಯ ಮಾಡಿದರು ಸಹ ಚಿಂತೆ ಇಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ರಾಜಕೀಯವನ್ನು ಮಾಡುತ್ತೇನೆ ಎನ್ನುವುದನ್ನು ತಾವು ಕೂಡ ನಂಬುತ್ತೀರಾ?

ಶ್ರೀ ಹೆಚ್. ಡಿ. ಚೌಡಯ್ಯ.—ತಾವು ರಾಜಕೀಯ ಮಾಡುವುದಿಲ್ಲವೆಂದು ನನಗೆ ಗೊತ್ತಿದೆ. ತಾವು ಹೋದ ವರ್ಷ ಬಡ್ಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಾ ಹೇಳಿದ್ದಾರೆ. ಈ ಅಂತ್ಯೋದಯ ಕಾರ್ಯಕ್ರಮವನ್ನು ನಾವು ಜಾರಿಗೆ ತರುತ್ತೇವೆಂದು. ಆದರೆ ಈ ರೀತಿಯ ಒಂದು ಯೋಜನೆ ರಾಜಸ್ಥಾನದಲ್ಲಿ ಇದೆ. ಆದರೆ ಈ ಯೋಜನೆ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆ ಎಂಬುದು ಪ್ರಾರಂಭದಲ್ಲಿಯೇ ಗೊತ್ತಾಗುತ್ತದೆ. ಇದರ ಬೆಳವಣಿಗೆಗೆ ಯಾವ ಯಾವ ರೂಪರೇಷೆಗಳನ್ನು ಹಾಕಿದ್ದಾರೆಂದು ನೋಡಿದರೆ ನಮಗೆ ಗೊತ್ತಾಗುತ್ತದೆ. ಆದರೆ ನಾನು ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ ಮೊನ್ನೆ ಶನಿವಾರ ನಮ್ಮ ಮನೆಗೆ ನಮ್ಮ ಹಳ್ಳಿಯ ವಿಲೇಜ್ ಅಕೌಂಟೆಂಟ್ ಬಂದು, ಸ್ವಾಮಿ ನಿಮ್ಮ ಹಳ್ಳಿಯಲ್ಲಿ ಯಾರಾದರೂ ೫ ಜನ ಕಡುಬಡವರು ಇದ್ದರೆ ತಾವು ಹೇಳಬೇಕು ಎಂದು ಕೇಳಿದ. ಆದರೆ ಆಗ ನಾನು ಏತಕ್ಕೆ ಎಂದು ಕೇಳಿದೆ ಅದಕ್ಕೆ ಅತ ಹೇಳಿದ ಏನೋ ಅಂತ್ಯೋದಯ ಕಾರ್ಯಕ್ರಮದಲ್ಲಿ ಕೆಲವು ಸೌಲಭ್ಯಗಳನ್ನು ಒದಗಿಸಿಕೊಡುತ್ತಾರಂತೆ ಅದಕ್ಕೆ ಎಂದು ಹೇಳಿದ. ಆದರೆ ನನಗೂ ಅದರ ಬಗ್ಗೆ ಏನೂ ಗೊತ್ತಿಲ್ಲವೆಂದು ಹೇಳಿ ನಾನು ನಮ್ಮ ತಾಲ್ಲೂಕಿನ ಬಿ. ಡಿ. ಓ.ಗೆ ಫೋನು ಮಾಡಿದೆ. ನಾನು ಫೋನ್ ಮಾಡಿದ್ದೆ, ಅವರ ಹೆಸರನ್ನು ಹೇಳು ವುದು ಬೇಡ ಅವರಿಗೆ ಏನೂ ಗೊತ್ತಿಲ್ಲ. ನಿಮ್ಮ ಕಾರ್ಯಕ್ರಮದ ವಿಚಾರ ಏನೂ ಗೊತ್ತಿಲ್ಲ. ಡಿ. ಡಿ. ಸಿ. ಮೀಟಿಂಗ್‌ನಲ್ಲಿ ತಮ್ಮ ವರದಿಯನ್ನು ಚರ್ಚೆ ಮಾಡಿದ್ದೇವೆ. ಅದರಲ್ಲಿ ಏನು ಕೊಟ್ಟಿದ್ದಾರೆಂದರೆ, ಈ ಒಂದು ಕಾರ್ಯಕ್ರಮದ ಮೇರೆಗೆ ೧೫ ಸಾವಿರದ ೬೭೯ ಕುಟುಂಬಗಳನ್ನು ಗುರುತಿಸಲಾಗಿದೆ ಯೆಂದು ಹೇಳಿದ್ದಾರೆ. ಈ ಕುಟುಂಬಗಳನ್ನು ೪೫ ತಾಲ್ಲೂಕುಗಳಲ್ಲಿ ಗುರುತಿಸಲಾಗಿದೆಯೆಂದು ಹೇಳಿದ್ದಾರೆ. ೧೯೮೩-೮೪ರಲ್ಲಿ ಗುರುತಿಸಿದಂತಹ ಕುಟುಂಬಗಳಿಗೆ ನೀವು ಕಾರ್ಯಕ್ರಮ ಹಾಕಿಕೊಳ್ಳಲಿಕ್ಕೆ ಕಾಯಬೇಕಾಗಿಲ್ಲ. ೧೯೮೪-೮೫ರಲ್ಲಿ ನಿಮ್ಮ ಯೋಜನೆಯ ಪ್ರಕಾರ ಪ್ರತಿ ಗ್ರಾಮದಲ್ಲಿ ೫ ಕುಟುಂಬ ಗಳಂತೆ ೨೦೦ ಗ್ರಾಮಗಳಲ್ಲಿ ಗುರುತಿಸಿದರೆ ೧೦೦೦ ಕುಟುಂಬಗಳು ಆಗುತ್ತವೆ. ೧ ಸಾವಿರ ಕುಟುಂಬ ಗಳಿಗೆ ನೀವು ಈ ಒಂದು ಸೌಲಭ್ಯವನ್ನು ಒದಗಿಸಿ ಕೊಡಬೇಕಾಗಿತ್ತು. ೧೯೮೩-೮೪ರಲ್ಲಿ ಏನು ಕೊಟ್ಟಿದ್ದೀರಿ? ನನ್ನ ಜಿಲ್ಲೆಯ ಬಗ್ಗೆ ಈ ಕೋಷ್ಟಕದಲ್ಲಿ ಕೊಟ್ಟಿದ್ದೀರಿ ಆದರೆ ಏನು ಪ್ರಯೋಜನ? ನಿಮ್ಮ ಹಣವೆಲ್ಲಾ ಡಿ. ಆರ್. ಡಿ. ಎಸ್. ಸಲ್ಲಿರುತ್ತದೆ. ಅವರು ವಿಜಯ ಬ್ಯಾಂಕ್ ಅಲ್ಲಿ ಇಲ್ಲಿ ಇಟ್ಟುಕೊಳ್ಳುತ್ತಾರೆ ಅದು ಬೇರೆ ವಿಷಯ. ಅದರಲ್ಲಿ ಏನಿದೆಯೋ ಅದನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ೧೯೮೨-೮೩ರಲ್ಲಿ ೬ ಲಕ್ಷ ೭೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡ ಬೇಕೆಂದು ಹೇಳಿದ್ದೀರಿ. ಅಷ್ಟು ಹಣವನ್ನು ನೀವು ಖರ್ಚು ಮಾಡಿದ್ದೀರಾ? ರಾಜ್ಯದಲ್ಲಿ ಇಂತಹ ಹೊಸ ಅಂತ್ಯೋದಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ನಿಮ್ಮ ಪಕ್ಷದ ವತಿಯಿಂದ ಹಾಕಿ ಕೊಂಡಿರತಕ್ಕ ಕಾರ್ಯಕ್ರಮ ಇದಕ್ಕಾಗಿ ನೀವು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಅದನ್ನು ನೀವು ಯೋಚನೆ ಮಾಡಬೇಕಾಗುತ್ತದೆ. ನಿಮ್ಮ ಯೋಜನೆ ಪ್ರಗತಿಯ ಮಾರ್ಗದಲ್ಲಿ ಹೋಗು ತ್ತಿದೆಯೋ ಎಂಬುದನ್ನು ನೀವು ಯೋಚಿಸಬೇಕಾಗುತ್ತದೆ. ಇದು ನೀವು ಹಾಕಿಕೊಂಡಿರತಕ್ಕ ಹೊಸ ಯೋಜನೆ, ನಾನು ಇದನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ಮಂತ್ರಿಗಳು ಹೇಳತಕ್ಕದ್ದು ಏನು. ಪ್ರತಿಯೊಂದು ಹಳ್ಳಿಗೂ ಪ್ರತಿಯೊಂದು ತಾಲ್ಲೂಕಿಗೂ ಈ ಒಂದು ವ್ಯವಸ್ಥೆಯನ್ನು ಮಾಡು ತ್ತೇವೆ ಎಂದು ಹೇಳುತ್ತಾರೆ. ಬಹುಶಃ ನನಗನಿಸುತ್ತದೆ ನೀವು ಹೇಳುವುದು ಒಂದು, ಮಾಡುವುದು ಒಂದು, ಇದು ಸರಿಯಲ್ಲ. ಒಂದು ತಾಲ್ಲೂಕಿನಲ್ಲಿ ಪ್ರತಿವರ್ಷ ಒಂದು ಹೋಬಳಿಯಲ್ಲಿ ಬರತಕ್ಕ ಎರಡು ಪಂಚಾಯಿತಿಯಲ್ಲಿ ೫ ಕುಟುಂಬಗಳನ್ನು ಆರಿಸಿಕೊಳ್ಳುತ್ತೀರಿ. ಒಟ್ಟು ೫೦ ಕುಟುಂಬಗಳು ಬರುತ್ತವೆಂದು ನನಗೆ ತಿಳಿದುಬಂದಿದೆ. ದಯಮಾಡಿ ಇದು ಅಧಿಕಾರಿಗಳಿಗೆ ತಿಳಿದಿದೆಯೇ ಎಂಬುದನ್ನು ತಾವು ತೀವ್ರವಾಗಿ ಪರಿಗಣಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಗ್ರಾಮೀಣಾಭಿವೃದ್ಧಿ ಉದ್ಯೋಗ ಖಾತರಿ ಯೋಜನೆ ಇದರಲ್ಲಿ ಏನು ಪ್ರಗತಿಯಾಗಿದೆ? ಗ್ರಾಮೀಣಾಭಿವೃದ್ಧಿ ಉದ್ಯೋಗ ಖಾತರಿ ಯೋಜನೆಯನ್ನು ೨೬ನೇ ಜನವರಿ ೧೯೮೪ರಿಂದ ಹಾಕಿ ಕೊಂಡಿದ್ದೀರಿ ನಾನು ಈ ವಿಷಯದಲ್ಲಿ ಪ್ರಶ್ನೆ ಮಾಡುವುದಿಲ್ಲ. ಅದಕ್ಕೆ ಇನ್ನೂ ಕಾಲಾವಕಾಶ ಇದೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ ಏನಿದೆ ಅದರ ವಿವರಗಳನ್ನು ಅಧಿಕಾರಿಗಳ ಹತ್ತಿರ ತೆಗೆದುಕೊಳ್ಳಿ. ನೀವು ಯಾರನ್ನು ಮರುಳು ಮಾಡುವುದಕ್ಕೆ ಹೊರಟಿದ್ದೀರಿ? ಜನರು ಹುಚ್ಚರೆಂದು ತಿಳಿದುಕೊಂಡಿ ದ್ದೀರಾ? ಜನರಿಂದ ಚುನಾಯಿತರಾಗಿ ಬಂದಿರತಕ್ಕವರು ದಡ್ಡರೆಂದು ತಿಳಿದುಕೊಂಡಿದ್ದೀರಾ? ಅಥವಾ ನಿಮ್ಮ ಅಧಿಕಾರಿಗಳು ದಡ್ಡರೆ? ಈಗ ಜನಗಳು ಎಚ್ಚೆತ್ತುಕೊಂಡಿದ್ದಾರೆ. ನೀವು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಮೇಲೆ ಜಿಲ್ಲಾಧಿಕಾರಿಗಳು ಕೆಲಸ ಕಾರ್ಯಗಳು ಎಷ್ಟಾಯಿತು, ಏನಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಡಿ. ಡಿ. ಸಿ. ಮೀಟಿಂಗ್ ಒಪ್ಪಿಗೆ ಕೊಟ್ಟಮೇಲೂ ಆ ಕೆಲಸದ ಬಗ್ಗೆ ಫಾಲೋಅಪ್ ಇಲ್ಲ. ಅಧಿಕಾರಿಗಳು ಇನ್ನೂ ಸರ್ಕಾರದಿಂದ ಅನುಮತಿ ಬಂದಿಲ್ಲ ವೆಂದು ಹೇಳುತ್ತಾರೆ. ಕೆಲವಾರು ತಿಂಗಳುಗಳಿಂದ ಅದೇರೀತಿ ಹೇಳುತ್ತಿದ್ದಾರೆ. ೧೯೮೩-೮೪ರಲ್ಲಿ

ಈ ಯೋಜನೆಗೆ ೪ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ೧೯೮೪-೮೫ರಲ್ಲಿ ೨೩ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಅಂದಾಜು ವೆಚ್ಚವನ್ನು ಭಾರತ ಸರ್ಕಾರದವರು ಸೂಚಿಸ ಬೇಕು ಅದಕ್ಕೆ ಅನುಸಾರವಾಗಿ ನಾವು ಮಾಡಬೇಕಾಗುತ್ತದೆಂದು ಹೇಳುತ್ತೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಒಂದು ಕಾರ್ಯಕ್ರಮ ಏನಿದೆ, ಇದು ಕೇಂದ್ರ ಸರ್ಕಾರದ ನೆರವಿನಿಂದ ಆಗಬೇಕು, ಜೊತೆಗೆ ಅವರ ಗೈಡ್‌ಲೈನ್ಸ್ ಪ್ರಕಾರ ನಾವು ಕಾರ್ಯಕ್ರಮವನ್ನು ಹಾಕಿದ್ದೇವೆ. ಕೇಂದ್ರ ಸರ್ಕಾರದವರು ಒಪ್ಪಿದ ಮೇಲೆ ನಾವು ಹಣವನ್ನು ರಿಲೀಸ್ ಮಾಡಬೇಕಾಗುತ್ತದೆ. ಅದರ ಬಗ್ಗೆ ನಾನು ಉತ್ತರ ಹೇಳುವಾಗ ಹೇಳುತ್ತೇನೆ. ಈಗ ಪ್ರೋಗ್ರಾಮ್‌ನ ಉದ್ದೇಶ ಹೇಳಿದ್ದೇವೆ.

ಶ್ರೀ ಎಚ್. ಡಿ. ಚೌಡಯ್ಯ.—ಬೇರೆ ಕಾರ್ಯಕ್ರಮಗಳು ಇವೆ ಕುಡಿಯುವ ನೀರಿನ ವ್ಯವಸ್ಥೆ ಮತ್ತೊಂದು ಮಗದೊಂದು ಕಾರ್ಯಕ್ರಮಗಳು ಇವೆ. Anticipating money from the Government of India what advance action you have taken we would like to know?

ಶ್ರೀ ಅಬ್ದುಲ್ ನಜೀರ್ ಸಾಬ್.—ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. This is a job oriented scheme, Individual project has to be approved by the Government of India.

SRI H. D. CHOWDAIAH.—Are they all individual projects?

SRI ABDUL NAZEER SAB.—Whatever suggestions we receive from the districts on the programme we will formulate them into projects and those projects has to be approved by the Government of India. There is a guideline.

SRI H. D. CHOWDAIAH.—If it is so, it is good. ನನ್ನ ಚಿಂತನೆ ಏನೆಂದರೆ ನಿಮ್ಮ ವಿಷಯದಲ್ಲಿ ನನಗೆ ವೈಯಕ್ತಿಕವಾಗಿ ಅಭಿಮಾನವಿದೆ. ನೀವು ನಿರ್ದೇಶನ ಕೊಡಬೇಕು ಆಗ ನಾವು ಇಂತಿಂಥಾ ಯೋಜನೆಗಳು ಇವೆಯೆಂದು ಜನಗಳಿಗೆ ಹೇಳುತ್ತೇವೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಒಳ್ಳೆಯ ಅಭಿಪ್ರಾಯ. ಅಭಿಮಾನವಿದೆ ಆದರೆ ಕೆಲಸ ಆಗಬೇಕಲ್ಲ?

ಶ್ರೀ ಎಚ್. ಡಿ. ಚೌಡಯ್ಯ.—ಜನರಿಗಾಗಿ ಇರತಕ್ಕ ಕಾರ್ಯಕ್ರಮಗಳನ್ನು ಜನರ ಪ್ರತಿನಿಧಿಗಳಾದ ನಾವು ಜನಗಳಿಗೆ ಅಡ್ವಾನ್ಸ್ ಆಗಿ ಹೇಳಿರುತ್ತೇವೆ. ನಿಮಗೆ ರಸ್ತೆ ಕೊಡಿಸುತ್ತೇವೆ, ಸ್ಕೂಲ್ ಕೊಡಿಸುತ್ತೇವೆ ಎಂದು ಹೀಗೆ ಅವರಿಗೆ ಹೇಳಿ, ಒಂದೆರಡು ತಿಂಗಳುಗಳಲ್ಲಿ ಕೆಲಸವಾಗುತ್ತದೆಂದು ನಾವು ಕಾಲಾವಕಾಶವನ್ನು ಸಹ ಕೊಟ್ಟಿರುತ್ತೇವೆ. ಆ ಕೆಲಸ ಆಗದಿದ್ದರೆ ಜನರು ನಮ್ಮನ್ನು ಯಾವ ರೀತಿ ತಿಳಿದುಕೊಳ್ಳುತ್ತಾರೆ ಎನ್ನುವುದನ್ನು ತಾವು ಯೋಚನೆಮಾಡಿ ನೋಡಿ? ಇವತ್ತು ಪ್ರಭುಗಳು ಯಾರು? ಇವತ್ತು ಪ್ರಭುಗಳು ಸರ್ಕಾರ ನಾವು ನೀವೂ ಅಲ್ಲ. ಜನಗಳು ಪ್ರಭುಗಳು. ಜನರ ಇಷ್ಟಾರ್ಥಗಳನ್ನು ಸ್ವೀಕಾರ ಮಾಡಿ ನಾವು ಕೆಲಸ ಮಾಡಬೇಕಾಗಿದೆ. ಇನ್ನೊಂದು ಬಹಳ ಮುಖ್ಯವಾದ ಕಾರ್ಯಕ್ರಮ. ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ವ್ಯವಸ್ಥೆ ಎಂದು ಹೇಳಿದ್ದಾರೆ. ಈ ಸರ್ಕಾರ ಬಂದಮೇಲೆ ಅದರಲ್ಲೂ ಸನ್ಮಾನ್ಯ ನಜೀರ್ ಸಾಬ್‌ರವರು ಮಂತ್ರಿಗಳಾದ ಮೇಲೆ ಇದರ ಕಡೆಗೆ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಆದರೆ ಏನು ಪ್ರಯೋಜನ? ನೀವು ಅಧಿಕಾರಕ್ಕೆ ಬಂದಮೇಲೆ ಕೊಳವೆಬಾವಿಗಳನ್ನು ತೆಗೆಸಿದ್ದೀರಿ ಇಲ್ಲವೆಂದು ಹೇಳುವುದಿಲ್ಲ. ಮೇಲ್ಮನೆಯಲ್ಲಿ ನಿಮ್ಮ ಮೇಲೂ ಸಹ ಟೀಕೆ ಮಾಡಿದ್ದಾರೆ. ನಿಮ್ಮ ಮೇಲೆ ಅಪಾದನೆ ಮಾಡಿದ್ದಾರೆ. ನಾನು ಆ ವಿಷಯಕ್ಕೆ ಹೋಗುವುದಿಲ್ಲ. ನಾವು ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಮನುಷ್ಯನಿಗೆ ಬೇಕಾಗಿರತಕ್ಕದ್ದು ಆಹಾರ, ನೀರು ಮತ್ತು ಗಾಳಿ ಎಂದು ಹೇಳುತ್ತಿದ್ದರು. ಗಾಳಿಯನ್ನು ಯಾವ ಸರ್ಕಾರವೂ ಕೊಡಬೇಕಾಗಿಲ್ಲ. ಆಹಾರವನ್ನು ಯಾವ ಸರ್ಕಾರವೂ ಕೊಡಬೇಕಾಗಿಲ್ಲ. ಆಹಾರ ಕೊಡುವುದರಲ್ಲೂ ಈ ಸರ್ಕಾರ ವಿಫಲವಾಗಿದೆ. ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಬೇಕು. ಇದರಲ್ಲಿ ಏತಕ್ಕೆ ತಾರತಮ್ಯ ಮಾಡುತ್ತೀರಿ?

ನಿಮ್ಮ ಹಿಂದೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಕುಳಿತ್ತಿದ್ದಾರೆ. ಬೆಂಗಳೂರು ನಗರ, ಮೈಸೂರು ನಗರ, ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ಅರ್ಧಗಂಟೆ ನೀರು ಬರುವುದು ತಡವಾದರೆ ಎಲ್ಲರೂ ಕೂಡ ಕೂಗಾಡಿಬಿಡುತ್ತಾರೆ. ಆ ಒಂದು ಕೋಲಾಹಲ ಪತ್ರಿಕೆಗಳಲ್ಲೂ ಕೂಡ ಬರುತ್ತದೆ. ಮಾನ್ಯ ಮಿತ್ರರಾದ ಶಾಸಕರು ಈ ಸದನದಲ್ಲಿ ನೀರಿಲ್ಲದ ವಿಷಯವನ್ನು ರೈಸ್ ಮಾಡತಕ್ಕದ್ದನ್ನು ಆ ಒಂದು ಪ್ರತಿಕ್ರಿಯೆಯನ್ನು ನಾವು ನೋಡುತ್ತಿರುತ್ತೇವೆ.

೧೨-೦೦ Noon

ಇವತ್ತು ಹಳ್ಳಿಗಾಡಿನಲ್ಲಿ ಏನು ಆಗಿದೆ ? ಯಾರು ಇವತ್ತಿನ ದಿವಸ ಅಲ್ಲಿಗೆ ಹೋಗುವವರು ? ಮಂಡ್ಯ ಜಿಲ್ಲೆಯ ಒಂದು ಭಾಗವಾದ ನನ್ನ ಕ್ಷೇತ್ರದಲ್ಲಿ ೨೦೦–೨೫೦ ಗ್ರಾಮಗಳಿವೆ. ಅಲ್ಲಿ ಇರತಕ್ಕದ್ದು ಮೂರು ಹೋಬಳಿಗಳು. ನೀವು ೨೫೦ ಜನಸಂಖ್ಯೆಗೆ ಒಂದು ಕೊಳವೆ ಬಾವಿ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಈ ಲೆಕ್ಕದಲ್ಲಿ ನೋಡುವುದಾದರೆ ಇಲ್ಲಿ ೧೭೦ ಕೊಳವೆ ಬಾವಿಗಳನ್ನು ತೋಡಬೇಕಾಗಿದೆ. ಇದು ನಿಮ್ಮ ಇಲಾಖೆಯವರೇ ಕೊಟ್ಟಿರತಕ್ಕಂಥ ಅಂಕಿಅಂಶಗಳು. ನಾನೇನೂ ಬಾಯಿಮಾತಿನಲ್ಲಿ ಹೇಳುತ್ತಿಲ್ಲ. ನಿಮ್ಮ ಪ್ರಯತ್ನಕ್ಕೆ ನಾನು ಮೊದಲೇ ಅಭಿನಂದಿಸಿದ್ದೇನೆ. ಬಹಳಷ್ಟು ಹೋರಾಡಿದ್ದೀರಿ. ಅಲ್ಲಿ ಇಲ್ಲಿ ಬೇರೆ ರಾಜ್ಯಗಳಿಗೆ ಹೋಗಿ ಕೇಂದ್ರ ಸರ್ಕಾರದವರೆಗೂ ಹೋಗಿ ಬೇಕಾದಷ್ಟು ಹೋರಾಡಿದ್ದೀರಿ. ಆದರೆ ಇವತ್ತಿನ ದಿವಸ ನಿಮ್ಮ ಪರಿಶ್ರಮದ ಫಲ ಏನಾಗಿದೆ ಎಂದರೆ, ಕೊಳವೆ ಬಾವಿಗಳನ್ನೇನೋ ಜೋಡಿಸಿದರು. ಆದರೆ ಎಷ್ಟು ಜನ ಹಳ್ಳಿಗಳಲ್ಲಿ ನಿರಾತಂಕವಾಗಿ ನೀರನ್ನು ಕುಡಿಯುತ್ತಿದ್ದಾರೆ ಎಂದು ಏನಾದರೂ ಸಮೀಕ್ಷೆ ಮಾಡಿದ್ದೀರಾ ? ದುರದೃಷ್ಟವಶಾತ್ ಏನಾಗಿದೆ ಎಂದರೆ ಜೊತೆಯಲ್ಲಿ ಮೆಕ್ಯಾನಿಕ್‌ನನ್ನು ಕರೆದುಕೊಂಡು ಹೋಗಿ ಜೂನಿಯರ್ ಇಂಜಿನಿಯರ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೋಗಿ ರಿಪೇರಿ ಮಾಡಿ ಬಂದಿರುತ್ತಾರೆ. ನಾಳೆ ಬೆಳಿಗ್ಗೆಯೇ ನಮಗೆ ಜನರು ದೂರು ಕೊಡುತ್ತಾರೆ ''ನಿನ್ನೆ ಬಂದಿದ್ದರು, ರಿಪೇರಿ ಮಾಡಿಕೊಂಡು ಹೋದರು. ಆದರೆ ಆಗಲೇ ಅದು ಕೆಟ್ಟುಹೋಗಿದೆ ಮತ್ತು ಕುಡಿಯಲಿಕ್ಕೆ ನೀರು ಇಲ್ಲ'' ಎಂದು. ಇದು ಒಂದು ದಿವಸವಾದರೆ ಸುಮ್ಮನಿರಬಹುದು. ೨೦ ದಿವಸ ಆದರೂ ಸುಮ್ಮನಿರಬಹುದು. ಆದರೆ ಬಹುತೇಕ ಗ್ರಾಮಗಳಲ್ಲಿ ಕೊಳವೆ ಬಾವಿಗಳು ಏನಿವೆ. ಬೆಳಗಾದರೆ ಸಾಕು ದೂರುಗಳು ಬರಲು ಶುರುವಾಗುತ್ತವೆ. ಈ ಪರಿಸ್ಥಿತಿಯನ್ನು ಇವತ್ತಿನ ದಿವಸ ನಾವು ನೋಡುತ್ತಿದ್ದೇವೆ. ಇದರಿಂದ ಜನರ ಆರೋಗ್ಯ ಏನಾಗುತ್ತದೆ ? ಕಳೆದ ಎಂಟು–ಹತ್ತು ವರ್ಷಗಳಿಂದ ಜನರು ಕೊಳವೆ ಬಾವಿಗಳಿಂದ ಬರುವ ಕುಡಿಯುವ ನೀರಿಗೆ ಅಡ್ಜಸ್ಟ್ ಆಗಿಬಿಟ್ಟಿದ್ದಾರೆ. ಒಂದು ಊರಿನಲ್ಲಿ ಒಂದೇ ಬೋರ್‌ವೆಲ್ ಇದ್ದರೂ ಕೂಡ ಅರ್ಧ, ಮುಕ್ಕಾಲು ಕಿಲೋಮೀಟರ್ ದೂರವಾದರೂ ಲೆಕ್ಕಿಸದೆ ಅಲ್ಲಿಂದ ನೀರು ತರುವುದಕ್ಕಾಗಿ ಹೋಗುತ್ತಾರೆ. ಇರುವ ಒಂದೇ ಒಂದು ಬೋರ್‌ವೆಲ್ ಕೂಡ ಕೆಟ್ಟುಹೋದರೆ, ಹದಿನೈದು ದಿವಸ, ಒಂದು ತಿಂಗಳಾದರೂ ಅದು ರಿಪೇರಿಯಾಗದೇ ಇದ್ದರೆ ಜನರು ಕುಡಿಯುವ ನೀರನ್ನು ಪಡೆಯುವುದು ಎಲ್ಲಿಂದ ? ಒಂದೋ ಪಕ್ಕದ ಹಳ್ಳಿಗೆ ಹೋಗಬೇಕು ಅಥವಾ ಕಲುಷಿತ ನೀರನ್ನೇ ಕುಡಿಯಬೇಕು. ಇದು ಯಾವ ಹಣೆಬರಹ ? ಇದಕ್ಕೆ ಕಾರಣ ಏನೆಂದರೆ ನಿಮ್ಮಲ್ಲಿರತಕ್ಕಂಥ ಸಿಬ್ಬಂದಿ ವರ್ಗ ಸಾಲದು. ಈಗ ಏನು ಸಿಬ್ಬಂದಿ ಇದೆ ಎಂದರೆ, ನಮಲ್ಲಿ ಒಂದು ತಾಲ್ಲೂಕಿನಲ್ಲಿ ಒಬ್ಬ ಜೂನಿಯರ್ ಇಂಜಿನೀಯರ್ ಇದ್ದಾರೆ. ನನ್ನ ತಾಲೂಕಿನಲ್ಲಿ ೭೫೦ ಕೊಳವೆ ಬಾವಿಗಳಿವೆ. ಮಂಡ್ಯ ನಗರವನ್ನು ಬಿಟ್ಟು ನಾನು ಹೇಳುತ್ತಿರುವುದು. ಈ ೭೫೦ ಕೊಳವೆ ಬಾವಿಗಳನ್ನು ಸರಿಯಾಗಿ ವ್ಯವಸ್ಥಿತ ರೀತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಇವುಗಳು ಆರೋಗ್ಯವಾಗಿದ್ದರೆ ತಾನೇ ಜನರು ಆರೋಗ್ಯವಾಗಿರುವುದು ? ನೀವು ಕೊಡತಕ್ಕದ್ದು ಒಬ್ಬ ಜೂನಿಯರ್ ಇಂಜೀನಿಯರ್ ಮತ್ತು ಒಬ್ಬ ಮೆಕ್ಯಾನಿಕ್. ಅಲ್ಲಿ ಇಲ್ಲಿ ಒಬ್ಬೊಬ್ಬರನ್ನು ನೇಮಕ ಮಾಡುತ್ತೀರಿ. ಅವರು ಅನ್–ಸ್ಕಿಲ್ಡ್ ಆಗಿರುತ್ತಾರೆ. ಏನು ಆಗುತ್ತದೆ ಎಂದರೆ ಕಳೆದ ಒಂದು–ಎರಡು ತಿಂಗಳಿಂದ ನಾವು ಶಾಸನ ಸಭೆಯಲ್ಲಿ ಇದ್ದೇವೆ. ಆದ್ದರಿಂದ ಬರುವ ದೂರುಗಳು ಸ್ವಲ್ಪ ಕಡಿಮೆಯಾಗಿದೆ. ಬೆಂಗಳೂರಿನಲ್ಲಿ ಅಸೆಂಬ್ಲಿಗೆ ನಾವು ಹೋಗಿದ್ದೇವೆ ಎಂದು ಅವರು ತಿಳಿದುಕೊಂಡು ಏನಾದರೂ ವ್ಯವಸ್ಥೆ ಮಾಡುತ್ತೇವೆ ಎಂದು ಅವರು ನಂಬಿಕೊಂಡು ಕುಳಿತಿದ್ದಾರೆ. ಒಂದು ಸಾರಿ ಕೇಳುತ್ತಾರೆ. ಎರಡು ಸಾರಿ ಕೇಳುತ್ತಾರೆ. ಮೂರನೇ ಸಾರಿ ನಿಮಗೆ ಓಟು ಕೊಟ್ಟಿದ್ದು ಯಾಕೆ ಎಂದು ಕೇಳುತ್ತಾರೆ. ಈ ಪ್ರಶ್ನೆಯನ್ನು ಇವತ್ತು ನಾನು ಹೇಳುತ್ತಿಲ್ಲ. ಈ ಸದನದ ಪ್ರೊಸೀಡಿಂಗ್ಸ್ ದಯವಿಟ್ಟು ನೋಡಿ. ಯಾವ ಮಂತ್ರಿಗಳು, ಯಾವ ಅಧಿಕಾರಿಗಳು ಈ ಪ್ರೊಸೀಡಿಂಗ್ಸ್‌ನ್ನು ಓದುತ್ತಾರೆ ? ಈ ವಿಷಯದಲ್ಲಿ ಕಳೆದ ಆರು ವರ್ಷಗಳಿಂದ ನಾನು ಹೇಳುತ್ತಿದ್ದೇನೆ. ಹಿಂದಿನ ಸರ್ಕಾರಕ್ಕೂ ಹೇಳಿದ್ದೇನೆ, ಹೋದ ವರ್ಷ ನಿಮಗೆ ಹೇಳಿದ್ದೇನೆ. ಏನು ಪ್ರಯೋಜನ ಆಯಿತು ? ನಿಮಗಿರುವ ಹಣಕಾಸಿನ ಪರಿಮಿತಿಯೊಳಗೆ ಮಾಡುತ್ತೇವೆ ಎಂದು ಹೇಳುತ್ತೀರಿ. ಕುಡಿಯುವ ನೀರಿಗೂ ಹಣಕಾಸಿನ

ಪರಿಮಿತಿಯೇ ? ಜನರ ಹಿತದೃಷ್ಟಿಯಿಂದ ಇದರ ಬಗ್ಗೆ ಯೋಚನೆ ಮಾಡಿ. ನಾನು ಸಲಹೆ ಮಾಡುವುದೇನೆಂದರೆ ಪ್ರತಿಯೊಂದು ಹೋಬಳಿಗಾದರೂ ಕನಿಷ್ಟ ಪಕ್ಷ ಒಬ್ಬ ಮೆಕ್ಯಾನಿಕ್‌ನನ್ನು ಕೊಡಿ. ಏನು ನಿಮ್ಮ ಪಂಚಾಯತ್‌ರಾಜ್ ವ್ಯವಸ್ಥೆ ಇದೆಯೋ. ಅಲ್ಲಿಯವರೆಗೆ ಅನುಕೂಲವಾಗುವ ಕಾಲಕ್ಕೆ ನಾಲ್ಕೈದು ತಿಂಗಳು ಆಗಬೇಕು. ಇನ್ನೊಂದು ವಿಷಯ ನನ್ನ ಅನುಭವದಲ್ಲಿ ಹೇಳುವುದಾದರೆ, ಪ್ರತಿನಿತ್ಯ ಬೋರ್‌ವೆಲ್‌ಗಳನ್ನು ಹೋಗಿ ನೋಡುವುದಕ್ಕೆ ಆಗುವುದಿಲ್ಲ. ಕೊನೆಪಕ್ಷ ವಾರಕ್ಕೆ ಒಂದು ಸಾರಿಯಾದರೂ ಸಂಬಂಧಪಟ್ಟ ಮೆಕ್ಯಾನಿಕ್ ಹೋಗಿ ಪರಿಶೀಲಿಸಿದರೆ ಎಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ, ಎಲ್ಲಿ ಕೊಳವೆ ಬಾವಿ ಕೆಟ್ಟುಹೋಗಿದೆ ಎಂದು ಗೊತ್ತಾಗುತ್ತದೆ. ಹಳ್ಳಿಗಾಡಿನ ಜನರಿಗೆ ಕುಡಿಯುವ ನೀರಿನ ದೊಡ್ಡ ಸಮಸ್ಯೆ ಇದೆ. ಇದಕ್ಕೆ ಬೇಕಾದರೆ ೨೦ ಕೋಟಿಯಾಗಲಿ, ೫೦ ಕೋಟಿಯಾಗಲೀ ಚಿಂತೆಯಿಲ್ಲ. ಅನೇಕ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ ಎಂದು ಹೇಳಿದರೆ ಸಾಲದು. ಹಸುವಿನ ಕೆಚ್ಚಲಿನಲ್ಲಿ ಬೇಕಾದಷ್ಟು ಹಾಲು ಇರಬಹುದು. ಆದರೆ ಆ ಹಾಲನ್ನು ಕರೆದು ಅದರಿಂದ ಮೊಸರು, ಮಜ್ಜಿಗೆ ಮಾಡಿ ಬೆಣ್ಣೆ ತೆಗೆದುಬಂದ ಅತಿಥಿಗಳಿಗೆ ಅದನ್ನು ಬಡಿಸಿದರೆ ಆತ ಬಾಯಿ ಚಪ್ಪರಿಸಿ ''ಚೆನ್ನಾಗಿದೆ'' ಎಂದು ಹೇಳಿದಾಗ ಮನೆಯವರಿಗೆಲ್ಲಾ ಸಂತೋಷವಾಗುತ್ತದೆ. ಈ ಕೆಲಸವನ್ನು ದಯವಿಟ್ಟು ಮಾಡಿ. ಇನ್ನು ಮಂಡ್ಯ ಜಿಲ್ಲೆಗೆ ಒಂದು ಅನ್ಯಾಯ ಮಾಡಿದ್ದಾರೆ ಏನೂ ಇಲ್ಲ, ದಯವಿಟ್ಟು ಗಾಬರಿಯಾಗಬೇಡಿ. ತಮ್ಮ ಸರ್ಕಾರ ಬಂದಮೇಲೆ ಪಿ. ಹೆಚ್. ಇ.ಗೆ ಸಂಬಂಧಪಟ್ಟಹಾಗೆ ವಿಭಾಗಗಳನ್ನು ಮಾಡಿದ್ದಾರೆ. ಆದರೆ ಎರಡು ಮೂರು ಜಿಲ್ಲೆಗಳು ಬಿಟ್ಟು ಹೋಗಿವೆ. ಅವುಗಳಲ್ಲಿ ಮಂಡ್ಯ ಮತ್ತು.........

ಶ್ರೀ ಅಬ್ದುಲ್ ನಜೀರ್‌ಸಾಬ್.—ಅದನ್ನು ಸರಿಪಡಿಸುತ್ತೇನೆ.

ಶ್ರೀ ಹೆಚ್.ಡಿ. ಚೌಡಯ್ಯ.—ನಮ್ಮ ಸರ್ಕಾರದವರೂ ಹೇಳಿದ್ದರು. ಅದು ಬೇರೆ ವಿಷಯ. ತಪ್ಪು ಯಾರು ಮಾಡಿದರೂ ಅದು ತಪ್ಪೆ. ಅದು ನಮ್ಮ ಸರ್ಕಾರ ಮಾಡಿರಲಿ, ಅಥವಾ ನಿಮ್ಮ ಸರ್ಕಾರ ಮಾಡಿರಲಿ. ಯಾವುದೇ ಸರ್ಕಾರ ಇರಲಿ. ಜನಗಳ ಸರ್ಕಾರ ಮತ್ತು ಜನರಿಗೋಸ್ಕರ ಇರತಕ್ಕಂಥ ಸರ್ಕಾರ. ಆದ್ದರಿಂದ ಎರಡು ಅಥವಾ ಮೂರು ಜಿಲ್ಲೆಗಳು ಏನು ಬಿಟ್ಟಿವೆ, ಅಲ್ಲಿ ವಿಭಾಗ ಕಛೇರಿಗಳನ್ನು ನೀವು ಮಂಜೂರು ಮಾಡಬೇಕು ಮತ್ತು ಸಬ್ ಡಿವಿಜನ್‌ಗಳನ್ನು ಕೊನೆ ಪಕ್ಷ ಎರಡು ತಾಲೂಕಿಗೆ ಮೂರು ತಾಲೂಕಿಗೆ ಒಂದು ಸಬ್-ಡಿವಿಜನ್ ಎನ್ನುವ ವ್ಯವಸ್ಥೆ ಮಾಡದೇ ಹೋದರೆ ವ್ಯವಸ್ಥೆ ಪರಿಪಾಲನೆಯಲ್ಲಿ ಬಹಳ ಕಷ್ಟವಾಗುತ್ತದೆ. ಇದನ್ನು ತೀವ್ರವಾಗಿ ತಾವು ಪರಿಗಣಿಸಬೇಕಾದದ್ದು ಅತ್ಯಗತ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು.—ಸಾಕು ಮಾಡಿ. ಎಲ್ಲಾ ವಿಷಯಗಳೂ ಕವರ್ ಆಗಿದೆ.

ಶ್ರೀ ಹೆಚ್.ಡಿ. ಚೌಡಯ್ಯ.—ಇನ್ನು ಕೊಳವೆ ಬಾವಿಗಳ ವಿಷಯದಲ್ಲಿ ಪುಸ್ತಕವನ್ನು ಪ್ರಿಂಟ್ ಮಾಡಿದ್ದೀರಿ. ಇದರ ಕ್ರೆಡಿಟ್ ನಿಮಗೆ ಇಲ್ಲವೇ ಇಲ್ಲ. ಇದೆಲ್ಲಾ ನಮ್ಮ ಸರ್ಕಾರದ್ದೇ. ನಮ್ಮ ಸರ್ಕಾರ ಯಾವುದನ್ನು ಲಿಸ್ಟ್ ಮಾಡಿತ್ತೋ ಅದೇ ಇದೆ. ಡಿ.ಆರ್.ಡಬ್ಲ್ಯೂ.ಎಸ್.-ಎನ್.ಆರ್.ಡಬ್ಲ್ಯೂ.ಎಸ್. ನಮ್ಮ ತಾಲ್ಲೂಕಿನಲ್ಲಿ ನೋಡಿದೆ, ನಮ್ಮ ಜಿಲ್ಲೆಯಲ್ಲಿ ಬಹುಶಃ ಹೊಸತು ಯಾವುದೂ ಇಲ್ಲ. ಮಾನ್ಯ ಉಪಾಧ್ಯಕ್ಷರು ನನಗೆ ಸೂಚನೆ ಕೊಟ್ಟಿದ್ದಾರೆ, ಆದ್ದರಿಂದ ನಾನು ಆಳವಾಗಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ತಾವು ದಯವಿಟ್ಟು ನೋಡಿ. ೧೯೮೦-೮೧ರಲ್ಲಿ ಇದ್ದಂತಹ ವರ್ಕ್ಸ್ ೧೯೮೨-೮೩ಕ್ಕೂ ಇದೆ. ಅದೇ ೧೯೮೩-೮೪ಕ್ಕೂ ಇದೆ.

ನಿಮಗೆ ಹೇಳುವುದಾದರೆ ಬಹುಶಃ ತಾವು ಈ ಎ.ಆರ್.ಡಬ್ಲ್ಯೂ.ಎಸ್. ಮತ್ತು ಎನ್.ಆರ್.ಡಬ್ಲ್ಯೂ.ಎಸ್. ಯೋಜನೆ ಏನು ಇದೆ ಅದರ ಕಡೆ ತಾವು ಹೆಚ್ಚಿನ ಗಮನ ವಹಿಸಿಲ್ಲವೆಂದು ನನ್ನ ಭಾವನೆ ಏಕೆಂದರೆ ಇವರಲ್ಲಿ ಫಿಸಿಕಲ್ ಪ್ರೋಗ್ರೆಸ್ ಮತ್ತು ಫೈನಾನ್ಷಿಯಲ್ಲಿ ಪ್ರೋಗ್ರೆಸ್ ಏನು ಇದೆ ಅದು ಬಹಳ ಕಡಿಮೆ ಇದೆ. ಮತ್ತೆ ಇನ್ನೊಂದು ವಿಷಯ, ಇದರಲ್ಲಿ ಏನಾಗಿದೆಯೆಂದರೆ ಈ ಎ. ಆರ್. ಡಬ್ಲ್ಯೂ, ಎಸ್, ಮತ್ತು ಎನ್. ಆರ್. ಡಬ್ಲ್ಯೂ. ಎಸ್. ಯೋಜನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೧೫,೧೮ ಮತ್ತು ೨೦ ವರ್ಷದ ಹಿಂದೆಯೇ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ ಕೈಗೊಂಡಿದ್ದರು. ನಮ್ಮ ಮಂಡ್ಯ ಜಿಲ್ಲೆಯಲ್ಲಿ ''ಬಸರಾಳು ಮತ್ತು ಕೀಲಾಳು'' ಎಂಬ ಗ್ರಾಮಗಳಿದ್ದಾವೆ. ತಾವು ಸಹ ಒಂದು ಸಾರಿ ಈ ಕೀಲಾಳು ಗ್ರಾಮಕ್ಕೆ ಭೇಟಿ ನೀಡಿದ್ದೀರಿ. ಆ ಊರಿನಲ್ಲಿ ಸುಮಾರು ೫ ಸಾವಿರ ಪಾಪ್ಯುಲೇಷನ್ ಇದೆ. It is one of the biggest village in

my taluk, ನಾನು ೧೮ ವರ್ಷಗಳಿಂದ ನೋಡುತ್ತಿದ್ದೇನೆ and not today. Since 5-6 years, it is defunct and this Bisarala is the only Head Quarters which is just 15 miles from Mandya and 10 miles from Nagamangala. That is also defunct for the last 6-7 years. Defunct ಅಂದರೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ನಾನು ಹೇಳುತ್ತಾ ಇರುವುದು. ೧೮, ೨೦ ವರ್ಷಗಳ ಹಿಂದೆಯೇ ಎನ್.ಆರ್.ಡಬ್ಲ್ಯೂ.ಎಸ್. ಯೋಜನೆ ಕೈಗೊಂಡಿರುವುದು. ಇದೇ ಪರಿಸ್ಥಿತಿ ಎಲ್ಲಾ ಕಡೆಗಳಲ್ಲಿಯೂ ಇದೆ. ಇದರ ಕಡೆ ಹೆಚ್ಚು ಗಮನ ಕೊಡಬೇಕು. ಇದಕ್ಕಾಗಿ ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಜನರು ಎಷ್ಟೋ ನೀರು ಕುಡಿದಿದ್ದಾರೆ. ಆದರೆ ಈಗ ೬ ವರ್ಷಗಳಿಂದ ಮಾತ್ರ ನೀರಿಲ್ಲ. ಎ.ಆರ್.ಡಬ್ಲ್ಯೂ.ಎಸ್. ಯೋಜನೆಯಲ್ಲಿ ಒಂದು ಕೊಳವೆ ಬಾವಿಗಳನ್ನು ತೋಡುತ್ತಿಲ್ಲ ಹಾಗು ತೋಡಿರುವ ಬಾವಿಗಳನ್ನು ಸರಿಯಾಗಿ ದುರಸ್ತಿ ಮಾಡುತ್ತಿಲ್ಲ. ಆ ಜನರಿಗೆ ಅದರಲ್ಲೂ ನೀರಿಲ್ಲ, ಇದರಲ್ಲೂ ನೀರಿಲ್ಲ. ಆದ್ದರಿಂದ ತಾವು ದಯವಿಟ್ಟು ಒಂದು ಸಮೀಕ್ಷೆ ಮಾಡಿ, ಬಹಳ ವರ್ಷದ ಹಿಂದೆ ೨,೩,೪ ಮತ್ತು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ಈ ಎ.ಆರ್.ಡಬ್ಲ್ಯೂ.ಎಸ್. ಮತ್ತು ಎನ್.ಆರ್.ಡಬ್ಲ್ಯೂ.ಎಸ್. ಯೋಜನೆಗಳನ್ನು ಕೈಗೊಂಡಿದ್ದೀರಿ, ಅವುಗಳಲ್ಲಿ ಎಷ್ಟು ಡೀಫಂಕ್ಟ್ ಆಗಿವೆ. ಅವುಗಳನ್ನು ಯೋಜನೆ ವ್ಯಾಪ್ತಿಯೊಳಗೆ ತೆಗೆದುಕೊಂಡು ಕೆಲಸಗಳನ್ನು ಪೂರೈಸಿ ಜನಗಳಿಗೆ ನೀರು ಸಿಗುವಂತೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ ಈಗಾಗಲೇ ತಾವು ನನಗೆ ಅಣತಿ ಕೊಟ್ಟಿದ್ದೀರಿ ಇನ್ನು ಈ ಒಂದು ಗ್ರಾಮೀಣ ಮತ್ತು ಆರ್ಥಿಕ ಅಭಿವೃದ್ಧಿ ವಿಷಯದಲ್ಲಿ ಏನು ಇತರೆ ಕಾರ್ಯಕ್ರಮಗಳು ಇರುತ್ತವೆ, ಅವುಗಳನ್ನು ಇಲ್ಲಿ ಉಲ್ಲೇಖ ಮಾಡುತ್ತೇನೆ. ಇತರೆ ಒಂದು ಕಾರ್ಯಕ್ರಮದಲ್ಲಿ ಕೂಡ ಕೆಲವಾರು ದೋಷಗಳು ಇರಬಹುದು ಅವುಗಳನ್ನು ಇತರೆ ಸನ್ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತಂದಿರುತ್ತಾರೆ.

ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಬೇಡಿಕೆಗಳನ್ನು ನಾನು ಸ್ವಾಗತಿಸಬೇಕೋ ಅಥವಾ ವಿರೋಧಿಸಬೇಕೋ ಎಂದು ನನ್ನ ಮನಸ್ಸಿನಲ್ಲಿ ಜಂಜಾಟವುಂಟು ಮಾಡಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಹಳ್ಳಿಗಳಿಗೆ ಸಂಬಂಧಪಟ್ಟಿದ್ದು. ಏತಕ್ಕೆ ವಿರೋಧಿಸುತ್ತೀರಿ ?

ಶ್ರೀ ಹೆಚ್.ಡಿ. ಚೌಡಯ್ಯ.—ತಮ್ಮ ಒಂದು ಖಾತೆಗೆ ಸಂಬಂಧಪಟ್ಟದ್ದು ಆಗಿರಬಹುದು ಮತ್ತು ಸಹಕಾರ ಮಂತ್ರಿಗಳ ಖಾತೆಗೆ ಸಂಬಂಧಪಟ್ಟಿದ್ದು ಆಗಿರಬಹುದು. ಇದರಲ್ಲಿ ರಾಜಕೀಯ ಹಿನ್ನೆಲೆ ಏನೂ ಇಲ್ಲ. ರಾಜಕೀಯದ ಸೋಂಕು ಇಲ್ಲ ಎನ್ನತಕ್ಕ ಮಾತನ್ನು ನಾನು ಈ ಹಿಂದೆಯೇ ಹೇಳಿದ್ದೇನೆ. ಇದು ಹಳ್ಳಿಗಾಡಿನ ಸರ್ವತೋಮುಖ ಮತ್ತು ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ನಾವೆಲ್ಲರೂ ಸಾಧ್ಯವಾದಷ್ಟುಗೂ ರಾಜಕೀಯವನ್ನು ದೂರ ಮಾಡಿ ಕೆಲಸ ಮಾಡಬೇಕು. ಇಷ್ಟು ಮಾತನ್ನು ಹೇಳಿ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಸಂಗಮೇಶ್ವರ ಸರ್ದಾರ್ (ರಾಯಚೂರು).—ಅಧ್ಯಕ್ಷರೇ ವೇಳೆಯ ಅಭಾವ ಇರುವುದರಿಂದ ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಗ್ರಾಮ ಒಂದಲ್ಲ ಒಂದು ಸಹಕಾರ ಸಂಘದ ವ್ಯಾಪ್ತಿಯಲ್ಲಿ ಇದೆಯಾದ ಕಾರಣ ಇವರಿಂದ ಹೆಚ್ಚು ರೈತರಿಗೆ ಅನುಕೂಲವಾಗಬೇಕಾಗಿದೆ. ನಮ್ಮ ರಾಜ್ಯದಲ್ಲಿರುವ ಎಲ್ಲಾ ಗ್ರಾಮಗಳ ರೈತರು ಈ ಸಹಕಾರ ಚಳುವಳಿಗೆ ಸಂಬಂಧಪಟ್ಟಿರುತ್ತಾರೆ. ಆದ್ದರಿಂದ ಆ ದೃಷ್ಟಿಯಿಂದ ನೋಡುವುದಾದರೆ ಈ ದಿವಸ ಅನೇಕ ಮಾರ್ಪಾಡುಗಳಾಗಬೇಕಾಗಿದೆ. ಅವುಗಳ ಬಗ್ಗೆ ನಾನು ಕೆಲವು ಸಲಹೆಗಳನ್ನು ಮಾತ್ರ ಕೊಡುತ್ತೇನೆ. ೧) ೩, ೪ ತಾಲ್ಲೂಕುಗಳಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಇರುತ್ತಾನೆ. ಅವರು ಎಲ್ಲಾ ತಾಲ್ಲೂಕುಗಳನ್ನು ಮತ್ತು ಆ ತಾಲ್ಲೂಕುಗಳಲ್ಲಿರುವ ಗ್ರಾಮಗಳ ಸೊಸೈಟಿಗಳನ್ನು ನೋಡಲಿಕ್ಕಾಗುವುದಿಲ್ಲ. ಅಲ್ಲದೆ ಒಂದು ತಾಲ್ಲೂಕಿಗೆ ಒಬ್ಬ ಇನ್ಸ್‌ಪೆಕ್ಟರ್ ಇರುತ್ತಾನೆ ಅವನು ಎರಡು ಕಡೆಗಳಲ್ಲಿಯೂ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್‌ರವರಿಗೆ ಅಟ್ಯಾಚ್‌ಮೆಂಟ್ ಆಗಿರುತ್ತಾನೆ ಆದ್ದರಿಂದ ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಅಸಿಸ್ಟೆಂಟ್ ರಿಜಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸ್ಟ್ರಾರ್‌ಗಳನ್ನು ನೇಮಿಸಿದರೆ ಪ್ರತಿಯೊಂದು ಸೊಸೈಟಿ ಮೇಲೆ ಬಿಗಿ ಮತ್ತು ಅದರ ಮೇಲೆ ಪ್ರಭುತ್ವವನ್ನು ಇಟ್ಟುಕೊಂಡು ಅಲ್ಲಿ ಏನು ಸಹಕಾರ ಸಂಘಗಳು ಇವೆ. ಅವುಗಳ ಉಸ್ತುವಾರಿ ಸರಿಯಾಗಿ ಮಾಡಲು ಅನುಕೂಲ ವಾಗುತ್ತದೆ. ಇದು ಒಂದು ನನ್ನ ಸಲಹೆ.

ಇನ್ನು ಡೆಪ್ಯೂಟಿ ರಿಜಿಸ್ಟ್ರಾರ್ ಬಗ್ಗೆ ಹೇಳಬೇಕಾದರೆ, ಪ್ರತಿಯೊಂದು ಜಿಲ್ಲೆಗೆ ಒಬ್ಬೊಬ್ಬ ಡೆಪ್ಯೂಟಿ ರಿಜಿಸ್ಟ್ರಾರ್ ಇರುತ್ತಾರೆ ಇವರೇ ಎಲ್ಲಾ ಜಿಲ್ಲೆಯಲ್ಲಿ ಪ್ರವಾಸ ಮಾಡಲು ಹೋದಾಗ ಅವರ ಕಛೇರಿಯಲ್ಲಿ ಯಾರು ಕೇಳುವವರೇ ಇರುವುದಿಲ್ಲ. ಆದ್ದರಿಂದ ಅವರಿಗೆ ಒಬ್ಬ ಗೆಜೆಟೆಡ್ ಅಸಿಸ್ಟೆಂಟ್‌ನ್ನು ಕೊಡುವುದರಿಂದ ಕಛೇರಿಯ ಕೆಲಸವನ್ನು ನೋಡುವವರು ಇಲ್ಲದೆ ಇರುವುದು ತಪ್ಪುತ್ತದೆ. ಒಬ್ಬ ಗೆಜೆಟೆಡ್ ಅಸಿಸ್ಟೆಂಟ್ ಇದ್ದರೆ ಯಾವಾಗ ಆಫೀಸಿಗೆ ಹೋದರೂ ಅವರನ್ನು ನೋಡಬಹುದು. ಆದ್ದರಿಂದ ಒಬ್ಬ ಗೆಜೆಟೆಡ್ ಅಸಿಸ್ಟೆಂಟ್‌ನ್ನು ಡೆಪ್ಯೂಟಿ ರಿಜಿಸ್ಟ್ರಾರ್‌ರವರಿಗೆ ಕೊಡಬೇಕೆಂದು ನನ್ನ ಸಲಹೆ. ಸ್ಟೇಟ್ ಲೆವೆಲ್‌ನಲ್ಲಿ ಏನು ಇದೆ ಎಂಬುದನ್ನು ನೋಡಬೇಕು. ನಮ್ಮ ಮಾನ್ಯ ದೇವೇಗೌಡರು ಏನು ತಮ್ಮ ಒಂದು ಖಾತೆಯಲ್ಲಿ ನುರಿತ ಹಾಗೂ ಅನುಭವಸ್ಥ ಎಂಜನಿಯರ್‌ನ್ನು ಸೆಕ್ರೆಟರಿಯಾಗಿ ಮಾಡಿಕೊಂಡಿದ್ದಾರೆ ಹಾಗೆಯೇ ಒಬ್ಬೊಬ್ಬ ನುರಿತ ಮತ್ತು ಅನುಭವಿ ಅಧಿಕಾರಿಯನ್ನು ಸೆಕ್ರೆಟರಿಯಾಗಿ ಹಾಗೂ ಹೆಚ್ಚಿನ ಕಾರ್ಯಗಳಿಗಾಗಿ ನೇಮಿಸಬೇಕು. ಹಾಗೆಯೇ ಈ ಇಲಾಖೆಯ ಮುಖ್ಯಸ್ಥರಾಗಿ ಈ ಕ್ಷೇತ್ರದಲ್ಲಿ ದುಡಿದಂತಹ ಅಧಿಕಾರಿಯನ್ನು ನೇಮಿಸಬೇಕು ಸಹಕಾರ ಕ್ಷೇತ್ರದಲ್ಲಿ ದುಡಿದವರು ಮಾತ್ರ ಈ ಇಲಾಖೆಯ ಅಧಿಕಾರಿಗಳಾಗಿ ಇರಬೇಕು. ಬ್ರಿಟೀಷರ ಕಾಲದಲ್ಲಿ ಐ. ಸಿ. ಎಸ್. ಅಧಿಕಾರಿಗಳು ಗ್ರೇಟ್ ಬ್ರಿಟನ್ನಿನಿಂದ ಬರುತ್ತಿದ್ದರು ಅವರ ಕಾಲದ ಪದ್ಧತಿಯಾದ ಐ. ಎ. ಎಸ್. ಅಧಿಕಾರಿಗಳನ್ನು ಎಲ್ಲಾ ಕಡೆಗಳಲ್ಲೂ ಹಾಕುವುದು ನಿಲ್ಲಬೇಕು. ಪ್ರತಿಯೊಂದು ಇಲಾಖೆಯಲ್ಲೂ ಮಾರ್ಪಾಟು ಆಗ ಬೇಕಾದರೆ ಆಯಾ ಕ್ಷೇತ್ರದಲ್ಲಿ ಅನುಭವ ಇರತಕ್ಕವರನ್ನು ಆ ಖಾತೆಯ ಹೆಡ್ ಆಗಬೇಕು ಎಂಬುದು ನನ್ನ ಸಲಹೆ. ನನಗೆ ತಿಳಿದ ಮಟ್ಟಿಗೆ ಮೈಸೂರಿನಲ್ಲಿ ಏನು ಒಂದು ಸಹಕಾರಿ ತರಬೇತಿ ಕೇಂದ್ರವಿದೆ ಅದನ್ನು ಮೈಸೂರಿಗೆ ಮಾತ್ರ ಸಿಮಿತಗೊಳಿಸದೆ ಇತರ ಕಡೆಗಳಲ್ಲೂ ಅದನ್ನು ವಿಸ್ತರಿಸಬೇಕು. ಹಾಗೆಯೇ ಈ ಒಂದು ಕಾಲೇಜನ್ನು ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ತೆರೆಯಬೇಕು.

ಇನ್ನೂ ಡಿಪ್ಲೊಮೋ ಏನು ಇದೆ ಅದು ೪-೬ ಜಿಲ್ಲೆಗಳಲ್ಲಿ ಇದೆ. ಈ ಡಿಪ್ಲೊಮೋ ಕೋರ್ಸ್‌ಗಳು ೬ ತಿಂಗಳ ಅವಧಿಯಲ್ಲಿ ನಡೆಯುತ್ತವೆ. ರಾಯಚೂರಿಗೆ ಇತ್ತೀಚೆಗೆ ತುಂಗ ಭದ್ರಾ ನೀರಾವರಿ ಯೋಜನೆ ಬಂದು ಅಲ್ಲಿ ಅನೇಕ ಸಹಕಾರಿ ಸಂಸ್ಥೆಗಳು ಬಂದಿದ್ದು ಅಲ್ಲಿಯೂ ಒಂದು ಡಿಪ್ಲೊಮೊ ತರಗತಿಗಳನ್ನು ತೆರೆಯುವುದು ಅಗತ್ಯವಾಗಿದೆ. ಹಾಗೇ ಡಿಪ್ಲೊಮೋ ಕೊರ್ಸ್‌ಗಳನ್ನು ಹಲವಾರು ಸಂಸ್ಥೆಗಳು ನಡೆಸುತ್ತಿವೆ. ಹೆಚ್. ಡಿ. ಸಿ. ಕೋರ್ಸ್ ೯ ತಿಂಗಳಿನದು ಆಗಿದೆ. ಈ ತರಬೇತಿ ಎಷ್ಟರ ಮಟ್ಟಿಗೆ ಉಪಯೋಗ ಆಗುತ್ತದೆ ಎಂಬುದರಲ್ಲಿ ನನಗೆ ಸಂಶಯವಿದೆ. ಇನ್ನು ಪ್ರೈಮರಿ ಶಾಲೆಗಳಲ್ಲಿ ಮಿಡ್ಲ್ ಸ್ಕೂಲ್‌ನಲ್ಲಿ ಮತ್ತು ಹೈಸ್ಕೂಲ್‌ನಲ್ಲಿ ಸಹಕಾರ ಮತ್ತು ಸಹಕಾರ ಚಳುವಳಿ ಬಗ್ಗೆ ಶಿಕ್ಷಣ ಕೊಡಬೇಕು. ಏಕೆಂದರೆ ಇನ್ನು ಮೇಲೆ ಪ್ರತಿಯೊಂದು ಗ್ರಾಮದಲ್ಲಿ ಹೆಚ್ಚಾಗಿ ರೈತರು ಈ ಚಳುವಳಿಯಲ್ಲಿ ಭಾಗವಹಿಸುತ್ತಿರುವುದರಿಂದ, ಅವರಿಗೆ ಇದರ ಬಗ್ಗೆ ತಿಳುವಳಿಕೆ ಮೂಡಿಸುವಂತೆ ಶಿಕ್ಷಣ ಕೊಡಬೇಕು. ಆದ್ದರಿಂದ ಈಸಹಕಾರ ಶಿಕ್ಷಣದ ಬಗ್ಗೆ ಪ್ರತಿಯೊಬ್ಬರಿಗೂ ತಿಳುವಳಿಕೆ ಕೊಡುವಂತೆ ಮಾಡಲು ಪ್ರೈಮರಿ, ಮಿಡ್ಲ್ ಸ್ಕೂಲ್ ಮತ್ತು ಹೈ ಸ್ಕೂಲ್‌ನಲ್ಲಿ ಶಿಕ್ಷಣ ಕೊಡುವುದು ಮಾತ್ರವಲ್ಲದೆ ಮಹಾ ವಿದ್ಯಾಲಯಗಳು ನಡೆಸುವ ಡಿಗ್ರಿ ತರಗತಿಯಲ್ಲೂ ಶಿಕ್ಷಣ ಕೊಡಬೇಕೆಂದು ನನ್ನ ಸಲಹೆ.

ಇನ್ನು ಮಾನ್ಯ ಚೌಡಯ್ಯನವರು ದುರ್ವ್ಯವಹಾರದ ಬಗ್ಗೆ ಹೇಳಿದ್ದಾರೆ. ಒಂದು ಲೀಗಲ್ ಸೆಲ್ ಮಾಡಬೇಕು. ಅದರಲ್ಲಿ ನ್ಯಾಯವಾದಿಗಳು ಇರಬೇಕು, ಅದು ಒಂದು ಡಿವಿಜನ್‌ನಲ್ಲಿ ಸ್ಟೇಟ್ ಲೆವೆಲ್‌ನಲ್ಲಿ ಅದು ಇದ್ದರೆ ಸಾಧ್ಯವಾಗುತ್ತದೆ. ಇದಕ್ಕೆ ಒಬ್ಬ ನ್ಯಾಯವಾದಿ ಕೂಡಾ ಇರಬೇಕು. ಸ್ಟೇಟ್‌ಲೆವೆಲ್‌ನಲ್ಲಿ ಎರಡು ಮೂರು ಸೊಸೈಟಿಗಳಿಗೆ ಡೈರೆಕ್ಟರ್ಸ್ ಮತ್ತು ಅಧ್ಯಕ್ಷರು ಆಗಿರುತ್ತಾರೆ. ಅವರು ಒಂದು ದಿವಸದಲ್ಲಿ ಎರಡು ಮೂರು ಸಭೆಗಳು ಮಾಡಿ ಸಾವಿರಾರು ರೂಪಾಯಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ ಈಗ ತಾವು ಏನುಮಾಡಬೇಕು ಎಂದರೆ ಒಂದು ಸೊಸೈಟಿಗೆ ಒಬ್ಬ ಡೈರೆಕ್ಟರನ್ನು ಮಾತ್ರ ನೇಮಕ ಮಾಡಬೇಕು, ನನ್ನ ಅಭಿಪ್ರಾಯದಲ್ಲಿ ಒಂದು ಸೊಸೈಟಿಗೆ ಒಬ್ಬ ಡೈರೆಕ್ಟರ್ ಇರಬೇಕೆಂದು ಸಲಹೆ ಮಾಡುತ್ತೇನೆ. ಎಷ್ಟರಮಟ್ಟಿಗೆ ಮಾನ್ಯ ಸಚಿವರು ಮಾಡುತ್ತಾರೆಂಬುದನ್ನು ನೋಡುತ್ತೇನೆ. ಆಮೇಲೆ ಮಾನ್ಯ ಮಂತ್ರಿಗಳು ಮೊನ್ನೆಯ ದಿವಸ ಒಂದು ಬಿಲ್ಲನ್ನು ಪಾಸು ಮಾಡಿಕೊಂಡಿದ್ದಾರೆ. ಅದರಲ್ಲಿ ಅನೇಕ ಮಾರ್ಪಾಡುಗಳನ್ನು ತಂದಿದ್ದಾರೆ. ಹೆಣ್ಣು ಮಕ್ಕಳಿಗೆ ಮತ್ತು ವೀಕರ್ ಸೆಕ್ಷನ್‌ಗೆ ಏನು ಆದರಲ್ಲಿ ಪ್ರಾವಿಜನ್ ಇಟ್ಟಿದ್ದಾರೆ, ಆದರೆ ಈಗಾಗಲೇ

ಸೊಸೈಟಿಯ ಎಲ್ಲಾ ಚುನಾವಣೆಗಳು ಮುಗಿದಿರುವ ಕಾರಣ ಹೆಣ್ಣು ಮಕ್ಕಳಿಗೆ ಮತ್ತು ವೀಕರ್ ಸೆಕ್ಷನ್‌ಗೆ ಅವಕಾಶ ಇರುವುದಿಲ್ಲ. ಮತ್ತು ಹೆಣ್ಣುಮಕ್ಕಳಿಗೆ ಈ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳು ಲಕ್ಷ್ಯಕೊಟ್ಟು ಹೆಣ್ಣು ಮಕ್ಕಳು ಮತ್ತು ವೀಕರ್ ಸೆಕ್ಷನ್‌ಗೆ ಅವಕಾಶ ಮಾಡಿ ಕೊಡಬೇಕೆಂದು ನಾನು ಹೇಳುತ್ತೇನೆ ಇದರಲ್ಲಿ ಯಾವ ರೀತಿಯ ಅಡ್ಡಿ ಆಡಚಣೆಗಳು ಬರದಹಾಗೆ ನೋಡಿಕೊಳ್ಳಬೇಕು. ಮಾನ್ಯ ಚೌಡಯ್ಯನವರು ಹೇಳಿದಂತೆ ರಾಜಕಾರಣಿಗಳ ಕೈವಾಡ ಹೆಚ್ಚು ಇರುತ್ತದೆ. ನಾನೂಕೂಡಾ ಅದನ್ನೇ ಹೇಳುತ್ತೇನೆ. ನಾನು ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ನಾಮಕರಣ ಮಾಡತಕ್ಕಂಥ ಸಂದರ್ಭದಲ್ಲಿ ವ್ಯಕ್ತಿಗಳ ಗುಣಮಟ್ಟವನ್ನು ನೋಡಿ ಹಾಕಬೇಕು ಈಗ ಸಹಕಾರ ಕ್ಷೇತ್ರದಲ್ಲಿ ನೂರಕ್ಕೆ ಎಪ್ಪತ್ತರಷ್ಟು ಕರಪ್ಟ್ಸ ಇದ್ದಾರೆ. ಈ ಸಹಕಾರ ಕ್ಷೇತ್ರದಲ್ಲಿ ನೇಮಕ ಮಾಡುವಾಗ ಆದಷ್ಟು ರಾಜಕಾರಣಿಗಳನ್ನು ದೂರ ಇಡಬೇಕು. ಗುಣಮಟ್ಟದಲ್ಲಿ ಒಳ್ಳೆಯವರಾಗಿದ್ದರೆ, ಅಂಥವರನ್ನು ನಾಮಕರಣ ಮಾಡುವುದಕ್ಕೆ ದೋಶವಿಲ್ಲವೆಂದು ನಾನು ಹೇಳುತ್ತೇನೆ. ಇನ್ನು ವೀಕರ್ ಸೆಕ್ಷನ್ ಹೆಣ್ಣು ಮಕ್ಕಳಿಗೆ ಚುನಾವಣೆ ಸ್ಪರ್ಧೆ ಮಾಡಿದರೆ ಬಹಳ ತೊಂದರೆಯಾಗುತ್ತದೆ. ಏಕೆಂದರೆ ಚುನಾವಣೆಯಲ್ಲಿ ಹೆಣ್ಣುಮಕ್ಕಳಿಗೆ ಹಾಗೂ ವೀಕರ್ ಸೆಕ್ಷನ್‌ಗೆ ಖರ್ಚು ಬಹಳ ಬರುತ್ತದೆ. ಅದಕ್ಕೋಸ್ಕರವಾಗಿ ಅವರಿಗೆ ಯಾವುದೇ ತರಹದ ಕುಂದುಕೊರತೆಗಳು ಬರದಂತೆ ನೋಡಿಕೊಂಡು ಚುನಾವಣೆಯಲ್ಲಿ ಆರಿಸಿ ಬರತಕ್ಕಂಥ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಇನ್ನು ಅಗ್ರಿಕಲ್ಚರಲ್ ಕೋ-ಆಪರೇಟೀವ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟೀಸ್‌ನಿಂದ ರೈತರಿಗೆ ಯಾವ ರೀತಿಯ ಅನ್ಯಾಯವಾಗುತ್ತಿದೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ರೆಗ್ಯುಲೇಟೆಡ್ ಮಾರುಕಟ್ಟೆಗಳಲ್ಲಿ ಅನೇಕ ರೀತಿಯ ಅನ್ಯಾಯಗಳನ್ನು ಮಾಡುತ್ತಾರೆ ರಾಯಚೂರು ರೆಗ್ಯುಲೇಟೆಡ್ ಮಾರ್ಕೆಟ್ ಕೆಲಸ ಮಾಡದಕಾರಣ ಅನೇಕ ರೀತಿಯ ಅನ್ಯಾಯಗಳು ಅಲ್ಲಿ ಆಗುತ್ತಿವೆ. ಒಂದನೆಯದಾಗಿ ರಾಯಚೂರು ರೆಗ್ಯುಲೆಟೆಡ್ ಮಾರ್ಕೆಟ್‌ನಲ್ಲಿ ರೈತ ಬೆಳೆದಂಥ ಪದಾರ್ಥಗಳನ್ನು ಅಲ್ಲಿ ಇಡುತ್ತಾರೆ. ಅವನು ಯಾವುದೇ ರೀತಿಯ ಲಾಭವನ್ನು ಬಯಸುವುದಿಲ್ಲ. ರೈತರು ಕೊಟ್ಟಂಥ ಮಾಲನ್ನು ಇಟ್ಟುಕೊಂಡು ಹಣಕೊಡುತ್ತಾರೆನ್ನುವ ಸದ್ಭಾವನೆ ರೈತರಲ್ಲಿ ಬರುವುದಿಲ್ಲ. ಅದಕ್ಕೋಸ್ಕರ ಸೊಸೈಟಿಯವರು ಹೆಚ್ಚು ಪ್ರಾಪಗ್ಯಾಂಡ ಮಾಡಬೇಕು. ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕವಾದ ಕೆಲಸ ಮಾಡಬೇಕಾದರೆ ಅದರಲ್ಲಿರತಕ್ಕ ಅಧಿಕಾರಿಗಳನ್ನು ಚುರುಕು ಮಾಡಿ, ತೊಂದರೆಗಳು ಆಗದಂತೆ ನೋಡಿಕೊಳ್ಳಬೇಕು. ಕಾಟನ್ ಕೋ-ಆಪರೇಟೀವ್ ಸೊಸೈಟಿಗಳಲ್ಲೂ ಕೂಡಾ ಮಾಡಬೇಕು. ಅನೇಕ ರೀತಿಯ ಅನ್ಯಾಯಗಳನ್ನು ರೈತರು ಎದುರಿಸುತ್ತಿದ್ದಾರೆ. ಇನ್ನು ನಮ್ಮ ಮಾನ್ಯ ಮಂತ್ರಿಗಳು ಆಯವ್ಯಯದಲ್ಲಿ ಇಟ್ಟಿರತಕ್ಕ ಹಣವನ್ನು ತೀವ್ರವಾಗಿ ಬಿಡುಗಡೆ ಮಾಡಬೇಕು. ಇದು ತಡವಾದ ಕಾರಣ ಈ ಸೊಸೈಟಿಗೆ ಕೊಡಲು ಕಷ್ಟವಾಗುತ್ತದೆ. ಅಷ್ಟೇ ಅಲ್ಲದೆ, ಸಾಲದ ರೂಪದಲ್ಲಿ ರೈತ ಸಾಲವನ್ನು ತೆಗೆದುಕೊಳ್ಳುವಾಗ ಷೇರು ರೂಪದಲ್ಲಿ ಮುರಿದುಕೊಳ್ಳುವ ಪದ್ಧತಿಯನ್ನು ತೆಗೆದು ಹಾಕಿ ಸರ್ಕಾರದವರಿಂದ ಹೆಚ್ಚಿನ ಸಾಲ ರೈತರಿಗೆ ಸಿಗಬೇಕು ಎನ್ನುವುದೇ ನನ್ನ ಸಲಹೆ. ಇನ್ನು ಐ. ಎ. ಎಸ್. ಅಧಿಕಾರಿಗಳನ್ನು ಎಲ್ಲಾ ಗಿರಣಿಗಳಿಗೂ ಹಾಗೂ ಎಲ್ಲಾ ಮಿಲ್ಲುಗಳಿಗೆ ಹಾಕುವುದನ್ನು ನಿಲ್ಲಿಸಬೇಕು. ನೂಲಿನ ಗಿರಣಿಗಳಲ್ಲೂ ಸಕ್ಕರೆ ಕಾರ್ಖಾನೆಗಳಲ್ಲೂ ಬಹಳ ವರ್ಷಗಳಿಂದ ಅವರು ಪ್ರಾಮಾಣಿಕರಾಗಿರುವವರನ್ನು ಹಾಕಬೇಕು, ಇನ್ನು ಗುಲ್ಬರ್ಗಾದಲ್ಲಿ ಎಂ. ಎಸ್. ಕೆ. ಮಿಲ್ಲಿಗೆ ಒಬ್ಬ ಐಎಎಸ್ ಅಧಿಕಾರಿಯನ್ನು ತಾವು ಹಾಕಿದ್ದೀರಿ, ಅವರು ತುಂಬಾ ಲಾಸ್ ಮಾಡಿ ಹೋದರು ಇನ್ನು ಚೌಡಯ್ಯನವರು ಹೇಳಿದಂತೆ ಕರಪ್ಷನ್ ಸೊಸೈಟಿ ಸ್‌ನಲ್ಲಿ ಜಾಸ್ತಿಯಾಗಿದೆ, ಅದುದರಿಂದ ತಾವು ಮೊದಲು ಆ ಕರಪ್ಷನ್ ನಿಲ್ಲುವ ಹಾಗೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಜಪಾನಿನಲ್ಲಿ ಸೊಸೈಟಿ ಮಾಡಿಕೊಂಡು ಕಂಡನ್ಸರ್ ಪ್ರೊಡ್ಯೂಸ್ ಮಾಡಿ, ಇಡೀ ಜಗತ್ತಿಗೆ ಕೊಡುತ್ತಿದ್ದಾರೆ. ಇವರು ಸರ್ಕಾರದ ನೆರವು ಪಡೆದುಕೊಳ್ಳದೆ ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಅದೇ ಮಾದರಿಯಲ್ಲಿ ಇಲ್ಲಿಯೂ ಕೂಡಾ ಮಾಡಿ ರೈತರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಇವೊತ್ತು ನಮ್ಮ ಸಮಾಜದಲ್ಲಿ ಕರಪ್ಷನ್ ಯಥೇಚ್ಛವಾಗಿ ನಡೆಯುತ್ತಿದೆ. ೯೯ ಭಾಗ ಪ್ರಾಮಾಣಿಕತೆ ಹೋಗಿ ಇನ್ನು ಒಂದು ಪರ್ಸೆಂಟು ಮಾತ್ರ ಉಳಿದಿದೆ. ರಾಜ್ಯ ಮಟ್ಟದಲ್ಲಿ ಒಂದು ಸೊಸೈಟಿ ಇದೆ, ಅಲ್ಲಿಗೆ ಹೋದರೆ ಹಣ ಇಲ್ಲವೆಂದು ಹೇಳುತ್ತಾರೆ, ಮನುಷ್ಯನಿಗೆ ಆಹಾರ, ಔಷಧ, ಆಶ್ರಯ, ಅರಿವೆ, ನೀರು ಇವು ಮುಖ್ಯ. ಅದರಲ್ಲೂ ಮನೆ ಮುಖ್ಯವಾದುದು ಪ್ರತಿಯೊಬ್ಬರಿಗೂ ಮನೆಗಳನ್ನು ಒದಗಿಸಬೇಕಾದರೆ ಕೋ-ಆಪರೇಟೀವ್ ಸೊಸೈಟೀಸ್‌ಗಳಿಗೆ ಹೆಚ್ಚು ಹಣವನ್ನು ಒದಗಿಸುವ ಹಾಗೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಹಕಾರಿ ಸಂಘಗಳಿಗೂ ಕೂಡಾ ಹೆಚ್ಚು ಹಣ ಒದಗಿಸುವಂತಾಗಬೇಕು.

೧೨-೩೦ ಪಿ. ಎಂ.

ಈಗ ಮಾನ್ಯ ಮಂತ್ರಿಗಳು ೩ ವರ್ಷಕ್ಕೆ ಒಬ್ಬ ಛೇರ್‌ಮೆನ್ ಮಾರ್ಪಾಟು ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಮುಂದೆ ಬರತಕ್ಕಥಾ ಮಸೂದೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುತ್ತಾರೆಂದು ಆಶಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ಅಭಿನಂದಿಸಿ ಮಾನ್ಯ ಮಂತ್ರಿಯವರು ತಂದಿರುವ ಬೇಡಿಕೆಯನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ.

†ಶ್ರೀ ಹನುಮಗೌಡ ಶೇಖರಗೌಡ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಇಂದು ಮಂಡಿಸಿರತಕ್ಕ ಸಹಕಾರೀ ಇಲಾಖೆ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ನನ್ನ ಸಂಶಯವನ್ನು ವ್ಯಕ್ತಪಡಿಸುತ್ತಾ, ರಾಜ್ಯದಲ್ಲಿರತಕ್ಕ ಸಹಕಾರ ಸಂಘಗಳು ಅಸಹಕಾರ ಸಂಘಗಳು ಎನ್ನುವ ಅನ್ವರ್ಥ ನಾಮದಿಂದ ಕೆಲಸ ಮಾಡುತ್ತಿವೆ. ಮಾನ್ಯ ಸದಸ್ಯರು ಸಹಕಾರ ಸಂಘಗಳಲ್ಲಿ ರಾಜಕೀಯ ಪ್ರವೇಶ ಮಾಡಬಾರದು ಎಂದು ಹೇಳಿದರು, ಯಾವ ರಾಜಕಾರಣಿಯೇ ಆಗಲೀ ರಾಜಕೀಯದಲ್ಲಿ ಪರಿಪೂರ್ಣನಾಗಬೇಕಾದರೆ ಅವನ ಸಹಕಾರ ಸಂಘಗಳಲ್ಲಿಯೇ ಬೆಳೆಯಬೇಕಾಗುತ್ತದೆ. ಇವತ್ತು ನಮ್ಮ ಕ್ಷೇತ್ರದಲ್ಲಿಸಹಕಾರ ಸಂಘಗಳು ಅಂದರೆ ತಾತ್ಸಾರ ಭಾವನೆಯಿಂದ ಕುತ್ಸಿತ ಭಾವನೆ ಯಿಂದ ನೋಡತಕ್ಕಂಥ ಪ್ರವೃತ್ತಿ ಬೆಳೆದಿದೆ. ಟಿ.ಎ.ಪಿ.ಸಿ.ಎಂ.ಎಸ್. ಸೊಸೈಟಿಗಳಾಗಲೀ. ಇತರ ಸಂಘ ಸಂಸ್ಥೆಗಳು ಪಟ್ಟಭದ್ರ ಹಿತಾಶಕ್ತಿಗಳ ಕೈಯಲ್ಲಿ ಸಿಕ್ಕಿ ಕಳೆದ ೧೦-೨೦ ವರ್ಷಗಳಿಂದ ಅವುಗಳ ವಿಚಾರಣೆ ಆಗಿಲ್ಲ. ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೋ, ಆ ಪಕ್ಷ ಮುಖಂಡರುಗಳ ಬಾಲ ಹಿಡಿದುಕೊಂಡು ಹೋಗುತ್ತಾರೆ. ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆಂದು, ನಾನು ಅಭ್ಯರ್ಥಿಯಾಗಿ ಆರಿಸಿ ಬರುತ್ತೇನೆಂದು ತಿಳಿದು ನನ್ನ ಹಿಂದೆ ಓಡಾಡಿದರು. ಯಾವಾಗ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂತೋ ಜನತಾ ಸರ್ಕಾರಕ್ಕೆ ಜಯಕಾರ ಹಾಕಿಕೊಂಡು ಓಡಾಡುತ್ತಿದ್ದಾರೆ. ನಮ್ಮ ಕುಷ್ಟಗಿ ತಾಲ್ಲೂಕಿನ ಅನೇಕ ಸಹಕಾರ ಸಂಘಗಳಲ್ಲಿ ಅಪರ ತಪರ ಮಾಡಿದಂತ ವ್ಯಕ್ತಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ವಿಚಾರಣೆಗೆ ಒಳಪಡಿಸಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ಮಾನ್ಯ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಸಚಿವರು ಬಹಳ ಪ್ರಾಮಾಣಿಕರು. ಇವರೂ ಕೂಡ ಕೇಂದ್ರ ಸರ್ಕಾರದ ಅನುದಾನ ದಿಂದ ತೆಗೆದುಕೊಂಡು ನಮ್ಮ ಕಾರ್ಯಕ್ರಮಗಳೆಂದು ಪೊಳ್ಳು ಘೋಷಣೆ ಮಾಡತಕ್ಕದ್ದು ಸರಿಯಲ್ಲ. ಕಳೆದ ಒಂದು ವರ್ಷದಿಂದ ಸಾಧಿಸಿದ ಕಾರ್ಯ ಅತ್ಯಲ್ಪವಾದರೂ ಕೂಡ ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಬೋರ್‌ವೆಲ್‌ಗಳನ್ನು ಹಾಕಿ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ನಿಮ್ಮನ್ನು ನೀರು ಮಂತ್ರಿಗಳೆಂದು ನಿಮ್ಮ ಪಕ್ಷದವರೇ ಪ್ರಚಾರ ಮಾಡುತ್ತಿದ್ದಾರೆ ಕಳೆದ ೮-೧೦ ತಿಂಗಳುಗಳಿಂದ ಬೋರ್‌ವೆಲ್‌ಗಳನ್ನು ಹಾಕುತ್ತಿಲ್ಲ. ಅವುಗಳ ರಿಪೇರಿ ಮಾಡತಕ್ಕ ವ್ಯವಸ್ಥೆ ಇಲ್ಲ. ಇವತ್ತು ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಬೇಕಾದರೆ ಪ್ರತಿಯೊಂದು ತಾಲ್ಲೂಕಿಗೆ ಪಿ.ಹೆಚ್.ಇ.ಗೆ ಸೇರಿದ ಸುಸಜ್ಜಿತವಾದ ಸಿಬ್ಬಂದಿ ಮತ್ತು ವಾಹನವನ್ನು ಒದಗಿಸಿಕೊಡಬೇಕು. ತಾತ್ಕಾಲಿಕವಾಗಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಬಿ.ಡಿ.ಓ.ಗೆ ಅಧಿಕಾರ ಕೊಟ್ಟಿದ್ದೀರಿ. ಆದರೂ ಅದರಿಂದ ಕೆಲಸ ನಡೆಯುವುದು ಸಾಧ್ಯವಿಲ್ಲ. ಪ್ರತಿ ತಾಲ್ಲೂಕಿನಲ್ಲಿಯೂ ಅಸಿಸ್ಟೆಂಟ್ ಇಂಜಿನಿಯರ್ ಮತ್ತೆ ಇತರೆ ಸಿಬ್ಬಂದಿಗೆ ವಾಹನ ಕೊಡಬೇಕು. ಐ.ಆರ್.ಡಿ.ಪಿ. ಸ್ಕೀಮ್‌ನಲ್ಲಿ ಬಡವನಿಗೆ ಕೊಡತಕ್ಕಂಥಾ ಹಣ ಈ ಮಧ್ಯವರ್ತಿಗಳ ಕೈಗೆ ಸಿಕ್ಕಿ, ಕೊಡತಕ್ಕಂಥ ಸಬ್ಸಿಡಿ ಹಣ ಕೂಡ ಬಡವರಿಗೆ ಸಿಕ್ಕದಿರತಕ್ಕಂಥ ಪ್ರಸಂಗ ಇದೆ. ಇದರ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬಡತನದಿಂದ ಮೇಲಕ್ಕೆ ಎತ್ತತಕ್ಕಂಥ ಉದ್ದೇಶದಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೂಡಿ, ಗ್ರಾಮೀಣ ಉದ್ಯೋಗ ಭದ್ರತಾ ಯೋಜನೆಯನ್ನು ನಮ್ಮ ಸರ್ಕಾರದವರು ತೆಗೆದುಕೊಂಡಿದ್ದಾರೆ. ೧೯೭೮ರಲ್ಲಿ ೧೦೦ ದಿವಸಗಳಿಗೆ ಉದ್ಯೋಗ ಕೊಡತಕ್ಕಂಥ ಯೋಜನೆಯನ್ನು ದಿವಂಗತ ಶ್ರೀ ದೇವರಾಜ್ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಕೆಲವು ತಾಲ್ಲೂಕುಗಳಲ್ಲಿ ಪ್ರಾರಂಭ ಮಾಡಿದರು. ಅದೇ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ದೃಢೀಕರಣ ಯೋಜನೆಯನ್ನಾಗಿ ಇಡೀ ವರ್ಷ ಕೃಷಿ ಕಾರ್ಮಿಕರಿಗೆ ರಾಜ್ಯ ಸರ್ಕಾರದಿಂದ ೫೦ ಭಾಗ, ಕೇಂದ್ರಸರ್ಕಾರದಿಂದ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೫೦ ಭಾಗ ಸೇರಿಸಿ ೧೮ರಿಂದ ೬೦ ವಯಸ್ಸಿನ ಸದೃಢ ವ್ಯಕ್ತಿಗಳಿಗೆ ಕೆಲಸ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಮಾಡಿದರೂ ಕೂಡ ಇದನ್ನು ಇನ್ನು ಕಾರ್ಯರೂಪಕ್ಕೆ ತಂದಿಲ್ಲ. ಮುಖ್ಯವಾಗಿ ರಾಯಚೂರು ಜಿಲ್ಲೆಯ ಕುಷ್ಟಗಿ, ಯಲ್ಲಾಪುರ ಮತ್ತು ಲಿಂಗಸುಗೂರು ತಾಲ್ಲೂಕುಗಳಿಗೆ ತಾರತಮ್ಯ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಯಚೂರಿನಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ಫಲವತ್ತಾದ ಜಮೀನು ಇದರೂ ಕೂಡ ಪಕ್ಷಪಾತದ ದೃಷ್ಟಿಯಿಂದ ಅಲ್ಲಿ ಈ ಒಂದು ಯೋಜನೆಯನ್ನು ಕೊಟ್ಟು, ಕುಷ್ಟಗಿ ಯಲ್ಲಾಪುರ ಮತ್ತು ಲಿಂಗಸಗೂರು ತಾಲ್ಲೂಕುಗಳನ್ನು ಕಡೆಗಣಿಸಿದ್ದಾರೆ. ಮುಂದಿನ ವರ್ಷದಲ್ಲಾದರೂ ಈ ಮೂರು ತಾಲ್ಲೂಕುಗಳಿಗೆ ರಾಷ್ಟ್ರೀಯ ಉದ್ಯೋಗ ದೃಢೀಕರಣ ಯೋಜನೆಯ ವ್ಯಾಪ್ತಿಯಲ್ಲಿ ಒಳಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅಂತ್ಯೋದಯ ಯೋಜನೆಗಳ ಬಗ್ಗೆ ಡಿ.ಡಿ.ಸಿ. ಮೀಟಿಂಗ್‌ನಲ್ಲೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಕುಷ್ಟಗಿ, ಎಲ್ಲಾಪುರ ಮತ್ತು ಲಿಂಗಸುಗೂರು ತಾಲ್ಲೂಕುಗಳಿಗೆ ಅಂತ್ಯೋದಯ ಯೋಜನೆಗಳನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆ ಗೊತ್ತಿರುವಂತೆ ಈ ತಾಲ್ಲೂಕುಗಳು ಅನಾವೃಷ್ಟಿಗೆ ಒಳಗಾಗಿರತಕ್ಕಂಥ ತಾಲ್ಲೂಕುಗಳು. ಜೀವನೋಪಾಯಕ್ಕಾಗಿ ಹೆಂಡತಿ ಮಕ್ಕಳನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತಾರೆ. ಅಂಥಹ ತಾಲ್ಲೂಕುಗಳನ್ನು ಕಡೆಗಣಿಸಿ ಸಿಂಧನೂರು, ಗಂಗಾವತಿ ತಾಲ್ಲೂಕುಗಳಲ್ಲಿ ಅಂತ್ಯೋದಯ ಕಾರ್ಯಕ್ರಮಗಳನ್ನು ಪ್ರಯೋಗಾತ್ಮಕವಾಗಿ ತೆಗೆದುಕೊಂಡಿದ್ದಾರೆ. ಈ ತಾರತಮ್ಯ ಭಾವನೆ ಏತಕ್ಕೆ ತೋರಿದ್ದಾರೋ ಗೊತ್ತಿಲ್ಲ. ಎನ್.ಆರ್.ಇ.ಪಿ ಯೋಜನೆಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ ಸುಮಾರು ೧೨ ಸಾವಿರ ರೂಪಾಯಿಗಳನ್ನು ನಿಗದಿಮಾಡಿದ್ದಾರೆ. ಹಳ್ಳಿಯ ಜನರಿಗೆ ಒಂದು ಶಾಶ್ವತವಾದ ಶಾಲೆಯನ್ನು ಕಟ್ಟಿಸಿಕೊಟ್ಟರೆ ಅವರಿಗೆ ಒಂದು ವಿಶ್ವವಿದ್ಯಾನಿಲಯವನ್ನೇ ಕೊಟ್ಟಷ್ಟು ಸಂತೋಷವಾಗುತ್ತದೆ. ಸಹ್ಯಾದ್ರಿ ವಿಶ್ವವಿದ್ಯಾನಿಲಯವಾಗಲೀ ವಿಜಯನಗರ ವಿಶ್ವವಿದ್ಯಾಲಯವಾಗಲೀ ಅಥವಾ ಮಹಿಳಾ ವಿಶ್ವವಿದ್ಯಾನಿಲಯವಾಗಲೀ ಹಳ್ಳಿಯವರು ಕೇಳುವುದಿಲ್ಲ. ೧೨ ಸಾವಿರ ರೂಪಾಯಿಗಳ ಜೊತೆಗೆ ಗ್ರಾಮಗಳವರು ವಂತಿಗೆಯನ್ನು ಸೇರಿಸಿ ಶಾಲಾ ಕಟ್ಟಡವನ್ನು ಕಟ್ಟಬೇಕೆಂದು ತಾವು ಆದೇಶ ಕೊಟ್ಟಿದ್ದೀರಿ. ದಯವಿಟ್ಟು ಅದನ್ನು ೨೫ ಸಾವಿರ ರೂಪಾಯಿಗಳಿಗೆ ಏರಿಸಿ ಶಾಶ್ವತವಾದ ಆರ್.ಸಿ.ಸಿ. ಶಾಲಾ ಕಟ್ಟಡವನ್ನು ಪ್ರತಿಯೊಂದು ಹಳ್ಳಿಗಳಿಗೆ ಸ್ವಲ್ಪದಿವಸದಲ್ಲಿಯೇ ಕಟ್ಟಿಸಿಕೊಡದೇ ಹೋದರೆ ನೀವು ಪಾಪಕ್ಕೆ ಗುರಿಯಾಗುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎನ್.ಆರ್.ಇ.ಪಿ. ಯೋಜನೆಯಲ್ಲಿ ಶೌಚಾಲಯಗಳು ಬೇಡವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಏತಕ್ಕೋಸ್ಕರ ಶೌಚಾಲಯಗಳು ಬೇಡವೆಂದು ಅಧಿಕಾರಿಗಳು ಹೇಳುತ್ತಿದ್ದಾರೋ ಗೊತ್ತಿಲ್ಲ. ಮಾನವೀಯತೆಯ ದೃಷ್ಟಿಯಿಂದ ಅವಶ್ಯಕತೆ ಇರುವ ಕಡೆ, ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರತಕ್ಕ ಹಳ್ಳಿಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಶೌಚಾಲಯಗಳನ್ನು ಕಟ್ಟಿಸಬೇಕೆಂದು ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

೧೯೮೧–೮೨ರಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಕೆಳಗಡೆ ಕೆಲಸಗಳನ್ನು ತೆಗೆದುಕೊಳ್ಳುವ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಹಣದ ಅಭಾವವನ್ನು ಮುಂದಿಡುತ್ತಾರೆ. ಆ ಬಗ್ಗೆ ಮಂತ್ರಿಗಳನ್ನು ಕೇಳಿದಾಗ ಅವರು ಅದನ್ನು ಒಪ್ಪಿಕೊಂಡರೂ ಸಹ ಹಣವನ್ನು ಒದಗಿಸತಕ್ಕ ಕೆಲಸವನ್ನು ಮಾಡಲಿಲ್ಲ. ಹೀಗಾಗಿ ಸ್ಥಳೀಯ ಅಧಿಕಾರಿಗಳು ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕಿಂತ ಹಾಲಿ ತೆಗೆದುಕೊಂಡಿದ್ದ ಹಳೇ ಕೆಲಸಗಳನ್ನೇ ಪೂರ್ಣ ಮಾಡಲಿಲ್ಲ. ಆದ್ದರಿಂದ ೧೯೮೧–೮೨ನೇ ಸಾಲಿನಲ್ಲಿ ತೆಗೆದುಕೊಂಡ ಗ್ರಾಮಾಂತರ ಪ್ರದೇಶದ ಸಣ್ಣ ನೀರಾವರಿ ಯೋಜನೆಗಳಿಗೆ ಯಾವುದೇ ರೀತಿಯಲ್ಲಾದರೂ ಹಣವನ್ನು ಒದಗಿಸಿ ಅವುಗಳನು ಆದಷ್ಟು ಜಾಗ್ರತೆ ಪೂರ್ಣ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ನಮ್ಮ ತಾಲ್ಲೂಕು ಅಭಾವಕ್ಕೆ ಒಳಗಾದ ಪ್ರದೇಶ. ಜನರು ಊರು ಬಿಟ್ಟು ಬೇರೆ ಊರಿಗೆ ವಲಸೆ ಹೋಗತಕ್ಕ ಪರಿಸ್ಥಿತಿ ಇದೆ. ಆ ಭಾಗಕ್ಕೆ ಯಾವುದೇ ನೀರಾವರಿ ಯೋಜನೆಗಳು ಬರತಕ್ಕ ಸಂಭವ ಇಲ್ಲ. ಆದ್ದರಿಂದ ಐ.ಆರ್.ಡಿ ಪಿ. ಯೋಜನೆಯಲ್ಲಿ ಕಮ್ಯುನಿಟಿ ಅಥವಾ ಇಂಡಿವಿಜುಯಲ್ ಇರಿಗೇಷನ್ ಬಾವಿಗಳನ್ನು ತೋಡಿಸಿ. ಪಂಪು ಸೆಟ್ಟುಗಳನ್ನು ಕೊಡಿಸಿ ರೈತರಿಗೆ ನೀರು ದೊರೆಯುವಂತೆ ಮಾಡಿದರೆ ಅವರು ವಲಸೆ ಹೋಗುವುದು ತಪ್ಪುತ್ತದೆ. ಅವರಿಗೆ ಇರತಕ್ಕ ಆತಂಕ ದೂರವಾಗುತ್ತದೆ. ಹಾಲಿ ಇರತಕ್ಕ ನಿಯಮಗಳನ್ನು ಸ್ವಲ್ಪ ಸಡಿಲಗೊಳಿಸಿ ಈ ಒಂದು ನೀರಾವರಿ ವ್ಯವಸ್ಥೆಯನ್ನು ಅಗತ್ಯ ಇರುವ ಎಲ್ಲಾ ಕಡೆಯೂ ಮಾಡಿಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ನಮ್ಮಲ್ಲಿ ಅಂತರ್ಜಲ ಸಂಪತ್ತು ಬೇಕಾದಷ್ಟು ಇದೆ. ಅದಕ್ಕೆ ಕೇಂದ್ರ ಸರ್ಕಾರದ ಸಹಾಯ ತೆಗೆದುಕೊಂಡು ಐ.ಆರ್.ಡಿ.ಪಿ. ಯೋಜನೆಯಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ನಾಡಿನಲ್ಲೆಲ್ಲಾ ಹಸಿರು

ಕ್ರಾಂತಿ ಉಂಟಾಗುವಂತೆ ಮಾಡಬೇಕೆಂದು ಹೇಳುತ್ತೇನೆ ನಮ್ಮ ಮಂತ್ರಿಗಳು ಪ್ರಾಮಾಣಿಕರು, ಸಚಿವ ಸಂಪುಟದಲ್ಲಿ ಹೆಚ್ಚಿನ ಉತ್ಸುಕತೆಯಿಂದ ಕೆಲಸ ಮಾಡತಕ್ಕಂಥವರು ಆಗಿದ್ದಾರೆ. ಆದರೆ ಕೆಲವು ಅಧಿಕಾರಿಗಳು ಮಾತ್ರ ಆ ರೀತಿ ಕೆಲಸ ಮಾಡತಕ್ಕವರು ಆಗಿಲ್ಲ. ಜನತಾ ಪಕ್ಷದ ಸರ್ಕಾರ ಬಂದಮೇಲೆ ತಮ್ಮದೇ ಆದ ಸರ್ಕಾರ ಎಂಬ ವಾತಾವರಣದಲ್ಲಿ ನಮ್ಮ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ನಡೆದುಕೊಳ್ಳುತ್ತಿದ್ದಾರೆ. ಅವರ ವರ್ತನೆ ಬಗ್ಗೆ ನಾನು ಅನೇಕ ಸಲ ಮಂತ್ರಿಗಳಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ದೂರು ಕೊಟ್ಟಿದ್ದೇನೆ ಮತ್ತು ಖುದ್ದಾಗಿ ಭೇಟಿ ಮಾಡಿದಾಗಲೂ ಕೂಡ ವಿಷಯವನ್ನು ತಿಳಿಸಿದ್ದೇನೆ. ಒಂದು ಪಕ್ಷ ನಾನು ಈಗ ಮಾಡುತ್ತಿರತಕ್ಕ ಆರೋಪ ಸುಳ್ಳು ಎಂದು ಯಾರಾದರೂ ಸಾಬೀತು ಮಾಡಿದರೆ, ನಾನು ವಿಧಾನ ಸಭೆಯ ಸದಸ್ಯಸ್ಥಾನಕ್ಕೆ ರಾಜಿನಾಮೆ ಕೊಡುತ್ತೇನೆ. ಕೆಲವೊಂದು ಶಾಖೆಯ ಮಂತ್ರಿಗಳು ಇದರ ಬಗ್ಗೆ ಹಸ್ತಕ್ಷೇಪ ಮಾಡಿ ಈ ವಿಚಾರವನ್ನು ತಡೆಹಿಡಿದರು. ಒಂದು ಪಕ್ಷ ಇದು ಸುಳ್ಳು ಎನ್ನುವುದಾದರೆ ನನ್ನ ರಾಜಿನಾಮೆ ತೆಗೆದುಕೊಂಡು ವಿಚಾರಣೆ ಮಾಡಿ. ಆಗ ಯಾವುದೇ ರೀತಿಯ ಅನುಮಾನಕ್ಕೆ ಆಸ್ಪದ ಇರುವುದಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅವರು ರಾಜಿನಾಮೆ ಕೊಡುವುದು ಬೇಡ. ಅವರು ಕೊಟ್ಟಿರತಕ್ಕ ದೂರಿನ ಬಗ್ಗೆ ವಿಚಾರಣೆಗೆ ಆಜ್ಞೆ ಮಾಡಿದ್ದೇವೆ. ವಿಚಾರಣಾ ವರದಿ ಸರ್ಕಾರದ ಕೈ ಸೇರಿದ ಮೇಲೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ವಿಚಾರಣೆ ನಡೆಸಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹನುಮೆಗೌಡ ಪಾಟೀಲ್,—ಶಾಸಕರಾದ ನಾವುಗಳು ಮಂತ್ರಿಗಳ ಹತ್ತಿರ ಹೋದಾಗ ಕೆಲವು ಮಂತ್ರಿಗಳು ಬಹಳ ಸಹಾನುಭೂತಿಯಿಂದ ನಮ್ಮ ಕುಂದುಕೊರತೆಗಳನ್ನು ವಿಚಾರಿಸಿದರೆ, ಮತ್ತು ಕೆಲವು ಮಂತ್ರಿಗಳು ಏನೋ ಬಂದಿದ್ದಾರೆ ಎಂಬ ರೀತಿಯಲ್ಲಿ ವರ್ತಿಸುತ್ತಾರೆ. ದಯಮಾಡಿ ಆ ಭಾವನೆ ಮಂತ್ರಿಗಳಲ್ಲಿರತಕ್ಕದ್ದು ಒಳ್ಳೆಯದಲ್ಲ. ಮಂತ್ರಿಗಳು ಶಾಸಕರಿಗೆ ಅಗೌರವ ತೋರತಕ್ಕ ರೀತಿಯಲ್ಲಿ ವರ್ತಿಸತಕ್ಕದ್ದು ಸರಿಯಲ್ಲ. ಇವತ್ತಿನ ದಿವಸ ಪಕ್ಷ ನೋಡಿ ಓಟು ಕೊಡತಕ್ಕ ಪರಿಸ್ಥಿತಿ ಹೋಗಿ ವ್ಯಕ್ತಿ ನೋಡಿ ಕೊಡತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಮಂತ್ರಿಗಳು ಯಾರ ಬಗ್ಗೆಯಾಗಲೀ ಸರಿಯಾದ ರೀತಿಯಲ್ಲಿ ನಡೆದುಕೊಳ್ಳತಕ್ಕದ್ದು ಒಳ್ಳೆಯದೆಂದು ನಾನು ಹೇಳಬಯಸುತ್ತೇನೆ. ಪ್ರತಿಯೊಬ್ಬ ಶಾಸಕರೂ ಜನತೆಯ ಮತ ಪಡೆದು ಆರಿಸಿಬಂದವರಾಗಿರುತ್ತಾರೆ. ಅಂದಾಗ ಎಲ್ಲರಿಗೂ ಸಮಾನವಾದ ಹಕ್ಕು, ಗೌರವ ಹಾಗೂ ಸ್ಥಾನಮಾನಗಳು ಇರುತ್ತವೆ. ಆದ್ದರಿಂದ ಮಂತ್ರಿಗಳು ಎಲ್ಲಾ ಶಾಸಕರೊಂದಿಗೆ ಶಾಂತಿ ಸೌಹಾರ್ದದಿಂದ ವರ್ತಿಸಬೇಕೆಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ.

ಇವತ್ತಿನ ದಿವಸ ಕೇಂದ್ರದ ಅನುದಾನದೊಂದಿಗೆ, ಬಡವರಿಗಾಗಿ ಯಾವ ಒಂದು ಯೋಜನೆ ಇದೆ, ಅದನ್ನು ಕಾರ್ಯಗತ ಮಾಡತಕ್ಕ ಕಾಲದಲ್ಲಿ ನಮ್ಮ ಭಾಗದ ಕೆಲವು ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಮಾಡಿರಲಿಲ್ಲ, ಅದನ್ನು ಮಂತ್ರಿಗಳ ಗಮನಕ್ಕೆ ತಂದಾಗ ಸರಿಪಡಿಸಿದರು. ಇಂತಹ ಯೋಜನೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಅಧಿಕಾರಿಗಳು ಸೂಕ್ತ ನಿಗಾವನ್ನು ಇಡಬೇಕಾಗುತ್ತದೆ. ಆದ್ದರಿಂದ ಜನತಾ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಮಂತ್ರಿಗಳಿಗೆ ಒಳ್ಳೆಯ ಹೆಸರು ಬರಬೇಕಾದರೆ ಈ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಡಾ|| ಎಂ. ಪಿ. ಕರ್ಕಿ (ಕುಮಟ).—ಮಾನ್ಯ ಅಧ್ಯಕ್ಷರೇ, ಸಹಕಾರ ಸಚಿವರು ಮಂಡಿಸಿರತಕ್ಕ ೨೨ ಕೋಟಿ ರೂಪಾಯಿಗಳ ಬೇಡಿಕೆಯನ್ನು ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರು ಮಂಡಿಸಿರುವ ೧೬೭ ಕೋಟಿ ರೂಪಾಯಿಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವೊಂದು ಮೂಲಭೂತವಾಗಿರತಕ್ಕ ಸಲಹೆಗಳನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಈ ಸರ್ಕಾರದ ಆಡಳಿತದಲ್ಲಿ ನಡೆಯುತ್ತಿರತಕ್ಕ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಿಕೃತಿಗಳನ್ನು ಅವರ ಗಮನಕ್ಕೆ ತಂದಾಗ ಅವುಗಳನ್ನು ಸರಿಪಡಿಸುತ್ತಾರೆಂದು ಆಶಿಸಿ, ನಾನು ಮಾತನಾಡುತ್ತಿದ್ದೇನೆ. ಪ್ರಪ್ರಥಮವಾಗಿ ಈಗ ಬೇಡಿಕೆಗಳನ್ನು ಮಂಡಿಸಿರತಕ್ಕ ಇಬ್ಬರು ಮಂತ್ರಿಗಳ ಖಾತೆಯಲ್ಲಿ ಹಿಂದಿನ ಸರ್ಕಾರಕ್ಕಿಂತ ಹೆಚ್ಚಿನ ಸಾಧನೆ ಆಗಿದೆಯೆಂದು ನಾನಾದರೂ ಹೇಳಬಯಸುತ್ತೇನೆ. ಆದ್ದರಿಂದ ಅವರನ್ನು ನಾನು ಈ ಸಂದರ್ಭದಲ್ಲಿ ಶ್ಲಾಘಿಸಲಿಚ್ಛಿಸುತ್ತೇನೆ. ಆ ಮಾತ್ರಕ್ಕೆ ಈ ಸರ್ಕಾರ ಎಲ್ಲವನ್ನೂ ಮಾಡಿದೆ, ಎಲ್ಲವನ್ನೂ ಈ ಎರಡೇ ಖಾತೆಗಳು ಮಾಡಿವೆ ಎಂದು ಹೇಳುವ ಪ್ರಶ್ನೆ ಇಲ್ಲ. ಸಹಕಾರ ಅಂದರೆ ಪರಸ್ಪರ ಸಹಕಾರದಿಂದ ತಮ್ಮ ತಮ್ಮ ಕ್ಷೇಮಾಭ್ಯುದಯ ಮಾಡಿಕೊಳ್ಳುವುದು, ಅಲ್ಲದೆ ಮೂರನೇ ವ್ಯಕ್ತಿಯನ್ನು ಉದ್ಧರಿಸತಕ್ಕದ್ದು. ಈ ಒಂದು ಹಿನ್ನೆಲೆಯಲ್ಲಿ ಈ ಸಹಕಾರಿ ತತ್ವ ಸಿದ್ಧಾಂತಗಳು ಅಡಕವಾಗಿವೆ. ಈ ಶತಮಾನದ ಐದನೇ ದಶಕದಲ್ಲಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಸಹಕಾರ ಸಂಘಗಳನ್ನು ದೇಶಾದ್ಯಂತ ಸ್ಥಾಪಿಸಿತು. ಈ ಸಹಕಾರ ಸಂಘಗಳು ದೇಶದ ಬೆನ್ನೆಲುಬು ಆಗಿರುವುದರಿಂದ ಇವರಲ್ಲಿ ರಾಜಕಾರಣ ಕೂಡ ಒಂದು ಅಂಶವಾಗಿ ಒಡಮೂಡಿದೆ. ಸ್ವಲ್ಪ ಕಾಲ ರಾಜಕಾರಣ ಸಹಕಾರ ರಂಗದಿಂದ ದೂರವಾಗಿತ್ತು. ಇವತ್ತಿನ ದಿವಸ ಸಹಕಾರ ರಂಗದಲ್ಲಿ ರಾಜಕಾರಣ ಇರಬೇಕೇ ಬೇಡವೇ ಎಂಬುದು ಚರ್ಚಾಸ್ಪದವಾದ ವಿಷಯವಾಗಿದೆ. ಮಾನ್ಯ ಚೌಡಯ್ಯನವರು ಮಾತನಾಡುತ್ತಾ, ಸಹಕಾರ ಕ್ಷೇತ್ರದಲ್ಲಿ ರಾಜಕಾರಣಿಗಳು ಇರಬಾರದೆಂದು ಹೇಳಿದರು. ಆದರೆ ಇಲ್ಲಿರತಕ್ಕ ಅನೇಕ ರಾಜಕಾರಣಿಗಳು ಸಹಕಾರ ರಂಗದಲ್ಲಿ ಒಂದಲ್ಲ ಒಂದು ದಿನ ಕೆಲಸ ಮಾಡಿ ನುರಿತಂತವರಾಗಿದ್ದಾರೆ. ಅಂದಮೇಲೆ ಈ ಒಂದು ಕಾರ್ಯಕ್ಷೇತ್ರವನ್ನು ರಾಜಕಾರಣಿಗಳಿಂದ ಬೇರ್ಪಡಿಸುವುದು ಸಾಧ್ಯವಾಗುವುದಿಲ್ಲ. ಆದರೆ ರಾಜಕಾರಣದ ಹಸ್ತಕ್ಷೇಪ ಈ ಸಹಕಾರ ರಂಗದಲ್ಲಿ ಆಗಬಾರದು ಎಂಬ ವಿಷಯ ಮೂಲಭೂತವಾಗಿದೆ.

ಈ ಬಗ್ಗೆ ಒಂದು ತಿದ್ದುಪಡಿ ತಂದಾಗ ಮಾನ್ಯ ಸಹಕಾರ ಮಂತ್ರಿಗಳಿಗೆ ಈ ರೀತಿಯಾಗಿ ನೇಮಕ ಮಾಡಿಕೊಂಡಂಥಾವರಿಗೆ ಯಾವುದೇ ಅಧಿಕಾರ ಸ್ಥಾನವನ್ನೂ ಕೊಡಬಾರದು, ಸರ್ಕಾರದ ಹಿತವನ್ನು ನೋಡಿಕೊಳ್ಳತಕ್ಕಂಥಾವರಿಗೆ ಮಾತ್ರ ನೇಮಕ ಮಾಡಿಕೊಳ್ಳಬೇಕು ಎಂದು ನಾನು ಸೆಪ್ಟೆಂಬರ್‌ನಲ್ಲೇ ಹೇಳಿದ್ದೆ. ಅದಕ್ಕೆ ಪಾಪ ನಮ್ಮ ಸಹಕಾರ ಮಂತ್ರಿಗಳು ತತ್ವಶಃ ಒಪ್ಪಿದರು. ಆದರೆ ಅದನ್ನು ಕಾರ್ಯಗತ ಮಾಡಿಸುವುದಕ್ಕೆ ಆಗಲಿಲ್ಲ. ಅದನ್ನು ವಿಚಾರ ಮಾಡುತ್ತೇನೆಂದು ಹೇಳಿ ಮತ್ತೆ ಇವರ ಚುನಾವಣೆಯನ್ನು ಮುಂದಕ್ಕೆ ಹಾಕಿದರು. ನಾನು ಇವರ ಬಗ್ಗೆ ಸಮಗ್ರವಾದ ತಿದ್ದುಪಡಿ ತಂದಾಗ ಇದನ್ನು ಅಳವಡಿಸಿಕೊಳ್ಳುತ್ತಾರೆ ಎಂದು ಅಂದುಕೊಂಡಿದ್ದೆ. ಸಹಕಾರ ಮಂತ್ರಿಗಳಿಂದ ಹಿಡಿದು ನಾವೆಲ್ಲಾ ಮಾತನಾಡುತ್ತೇವೆ. ಈ ಸಹಕಾರ ಕ್ಷೇತ್ರದಲ್ಲಿ ಹಸ್ತಕ್ಷೇಪ ಇರಬಾರದು ಎಂದು ಪೇಪರ್‌ನಲ್ಲೂ ಬರುತ್ತದೆ, ನಾವೂ ಸಹ ಕೇಳಿದ್ದೇವೆ, ಆದರೆ ಈಗ ನಡೆದಿರತಕ್ಕಂಥಾ ವಿಷಯದಿಂದ ಏನು ವ್ಯಕ್ತವಾಗುತ್ತದೆ ಎಂದರೆ ಮಾತಿಗೂ ಕೃತಿಗೂ ಅಜಗಜಾಂತರ ವ್ಯತ್ಯಾಸ ಇರುವುದು ಸ್ಪಷ್ಟವಾಗುತ್ತದೆ, ಅಲ್ಲದೆ ಸಹಕಾರ ಕ್ಷೇತ್ರದಲ್ಲಿ ಅನೇಕರು ತಮ್ಮವರನ್ನೇ ಆಡಳಿತದಲ್ಲಿ ಇಟ್ಟುಕೊಳ್ಳಬೇಕು ಎಂದು ಪ್ರತಿಷ್ಠೆ ನಡೆಸುತ್ತಾರೆ. ರಾಜಕೀಯ ಪಕ್ಷಕ್ಕೆ ಎಲ್ಲಿಂದಲೋ ಬಂದು ಬಿಡುತ್ತಾರೆ. ಯಾರೇ ಇರಲಿ ಈ ಸಹಕಾರೀ ರಂಗದಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕಂಥಾವರಿಗೆ ಪ್ರೋತ್ಸಾಹ ಕೊಡುವುದು ಅಗತ್ಯ. ನಮ್ಮ ಪಾರ್ಟಿ ಬರಬೇಕು, ತಮ್ಮ ಪಾರ್ಟಿ ಬರಬೇಕು ಎಂದು ಈ ಒಂದು ವರ್ಷದಲ್ಲಿ ಏನೆಲ್ಲಾ ನಡೆಯುತ್ತಾ ಇದೆ ಇದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಸರಿಯಾದ ಪ್ರಾಮಾಣಿಕರಾದ ಜನರು ಈ ಸಹಕಾರಿ ರಂಗದಲ್ಲಿ ಬರದೇ ಹೋದರೆ ಸಹಕಾರೀ ರಂಗಕ್ಕೆ ಅಪಚಾರವಾದಂತಾಗುತ್ತದೆ. ಕೊನೆಗೆ ಈ ಸಹಕಾರೀ ಸಂಘಕ್ಕೆ ಈ ರಾಜಕಾರಣಿಗಳು ಏತಕ್ಕೆ ಹೋಗುತ್ತಾರೋ ಎನ್ನುವ ಪ್ರಶ್ನೆ ಬರುತ್ತದೆ. ಪ್ರಾಮಾಣಿಕರಾದಂಥಾ ರಾಜಕಾರಣಿಗಳು ಈ ಸಹಕಾರೀ ಕ್ಷೇತ್ರದಲ್ಲಿ ಇದ್ದರೆ ಈ ಸಹಕಾರೀ ಕ್ಷೇತ್ರವನ್ನು ಚೆನ್ನಾಗಿ ಬೆಳೆಸಿಕೊಂಡು ಬರಬಹುದು. ಅದನ್ನು ಬಿಟ್ಟು ಸ್ವಾರ್ಥ ಇರುವವರು ಬಂದರೆ ತಮ್ಮವರನ್ನೇ ಬಂದು ಬಳಗದವರನ್ನು ಮಕ್ಕಳನ್ನು ಆ ಸಹಕಾರಿ ಕ್ಷೇತ್ರಕ್ಕೆ ತೆಗೆದುಕೊಂಡು ಅವರ ಅನುಕೂಲತೆ ಮಾಡಿಕೊಳ್ಳುತ್ತಾರೆಯೇ ವಿನಾ ಬೇರೆ ಜನಗಳಿಗೆ ಅನುಕೂಲ ಮಾಡಿಕೊಡುವುದಿಲ್ಲ. ನಿಜವಾಗಿಯೂ ಇಂಥಾ ರಾಜಕಾರಣಿಗಳು ಇರಬಾರದು. ಇಂಥವರು ಬೇರೆ ಜನಗಳ ಹಿತಾಸಕ್ತಿಯನ್ನೂ ಸಹ ನೋಡುವುದಿಲ್ಲ. ನನಗೆ ಈ ಸಹಕಾರೀ ಕ್ಷೇತ್ರದಲ್ಲಿ ಬಹಳ ಅನುಭವ ಇರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಂಥವರನ್ನು ಶಿಕ್ಷೆ ಮಾಡಬೇಕು ಸಾಮಾನ್ಯವಾಗಿ ಹೇಳಬೇಕಾದರೆ ಯಾವ ಆಡಳಿತ ಪಕ್ಷದವರು ಆಡಳಿತ ಮಾಡುತ್ತಾರೋ ಅವರು ತಮ್ಮ ಪಕ್ಷದವರನ್ನೇ ಈ ಸಹಕಾರೀ ಕ್ಷೇತ್ರಕ್ಕೆ ತುಂಬುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ ಆಡಳಿತ ಪಕ್ಷದ ಜನರು ಏನು ತಪ್ಪು ಮಾಡಿದರೂ ಕೂಡ ಅದನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಭ್ರಷ್ಟಾಚಾರದ ಬಗ್ಗೆ ಅಪರಾಧ ಮಾಡುವ ಬಗ್ಗೆ ಕಾನೂನು ಇದ್ದರೂ ಕೂಡ ಸರ್ಕಾರ ಅದೇ ಪಕ್ಷವಾಗಿರುವುದರಿಂದ ಅವರ ತಪ್ಪನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಇದರಿಂದ ಪ್ರಾಮಾಣಿಕರಾದ ಜನ ಇದರಲ್ಲಿ ಚೆನ್ನಾಗಿ ಕೆಲಸ ಮಾಡಬೇಕೆಂದು ಅಪೇಕ್ಷೆ ಪಟ್ಟರೂ ಕೂಡ ಮೇಲಾಧಿಕಾರಿಯ ಪರ್ಮಿಷನ್ ಇಲ್ಲದೇ ಇವರು ಏನೂ ಮಾಡುವುದಕ್ಕಾಗುವುದಿಲ್ಲ. ಭ್ರಷ್ಟಾಚಾರವನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಮನಸ್ಸು ಮಾಡಿದರೆ ಮಾಡಬಹುದು. ಮೇಲಾಧಿಕಾರಿಯ ಪರ್ಮಿಷನ್ ಎಂದರೆ ಸರ್ಕಾರದ ಪರ್ಮಿಷನ್ ಬೇಕು. ಹಾಗಾದರೆ ಈ ಸಹಕಾರಿ ಕ್ಷೇತ್ರವನ್ನು ಚೆನ್ನಾಗಿ ಬೆಳೆಸಬಹುದು. ಈಗಲಾದರೂ ಕೂಡ ಈ ಭ್ರಷ್ಟಾಚಾರವನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಎಚ್ಚರಗೊಳ್ಳಬೇಕು ಎಂದು ಹೇಳಬಯಸುತ್ತೇನೆ. ಈ ಪರ್ಮಿಷನ್ ಬಗ್ಗೆ ಕಾನೂನಿನಲ್ಲಿ ತೊಡಕು ಏನು ಇದೆ ಎಂದರೆ ಒಬ್ಬ ವ್ಯಕ್ತಿ ಮೇಲ್ನೋಟಕ್ಕೆ ಭ್ರಷ್ಟಾಚಾರ ಮಾಡಿದ್ದಾನೆ ಎಂದು ರುಜುವಾತಾದರೆ, ಆತ ಏನಾದರೂ ಕೋರ್ಟಿಗೆ ಹೋದರೆ ಅದಕ್ಕೆ ಮೇಲಾಧಿಕಾರಿಯು ಅಂದರೆ ಸರ್ಕಾರದ ಪರ್ಮಿಷನ್ ತೆಗೆದುಕೊಳ್ಳಬೇಕು ಅಂತ ಇದೆ. ಈ ತರಹ ಒಂದು ತಿದ್ದುಪಡಿ ಕಾನೂನಿನಲ್ಲಿ ಇರುವುದರಿಂದ ಈ ಸಹಕಾರಿ ಕ್ಷೇತ್ರದ ಜುಟ್ಟು ಸರ್ಕಾರದ ಕೈಯಲ್ಲಿ ಇದ್ದ ಹಾಗಾಯಿತು. ಭ್ರಷ್ಟಾಚಾರ ಎಂದು ಗೊತ್ತಾದಾಗ ಅವರನ್ನು ಶಿಕ್ಷಿಸುವ ಹಾಗೆ ಇರಬೇಕು. ಹಾಗಿಲ್ಲದೇ ಇರುವುದರಿಂದ ತಮಗೆ ಹೇಳಬೇಕಾದರೆ ಕೆಲವೊಮ್ಮೆ ಇದರ ಬಗ್ಗೆ ವಿಚಾರಣೆಯೂ ಕೂಡ ಆಗದೇ ಇರುವ ಸನ್ನಿವೇಶ, ಸಂಗತಿಗಳು ಇವೆ. ಅದಕ್ಕಾಗಿ ಸೂಕ್ತವಾದ ಬದಲಾವಣೆಗಳನ್ನು ಈ ಕಾನೂನಿನಲ್ಲಿ ತರಬೇಕು ಎಂದು ಮಾನ್ಯ ಸಹಕಾರಿ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಸಹಕಾರಿ ಮಂತ್ರಿಗಳ ಬಗ್ಗೆ ಹೇಳುವುದಾದರೆ ಅವರು ಬಹಳ ಚತುರರು. ಅವರ ವಿಷಯ ಏನಾದರೂ ಬಂದರೆ ತಟಕ್ಕನೆ ಎದ್ದುನಿಂತು ಉತ್ತರ ಕೊಡುತ್ತಾರೆ, ಶ್ರೀಮಾನ್ ರಘುಪತಿಯವರ ಹಾಗೆ ಕಾಂಪಿಟಿಷನ್ ಮಾಡುತ್ತಾರೆ. ಅವರ ಕಾರ್ಯಕ್ಷೇತ್ರದಲ್ಲಿ ಯಾವ ವಿಷಯ ಬಂದರೂ ಕೂಡ ತಕ್ಷಣವಾಗಿ ಆ್ಯಕ್ಷನ್ ತೆಗೆದುಕೊಳ್ಳುತ್ತಾರೆ. ಇದೇ ರೀತಿಯಾಗಿ ಮುಂದೂ ಕೆಲಸ ಮಾಡಿ ಸಹಕಾರ ಮಂತ್ರಿಗಳು ಒಳ್ಳೆಯ ಹೆಸರು ಪಡೆಯಲಿ ಎಂದು ಹೇಳುತ್ತೇನೆ. ಏತಕ್ಕೆಂದರೆ ಅವರಲ್ಲಿ ಆ ಯೋಗ್ಯತೆ ಉಂಟು ಆದರೆ ಅವರು ತಮ್ಮ ಕೆಲಸಗಳನ್ನು ಮಾಡುವಾಗ ಇದರಲ್ಲಿ ಏನೇನು ತೊಡಕುಗಳು ಇವೆ ಅದನ್ನು ಗಮನದಲ್ಲಿಟ್ಟುಕೊಂಡು ಚೆನ್ನಾಗಿ ಕೆಲಸ ಮಾಡಲಿ ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಾಗಾದರೆ ನಾವೇನು ಮಾಡಲಿಲ್ಲ ಎನ್ನುವ ಅರ್ಥವೇ ?

ಡಾ|| ಎಂ. ಪಿ. ಕರ್ಕಿ.—ಹಾಗೇನೂ ಅಲ್ಲ. ಯಾವುದಾದರೂ ವಿಷಯ ಬಂದಾಗ ಅದನ್ನು ಕೂಲಂಕುಷವಾಗಿ ವಿಚಾರ ಮಾಡಿ ಕೂಡಲೇ ಕ್ರಮ ತೆಗದುಕೊಳ್ಳಬೇಕು ಅನ್ನುವ ಅರ್ಥ.

ಇನ್ನು ಲ್ಯಾಂಡ್ ಬ್ಯಾಂಕ್ ಚುನಾವಣೆ ಬಗ್ಗೆ ಹೇಳಬೇಕಾದರೆ ಈ ಚುನಾವಣೆ ಮೂರು ಸಾರಿ ಮುಂದಕ್ಕೆ ಹೋಯಿತು. ಹಿಂದೆ ೫ ಸಾರಿ ಮುಂದಕ್ಕೆ ಹೋಗಿದೆ. ಮೊದಲು ಒಂದು ಸಾರಿ ಆಗಸ್ಟ್‌ನಲ್ಲಿ ಚುನಾವಣೆ ಇಟ್ಟರು. ಈ ಸಹಕಾರಿ ಕ್ಷೇತ್ರದಲ್ಲಿ ಅವರ ಈಯರ್ ಎಂಡಿಂಗ್ ಜೂನ್ ಇರುವಾಗ ಆಗಸ್ಟ್‌ನಲ್ಲಿ ಚುನಾವಣೆ ಇಟ್ಟರೆ ಬ್ಯಾಲೆನ್ಸ್ ಸೀಟ್ ತಯಾರು ಮಾಡುವುದು ಹೇಗೆ ? ಒಂದು ವೇಳೆ ಪ್ರಯತ್ನ ಮಾಡಿದರೆ ಸೆಪ್ಟೆಂಬರ್‌ನಲ್ಲಿ ಮೀಟಿಂಗ್ ಮಾಡಬಹುದು ಇದನ್ನು ವಿಚಾರ ಮಾಡದೇ ಕೆಲಸ ಮಾಡಿದರೆ ತೊಂದರೆಯಾಗುವುದಿಲ್ಲವೇ ಅಲ್ಲದೆ ಅನೇಕ ಕಡೆ ಆವಾಗ ಮಳೆ ಇರುತ್ತದೆ, ಮಳೆಗಾಲದಲ್ಲಿ ಚುನಾವಣೆ ನಡೆಸಿ ಎಂದರೆ ಆಗುತ್ತದೆಯೇ ಅನಂತರ ಈ ಬಗ್ಗೆ ಒಂದು ತಿದ್ದುಪಡಿ ತಂದು ಈ ಚುನಾವಣೆಯನ್ನು ಮತ್ತೆ ಮುಂದಕ್ಕೆ ಹಾಕಿದರು. ಒಂದೆರಡು ಪ್ರಸಂಗದಲ್ಲಿ ಕೆಲವು ಕಡೆ ಈ ಚುನಾವಣೆಯನ್ನು ನಡೆಸುವುದಕ್ಕೆ ಬೇಕಾದ ಸಿದ್ಧತೆಯೂ ಆಯಿತು. ಬ್ಯಾಲೆನ್ಸ್ ಸೀಟ್ ಸಹ ತಯಾರಾಗಿತ್ತು, ನಾಮಿನೇಷನ್ ಸಹ ಆಗಿತ್ತು. ಕೆಲವರು ಅದನ್ನು ವಿತ್‌ಡ್ರಾ ಕೂಡ ಮಾಡಿದ್ದರು. ಆದರೆ ಕೊನೆಯಲ್ಲಿ ಫೈನಲ್ ನೋಟಿಫಿಕೇಷನ್ ಆಗುವಾಗ ಥಟಕ್ಕನೆ ಅಲ್ಲಿ ಚುನಾವಣೆಯನ್ನು ಮುಂದಕ್ಕೆ ಹಾಕಿದರು. ಇದು ನಮ್ಮ ಜಿಲ್ಲೆಯಲ್ಲಿ ನಡೆದಿದೆ. ಇದು ನಡೆದದ್ದು ಸಿದ್ದಾಪುರದಲ್ಲಿ. ಅನಂತರ ಏತಕ್ಕೆ ಹೀಗಾಯಿತು ಎನ್ನುವುದನ್ನು ವಿಚಾರ ಮಾಡಿದಾಗ ಅಲ್ಲಿ ತಮ್ಮ ಪಾರ್ಟಿಯವರು ಬರುವುದಿಲ್ಲ ಎಂದು ತಿಳಿದು ಆ ರೀತಿ ಮಾಡಿದ್ದಾರೆ ಎಂದು ಗೊತ್ತಾಯಿತು. ಹೀಗೆ ಮಾಡಿದರೆ ಇದು ಸರಿಯಾದುದಲ್ಲ. ಲ್ಯಾಂಡ್‌ಬ್ಯಾಂಕ್‌ನಲ್ಲೇ ಆಗಲಿ, ಕೋಆಪರೇಟೀವ್ ಸೊಸೈಟಿಯಲ್ಲೇ ಆಗಲಿ ತಮ್ಮ ಪಕ್ಷದ ಜನತೆ ಬರಬೇಕು ಅಂತ ಏನೂ ಇಲ್ಲ. ಯಾರು ಪ್ರಾಮಾಣಿಕರಾಗಿ ಸೇವಾ ಮನೋಭಾವನೆಯಿಂದ ಬರುತ್ತಾರೋ ಅವರು ಬರಬೇಕು. ಈ ದೃಷ್ಟಿ ಇಟ್ಟುಕೊಳ್ಳಬೇಕು. ಏತಕ್ಕೆಂದರೆ ಈ ಕೋಆಪರೇಟೀವ್ ಸೊಸೈಟಿಗೆ ಇವರು ಏನು ಹಣ ತೊಡಗಿಸುತ್ತಾರೋ ರೈತರು ಬಹಳ ಶ್ರಮಪಟ್ಟು ಏನು ಕೆಲಸ ಮಾಡುತ್ತಾರೋ ಆ ಶ್ರಮ ಜೀವಿಯ ಹಣ ಇದು. ಈ ಒಂದು ಶ್ರಮಜೀವಿಗೆ ನೀವು ಕೊಡತಕ್ಕಂಥ ಪರಿಹಾರ ಏನು ? ಇದಕ್ಕೆ ಖರ್ಚು ಮಾಡತಕ್ಕಂಥ ಹಣವನ್ನು ಯಾರು ಕೊಡುತ್ತಾರೆ ? ಇದರ ಬಗ್ಗೆ ಒಂದು ಪತ್ರವನ್ನು ಕೋಆಪರೇಟಿವ್ ರಿಸ್ಟ್ರಾರ್‌ಗೆ ಬರೆದಿ

ದ್ದೇನೆ. ಅದರ ಒಂದು ಪ್ರತಿಯನ್ನು ತಮಗೂ ಕೊಡುತ್ತೇನೆ. ಆದರೆ ಆ ಪ್ರತಿಯನ್ನು ಈವಾಗ ಇಲ್ಲಿಗೆ ತರಲಿಲ್ಲ. ನಿಮ್ಮಿಂದ ತಪ್ಪಿಲ್ಲ, ಸಹಕಾರ ಸಂಘಗಳಿಂದ ಆದ ತಪ್ಪಲ್ಲ, ಹಾಗಿದ್ದರೂ ಕೂಡ ಈ ದಂಡಕ್ಕೆ ಯಾರು ಹೊಣೆ? ಸಹಕಾರ ಸಂಘಗಳು ಆರ್ಥಿಕವಂತರಾಗಿರಬೇಕೆಂದು ಅಪೇಕ್ಷಿಸಿ, ಸರಕಾರ ಉದ್ದೇಶ ಪೂರ್ವಕವಾಗಿ ಅಥವಾ ಯಾವುದೋ ಉದ್ದೇಶಕ್ಕಾಗಿ ಈ ಸಹಕಾರ ಸಂಘಗಳಿಗೆ ಲುಕ್ಸಾನು ಮಾಡು

೧-೦೦ ಪಿ.ಎಂ.

ವಂಥ ಪ್ರಸಂಗ ತಂದದ್ದು ಸರಿಯಾದುದಲ್ಲ. ಇನ್ನು ಮುಂದಾದರೂ ಕೂಡ ಈ ರೀತಿ ಆಗದೇ ಇರಲಿ ಎಂಬ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರೇ, ಕಳೆದ ಸಲ ಒಂದು ಶ್ಲಾಘನೀಯವಾದ ಕೆಲಸ ಮಾಡಿದರು. ಅದನ್ನು ನಾನು ತೀರಾ ಪ್ರಶಂಸೆ ಮಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಸ್ವಲ್ಪ ರಿಸರ್ವೇಷನ್ಸ್ ಇದೆ. ಅದು ಯಾವುದು ಎಂದು ಹೇಳಿದರೆ, ರೈತರಿಗೆ ಕೊಡತಕ್ಕಂಥ ಸುಸ್ತಿ ಬಡ್ಡಿ ಮನ್ನಾ ಮಾಡಿದ್ದರು. ಇದು ಒಳ್ಳೆಯ ಕೆಲಸ. ಆದರೆ ಆಗಿದ್ದು ಏನು ಎಂದು ಹೇಳಿದರೆ, ಯಾರು ಪ್ರಾಮಾಣಿಕವಾಗಿ ಸಾಲವನ್ನು ತೆಗೆದುಕೊಂಡು ಸರಿಯಾಗಿ ಉಪಯೋಗಿಸಿ, ಅದನ್ನು ಹಿಂತಿರುಗಿಸಿದರೋ ಅಂತಹವರಿಗೆ ಏನೂ ಪರಿಹಾರ ಇಲ್ಲ. ಯಾರು ತಮ್ಮ ದುಡ್ಡಿನ ಬಲದಿಂದ, ಅಧಿಕಾರದ ಬಲದಿಂದ, ಬಾಕಿ ಉಳಿಸಿ ಕೊಂಡರೋ, ಯಾರು ಡಿಕ್ರಿಯಾಗಿ. ಆಮೇಲೆ ಡಿಕ್ರಿ ಜಾರಿ ಮಾಡಲಿಕ್ಕೆ ಕೊಡಲಿಲ್ಲವೋ, ಅಂತಹವರಿಗೆ ಮಾತ್ರ ಪ್ರಯೋಜನ ಆಯಿತು. ಶಕ್ತಿವಂತರಿಗೆ ಮಾತ್ರ ಪ್ರಯೋಜನ ಆಯಿತೇ ಹೊರತಾಗಿ, ಬಡವರಿಗೆ ಇದರಿಂದ ಪ್ರಯೋಜನವಾಗಲಿಲ್ಲ. ನಮ್ಮ ಜಿಲ್ಲೆಯಲ್ಲಿ ಶೇಕಡಾ ೮೮ರಷ್ಟು ಸಾಲ ತೀರು ವಳಿಯಾಗಿದೆ. ಶೇಕಡಾ ೮೮ರಷ್ಟು ಜನ ಸಾಲ ತೀರಿಸಿದ್ದಾರೆ. ಹೇಗೆ ಇದು ಆಯಿತು ಎಂದರೆ, ಮಾನ ಮರ್ಯಾದೆ ಪ್ರಶ್ನೆ, ನಾಳೆ ಮಾನ ಹೋಗುತ್ತದೆ, ಸಹಕಾರ ಸಂಘದವರು ಬರುತ್ತಾರೆ, ಜಪ್ತಿ ಮಾಡುತ್ತಾರೆ ಎಂಬ ಉದ್ದೇಶದಿಂದ, ಮುಂದೆ ಸಾಲ ಸಿಗುವುದಿಲ್ಲ ಎಂಬ ಉದ್ದೇಶದಿಂದ ಸಹಕಾರ ಸಂಘಗಳ ಸಾಲವನ್ನು ತೀರಿಸಿರುತ್ತಾರೆ. ಅವರಿಗೇನು ಕೊಡುತ್ತೀರಿ ಸ್ವಾಮಿ ತಾವು? ಯಾರು ಪ್ರಾಮಾಣಿಕವಾಗಿ ನೀವು ಕೊಟ್ಟಂತಹ ಸಾಲವನ್ನು ಉಪಯೋಗಿಸಿದ್ದಾರೆ, ಅವರಿಗೇನು ರಿಯಾಯಿತಿ ಯನ್ನು ಕೊಟ್ಟಿದ್ದೀರಿ? ನೀವು ಯಾರು ತಪ್ಪು ಮಾಡಿದ್ದಾರೋ ಅಂತಹವರಿಗೆ ಸಹಕಾರ ಮಾಡಿ ದ್ದೀರಿ. ಹೀಗಾಗಿ ಉಳಿದ ಪ್ರಾಮಾಣಿಕ ಜನರೂ ಕೂಡಾ, ಒಂದೆರಡು ವರ್ಷ ನಾವು ಸಾಲ ಕೊಡದೆ ಇಟ್ಟುಕೊಂಡರೆ, ಆ ಸಾಲ ಪೂರ್ತಿಯಾಗಿ ವಜಾ ಆಗುತ್ತದೆಂದು ಅಭಿಪ್ರಾಯ ಪಟ್ಟುಕೊಂಡರೆ ಆಶ್ಚರ್ಯ ಆಗಬೇಕಾದುದಿಲ್ಲ. ಅದಕ್ಕೆ ಸರಕಾರವೇ ಹೊಣೆಯಾಗಬೇಕಾಗುತ್ತದೆ. ತಾವು ಇದರ ಬಗ್ಗೆ ವಿಚಾರ ಮಾಡಬೇಕು. ಯಾರಿಗೆ ಪ್ರೋತ್ಸಾಹ ಕೊಡಬೇಕು ಎಂದರೆ, ಯಾರು ಪ್ರಾಮಾಣಿಕ ವಾದ ರೈತರಿದ್ದಾರೆ, ಅಂತಹವರಿಗೆ ಕೊಡುವ ಬದಲು, ಯಾರು ಶಕ್ತಿವಂತರಿದ್ದಾರೆ ಅವರಿಗೆ ಮಾತ್ರ ಪ್ರಯೋಜನ ಮಾಡಿಕೊಡುತ್ತೀರಾ? ದುರ್ಬಲ ರೈತ ಸಾಲ ತೀರುವಳಿ ಮಾಡಿದ, ಯಾರು ಕಟ್ಟು ಬಾಕೀದಾರರಾಗಿದ್ದಾರೆ, ಅಂತವರು ಇನ್ನೂ ಕಟುಬಾಕೀದಾರರಾಗಿದ್ದಾರೆ ಅಂಥವರಿಗೆ ನೀವು ಕನ್ಸೆಷನ್ ಕೊಟ್ಟಿದ್ದೀರಿ. ಅದರ ಉಪಯೋಗ ಶ್ರೀಮಂತರಿಗೆ ಆಯಿತೇ ಹೊರತು ಬಡವರಿಗೆ ಆಗಿಲ್ಲ. ಆದಕ್ಕಾಗಿ ಪ್ರಾಮಾಣಿಕರಾಗಿರುವವರಿಗೆ ಏನು ಕೊಡುತ್ತೀರಿ? ಯಾವರೀತಿ ಅವರನ್ನು ಪುರಸ್ಕರಿ ಸುತ್ತೀರಿ? ಅವರಿಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತೀರಿ. ಅದರ ಬಗ್ಗೆ ಹೆಚ್ಚು ಗಮನಕೊಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಐದು ಪರ್ಸೆಂಟ್ ಕನ್ಸೇಷನ್ ಎಲ್ಲರಿಗೂ ಕೊಟ್ಟಿದ್ದೀರಿ. ಪ್ರಾಮಾಣಿಕವಾಗಿ ಯಾರು ಸರಿಯಾಗಿ ಸಾಲ ಉಪಯೋಗಿಸಿದ್ದಾರೆ, ಹಿಂತಿರುಗಿಸಿದ್ದಾರೆ. ಅವರಿಗೆ ಏನು ಕೊಟ್ಟಿದ್ದೀರಿ? ಇನ್ನು ಸುಸ್ತಿ ಬಡ್ಡಿ ಮನ್ನಾ ಆಯಿತು. ಸುಸ್ತಿ ಬಡ್ಡಿ ಮನ್ನಾ ಆದುದನ್ನು ಸರಕಾರ ವಹಿಸಿಕೊಳ್ಳಲಿಲ್ಲ. ಯಾವ ಟರ್ಮಿನಲ್ ಏಜೆನ್ಸಿಗಳು ಇವೆ, ಲ್ಯಾಂಡ್ ಬ್ಯಾಂಕ್, ಕೋ-ಆಪರೇಟೀವ್ ಸೊಸೈಟೀಸ್ ಅವುಗಳಿಂದ ತೆಗೆದುಕೊಂಡ ಸಾಲಕ್ಕೆ ಸುಸ್ತಿ ಬಡ್ಡಿ ಮನ್ನಾ ಮಾಡಿದರು. ಅವರಿಗೆ ಸಾಲ ಕೊಡತಕ್ಕ ಡಿಸ್ಟ್ರಿಕ್ಟ್ ಬ್ಯಾಂಕ್ಸ್, ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಏನಿದೆ ಅವರಿಗೆ ಸಂಪೂರ್ಣವಾಗಿ ಹತ್ತೂವರೆ, ಹನ್ನೊಂದುವರೆ ಪರ್ಸೆಂಟ್ ಬಡ್ಡಿ ಸೇರಿಸಿ ಸಾಲವನ್ನು ಕೊಡಬೇಕಾಗಿದೆ. ಈಗ ಏನಾಗಿದೆ, ಈ ಟರ್ಮಿನಲ್ ಏಜೆನ್ಸಿಗಳು ಏನು ಇವೆ, ಅವು ಯಾವುವು ರೈತರಿಗೆ ಹಣ ಕೊಡಬೇಕು, ರೈತರ ಸಲುವಾಗಿ ಜೀವಂತವಾಗಿರಬೇಕು. ಅಂತಹ ಸಹಕಾರ ಸಂಘಗಳು ದುರ್ಬಲ ಆಗುವಂತೆ ಮಾಡಿದ್ದಾರೆ. ಈಗ ಅವರ ಹತ್ತಿರ ಹಣ ಇಲ್ಲ. ನೀವು ಇನ್ನೂ ಅವರಿಗೆ ಹಣ ಕಟ್ಟಿ ಕೊಟ್ಟಿಲ್ಲ. ನಾನು ಅಧ್ಯಕ್ಷನಾಗಿರತಕ್ಕ ಪಿ.ಎಲ್.ಡಿ. ಬ್ಯಾಂಕ್ ಏನಿದೆ, ಅದಕ್ಕೆ ಎರಡೂ ವರೆ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಎರಡೂವರೆ ಲಕ್ಷ ರೂಪಾಯಿಗಳ ಸಾಲವನ್ನು, ಅದರ ಬಡ್ಡಿ ಭಾರವನ್ನು ಹೇರಲಿಕ್ಕೆ ಎಷ್ಟು ಕೋ-ಆಪರೇಟಿವ್ ಸೊಸೈಟಿಗಳು ಸಮರ್ಥವಾಗಿವೆ?

ಇದರ ಕಡೆಗೆ ತೀವ್ರವಾಗಿ ಗಮನಕೊಡಬೇಕೆಂದು ಹೇಳುತ್ತೇನೆ. ಸರಕಾರ ರೈತರಿಗೆ ಏನು ರಿಯಾಯಿತಿ ಕೊಟ್ಟಿದೆ, ಆ ರಿಯಾಯಿತಿಯಿಂದಾಗಿ ಸಣ್ಣ ಕೋ-ಆಪರೇಟಿವ್ ಸಂಸ್ಥೆಗಳು, ಸಹಕಾರ ಸಂಘಗಳು ನಾಶವಾಗಬಾರದು, ಎಚ್ಚರ ಇರಲಿ, ಕೋ-ಆಪರೇಟಿವ್ ಸೊಸೈಟಿಯು ಒಂದು ಕಟ್ಟಡ ಕುಸಿದು ಬೀಳುವ ಒಂದು ಸಂದರ್ಭ ಇದೆ. ಇದುವರೆಗೆ ಸರಕಾರ ಅಕ್ಕಿಗೆ ಒಂದು ಕನ್‌ಸೆಷನ್ ಕೊಟ್ಟಿದೆ. ಒಂದು ಕೆ.ಜಿ. ಅಕ್ಕಿಗೆ ೨.೪೦ ಕೊಡಬೇಕಾದುದನ್ನು ೨.೧೦ ಪೈಸೆ ಮಾಡಿದೆ, ೨.೧೦ ಪೈಸೆ ಇದ್ದುದನ್ನು ೧.೫೦ ಪೈಸೆ ಮಾಡಿದೆ ಇದನ್ನು ಏಕೆ ಮಾಡಿದರು? ಅದು ಬೇರೆ. ಅದರಲ್ಲಿ ತಕರಾರು ಇದೆ. ಅದಕ್ಕೆ ಇದು ಸಂದರ್ಭ ಅಲ್ಲ. ಈ ಒಂದು ತೀರುವಳಿಗೆ ಕನ್ಸೆಷನ್ ಏನು ಕೊಟ್ಟಿದ್ದಾರೆ ಅದು ಗ್ರಾಹಕರಿಗೂ ಉಂಟು. ನಿಮ್ಮ ಟಿ.ಎ.ಪಿ.ಸಿ.ಎಂ.ಎಸ್. ಏನಿದೆ ಅದು ಬಹಳ ಕಷ್ಟಕ್ಕೆ ಸಿಕ್ಕಿದೆ. ಒಂದು ಕ್ವಿಂಟಾಲ್‌ಗೆ ೩೦ ರೂಪಾಯಿಗಳನ್ನು ಭರಿಸತಕ್ಕಂಥ ಟಿ.ಎ.ಪಿ.ಸಿ.ಎಂ.ಎಸ್.ಗಳಿಗೆ ತಾವು ಹಣವನ್ನು ಕೊಟ್ಟಿಲ್ಲ. ಅವರು ಏನು ಖರೀದಿ ಮಾಡಬೇಕು? ಭತ್ತ ಖರೀದಿ ಮಾಡಿ, ಅಕ್ಕಿ ಖರೀದಿ ಮಾಡಿ ಎಂದು ಆರ್ಡರ್ ಕೊಡುತ್ತಾರೆ. ಡಿ.ಸಿ. ಮುಖಾಂತರ ಇಷ್ಟು ದಿವಸದಲ್ಲಿ ಮಾಡಬೇಕು, ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ ಎಂದು ಕಳುಹಿಸುತ್ತಾರೆ. ಸ್ವಾಮಿ, ಅವರು ಹಣವನ್ನು ಎಲ್ಲಿಂದ ತರಬೇಕು? ಅವರ ಹಣವನ್ನು ಡಿಸ್ಟ್ರಿಕ್ಟ್ ಬ್ಯಾಂಕ್‌ನಿಂದ ತರುತ್ತಾರೆ, ಅದಕ್ಕೆ ಬಡ್ಡಿ ಕೊಡಬೇಕು, ಬಡ್ಡಿ ಹಣ ಲಕ್ಷಾಂತರ ರೂಪಾಯಿಗಳು ಆಗುತ್ತದೆ. ಅದಕ್ಕಾಗಿ ಎಲ್ಲ ಟಿ.ಎ.ಪಿ.ಸಿ.ಎಂ.ಎಸ್.ಗಳೂ ಬಹಳ ಕಷ್ಟದಲ್ಲಿದ್ದಾರೆ. ಅದಕ್ಕಾಗಿ ಇದನ್ನೂ ಕೂಡ ತಾವು ಸೂಕ್ತ ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಈ ಕಷ್ಟವನ್ನು ಪರಿಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಟಿ.ಎ.ಪಿ.ಸಿ.ಎಂ.ಎಸ್. ಬಗ್ಗೆ ಇನ್ನೊಂದು ವಿಷಯ ಹೇಳುತ್ತೇನೆ. ಕೆಲವರಿಗೆ ಸಿಮೆಂಟ್ ತರಲಿಕ್ಕೆ ಪರ್ಮಿಷನ್ ಸಿಗುತ್ತದೆ, ಕೆಲವರಿಗೆ ಅಕ್ಕಿ ತರಲಿಕ್ಕೆ ಪರ್ಮಿಷನ್ ಸಿಗುತ್ತದೆ. ಇದರಲ್ಲಿ ಎರಡೂ ಮೂರು ಡಿಪಾರ್ಟ್‌ಮೆಂಟ್ಸ್ ನಡುವೆ ಒಂದು ಕೋ-ಆರ್ಡಿನೇಷನ್ ಇಲ್ಲ. ಅಲ್ಲಿ ಕೊಡುತ್ತಾರೆ ಎಂದು ಒಬ್ಬರು ಹೇಳುತ್ತಾರೆ, ಅಲ್ಲಿಗೆ ಹೋದರೆ ಇಲ್ಲ ಎಂದು ಹೇಳುತ್ತಾರೆ. ಸಿಮೆಂಟ್ ಲಾರಿ ಬರಬೇಕಾದರೆ ನಾಲ್ಕಾರು ದಿವಸ ಆಗುತ್ತದೆ. ಸಿಮೆಂಟ್‌ಗೆ ಕೊಟ್ಟಂಥ ಡ್ರಾಫ್ಟನ್ನು ಮೂರು ನಾಲ್ಕು ತಿಂಗಳು ಇಟ್ಟುಕೊಂಡು ಲಾರಿ ಬರಲಿಲ್ಲ ಎಂದು ವಾಪಸ್ ಮಾಡುತ್ತಾರೆ. ಈ ಮೂರು ನಾಲ್ಕು ತಿಂಗಳುಗಳಿಗೆ ಅಗತಕ್ಕ ಬಡ್ಡಿ ಹಣವನ್ನು ಯಾರ ಮೇಲೆ ಹಾಕಬೇಕು? ಗ್ರಾಹಕ ಸಂಘಗಳು ತೆಗೆದುಕೊಳ್ಳಬೇಕು, ಜನರ ಮೇಲೆ ಹಾಕಿದರೆ ಹೇಗೆ ಮಾಡುತ್ತಾರೆ? ಇದನ್ನು ಸಹಕಾರ ಸಂಘಗಳು ಹೊತ್ತಾಗ ಅವು ಸಹ ದಿವಾಳಿಯಾಗುತ್ತವೆ. ಅದಕ್ಕಾಗಿ ಈ ಡಿಪಾರ್ಟ್‌ಮೆಂಟ್‌ಗಳ ನಡುವೆ ಕೋ-ಆರ್ಡಿನೇಷನ್ ಇರಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರೇ, ಅನೇಕ ಗ್ರಾಹಕ ಸಹಕಾರ ಸಂಘಗಳು ಸರ್ಕಾರದಿಂದ ಬಂದಿರತಕ್ಕಂಥ ಪಡಿತರವನ್ನು ವಿತರಣೆ ಮಾಡುತ್ತಾರೆ. ಪಡಿತರ ವಿತರಣೆಗೆ ಇನ್ಸಿಡೆಂಟಲ್ ಚಾರ್ಜ್ ಎಂದು ಕೊಡುತ್ತೀರಿ. ಇದು ಸಣ್ಣ ವಿಷಯ. ಆದರೂ ಕೂಡ ಸಹಕಾರ ಸಂಘಗಳ ಜೀವಾಳದ ದೃಷ್ಟಿಯಿಂದ ಇದು ಅತೀ ಮುಖ್ಯವಾದುದು ಎಂದು ನಾನು ಇದನ್ನು ಹೇಳುತ್ತಿದ್ದೇನೆ. ಇನ್ಸಿಡೆಂಟಲ್ ಚಾರ್ಜ್‌ನಲ್ಲಿ ಹಮಾಲಿ ಕೂಲಿ ಸಹ ಬರುತ್ತದೆ. ಇದನ್ನು ನಾಲ್ಕು ವರ್ಷಗಳ ಹಿಂದೆ ಏನು ಕೂಲಿ ಇತ್ತೊ ಅದರ ಆಧಾರದ ಮೇಲೆ ಕೊಡುತ್ತಿದ್ದಾರೆ. ಈಗ ನಾಲ್ಕು ವರ್ಷಗಳ ಹಿಂದೆ ಇದು ಎಷ್ಟಿತ್ತೋ ಅದರ ಮೂರು ನಾಲ್ಕುಪಟ್ಟು ಈಗ ಜಾಸ್ತಿಯಾಗಿದೆ. ಇದರಿಂದ ಗ್ರಾಹಕರಿಗೆ ಸಿಗತಕ್ಕಂಥ ವಸ್ತುಗಳನ್ನು ಒದಗಿಸಲಿಕ್ಕೆ ಸಹಕಾರ ಸಂಘಗಳು ಬಹಳ ಕಷ್ಟದಲ್ಲಿವೆ. ಎಲ್ಲಾ ಸಹಕಾರ ಸಂಘಗಳೂ ಸೇರಿ ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರೆ ಸರ್ಕಾರ ಮಂತ್ರಿಗಳು, ಆಹಾರ ಮಂತ್ರಿಗಳು ಇಬ್ಬರಿಗೂ ಕಳುಹಿಸಿದ್ದೇವೆ, ಇಬ್ಬರೂ ಕೂಡ ಆಕ್ಷನ್ ತೆಗೆದುಕೊಂಡಿಲ್ಲ. ದಯವಿಟ್ಟು ಇವರಬಗ್ಗೆ ಆಕ್ಷನ್ ತೆಗೆದು ಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಕೆಲವೊಂದು ಭಾಗಗಳಲ್ಲಿ ಅತಿವೃಷ್ಟಿಯಿಂದ ಅಪಾರವಾದ ಹಾನಿಯಾಗಿದೆ. ಉದಾಹರಣಾರ್ಥವಾಗಿ ಮಲೆನಾಡು ಪ್ರದೇಶಗಳಲ್ಲಿ ಅತಿವೃಷ್ಟಿಯಿಂದ ಅಡಿಕೆ ಬೆಳೆಗೆ ತುಂಬಾ ಹಾನಿಯಾಗಿದೆ. ಅದೇರೀತಿ ಗುಲ್ಬರ್ಗದಲ್ಲಿ ಅತಿವೃಷ್ಟಿಯಿಂದ ಸಾಕಷ್ಟು ಹಾನಿಯಾಗಿದೆ. ಅಂತಹ ಭಾಗಗಳಲ್ಲಿ ಸರ್ಕಾರದವರು ಪರಿಹಾರ ಕಾರ್ಯಗಳ ವಿಚಾರದಲ್ಲಿ ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಐ.ಆರ್.ಡಿ.ಪಿ. ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಲ ಕೊಡುವ ಮುನ್ನ ಈ ಯೋಜನೆಯ ವ್ಯಾಪ್ತಿಗೆ ಯಾರು ಯಾರು ಬರುತ್ತಾರೆನ್ನುವ ಬಗ್ಗೆ ಒಂದು ಪ್ರಾಥಮಿಕ ಸಮೀಕ್ಷೆ ನಡೆಯುತ್ತದೆ. ಸಾಲ ಪಡೆಯುವುದಕ್ಕೆ ಯಾರು ಅರ್ಹರು

ಎಂದು ತೀರ್ಮಾನ ಮಾಡಬೇಕಾಗುತ್ತದೆ. ನಾನು ಕೂಡ ಒಂದು ಕಡೆ ಕ್ಯಾಂಪ್‌ಗೆ ಹೋಗಿದ್ದೆ, ಅಲ್ಲಿ ಒಂದು ತಕರಾರು ಬಂತು. ಟರ್ಲಿನ್ ಪ್ಯಾಂಟು ಹಾಕಿಕೊಂಡಿರುವವರಿಗೆ ಸಾಲ ಕೊಡುವುದಿಲ್ಲ ಎನ್ನುವ ಮಾತು ಬಂತು. ಸ್ವಾಮಿ, ಸಾಲ ತೆಗೆದುಕೊಳ್ಳುವವರೆಲ್ಲರೂ ಲಂಗೋಟಿ ಉಟ್ಟುಕೊಂಡು ಐ.ಆರ್.ಡಿ.ಪಿ. ಕ್ಯಾಂಪ್‌ಗೆ ಬರಬೇಕೇ ? ತಾಲ್ಲೂಕು ಅಭಿವೃದ್ಧಿ ಮಂಡಲಿಯ ಕಛೇರಿಯಿಂದ ಸಾಲ ಪಡೆಯುವವರ ಪಟ್ಟಿ ಸಮೇತ ಆದೇಶ ಹೋದಕೂಡಲೇ ಬ್ಯಾಂಕ್‌ಗೆ ಕಳುಹಿಸುತ್ತಾರೆ. ಬ್ಯಾಂಕ್‌ನಲ್ಲಿ ಯಾವುದೋ ಕಾರಣಕ್ಕಾಗಿ ನಿಧಾನ ಮಾಡುತ್ತಾರೆ. ಅಲ್ಲದೆ, ಸಾಲ ಪಡೆಯುವವರು ಅನೇಕ ಮಟ್ಟದಲ್ಲಿ ಕಮೀಷನ್ ಕೊಡದೇ ಹೋದರೆ ಸಾಲ ಕೊಡುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಈ ವಿಚಾರದಲ್ಲಿ ಬ್ಯಾಂಕ್‌ಗಳ ಅಧ್ಯಕ್ಷರುಗಳಿಗೆ ಪತ್ರ ಬರೆದು, ಬ್ಯಾಂಕುಗಳ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ, ಬಡವರಿಗೆ ಸಿಗುವಂತ ಸಾಲ ತಡವಾಗದಂತೆ ಕಾಲಕ್ಕೆ ಸರಿಯಾಗಿ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸಾಲ ಕೊಡುವುದು ನಿಶ್ಚಯವಾದ ನಂತರ ಇಂಥ ದಿವಸ ಬನ್ನಿ ಸಾಲ ಕೊಡುತ್ತೇವೆಂದು ಹೇಳಬೇಕು. ಇವತ್ತು ಬಾ, ನಾಳೆ ಬಾ, ನಾಡಿದ್ದು ಬಾ ಎಂದು ಹಳ್ಳಿಯ ಜನರನ್ನು ವಿನಾಕಾರಣ ಓಡಾಡಿಸುವಂಥಾದ್ದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಸರ್ಕಾರ ಇವುಗಳ ವಿಚಾರದಲ್ಲಿ ಹಠತೊಟ್ಟಿ ಇಟ್ಟುಕೊಳ್ಳದೇ ಹೋದರೆ ಈ ಯೋಜನೆಯಿಂದ ನಿಜವಾಗಿ ಯಾರಿಗೆ ಫಲ ದೊರೆಯಬೇಕೋ ಅವರಿಗೆ ದೊರೆಯದೇ, ಹಣವಂತರಿಗೆ ಮಾತ್ರ ಹಣ ಸಿಗುತ್ತದೆ, ಸಮಾಜದಲ್ಲಿರುವಂಥ ದೀನದಲಿತರಿಗೆ ಇದರಿಂದ ಉಪಯೋಗವಾಗುವುದಿಲ್ಲ, ಕೊನೆಗೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್.ಜಿ. ಚನ್ನಪ್ಪ (ಮಾಗಡಿ). – ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಸಹಕಾರಿ ಸಂಘಗಳ ವಿಷಯದಲ್ಲಿ ನಮ್ಮ ಸರ್ಕಾರದವರು ತೆಗೆದುಕೊಂಡಿರತಕ್ಕ ತೀರ್ಮಾನವನ್ನು ಮೆಚ್ಚಬೇಕಾಗಿದೆ. ಮೂರು ವರ್ಷಗಳ ಅವಧಿ ಆದ ತಕ್ಷಣ ಪುನಃ ಒಂದು ಅವಧಿ ಬಿಟ್ಟು ಚುನಾವಣೆಗೆ ನಿಲ್ಲಬೇಕು ಎಂದು ಮಾಡಿರುವುದು ನಿಜವಾಗಿಯೂ ಸ್ತುತ್ಯಾರ್ಹವಾದಂಥ ಕೆಲಸ. ಇದರಿಂದ ಸಹಕಾರಿ ಸಂಘಗಳಲ್ಲಿ ಆಗತಕ್ಕಂಥ ಅನ್ಯಾಯಗಳನ್ನು ಮತ್ತು ಲೋಪದೋಷಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಕಳೆದ ೩೫ ವರ್ಷಗಳಲ್ಲಿ ಸಹಕಾರಿ ರಂಗ ಯಾವರೀತಿ ಬೆಳೆದುಬಂದಿದೆ ಎನ್ನುವ ಬಗ್ಗೆ ಅವಲೋಕನ ಮಾಡಿದರೆ, ಎಲ್ಲಾ ಹಾಳಾಗಿ ಕುಲಗೆಟ್ಟು ಹೋಗಿವೆ. ಸಹಕಾರಿ ಸಂಸ್ಥೆಗಳಲ್ಲಿ ಖದೀಮರು ಇದ್ದುಕೊಂಡು ಡಿಫಾಲ್ಟರ್ ಆಗಿದ್ದರೂ ಡಿಫಾಲ್ಟರ್ ಆಗಿಲ್ಲವೆಂದು ಬರೆದುಕೊಳ್ಳುತ್ತಾರೆ. ಖಾಯಂ ಆಗಿ ೫ ವರ್ಷ ೧೦ ವರ್ಷ ೨೦ ವರ್ಷಗಳವರೆಗೆ ಕುರ್ಚಿಗಳನ್ನು ಭದ್ರವಾಗಿ ಹಿಡಿದುಕೊಂಡು ಮನೆ ಸ್ವತ್ತನ್ನು ಮಾಡಿಕೊಂಡಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಇಂಥವರಿಂದ ಸಹಕಾರಿ ಸಂಸ್ಥೆಗಳು ಹಾಳಾಗಿ ಹೋಗಿವೆ. ಇಂಥವರಿಂದ ಇವತ್ತು ಸಾರ್ವಜನಿಕರಿಗೆ ಯಾವ ಸಹಾಯ ಮತ್ತು ಸವಲತ್ತುಗಳು ಸಿಗುತ್ತಿಲ್ಲ. ನಮ್ಮ ನೆರೆರಾಜ್ಯವಾದ ತಮಿಳುನಾಡಿನಲ್ಲಿ ಸಹಕಾರಿ ಸಂಸ್ಥೆಗಳು ಯಶಸ್ವಿಯಾಗಿ ಕೆಲಸ ಮಾಡಿವೆ. ಅವುಗಳಿಂದ ದೇಶಕ್ಕೆ ಸಾಕಷ್ಟು ಪ್ರತಿಫಲ ದೊರಕಿದೆ. ಸಹಕಾರಿ ಪದ್ಧತಿ ಪ್ರಕಾರ ದೇಶದ ಏಳಿಗೆಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಹಕಾರಿ ಸಂಸ್ಥೆಗಳಲ್ಲಿ ಹಣ ಲೂಟಿ ಮಾಡಿರುವ ಡೈರೆಕ್ಟರುಗಳ ಮೇಲೆ, ಅಧ್ಯಕ್ಷರುಗಳ ಮೇಲೆ ಸೂಕ್ತವಾದಂಥ ಕ್ರಮ ತೆಗೆದುಕೊಂಡು ಅವರಿಂದ ಬರಬೇಕಾದ ಹಣವನ್ನು ವಸೂಲು ಮಾಡದೇ ಹೋದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಹಣ ವಸೂಲು ಮಾಡುವುದರ ಜೊತೆಗೆ ತಪ್ಪಿತಸ್ಥರಿಗೆ ಉಗ್ರವಾದ ಶಿಕ್ಷೆ ಕೊಡಬೇಕೆಂದು ಹೇಳುತ್ತೇನೆ. ಇದರಿಂದ ಮುಂದೆ ಸೊಸೈಟಿಗಳಲ್ಲಿ ಬರತಕ್ಕ ಆಡಳಿತ ವರ್ಗದವರಿಗೆ ಭಯ ಭೀತಿ ಬಂದು ಉತ್ತಮ ಮಾರ್ಗದಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಸೊಸೈಟಿಗಳ ಮೂಲಕ ರೈತರಿಗೆ ಗೊಬ್ಬರ ಒದಗಿಸತಕ್ಕ ಯೋಜನೆಯನ್ನು ನಮ್ಮ ಸರ್ಕಾರದವರು ಹಾಕಿಕೊಂಡಿದ್ದಾರೆ. ಇದು ಕೂಡ ಬಹಳ ಸ್ತುತ್ಯಾರ್ಹವಾದ ಕೆಲಸ. ಇನ್ನು ರೈತರಿಗೆ ಪಟ್ಟಾಗಳನ್ನು ಕೊಟ್ಟ ತಕ್ಷಣ ಹಣ ಕೊಡುವಂಥ ವ್ಯವಸ್ಥೆ ಮಾಡಬೇಕು. ಅದೇರೀತಿ ವ್ಯವಸಾಯದ ಸಲಕರಣೆಗಳನ್ನು ಒದಗಿಸುವ ಯೋಜನೆಯನ್ನು ಕೂಡ ನಿಗದಿಯಾದಂಥ ಕಾಲದಲ್ಲಿ ಮಾತ್ರ ರೈತರಿಗೆ ಒದಗಿಸಿದರೆ ಸದ್ವಿನಿಯೋಗವಾಗುತ್ತದೆಯೋ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೊರತು. ಇಲ್ಲದೇ ಹೋದರೆ ಅದರಿಂದ ಯಾವ ಉಪಯೋಗವಾಗುವುದಿಲ್ಲವೆಂದು ಹೇಳಬಯಸು ತ್ತೇನೆ. ಬೆಳೆ ಕಟಾವು ಮಾಡತಕ್ಕಂಥ ಕಾಲದಲ್ಲಿ ಬೆಳೆ ಸಾಲ ಕೊಡುತ್ತಾರೆ, ಸ್ವಲ್ಪ ಭಾಗ ಗೊಬ್ಬರ ಉಳಿಕೆ ಹಣವನ್ನು ನಗದಾಗಿ ಕೊಡುತ್ತಾರೆ. ಕಾಲಮೀರಿ ಸಾಲ ಕೊಡುವುದರಿಂದ, ರೈತರು ಕಡಿಮೆ ಬೆಲೆಗೆ ಗೊಬ್ಬರಗಳನ್ನು ಅಂಗಡಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿಕೊಳ್ಳುತ್ತಾರೆ. ಇದರಿಂದ ಹಣ ದುರುಪಯೋಗವಾಗಿ, ರೈತರಿಗೆ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಶಕ್ತಿ ಇಲ್ಲದೇ ಸೊಸೈಟಿಗಳು ಡಿಫಾಲ್ಟರ್ ಆಗುವಂಥ ಪರಿಸ್ಥಿತಿ ಬರುತ್ತದೆ. ರೈತರಿಗೆ ಕೊಡತಕ್ಕಂಥ ಸಾಲವನ್ನು ಸಕಾಲದಲ್ಲಿ ಮಂಜೂರು ಮಾಡಬೇಕು. ಸಂಬಂಧಪಟ್ಟ ಬ್ಯಾಂಕಿನ ಅಧಿಕಾರಿಗಳು ಪಟ್ಟೆ ಆಧಾರದ ಮೇಲೆ ಸಾಲ ಕೊಡಬೇಕೆಂದರೂ ಅವರು ಒಪ್ಪುವುದಿಲ್ಲ, ಈ ವಿಚಾರದಲ್ಲಿಯೂ ಸೂಕ್ತ ತಿಳುವಳಿಕೆಯನ್ನು ನೀಡಬೇಕೆಂದು ಸೂಚಿಸುತ್ತೇನೆ.

ಇವತ್ತು ರೈತರಿಗೆ ಪಟ್ಟಾ ಖಾತೆ ಸರಿಯಾಗಿದ್ದರೆ ಅದರ ಆಧಾರದ ಮೇಲೆ ಸಾಲ ವಗೈರೆ ತಕ್ಷಣವೇ ಒದಗಿಸಬೇಕೆಂದು ಇದೆ, ಅದರಂತೆ ಮಾಡುವುದಾದರೆ ನಿಜವಾಗಿಯೂ ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಆಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಅಡಮಾನ ಬ್ಯಾಂಕ್‌ಗಳಲ್ಲಿ ಸಾಲವನ್ನು ಮರುಪಾವತಿ ಮಾಡಿದರೂ ಕೂಡ ಪುನಃ ಅವನಿಗೆ ಸಾಲ ಬೇಕಾಗಿದ್ದರೆ ಕೊಡುತ್ತಿಲ್ಲ. ಕೆಲವರಿಗೆ ಮಾತ್ರ ಅಂದರೆ ತಮಗೆ ಬೇಕಾದವರಿಗೆ ಮಾತ್ರ ದಾಕ್ಷಿಣ್ಯಕ್ಕೆ ಮಂಜೂರು ಮಾಡಿಕೊಡು ತ್ತಿದ್ದಾರೆ. ಇಲ್ಲದೇ ಹೋದರೆ ಸಾಲವನ್ನು ಸರಿಯಾಗಿ ಮಂಜೂರು ಮಾಡಿಕೊಡುವುದಿಲ್ಲ. ಇನ್ನು ಬಾವಿ ಸಾಲ ಕೊಡುವ ಬಗ್ಗೆ ಒಂದು ಕಾನೂನು ಇದೆ. ಅದನ್ನು ಹೊಸಕೋಟೆ, ದೇವನಹಳ್ಳಿ ಭಾಗಕ್ಕೆ ಅನ್ವಯಿಸಿಕೊಂಡು ಪ್ರತಿ ಅರ್ಧ ಮೈಲಿ ದೂರದಲ್ಲಿರತಕ್ಕವರಿಗೂ ಸಹ ಸಾಲವನ್ನು ಮಂಜೂರು ಮಾಡುತ್ತಿಲ್ಲ. ಕಾನೂನಿನಲ್ಲಿ ಏನಿದೆ ಎಂದರೆ ಬಾವಿಗಳನ್ನು ಹತ್ತಿರ ಹತ್ತಿರ ತೆಗೆಯಲು ಅವಕಾಶವನ್ನು ಕೊಟ್ಟರೆ ನೀರು ಬರುವುದಿಲ್ಲ, ಆ ಭಾಗದಲ್ಲಿ ಜಲಾಂಶ ಕಡಿಮೆ ಇದೆ ಆದುದರಿಂದ ಅದಷ್ಟು ದೂರ ದೂರಕ್ಕೆ ಬಾವಿಗಳನ್ನು ತೆಗೆಯಲು ಸಾಲ ಮಂಜೂರು ಮಾಡಿ ಎಂದು ಇದೆ. ಆದರೆ ಇದನ್ನೇ ಅವರು ದುರುಪಯೋಗ ಪಡಿಸಿಕೊಂಡು ಕ್ವೈರಿ ಹಾಕಿ ಅರ್ಧ ಮೈಲಿ ದೂರದಲ್ಲಿದ್ದರೂ ಸಹ ಸಾಲವನ್ನು ಮಂಜೂರು ಮಾಡುತ್ತಿಲ್ಲ. ಆದರೆ ತಮಗೆ ಬೇಕಾದವರು ಇದ್ದರೆ ನೂರು ಗಜ ದೊಳಗೇ ಎರಡು ಮೂರು ಬಾವಿಗಳಿದ್ದರೂ ಸಹ ಸಾಲವನ್ನು ಮಂಜೂರು ಮಾಡಿದ್ದಾರೆ. ಆದುದರಿಂದ ಇಂಥಾ ಪರಿಸ್ಥಿತಿ ಹೋಗಬೇಕು, ಇಂಥಾ ಕಾನೂನನ್ನು ಯಾವ ಯಾವ ಪ್ರದೇಶದಲ್ಲಿ ಅನ್ವಯಿಸಬೇಕೋ ಅಂಥಾ ಕಡೆಗಳಲ್ಲಿ ಮಾತ್ರ ಜಾರಿಗೆ ತಂದು, ಹೆಚ್ಚಿಗೆ ಜನರಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳವರಲ್ಲಿ ಒತ್ತಾಯ ಮಾಡುವುದಕ್ಕೆ ಬಯಸುತ್ತೇನೆ. ಇನ್ನು ಬಾವಿ ಫೇಲ್ಯೂರ್ ಆಗಿರತಕ್ಕವರಿಗೆ ಹಣವನ್ನು ವಾಪಸ್ಸು ಮಾಡುವ ಬಗ್ಗೆ ಅವರು ೫೦ ಸಾರಿ ತಿರುಗುವ ಬದಲು, ಒಂದು ಸಾರಿ ಬಾವಿ ಫೇಲ್ಯೂರ್ ಆಗಿದೆ ಎಂದು ಗೊತ್ತಾದ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳು ಹೋಗಿ ನೋಡಿಕೊಂಡು ಬಂದು ಕೂಡಲೇ ಅವನಿಗೆ ಬಾವಿ ಸಾಲವನ್ನು ಮನ್ನಾ ಮಾಡುವುದು ಒಳ್ಳೆಯದು ಆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸು ತ್ತೇನೆ. ಇನ್ನು ಗೋಡೌನ್‌ಗಳನ್ನು ಕಟ್ಟುವ ಬಗ್ಗೆ ಹೇಳುವುದಾದರೆ. ಕೆಲವೊಂದು ಸೊಸೈಟಿಗಳ ವರೆಗೆ ಗೋಡೌನ್ ಕಟ್ಟಲು ಮಂಜೂರು ಮಾಡಿದ್ದೀರಿ, ಆದರೆ ಕಳೆದ ೧೦ ವರ್ಷವಾದರೂ ಆ ಗೋಡೌನ್‌ಗಳು ಕಂಪ್ಲೀಟ್ ಆಗಿಲ್ಲ. ಆದುದರಿಂದ ಅವುಗಳನ್ನು ಕೂಡಲೇ ಕಂಪ್ಲೀಟ್ ಮಾಡುವ ಬಗ್ಗೆ ಸರ್ಕಾರದವರು ಆಸಕ್ತಿ ವಹಿಸಿ ಅವುಗಳನ್ನು ಕೂಡಲೇ ಕಂಪ್ಲೀಟ್ ಮಾಡಿಸಬೇಕೆಂದು ಒತ್ತಾಯ ಮಾಡಬಯಸುತ್ತೇನೆ.

ಇನ್ನು ರೈತರು ಕೊಡತಕ್ಕ ಸಾಲವನ್ನು ಮುಂದಕ್ಕೆ ಹಾಕಿದ್ದೀರಿ ಸಂತೋಷ ಆದರೆ ರೈತರು ಮಳೆಯನ್ನೇ ಆಶ್ರಯಿಸಿಕೊಂಡಿರತಕ್ಕವರು. ಅಂಥಾದ್ದರಲ್ಲಿ ಮಳೆಯೇ ಬಾರದೆ ಇದ್ದರೆ, ಅವರು ಸಾಲವನ್ನು ಹೇಗೆ ತೀರಿಸುವುದಕ್ಕೆ ಸಾಧ್ಯವಾಗುತ್ತದೆ ? ಮಳೆ ಬರಲಿಲ್ಲ, ಬಿತ್ತನೆ ಆಗಲಿಲ್ಲ, ಇನ್ನು ನೀವು ಕೊಟ್ಟಂಥ ಸಾಲವನ್ನು ಅವನು ಎಲ್ಲಿಂದ ತಂದು ಕೊಡುತ್ತಾನೆ ? ಆದುದರಿಂದ ಇಂಥಾ ಸಂದರ್ಭದಲ್ಲಿ ಅವನಿಗೆ ಏನು ಒಂದು ರಿಯಾಯಿತಿಯನ್ನು ಕೊಡಬೇಕೋ ಅದನ್ನು ಅವನಿಗೆ ಕೊಡಲೇ ಬೇಕು. ಆದುದರಿಂದ ಅವನು ಸಾಲ ಮರುಪಾವತಿ ಮಾಡುವ ಬಗ್ಗೆ ವ್ಯವಸ್ಥೆ ಮಾಡಬೇಕು ಮತ್ತು ಸಾಲದ ಬಡ್ಡಿ ಹೊರೆಯನ್ನೂ ಸಹ ಕಡಿಮೆ ಮಾಡಬೇಕು. ಇವತ್ತು ರೈತರಿಗೆ ೪–೫ ಎಕರೆ ಜಮೀನು ಇರುವುದರಿಂದ ಅವನು ಸಾಲವನ್ನು ಇವತ್ತಲ್ಲ ನಾಳೆಯಾದರೂ ತೀರಿಸುತ್ತಾನೆ. ಅದೇ ನೀವು ಒಬ್ಬ ಕೈಗಾರಿಕೋದ್ಯಮಿ ಕೇವಲ ೩೫–೪೦ ಸೈಟ್‌ನಲ್ಲಿ ಒಂದು ಜಂಕ್‌ಷೀಟ್ ಹಾಕಿಕೊಂಡು ಕಾರ್ಖಾನೆ ಮಾಡುತ್ತೇನೆಂದರೆ ಲಕ್ಷಾಂತರ ರೂಪಾಯಿಗಳ ಸಾಲವನ್ನು ಕೊಡುತ್ತೀರಿ. ಅವನು ಸಾಲವನ್ನು ಕೊಡುತ್ತೀರಿ. ಅವನು ಸಾಲವನ್ನು ಮರುಪಾವತಿ ಮಾಡದೇ ಕೈಎತ್ತಿ ಓಡಿ ಹೋದನೆಂದರೆ

ಅಂಥವರನ್ನು ತಾವು ನಂಬಿ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತೀರಿ. ಆದರೆ ಇವತ್ತು ರೈತ ಶಾಶ್ವತವಾಗಿ ಅಲ್ಲಿರತಕ್ಕವನು, ಅವನಿಗೆ ೫–೧೦ ಎಕರೆ ಜಮೀನು ಇರುತ್ತದೆ, ಅವನು ಒಂದು ವೇಳೆ ಸಾಲ ಕಟ್ಟಲು ಆಗದಿದ್ದರೆ ಅವನ ಜಮೀನು ಬೆಲೆ ಬಾಳುವಂಥಾದ್ದು ಇರುತ್ತದೆ. ಆದುದರಿಂದ ಇಂಥಾ ರೈತರಿಗೆ ತಾವು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕು. ಆದುದರಿಂದ ರೈತ ಸಂಘದವರು ಏನು ಬೇಡಿಕೆಯನ್ನು ಇಟ್ಟು ಕೇಳುತ್ತಿದ್ದಾರೆ, ಅದನ್ನು ಅವರು ಕೇಳುವುದಕ್ಕಿಂತ ಮುಂಚಿತವಾಗಿ ನೀವೇ ಎಲ್ಲಾ ಸಹಾಯ ಸೌಲಭ್ಯಗಳನ್ನು ಕೊಟ್ಟರೆ ಅವರು ನಿಮ್ಮನ್ನು ಕೇಳುವುದಕ್ಕೆ ಅವಕಾಶವಿರುವುದಿಲ್ಲ. ಆ ದೃಷ್ಟಿಯಿಂದ ತಾವು ಆಲೋಚನೆ ಮಾಡಿ ಕಡಿಮೆ ಬಡ್ಡಿ ದರದಲ್ಲಿ ಹೆಚ್ಚಿನ ಕಂತುಗಳಲ್ಲಿ ಸಾಲವನ್ನು ಮರುಪಾವತಿ ಮಾಡತಕ್ಕ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಬೋರ್‌ವೆಲ್‌ಗಳ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಆದರೆ ಅವುಗಳಲ್ಲಿ ನೂರಕ್ಕೆ ಎಪ್ಪತ್ತೈದು ಭಾಗದಷ್ಟು ಕೆಟ್ಟು ಹೋಗಿವೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಸಿಬ್ಬಂದಿ ವರ್ಗದವರು ಇಲ್ಲ. ಇರತಕ್ಕಂಥ ಒಬ್ಬ ಮೆಕಾನಿಕ್ ಎಷ್ಟು ಊರುಗಳಿಗೆ ಅವನು ತಿರುಗಾಡಿ ರಿಪೇರಿ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಅವನಿಗೆ ವಾಹನ ಸೌಲಭ್ಯವನ್ನು ಒದಗಿಸಿ ಕೊಟ್ಟು ೪–೫ ಜನರನ್ನು ಅವನಿಗೆ ಅಸಿಸ್ಟೆಂಟ್‌ಗಳನ್ನಾಗಿ ಕೊಟ್ಟರೆ, ಅವನು ಕೆಟ್ಟು ಹೋದ ಕಡೆಗಳಲ್ಲಿ ಕೂಡಲೇ ಸರಿಪಡಿಸಿ ಜನರಿಗೆ ನೀರಿನ ಸೌಲಭ್ಯವನ್ನು ಒದಗಿಸಿ ಕೊಡುವುದಕ್ಕೆ ಅವಕಾಶವಾಗುತ್ತದೆ. ಒಂದೊಂದು ಇಲಾಖೆಯವರೂ ಒಂದೊಂದು ದಿವಸ ವಾಹನ ಸೌಕರ್ಯವನ್ನು ಒದಗಿಸಿ ಕೊಡುತ್ತಾರೆಂದು ವರದಿಯಲ್ಲಿ ಹೇಳಿದ್ದೀರಿ. ಆದರೆ ಯಾವ ಇಲಾಖೆಯವರೂ ಸಹ ಅಲ್ಲಿ ಕೊಡುತ್ತಿಲ್ಲ. ಅಧಿಕಾರಿಗಳು ನಿಮ್ಮ ಹತ್ತಿರವೇನೋ ಒಪ್ಪಿಕೊಂಡು ಬಿಡುತ್ತಾರೆ. ಆದರೆ ಅವರು ಆ ರೀತಿಯಾಗಿ ವಾಹನವನ್ನು ಕೊಡುತ್ತಿಲ್ಲ. ಆದುದರಿಂದ ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಂಡು ವಾಹನ ಸೌಕರ್ಯದ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಕೊನೆಯದಾಗಿ ದೊಡ್ಡ ದೊಡ್ಡ ಹಳ್ಳಿಗಳಿಗೆ ೩–೪ ಬೋರ್‌ವೆಲ್‌ಗಳನ್ನು ಹಾಕಿದರೆ ಸಾಕಾಗುವುದಿಲ್ಲ. ಆದುದರಿಂದ ರೂರಲ್ ವಾಟರ್ ಸಪ್ಲೈ ಸ್ಕೀಂನಿಂದ ನಲ್ಲಿಗಳ ಮುಖಾಂತರವಾಗಿ ನೀರನ್ನು ಒದಗಿಸುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸೂರ್ಯನಾರಾಯಣ ರಾವ್ (ಮತ್ತೂರು).—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಇಲಾಖೆ ಮತ್ತು ಸಹಕಾರಿ ಇಲಾಖೆ ಬೇಡಿಕೆಗಳನ್ನು ಬೆಂಬಲಿಸುತ್ತಾ ನಾನು ಕೆಲವು ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮೀಣ ಅಭಿವೃದ್ಧಿಯಾಗಬೇಕಾಗಿದ್ದರೆ ಮುಖ್ಯವಾಗಿ ಅಧಿಕಾರಿಗಳ ಮನೋಭಾವನೆ ಬದಲಾವಣೆಯಾಗಬೇಕು. ಹಳ್ಳಿಗಳ ಆರ್ಥಿಕ ಪರಿಸ್ಥಿತಿ ಸುಧಾರಣೆ ಮಾಡತಕ್ಕ ಕಾರ್ಯಕ್ರಮವಾಗಬೇಕು. ಪಟ್ಟಬದ್ರ ಹಿತಾಶಕ್ತಿಗಳಿಂದ ಬಿಡುಗಡೆ ಮಾಡಬೇಕು. ಗ್ರಾಮೀಣ ಅಭಿವೃದ್ಧಿ ಇಲಾಖೆ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆಯೆಂದು ಹೇಳಿ, ಯಾವ ಯಾವ ಯೋಜನೆಗೆ ಎಷ್ಟೆಷ್ಟು ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ.

೧–೩೦ ಪಿ. ಎಂ.

ಹೋದವರ್ಷ ನಾವು ಏನು ಅಂದುಕೊಂಡಿದ್ದೇವು ಅಂದರೆ, ಈಗತಾನೆ ಹೊಸ ಜನತಾ ಸರ್ಕಾರ ಬಂದಿದೆ, ಹಣದ ಅಭಾವ ಇರಬಹುದು, ಓವರ್‌ಡ್ರಾಫ್ಟ್ ತಕರಾರು ಇರಬಹುದು, ಈಗ ಏನು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ ಅದನ್ನು ಕಾರ್ಯಗತ ಮಾಡುತ್ತಾರೆ ಎನ್ನತಕ್ಕ ಅಭಿಪ್ರಾಯವಿತ್ತು. ೧೯೮೩–೮೪ ರಲ್ಲಿ ಇವರು ಇಟ್ಟಿರತಕ್ಕ ಹಣದಲ್ಲಿ ಜನವರಿ ವರೆಗೆ ಶೇಕಡ ೨೫ ಪರ್ಸೆಂಟ್ ಮಾತ್ರ ಖರ್ಚಾಗಿದೆ. ಫೆಬ್ರುವರಿ ಮಾರ್ಚಿಯಲ್ಲಿ ಖರ್ಚುಮಾಡಿಬಿಡುತ್ತೇವೆ ಎಂದು ಅವರು ಹೇಳಬಹುದು. ಈಗ ಬೋರ್‌ವೆಲ್‌ಗಳಿಗೆ ೧೧ ಕೋಟಿ ೧೯ ಲಕ್ಷ ಇಟ್ಟಿದ್ದೀರಿ, ಖರ್ಚುಮಾಡಿರುವುದು ೨ ಕೋಟಿ ೮೫ ಲಕ್ಷ. ಬೋರ್‌ವೆಲ್ ಪಂಪುಗಳನ್ನು ಬದಲಾಯಿಸುವುದಕ್ಕೆ ೭೫ ಲಕ್ಷ ಇಟ್ಟಿದ್ದರು, ಖರ್ಚು ಮಾಡಿರುವುದು ೬ ಲಕ್ಷ ಮಾತ್ರ. ಅಂತ್ಯೋದಯ ಕಾರ್ಯಕ್ರಮಕ್ಕೆ ೧ ಕೋಟಿ ೭೫ ಲಕ್ಷ ಇಟ್ಟಿದ್ದರು, ಖರ್ಚುಮಾಡಿರುವುದು ೬ ಲಕ್ಷ ೭೪ ಸಾವಿರ. ಐ. ಆರ್. ಡಿ. ಪಿ.ಗೆ ೧೪ ಕೋಟಿ ಇಟ್ಟಿದ್ದರು, ೬ ಕೋಟಿ ೬೬ ಲಕ್ಷ ಖರ್ಚುಮಾಡಿದ್ದಾರೆ. ಒಟ್ಟು ೨೭೬೯ ಲಕ್ಷ ಇಟ್ಟಿದ್ದರು ಅದರಲ್ಲಿ ೯೬೩ ಲಕ್ಷ ಖರ್ಚು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿದ್ದಾರೆಂದು ತಿಳಿದುಬಂದಿದೆ. ಬೋರ್‌ವೆಲ್‌ಗಳಿಗೆ ನಿಗದಿಯಾದ ಹಣ ಇಟ್ಟು ನೀರು ಕೊಡುತ್ತೇವೆ ಎಂದು ಅಬ್ಬರದ ಪ್ರಚಾರ ಮಾಡಿದಿರಿ. ನಮ್ಮಂಥ ಶಾಸಕರಿಗೆ ತಕರಾರು ಆಯಿತು. ನೀರು ಬರುತ್ತದೆ ಎಂದು ಪೇಪರಿನಲ್ಲಿ ಹೇಳಿಕೆಗಳನ್ನು ಕೊಟ್ಟಿರಿ. ಕೊಳವೆ ಬಾವಿಗಳನ್ನು ಕೊಡುತ್ತೇವೆಂದು ಹೇಳಿದಿರಿ. ಅಲ್ಲಿ ಇಂಜಿನ್ ಇದ್ದರೆ ಮೆಕಾನಿಕ್ ಇಲ್ಲ ಮೆಕಾನಿಕ್ ಇದ್ದರೆ ಇನ್‌ಸ್ಟ್ರುಮೆಂಟ್ಸ್ ಇಲ್ಲ. ನಾನು ಕೇಳುತ್ತೇನೆ. ೫೧೨೭೮ ಪಂಪುಗಳಿವೆ ಇದಕ್ಕೆ ಎಷ್ಟು ವರ್ಕ್‌ಸರ್ಸ್ ಇದ್ದಾರೆ? ಎಷ್ಟು ಜನ ಮೆಕಾನಿಕ್ಸ್ ಇದ್ದಾರೆ? ಎಷ್ಟು ಸಿಬ್ಬಂದಿ ಇದ್ದಾರೆ ಎಷ್ಟು ಓಡಾಡುವ ವಾಹನ ಸೌಕರ್ಯವಿದೆ. ಇದರ ಬಗ್ಗೆ ಏನೂ ಯೋಚನೆ ಮಾಡುವುದಿಲ್ಲ. ಇದು ಬ್ಯೂರೋಕ್ರಟಿಕ್ ಮೆಥೆಡ್. ಅಫಿಷಿಯಲ್ಸ್ ಗ್ಯಾಲರಿಯಲ್ಲಿ ಸೆಕ್ರೆಟರಿಗಳು, ಡೆಪ್ಯುಟಿ ಸೆಕ್ರಟರಿಗಳು ಯಾರೂ ಇಲ್ಲ, ಫ್ರೆಂಟ್ ಲೈನ್ ಖಾಲಿ ಇದೆ. ಈಗ ಒಂದೂವರೆ ಗಂಟೆ. ಹೀಗಾದರೆ ನಾವು ಹೇಗೆ ಮಾತನಾಡುವುದು. ಮಂತ್ರಿಗಳು ಹೇಳುತ್ತಾರೆ. ಆರ್ಡರ್ ಮಾಡುತ್ತಾರೆ, ಅದನ್ನು ಕಾರ್ಯಗತ ಮಾಡುವವರು ಅಧಿಕಾರಿಗಳಲ್ಲವೇ. ಇವತ್ತು ಒಂದು ದಿನ ಸಾಯಂಕಾಲ ಊಟ ಮಾಡಿದರೆ ಪ್ರಪಂಚ ಮುಳುಗಿ ಹೋಗುತ್ತದೆಯೇ. ಏನೋ ಹೇಳಿಕೊಳ್ಳುತ್ತಾರೆ, ನಾನು ಪರ್ಮನೆಂಟ್ ಮನುಷ್ಯ, ನನ್ನನ್ನು ಯಾರೂ ಬದಲಾಯಿಸುವುದಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯ ಐ. ಎ. ಎಸ್. ಆಫೀಸರ್ಸ್‌ನಲ್ಲಿ ಬಂದಿದೆ. ಪಿ.ಹೆಚ್.ಇ. ಇಲ್ಲಾಖೆಯೊಳಗೆ ಎಷ್ಟು ಸಿಬ್ಬಂದಿ ಇದೆ, ಇದು ಜನಗಳಿಗೆ ನೀರು ಕೊಡತಕ್ಕ ಇಲಾಖೆ. ಬ್ಯೂರೋಕ್ರಟಿಕ್ ಆಫೀಸರ್ಸ್‌ಲ್ಲಿ, ಇವರು ಇವತ್ತು ಇರುತ್ತಾರೆ ನಾಳೆ ಹೋಗುತ್ತಾರೆ ಎನ್ನುವ ಮನೋಭಾವ ಬಂದುಬಿಟ್ಟಿದೆ.

They are answerable to the people.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಊಟಕ್ಕೆ ಹೋಗಿರಬೇಕು. ಇವತ್ತು ಇರುತ್ತಾರೆ, ನಾಳೆ ಹೋಗುತ್ತಾರೆ ಎನ್ನುವ ಧೋರಣೆ ಕಡಿಮೆಯಾಗಿದೆ. In this House, we are answerable to you, not the officers.

SRI S. BANGARAPPA.--No dout you are answerable in this House, I agree. But state level officers, Heads of the Departt ment including Joint Director, they are bound to be present here. They must note down the points of the hon'ble members and should brief you. ನೀವೇನೂ ಸರ್ವಾಂತರ್ಯಾಮಿ ಅಲ್ಲ, ಇಲ್ಲಿ ಯಾವಾಗಲೂ ಕುಳಿತುಕೊಳ್ಳುವುದಕ್ಕೆ. ಅವರು ಇಲ್ಲಿ ಕುಳಿತುಕೊಂಡು ಪಾಯಿಂಟ್ಸ್ ತೆಗೆದುಕೊಂಡು ನಿಮಗೆ ಕೊಡಬೇಕು ಅವರು ಊಟಕ್ಕೆ ಹೋಗರಬೇಕು ಎಂದು ಹೇಳಿದರೆ, ಊಟಕ್ಕೆ ಹೋಗಬಹುದು, ಮಲಗಬಹುದು ಎಂದು ಅರ್ಥವಾಗುತ್ತದೆ. ಹಾಗೇನಿಲ್ಲ, ಚರ್ಚೆಯ ಸಮಯದಲ್ಲಿ ಪೂರ್ತಿ ಕುಳಿತುಕೊಂಡು ಪಾಯಿಂಟ್ಸ್ ಹಾಕಿ ಕೊಡುತ್ತಾ ಇರಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಬಂಗಾರಪ್ಪನವರು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಹಿಂದೆ ಆಫೀಸರ್ಸ್ ನೋಟ್ ಮಾಡಿಕೊಳ್ಳುತ್ತಿದ್ದರು, ಆನ್ಸರ್ ಪ್ರಿಪೇರ್‌ಮಾಡಿಕೊಳ್ಳುತ್ತಿದ್ದರು. ಕಾರಣವೇನೆಂದರೆ ಆಗಿದ್ದಂಥ ಮಂತ್ರಿಗಳಿಗೆ ಸಮಯ ಸಾಕಾಗುತ್ತಾ ಇರಲಿಲ್ಲ, ಅವರಿಗೆ ವಿಷಯ ಗೊತ್ತಾಗುತ್ತಾ ಇರಲಿಲ್ಲ. ನಾವು ಹಾಗಲ್ಲ, ಪ್ರತಿಯೊಂದನ್ನೂ ಬರೆದುಕೊಳ್ಳುತ್ತೇವೆ, ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಬರೆದುಕೊಳ್ಳುತ್ತೇವೆ, ಉತ್ತರ ಕೊಡುವಾಗ ನೋಡಿ, ಯಾವುದಾದರೂ ಮರೆತುಬಿಟ್ಟಿದ್ದರೆ ಹೇಳಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಂತ್ರಿಗಳು ನಾವೇ ಮಾಡಿಕೊಳ್ಳುತ್ತೇವೆ ಅಂದರೆ ನಮ್ಮದೇನು ಬಿಡಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನೀವು ಹಾಗೆ ಮಾಡಬಹುದು. ಎಲ್ಲಾ ಮಂತಿಗ್ರಳು ಹಾಗೆಯೇ ನೋಟ್ ಮಾಡಿಕೊಳ್ಳುತ್ತಾರೆಯೇ.

ಶ್ರೀ ಎಂ. ಮಹದೇವ್.—ಮಾನ್ಯ ಸಹಕಾರ ಮಂತ್ರಿಗಳು ಸಹಕಾರ ಕಾನೂನನ್ನು ಗುಳಿಗೆ ಮಾಡಿ ನುಂಗಿಬಿಟ್ಟಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹಳ್ಳಿ ಪ್ರದೇಶದಲ್ಲಿ ಪ್ರೊಟೆಕ್ಟೆಡ್ ವಾಟರ್ ಕೊಡುತ್ತೇವೆಂದು ಹೇಳುತ್ತೀರಿ. ೫೧,೨೭೮ ಬೋರ್‌ವೆಲ್‌ಗಳು ಏನಿವೆ ಅವು ೮ ದಿವಸಕ್ಕೆ ೧೫ದಿವಸಕ್ಕೆ ಕೆಟ್ಟು ಹೋಗುತ್ತಾ ಇರುತ್ತವೆ. ಅವುಗಳನ್ನೆಲ್ಲಾ ನೋಡದೇ ನಾವೆಲ್ಲಾ ಮಾಡಿದ್ದೇವೆ ಅಂದರೆ ಪುಸ್ತಕದಲ್ಲಿರುತ್ತದೆ. ಇವುಗಳು ಕೆಟ್ಟು ಹೋದಾಗ ವಾಷರ್ ಬೇಕಾಗುತ್ತದೆ. ಸ್ಪೇರ್ ಬರೀ ಪಾರ್ಟ್ಸ್ ಬೇಕಾಗುತ್ತದೆ. ಮೋಟಾರನ್ನು ರಿಪೇರಿ ಮಾಡಬೇಕಾಗುತ್ತದೆ. ಮೊಬೈಲ್ ವ್ಯಾನ್ ಬೇಕಾಗುತ್ತದೆ. ಪಿ. ಹೆಚ್. ಇ. ಅವರನ್ನು ಕೇಳಿದರೆ ಪಿ. ಡಬ್ಲ್ಯೂ. ಡಿ. ಯವರನ್ನು ಕೇಳಿ ಎಂದು ಹೇಳುತ್ತಾರೆ, ಪಿ.ಡಬ್ಲ್ಯೂ.ಡಿ. ಯವರನ್ನು ಕೇಳಿದರೆ ಪಿ.ಹೆಚ್.ಇ. ಯವರನ್ನು ಕೇಳಿ ಎಂದು ಹೇಳುತ್ತಾರೆ. ಇದರಲ್ಲೇ ಮತ್ತೆ ೮ ದಿವಸ ಹೋಗುತ್ತದೆ. ಆಮೇಲೆ ವಾಷರ್ ಇಲ್ಲ ಎಂದು ಬರುತ್ತಾರೆ. ನನ್ನ ಕ್ಷೇತ್ರದಲ್ಲಿ ಒಬ್ಬ ಮಹಿಳೆ ಬಾವಿಗೆ ಬಿದ್ದು ಸತ್ತು ಹೋದಳು. ಮೋಟಾರ್ ಕೆಟ್ಟು ಹೋಗಿತ್ತು, ಬಾವಿಯಲ್ಲಿ ನೀರು ಸೇದುವುದಕ್ಕೆ ಹೋಗಿ ಒಬ್ಬ ಹೆಣ್ಣು ಮಗಳು ಸತ್ತುಹೋದಳು ಈ ವಿಷಯ ಪೇಪರಿನಲ್ಲಿ ಬಂದಿತ್ತು. ಇವತ್ತು ನೀರಿಗೆ ಇಷ್ಟು ತೊಂದರೆ ಯಾಗಿದ್ದರೂ ಈ ಒಂದು ಗಂಭೀರತೆ ಅಧಿಕಾರವರ್ಗದಲ್ಲಿ ಬಂದಿಲ್ಲ. ಮಾನ್ಯ ಆರ್.ಎಲ್. ಜಾಲಪ್ಪನವರು ಹೇಳಿದಾಕ್ಷಣ ನಾನು ಒಪ್ಪುವುದಿಲ್ಲ. ಅವರು ದಕ್ಷತೆ ಇದೆ. ನಾನೇ ಮಾಡುತ್ತೇನೆ ಎಂದು ಹೇಳುತ್ತಾರೆ. ಅವರೇ ಎಲ್ಲಾಮಾಡುವುದಕ್ಕಾಗುವುದಿಲ್ಲ. ಅಧಿಕಾರಿಗಳ ಮುಖಾಂತರ ಮಾಡಿಸಬೇಕು ಅಧಿಕಾರಿಗಳಿಗೆ ಸರ್ವೀಸ್ ಆಟಿಟ್ಯೂಡ್ ಬರಬೇಕು, ಅದು ಅವರಿಗೆ ಬಂದಿಲ್ಲ. ಅವರಿಗೆ ಟ್ರೈನಿಂಗ್ ಆಗಿಲ್ಲ. ಸಮಾಜ ಪರಿವರ್ತನೆ ಆಗಬೇಕು. ನಾನು ಇರುವುದು ಜನಗಳ ಸೇವೆಗೆ ಎಂಬ ಮನೋಭಾವ ಇರಬೇಕು, ಅದನ್ನು ಬಿಟ್ಟು ಇಲಾಖೆಯೊಳಗೆ ನಾನು ಒಬ್ಬ ಆಫೀಸರ್ ಅಂದರೆ ಕಷ್ಟವಾಗುತ್ತದೆ. ಐ.ಆರ್.ಡಿ.ಪಿ.ಯಲ್ಲಿ ಸಾಲ ಕೊಡುತ್ತಾರೆ. ದನ, ಎಮ್ಮೆ ಕೊಂಡುಕೊಳ್ಳುವುದಕ್ಕೆ ಸಂತೆಗೆ ಹೋಗುತ್ತಾರೆ. ಬೆಲೆಗಳೆಲ್ಲಾ ಏರಿರುತ್ತವೆ ಒಂದು ಸಾವಿರ ರೂಪಾಯಿ ಪದಾರ್ಥಕ್ಕೆ ಒಂದೂವರೆ, ಎರಡು ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಭ್ರಷ್ಟಾಚಾರ ನಡೆಯುತ್ತದೆ. ಒಳ್ಳೆಯ ತಳಿಗಳು ನಮಗೆ ಸರಿಯಾಗಿ ಸಿಗತಕ್ಕ ವ್ಯವಸ್ಥೆ ಇಲ್ಲ. ಫಾರಂನಲ್ಲಿ ಒಳ್ಳೆಯ ತಳಿಗಳನ್ನು ಮಾಡಿ ಮಾರಾಟ ಮಾಡತಕ್ಕ ವ್ಯವಸ್ಥೆ ಇಲ್ಲ. ಕಡೇ ಘಳಿಗೆಯಲ್ಲಿ ರಷ್ ಮಾಡಿಕೊಂಡು ಇರತಕ್ಕಂಥ ಹಣವನ್ನು ಪೂರೈಕೆ ಮಾಡುತ್ತೇವೆ ಅಂದಾಗ ಅದು ಸದುಪಯೋಗವಾಗುವುದಿಲ್ಲ. ಭ್ರಷ್ಟಾಚಾರಕ್ಕೆ ಎಡೆಯಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳುತ್ತಾರೆಂದು ನಾನು ತಿಳಿದು ಕೊಳ್ಳುತ್ತೇನೆ ಇನ್ನು ಬ್ಯಾಂಕ್‌ಗಳಲ್ಲಿ, ಐ.ಆರ್.ಡಿ.ಪಿ.ಯಲ್ಲಿ ಸಾಲ ಕೊಡುತ್ತಾರೆ. ಈ ಸಾಲ ಕೊಡುವಾಗ ಯಾರಿಗೆ ಕೊಡಬೇಕು. ಸಣ್ಣ ರೈತರು ಯಾರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಯಾರು ಎಂದು ಗುರುತಿಸುವುದರಲ್ಲಿ ಬಹಳ ಸಾರಿ ತಪ್ಪಿದೆವು. ಇದರಲ್ಲಿ ಹೆಚ್ಚಾಗಿ ಶ್ರೀಮಂತರೇ ಲಾಭ ಪಡೆಯುತ್ತಾರೆ ಅವರು ಹಣ ತಂದು ಇಲ್ಲಿ ಕೊಡುತ್ತಾರೆ. ಸರ್ಕಾರದಿಂದ ರಿಯಾಯಿತಿ ಬಂದರೆ ಅದನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಐ. ಆರ್. ಡಿ. ಪಿ. ಯಲ್ಲಿ ಶೇಕಡ ೬ ರಂತೆ ಸಾಲ ಸಣ್ಣ ರೈತರಿಗೆ ಕೊಡುತ್ತಾರೆ. ಐ.ಆರ್.ಡಿ.ಪಿ. ಯಿಂದ ಶ್ರೀಮಂತರೇ ಹೆಚ್ಚು ಪ್ರಯೋಜನ ಪಡೆಯುತ್ತಾರೆ. ಇದರಿಂದ ಶ್ರೀಮಂತರು ಲಾಭ ಮಾಡಿಕೊಂಡು ಬಡ ಜನಗಳಿಗೆ ಸಾಲ ಕೊಡುತ್ತಾರೆ. ಸರ್ಕಾರದವರು ಸಣ್ಣ ರಿಯಾಯಿತಿ ಕೊಟ್ಟರೆ ಅದನ್ನು ಶ್ರೀಮಂತರು ಪಡೆದುಕೊಂಡರು. ರೈತರು ಅದನ್ನು ಚಕ್ರಬಡ್ಡಿಗೆ ತೆಗೆದುಕೊಂಡಿದ್ದಾರೆ. ಏನಿದು ರಿಯಾಯಿತಿ. ಮೊನ್ನೆ ಸಾಲದ ರಿಯಾಯಿತಿಯನ್ನು ಏನು ಕೊಟ್ಟಿದ್ದೀರಿ, ಅದನ್ನು ಉಪಯೋಗ ಮಾಡಿಕೊಳ್ಳುವ ಸಲುವಾಗಿ ಮಾರ್ವಾಡಿಯವರ ಹತ್ತಿರ ಹಾಗೂ ಬ್ಯಾಂಕ್ ಬಡ್ಡಿಯನ್ನು ತೆಗೆದುಕೊಂಡು ಅವರು ತೆಗೆದುಕೊಂಡಂತಹ ಸಾಲವನ್ನು ತೀರಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಸಹಕಾರ ಮಂತ್ರಿಗಳು ಈ ಬಗ್ಗೆ ಗಮನ ಹರಿಸಿ ಯಾರ್ಯಾರು ಮಾರ್ವಾಡಿಗಳು ಇದ್ದಾರೆ ಅವರು ಬಡವರಿಗೆ ಕೊಡತಕ್ಕಂತಹ ಸಾಲ ಕೂಡ ರಿಜಿಸ್ಟ್ರೇಷನ್ ಆಗುವಂತೆ ವ್ಯವಸ್ಥೆ ಮಾಡಬೇಕು. ಯಾರ್ಯಾರು ಈ ರೀತಿ ಸಾಲವನ್ನು ತೆಗೆದುಕೊಂಡಿರುತ್ತಾರೆ. ಅವರ ಸಾಲವನ್ನು ಸರ್ಕಾರವೇ ವಹಿಸಿಕೊಂಡು ಹರಿಜನ-ಗಿರಿಜನರು ಯಾರು ಇದ್ದಾರೆ, ಅವರಿಗೆ ಈ ಒಂದು ಅನುಕೂಲವನ್ನು ಒದಗಿಸಿಕೊಡಬೇಕು. ಏಳೂವರೆ ಪರ್ಸೆಂಟ್ ಬಡ್ಡಿಯನ್ನು ಕೊಟ್ಟರೆ ಅವರು ಬದುಕುವುದಕ್ಕಾಗುವುದಿಲ್ಲ. ಅವರಿಗೆ ವ್ಯವಸಾಯ ಮಾಡುವುದಕ್ಕೆ ಭೂಮಿ ಇರುವುದಿಲ್ಲ. ಹರಿಜನ–ಗಿರಿಜನರಿಗೆ ಕೊಡತಕ್ಕಂತಹ ಸಾಲ ಅಂತ ಹೇಳಿದರೆ ಬಹುತೇಕ ಜನ ೧೦೦ಕ್ಕೆ ೯೦ ಭಾಗ ಬಡವರೇ ಇರುತ್ತಾರೆ. ಶೇಕಡಾ ೧೦ ಪರ್ಸೆಂಟ್ ಶ್ರೀಮಂತರ ಇರಬಹುದು, ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರಂತಹವರು. ಅವರನ್ನು ಬಿಟ್ಟು ಬಿಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನಂತಹವರು ಇರಬಹುದು ಅವರಂತಹವರೂ ಇರಬಹುದು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅವರ ಎಲ್ಲ ಸಾಲವನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಅವರನ್ನು ನಿಜವಾಗಿ ಮೇಲಕ್ಕೆ ತರತಕ್ಕ ಕೆಲಸವನ್ನು ತಾವು ಮಾಡಬೇಕು. ಮತ್ತು ನಮ್ಮಲ್ಲಿ ಮಾರ್ಜಿನಲ್ ಫಾರ್ಮರ್ಸ್ ಅಂತ ಡೆಫನಿಷನ್ ಏನಿದೆ ಅದನ್ನು ಬದಲಾವಣೆ ಮಾಡಿ. ನಬಾರ್ಡ್‌ನವರು ಆದೇಶ ಕೊಟ್ಟಿರುವ ಪ್ರಕಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇಲ್ಲಿರತಕ್ಕ ಪ್ರದೇಶ ಅಂದರೆ ಮಂಗಳೂರಿನಲ್ಲಿರುವ ಭೂಮಿಯನ್ನು ಕೋಲಾರದಲ್ಲಿರುವ ಭೂಮಿಯನ್ನೂ ಒಂದೇ ಮಾಡುವುದಕ್ಕಾಗುವುದಿಲ್ಲ. ಅದೇ ರೀತಿ ಮಂಡ್ಯ ಮತ್ತು ಬಿಜಾಪುರವನ್ನು ಒಂದೇ ಮಾಡುವುದಕ್ಕಾಗುವುದಿಲ್ಲ. ಯಾವ ಆಧಾರದಿಂದ ಇದನ್ನು ವಿಂಗಡಣೆ ಮಾಡುತ್ತೀರೆಂಬುದು ನಮಗೆ ಅರ್ಥವಾಗುವುದಿಲ್ಲ. ಮಳೆ ಎಷ್ಟು ಪರ್ಸೆಂಟ್ ಬರುತ್ತದೆ, ಬೆಳೆ ಯಾವ ರೀತಿಯಲ್ಲಿ ಆಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಅದಿಲ್ಲದಿದ್ದರೆ, ಮಂಡ್ಯ ಜಿಲ್ಲೆಯಲ್ಲಿ ೫ ಎಕರೆಯಲ್ಲಿ ಎಷ್ಟು ಬೆಳೆಯನ್ನು ಬೆಳೆಯುತ್ತಾನೆ, ಅಷ್ಟೆ ಬೆಳೆಯನ್ನು ಕೋಲಾರದಲ್ಲಿ ೨೫ ಎಕರೆಯಲ್ಲಿ ಬೆಳೆಯುವುದಕ್ಕಾಗುವುದಿಲ್ಲ. ಕಾರಣ ಕೋಲಾರದಲ್ಲಿ ಮಳೆ ಬಂದರೆ ಬಂತು. ಬಿಟ್ಟರೆ ಬಿಡ್ತು.

ಶ್ರೀ ಹೆಚ್.ಡಿ. ಚೌಡಯ್ಯ.—ಮಂಡ್ಯ ಜಿಲ್ಲೆಯಲ್ಲೂ ಖುಷ್ಕಿ ಜಮೀನು ಹೆಚ್ಚಿನ ಸಂಖ್ಯೆಯಲ್ಲಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇರಬಹುದು. ಚಿಕ್ಕಬಳ್ಳಾಪುರ ಬಹಳ ಕಡಿಮೆ ಮಳೆ ಬೀಳುವಂತಹ ಪ್ರದೇಶವಾಗಿದೆ. ಅಲ್ಲಿ ಯಾವಾಗಲೂ ಕ್ಷಾಮ ಪೀಡಿತ ಪ್ರದೇಶವಾಗಿದೆ. ಆದ್ದರಿಂದ ಇದನ್ನು ವಿಚಾರ ಮಾಡಿ. ಏಕೆಂದರೆ ೧೦ ಎಕರೆಯಿಂದ ೧೫ ಎಕರೆವರೆಗೆ ಖುಷ್ಕಿ ಭೂಮಿಯು ಇರತಕ್ಕಂತಹವರು ಈ ಒಂದು ಪರಿಮಿತಿಯೊಳಗೆ ಬರುವುದಿಲ್ಲ. ಈಗ ಇರತಕ್ಕಂತಹ ನಬಾರ್ಡ್‌ನ ಗೈಡ್‌ಲೈನ್ಸ್ ಪ್ರಕಾರ ಅವರಿಗೆ ಸಾಲ ಸಿಕ್ಕುವುದಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಮಂಡ್ಯ ಜಿಲ್ಲೆಯಲ್ಲಿ ೧೩ ಲಕ್ಷ ಹೆಕ್ಟೇರ್ ಭೂಮಿ ವ್ಯವಸಾಯವಾಗುತ್ತಿದ್ದರೆ, ನೀರಾವರಿಯಾಗತಕ್ಕಂತಹದ್ದು ಕೇವಲ ಒಂದೂಕಾಲು ಲಕ್ಷ ಹೆಕ್ಟೇರ್ ಭೂಮಿ. ನಾಗಮಂಗಲ ತಾಲ್ಲೂಕು ಇಡೀ ಕರ್ನಾಟಕ ರಾಜ್ಯದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ. ಅದೂ ಮಂಡ್ಯ ಜಿಲ್ಲೆಯಲ್ಲಿದೆ. ನಾಗಮಂಗಲ ತಾಲ್ಲೂಕಿನಲ್ಲಿ ವರ್ಷವಿಡೀ ೧೨ ಸಿ.ಎಂ. ಮಳೆ ಬಂದರೆ ಅದು ಅತಿ ಹೆಚ್ಚು. ಆದ್ದರಿಂದ ಮಂಡ್ಯ ಜಿಲ್ಲೆಯನ್ನು ಶ್ರೀಮಂತರ ಪಟ್ಟಿಗೆ ಸೇರಿಸಬೇಡಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾರ್ಜಿನಲ್ ಫಾರ್ಮರ್ಸ್ ಅನ್ನುವ ಡೆಫಿನಿಶ್‌ನ್‌ನ್ನು ಬದಲಾವಣೆ ಮಾಡಿ ಅಂತ ಹೇಳುತ್ತಿದ್ದೇನೆ. ನಾಲ್ಕನೇ ದರ್ಜೆಯ ಸರ್ಕಾರಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನಿಂದ ಬಂದಿದ್ದಾರೆಂಬುದು ನನಗೆ ಗೊತ್ತಿದೆ. ಆದ್ದರಿಂದ ಈ ಮಾರ್ಜಿನಲ್ ಫಾರ್ಮರ್ಸ್ ಅಂತ ಏನು ಡೆಫಿನಿಷನ್ ಇದೆ ಅದನ್ನು ಬದಲಾವಣೆ ಮಾಡಿ, ಬಡ ರೈತರಿಗೂ ಸಹ ಸಾಲ ಸಿಗುವ ರೀತಿಯಲ್ಲಿ ಮಾಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅದಕ್ಕಾಗಿ ತಾವು ಬೇಸರಪಡಬೇಕಾದುದು ಇಲ್ಲ.

ಇನ್ನು ಬಯೋಗ್ಯಾಸ್ ವಿಚಾರದಲ್ಲಿ ಹೇಳುವುದಾದರೆ, ಚೈನಾ ದೇಶದಲ್ಲಿ ಇದರ ಉಪಯೋಗ ಅತಿ ಹೆಚ್ಚು. ಈ ಬಯೋಗ್ಯಾಸ್‌ನಿಂದ ಅಲ್ಲಿ ವಿದ್ಯುಚ್ಛಕ್ತಿಯನ್ನೂ ಪ್ರೊಡ್ಯೂಸ್ ಮಾಡುತ್ತಾರೆ. ನಮ್ಮಲ್ಲೂ ಸಹ ರೈತರಿಗೆ ಅಂತಹ ತಿಳುವಳಿಕೆಯನ್ನು ಕೊಡಬೇಕು. ಅಲ್ಲಿ ಬಯೋಗ್ಯಾಸ್‌ನಿಂದ ೨೦ ಮೆಗಾವಾಟಿನಿಂದ ೨೫೦ ಮೆಗಾವಾಟ್‌ವರೆಗೆ ವಿದ್ಯುಚ್ಛಕ್ತಿಯನ್ನು ತಯಾರು ಮಾಡುತ್ತಾರೆ. ನಮ್ಮಲ್ಲೂ ಕೂಡ ವಿದ್ಯುಚ್ಛಕ್ತಿಯ ಕೊರತೆ ಇದೆ. ಜೊತೆಗೆ ಡೀಸೆಲ್ ಬೆಲೆ ಕೂಡ ಜಾಸ್ತಿ ಇದೆ. ಆದ್ದರಿಂದ ಈ ಬಗ್ಗೆ ಪರಿಣಾಮಕಾರಿಯಾಗಿ ಕೆಲಸ ಮಾಡುವಂತಹ ಯೋಜನೆಗಳನ್ನು ಹಾಕಿಕೊಂಡು ದೊಡ್ಡ ಪ್ರಮಾಣದಲ್ಲಿ ಬಯೋಗ್ಯಾಸ್‌ನ್ನು ಮಾಡುವಂತೆ ರೈತರಿಗೆ ತಿಳುವಳಿಕೆ ಕೊಟ್ಟರೆ ಒಳ್ಳೆಯ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, ವಿಶೇಷ ಘಟಕ ಯೋಜನೆ ಅಂತ ಮಾಡಿದ್ದಾರೆ. ಹರಿಜನ-ಗಿರಿಜನರಿಗೆ ಹಾಗೂ ದುರ್ಬಲ ವರ್ಗದವರಿಗೆ ಯಾರಾದರೂ ವ್ಯಾಪಾರ ಮಾಡತಕ್ಕಂತಹವರಿಗೆ ಅವರಿಗೆ ಸಹಾಯಧನ ಮಾಡುವಂತಹದ್ದು, ಇದಕ್ಕಾಗಿ ಇಟ್ಟಿರುವಂತಹ ಟಾರ್ಗೆಟ್ ೧೨೭ ಲಕ್ಷ. ಹರಿಜನ-ಗಿರಿಜನರ ಕಲ್ಯಾಣ ಗೃಹ ನಿರ್ಮಾಣ ವಿಶೇಷ ಘಟಕ ಯೋಜನೆ ಅಂತ ಇದೆ.

(ಶ್ರೀ ಪಿ. ರಾಮದೇವ್‌ರವರು ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಇದಕ್ಕೆ ಖರ್ಚಾಗಿರುವುದು ಕೇವಲ ೬೧ ಲಕ್ಷ ರೂಪಾಯಿಗಳು. ಯಾವುದೇ ಇಲಾಖೆಯನ್ನು ತೆಗೆದು ಕೊಂಡರೂ ಈ ಜನಗಳಿಗೆ ಖರ್ಚು ಮಾಡಬೇಕಾಗಿರುವ ಹಣವನ್ನೇ ಖರ್ಚು ಮಾಡುವುದಿಲ್ಲ. ಈ ವರ್ಷ ಇದಕ್ಕಾಗಿ ಇಟ್ಟಿರುವುದು ೧೧೮ ಲಕ್ಷ ರೂಪಾಯಿಗಳು. ಅಂದರೆ ಕಳೆದ ಸಾರಿಗಿಂತ ಈ ಸಾರಿ ಇದಕ್ಕಾಗಿ ಕಡಿಮೆ ಹಣವನ್ನು ಇಟ್ಟಿದ್ದಾರೆ. ಎಲ್ಲ ಹಣವನ್ನು ಕೊನೇ ಘಳಿಗೆಯಲ್ಲಿ ಖರ್ಚು ಮಾಡು ವುದರಿಂದ ಬೆಲೆಯೂ ಕೂಡ ಜಾಸ್ತಿಯಾಗುತ್ತದೆ. ಜೊತೆಗೆ ಭ್ರಷ್ಟಾಚಾರಕ್ಕೂ ಕೂಡ ಎಡೆಮಾಡಿ ಕೊಟ್ಟಂತಾಗುತ್ತದೆ. ಈ ಎರಡು ತಿಂಗಳಲ್ಲಿ ದುಡ್ಡು ಕೊಡದಿದ್ದರೆ ಆತನ ಅರ್ಜಿಯನ್ನು ತಯಾರು ಮಾಡುವುದಿಲ್ಲ. ಆದ್ದರಿಂದ ಇದಕ್ಕಾಗಿ ಇಟ್ಟಿರುವಂತಹ ಹಣವನ್ನು ಕ್ರಮಬದ್ಧವಾಗಿ ಇಂತಿಷ್ಟು ತಿಂಗಳಿಗೆ ಎಂಬುದಾಗಿ ಬಿಡುಗಡೆ ಮಾಡುವಂತಹ ಯೋಚನೆ ಮಾಡಬೇಕು. ಪ್ರತಿ ತಿಂಗಳಿಗೂ ಇಷ್ಟೆಂದು ಬಿಡುಗಡೆ ಮಾಡುತ್ತಾ ಬಂದರೆ ಈ ರೀತಿ ಹಣ ಅಪವ್ಯಯವಾಗದೆ ನ್ಯಾಯವಾದ ರೀತಿ ಯಲ್ಲಿ ಖರ್ಚಾಗುತ್ತದೆ. ಕೊಟ್ಟರತಕ್ಕಂತಹ ಹಣದಿಂದ ಅವರು ಸ್ವಯಂ ಸಂಪಾದನೆ ಮಾಡುವಂತೆ ಅವರಿಗೆ ತಿಳಿಸುವುದರ ಕಡೆಗೆ ಹೆಚ್ಚು ಪ್ರಚಾರ ಆಗಬೇಕು. ಈ ಸಾಲಿನಲ್ಲಿ ಇಂತಿಷ್ಟು ಸಾಲವನ್ನು ಈ ಬಾಬಿಗಾಗಿ ಕೊಡುತ್ತೇವೆ ಎನ್ನುವ ಪ್ರಚಾರ ಆಗಬೇಕು. ವಾಲ್ ಪೋಸ್ಟರ್ಸ್‌ಗಳನ್ನು ಹಂಚಬೇಕು. ಜನರಿಗೆ ಆ ಬಗ್ಗೆ ತಿಳುವಳಿಕೆಯನ್ನು ಕೊಟ್ಟು ಜಾಗ್ರತೆ ಮೂಡುವಂತೆ ಮಾಡಬೇಕು. ಇದರ ಲಾಭ ವನ್ನು ಎಷ್ಟೋ ಹಳ್ಳಿಗಳವರು ಪಡೆಯುವುದಕ್ಕಾಗಿಲ್ಲ. ನಮಗೆ ಗೊತ್ತಿದ್ದ ರೀತಿಯಲ್ಲಿ ೧೦೦ಕ್ಕೆ ೩೮ರಷ್ಟು ಮಾತ್ರ ವಿದ್ಯಾವಂತರು. ಇನ್ನುಳಿದವರು ಅವಿದ್ಯಾವಂತರು. ಅನೇಕ ಗ್ರಾಮಗಳಿಗೆ ರಸ್ತೆಗಳೇ ಇಲ್ಲ. ಹೀಗಿರುವಾಗ ಇದರ ಲಾಭವನ್ನು ಶ್ರೀಮಂತ ರೈತರು ಪಡೆದುಕೊಂಡು ಬಿಡುತ್ತಾರೆ. ವ್ಯಾಪಾರಸ್ಥರು ಇದರ ಲಾಭವನ್ನು ಪಡೆದುಕೊಂಡು ಬಿಡುತ್ತಾರೆ. ಆದ್ದರಿಂದ ಸಹಕಾರ ಮಂತ್ರಿಗಳು ಇದನ್ನು ವಿಚಾರ ಮಾಡಿ, ನೀವು ಕೊಡತಕ್ಕಂತಹ ಹಣ ನೇರವಾಗಿ ಬಡ ಜನ ಗಳಿಗೆ ಹೋಗುವ ರೀತಿಯಲ್ಲಿ ಕೆಲಸ ಮಾಡಬೇಕು. ಕೆಲವರು ಸೊಸೈಟಿಗಳನ್ನು ಮಾಡುತ್ತಾರೆ. ಅದರ ವ್ಯವಹಾರ ನನಗೆ ಗೊತ್ತಿಲ್ಲ. ಅನೇಕ ಸೊಸೈಟಿಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಸೇರಿಕೊಂಡು ಸೊಸೈಟಿಗಳನ್ನು ಮುಳುಗಿಸಿದ್ದಾರೆ. ಮೈಕೋ ಹೌಸಿಂಗ್ ಸೊಸೈಟಿಯವರು ೮೦ ಲಕ್ಷ ರೂಪಾಯಿ ಗಳನ್ನು ನುಂಗಿಬಿಟ್ಟಿದ್ದಾರೆ. ಇದರಿಂದ ಏನಾಗಿದೆ ಎಂದರೆ ಸಹಕಾರಿ ಸಂಘಗಳು ರಾಜ್ಯದಲ್ಲಿ ಹಾಗೂ ನಮ್ಮ ದೇಶದಲ್ಲಿ ಬೆಳೆಯುವುದಿಲ್ಲ ಎನ್ನುವ ಭಾವನೆ ಬಂದುಬಿಟ್ಟಿದೆ. ಒಬ್ಬೊಬ್ಬರೂ ಸಹ ಸೊಸೈಟಿ ಗಳನ್ನು ಮಾಡಿ ಲಕ್ಷಾಂತರ ರೂಪಾಯಿಗಳನ್ನು ವ್ಯವಹಾರ ಮಾಡಿದ್ದಾರೆ. ಇಂಥದ್ದರ ಬಗ್ಗೆ ಆಮೂಲಾಗ್ರವಾಗಿ ತನಿಖೆ ಮಾಡಬೇಕು. ಬೆಂಗಳೂರಿನಲ್ಲಿರತಕ್ಕ ಅನೇಕ ಸಹಕಾರಿ ಹೌಸಿಂಗ್ ಸೊಸೈಟಿಗಳು ಖಾಸಗಿಯಾಗಿ ಬಡಾವಣೆಗಳನ್ನು ಮಾಡುತ್ತೇವೆಂದು ಹೇಳಿ ಜನರಿಂದ ಹಣವನ್ನು ವಸೂಲಿ ಮಾಡುತ್ತಿವೆ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು. ಕೊಟ್ಟಂತಹ ಹಣ ಸಾಮಾನ್ಯ ಜನಗಳಿಗೆ ತಲುಪುವ ರೀತಿಯಲ್ಲಿ ಅದರಿಂದ ಅವರಿಗೆ ಪ್ರಯೋಜನವಾಗುವ ರೀತಿಯಲ್ಲಿ ಸಹಕಾರಿ ಸಂಘಗಳು ಕೆಲಸ ಮಾಡಬೇಕು. ಅವುಗಳ ಲೆಕ್ಕಪತ್ರವನ್ನು ಸರಿಯಾಗಿ ಇಡತಕ್ಕಂತಹ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು.

ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿ ರಾಜ್ ಇಲಾಖೆಯಲ್ಲಿ ಮಿನಿಮಮ್ ನೀಡ್ ಪ್ರೋಗ್ರಾಂ ಹಾಗೂ ಕುಡಿಯುವ ನೀರಿನ ಯೋಜನೆಗಾಗಿ ಉಪಯೋಗ ಮಾಡತಕ್ಕಂತಹ ಹಣವನ್ನು ತಾವು ಹೇಳಿದ್ದೀರಿ. ಇದು ೫ ವರ್ಷಗಳ ಒಂದು ಯೋಜನೆ. ೧೯೮೪–೮೫ನೇ ಸಾಲಿನಿಂದ ಪ್ರತಿ ಯೊಂದು ವರ್ಷವೂ ೨೧.೪ ಕೋಟಿ ಹಣವನ್ನು ಇದಕ್ಕಾಗಿ ಇಡಬೇಕು ಅಂತ ಹೇಳಿದ್ದೀರಿ. ಆದರೆ ನೀವು ಇಟ್ಟಿರುವುದು ೧೧ ಕೋಟಿ ರೂಪಾಯಿಗಳು. ಅದರಲ್ಲಿ ಕಳೆದ ವರ್ಷ ಖರ್ಚು ಮಾಡಿದ್ದು ೭.೮೦ ಕೋಟಿ ರೂಪಾಯಿಗಳು. ತಾವು ಕೊಟ್ಟಿರುವಂಥ ಪುಸ್ತಕದಲ್ಲೇ ಇದು ಇದೆ. ಅದನ್ನು ನೋಡಿಯೇ ನಾನು ಹೇಳುತ್ತಿದ್ದೇನೆ. ನೀವು ಪುಸ್ತಕದಲ್ಲಿ ಕೊಟ್ಟಿರುವ ಪ್ರಕಾರ ೧೯೯೦–೯೧ರ ಒಳಗೆ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರನ್ನು ಕೊಡಬೇಕಾದರೆ, ವರ್ಷಂಪ್ರತಿ ೨೧.೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದೂ, ಕಳೆದ ವರ್ಷ ಇಟ್ಟಿದ್ದು ೧೧ ಕೋಟಿ ರೂಪಾಯಿ ಗಳೆಂದು ಅದರಲ್ಲಿ ಕಳೆದ ೯ ತಿಂಗಳಿಂದ ಖರ್ಚು ಮಾಡಿರುವುದು ೨ ಕೋಟಿ ೮೫ ಲಕ್ಷ ರೂಪಾಯಿ ಗಳೆಂದೂ ಹೇಳಿದ್ದೀರಿ. ಇದರ ಬಗ್ಗೆ ವಿಚಾರ ಮಾಡಿ, ಹಣಕಾಸಿನ ಇಲಾಖೆಯವರ ಜೊತೆ ಸಮಾ ಲೋಚನೆ ಮಾಡಿ ಇನ್ನೂ ಹೆಚ್ಚು ಹಣವನ್ನು ಇದಕ್ಕಾಗಿ ಒದಗಿಸುವುದಕ್ಕೆ ಪ್ರಯತ್ನ ಮಾಡಿ. ಪಿ.ಹೆಚ್.ಇ. ಮೂಲಕ ರಾಜ್ಯದಲ್ಲಿರತಕ್ಕ ಎಷ್ಟೋ ಹಳ್ಳಿಗಳಲ್ಲಿರತಕ್ಕಂತಹ ಬಡ ಜನಗಳಿಗೆ ಕುಡಿಯುವ ನೀರನ್ನು ಕೊಡುವಂತಹದ್ದು ಈ ಇಲಾಖೆಯಲ್ಲಿರತಕ್ಕಂತಹ ಮೆಕ್ಯಾನಿಕ್‌ಗಳೆಲ್ಲರೂ ಖಾಯಂ ಆದವರಲ್ಲ. ಅವರೆಲ್ಲರೂ ಎಸ್.ಎಂ.ಆರ್. ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರು ಹಳ್ಳಿಗಳಿಗೆ ಹೋಗಬೇಕು. ೫೧ ಸಾವಿರ ಬೋರ್‌ವೆಲ್‌ಗಳನ್ನು ಇಟ್ಟುಕೊಂಡಿರುವ ನೀವು

ಖಾಯಂ ಆದ ಮೆಕ್ಯಾನಿಕ್‌ಗಳು ಇಲ್ಲವೆಂದರೆ ಹೇಗೆ? ಇರುವಂತಹ ಮೆಕ್ಯಾನಿಕ್‌ಗಳಿಗೂ ಸರಿಯಾದ ಸಂಬಳ ಸಾರಿಗೆ ಇಲ್ಲ. ವರ್ಕ್ ಷಾಪುಗಳನ್ನು ಮಾಡಿ, ಮತ್ತು ಮೊಬೈಲ್ ಯೂನಿಟ್‌ಗಳನ್ನು ಮಾಡಿ. ಅವರಿಗೆ ಜೀಪುಗಳನ್ನು ಒದಗಿಸಿಕೊಡುವಂತಹ ವ್ಯವಸ್ಥೆ ಮಾಡಿ. ಕಂಟ್ರಾಕ್ಟ್‌ದಾರರು ಬಹಳ ದೊಡ್ಡ ಜನ. ಬೋರ್‌ವೆಲ್ ಅಂದರೆ ರಾಧಾಕೃಷ್ಣ ಅಂತ ಹೇಳುತ್ತಾರೆ. ಅವರು ಬಹಳ ಸಬ್‌ಸ್ಟ್ಯಾಂಡರ್ಸ್ ಮೆಟೀರಿಯಲ್ಸ್‌ನ್ನು ಉಪಯೋಗ ಮಾಡುವುದರ ಜೊತೆಗೆ, ಕಮೀಷನ್ ವ್ಯವಹಾರ ನಡೆಯುತ್ತಿದೆ. ರಾಧಾಕೃಷ್ಣ ಇಂಜಿನೀಯರಿಂಗ್‌ಗೆ ಫೋನ್ ಮಾಡಿ ಅಂತ ಆಸಿಸ್ಟೆಂಟ್ ಇಂಜಿನೀಯರ್ ಹೇಳುತ್ತಾರೆ. ಅವರು ಹೇಳಿದರಲ್ಲ ಅಂತ ನಾವು ಫೋನ್ ಮಾಡಿದರೆ ೧೫ ದಿವಸಗಳಾಗುತ್ತದೆ ಅಂತ ಹೇಳುತ್ತಾರೆ. ಮತ್ತೊಂದು ಸಾರಿ ನಿಮ್ಮದು ಒಂದೇ ಕೆಲಸ ಅಲ್ಲ ಎಂದು ಕೂಡ ಹೇಳುತ್ತಾರೆ. ಇದು ಏತಕ್ಕೆ ಎಂಬುದು ನಮಗೆ ಅರ್ಥವಾಗುವುದಿಲ್ಲ. ಮಾನ್ಯ ಮಂತ್ರಿಗಳವರ ಪ್ರಾಮಾಣಿಕತೆಯ ಬಗ್ಗೆ ನಮಗೆ ವಿಶ್ವಾಸ ಇದೆ. ಎಲ್ಲಾ ಅಧಿಕಾರಿಗಳೂ ಕರಪ್ಟ್ ಅಂತ ಹೇಳುವುದಿಲ್ಲ. ಬೇರೆ ಎಲ್ಲಾ ಇಲಾಖೆಯವರು ದುಡ್ಡು ಮಾಡುವಾಗ ನಾನು ಏಕೆ ದುಡ್ಡು ಮಾಡಬಾರದು ಎನ್ನುವ ಮನೋವೃತ್ತಿ ಬರುತ್ತದೆ. ಎಲ್ಲಾ ಪ್ರದೇಶದಲ್ಲೂ ಬೇಸಿಗೆ ಕಾಲ ಬರುತ್ತಿದೆ. ಆದ್ದರಿಂದ ಅವರಿಗೆ ಸೂಕ್ತ ಆದೇಶವನ್ನು ನೀಡಿ ಕೆಟ್ಟುಹೋದ ಬೋರ್‌ವೆಲ್ಸ್‌ಗಳನ್ನು ತಕ್ಷಣವೇ ರಿಪೇರಿ ಮಾಡುವಂತಹ ವ್ಯವಸ್ಥೆ ಮಾಡಬೇಕು.

ಶ್ರೀ ಸಿ. ಬೈರೇಗೌಡ.—ಮೆಕ್ಯಾನಿಕ್‌ಗಳು ಬಂದು ನನ್ನ ಕ್ಷೇತ್ರದಲ್ಲಿ ಒಂದು ಬೋರ್‌ವೆಲ್ ಅನ್ನು ರಿಪೇರಿ ಮಾಡಿದರು. ೫೦ ಅಡಿ ಪೈಪು ಒಳಗೆ ಹೊರಗೆ ತೆಗೆದು, ೩೦ ಅಡಿ ಪೈಪನ್ನು ಪುನಃ ಜೋಡಿಸಿ ಇನ್ನುಳಿದ ೨೦ ಅಡಿ ಪೈಪು ಆ ಮೆಕ್ಯಾನಿಕ್ ಜೊತೆಯಲ್ಲೇ ಹೋಯಿತು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅದಕ್ಕಾಗಿಯೇ ನಾನು ಹೇಳಿದ್ದು. ಇಂತಹದ್ದರ ಬಗ್ಗೆ ಕೂಡಲೇ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರು ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಧ್ಯಕ್ಷರೇ ಸಹಕಾರ ಇಲಾಖೆಯ ಮಂತ್ರಿಗಳು ಮತ್ತು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ತಂದಿರತಕ್ಕಂತಹ ಬೇಡಿಕೆಗಳ ಮೇಲೆ ಅನೇಕ ಮಾನ್ಯ ಸದಸ್ಯರು ತಮ್ಮ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ನನಗೆ ಸಿಕ್ಕಿರತಕ್ಕಂತಹ ಕಾಲಾವಕಾಶ ಬಹಳ ಕಡಿಮೆ ಇರುವುದರಿಂದ ೨-೩ ನಿಮಿಷಗಳಲ್ಲಿ ಕಾಲವನ್ನು ಸದುಪಯೋಗಪಡಿಸಿಕೊಂಡು ಬಹಳ ವಿಷಯಗಳನ್ನು ಮಾತನಾಡುವುದಕ್ಕೆ ಹೋಗದೆ ಬಹಳ ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ, ನಾನು ಈಗಾಗಲೇ ಸದನದ ಮುಂದೆ ತಂದಿರತಕ್ಕ ವಿಷಯವೇನೆಂದರೆ ಬಾದಾಮಿ ತಾಲ್ಲೂಕು ಪ್ರಾಥಮಿಕ ಸಹಕಾರ ಭೂ ಅಭಿವೃದ್ಧಿ ಬ್ಯಾಂಕಿನಿಂದ ಬೂಚಿನಗುಡ್ಡ ಮತ್ತು ಜಿ. ಎನ್. ಜಾಲಿಹಾಳ ಗ್ರಾಮಕ್ಕೆ ಏತ ನೀರಾವರಿ ಯೋಜನೆಗೆ ಮಂಜೂರು ಆಗಿರತಕ್ಕ ಹಣದಲ್ಲಿ ಅವ್ಯವಹಾರವಾಗಿರತಕ್ಕ ವಿಷಯವನ್ನು ಸದನದ ಗಮನಕ್ಕೆ ತಂದಿದ್ದೇನೆ. ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಾಗ ಅಧಿಕಾರಿಗಳಿಂದ ವಿಚಾರಣೆ ಮಾಡಿಸಿದ್ದಾರೆ. ಅಧಿಕಾರಿಗಳು ಈಗಾಗಲೇ ವರದಿಯನ್ನು ಸಹ ಕೊಟ್ಟಿದ್ದಾರೆ. ಆದರೆ ವರದಿ ಕೊಟ್ಟ ನಂತರ ಇದುವರೆವಿಗೂ ಕ್ರಮ ಕೈಗೊಳ್ಳಲಿಲ್ಲ. ತದನಂತರ ಆ ವರದಿಯ ಮೇಲೆ ನಾನು ಇಲ್ಲಿ ಪ್ರಶ್ನೆ ಹಾಕಿದಾಗ ಉತ್ತರ ರೂಪದಲ್ಲಿ ಕೂಡ ಇರ್‌ಗ್ಯುಲಾರಿಟೀಸ್ ಸ್ಪಷ್ಟವಾಗಿ ಪ್ರೂವ್ ಆಗಿವೆ. ಅಲ್ಲದೆ ಜಾಕ್‌ವೆಲ್ ಮತ್ತು ಪೈಪ್ ಲೈನ್‌ಗಳ ಕಾಮಗಾರಿ ಕೆಲಸವನ್ನು ಕಾನೂನಿನಂತೆ ಟೆಂಡರ್ ಕರೆಯದೆ ಕಂಟ್ರಾಕ್ಟರುಗಳಿಗೆ ವಹಿಸಿಕೊಡಲಾಗಿದೆಯೆಂದು ಹೇಳಿದ್ದಾರೆ. ಮತ್ತೆ ಸದರಿ ಕಾಮಗಾರಿಗಳಿಗೆ ಕೊಡಬೇಕಾಗಿದ್ದ ಹಣಕ್ಕಿಂತ ೧೦ ರಿಂದ ೧೫ ಪರ್ಸೆಂಟ್ ಹೆಚ್ಚು ಹಣವನ್ನೂ ಸಹ ಕೊಡಲಾಗಿದೆ. ಅದನ್ನು ಮಾನ್ಯ ಮಂತ್ರಿಗಳು ನಿಜವೆಂದು ಒಪ್ಪಿಕೊಂಡಿದ್ದಾರೆ. ಕಾಮಗಾರಿಗಳು ಪೂರ್ಣವಾಗುವುದಕ್ಕಿಂತ ಮುಂಚಿತವಾಗಿಯೇ ಪಂಪುಸೆಟ್‌ಗಳನ್ನು ಖರೀದಿಸಿದ್ದಾರೆ. ಪಂಪುಸೆಟ್ ಮತ್ತು ಜಾಕ್‌ವೆಲ್ ಇವುಗಳನ್ನು ಸಿವಿಲ್ ವರ್ಕ್ಸ್ ಆದ ನಂತರ ಪೈಪ್ ಲೈನ್‌ಗಳನ್ನು ಮಾಡಿದ ನಂತರ ಕೆ.ಇ.ಬಿ. ನವರು ಸರ್ಟಿಫೈ ಮಾಡಬೇಕು. ಅವರು ಸರ್ಟಿಫೈ ಮಾಡಿದ ಮೇಲೆ ಪಂಪುಸೆಟ್ಟುಗಳನ್ನು ಪರ್ಚೇಸ್ ಮಾಡಬೇಕೆಂದು ನಬಾರ್ಡ್‌ನವರು ಒಂದು ಕಾನೂನು ಇದೆ. ಆದರೆ ಅವರು ೧೯೮೧ ಇಸವಿಯಲ್ಲೇ ಪಂಪುಸೆಟ್ಟುಗಳನ್ನು ಪರ್ಚೇಸ್ ಮಾಡಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸುಮಾರು ೩ ವರ್ಷಗಳ ಕಾಲ ಅವುಗಳನ್ನು ಐಡಲ್ ಆಗಿ ಇಟ್ಟಿದ್ದರು. ಈ ಪ್ರಕರಣದಲ್ಲಿ ಸುಮಾರು ೫ ಲಕ್ಷ ರೂಪಾಯಿಗಳನ್ನು ಈ ವಿಷಯಕ್ಕೆ ಸಂಬಂಧಪಟ್ಟವರು ತಿಂದಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರೂ ಮತ್ತು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರೂ ಆಗಿದ್ದಾರೆ. ಇವರು ಅಧಿಕಾರಿಗಳ ಮೇಲೆ ತಮ್ಮ ಪ್ರಭಾವ ಬೀರಿ ಇಷ್ಟೊಂದು ಹಣವನ್ನು ತಿಂದಿರತಕ್ಕದ್ದು ನಿಜವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಒಂದು ವೇಳೆ ಅವರು ಹಣವನ್ನು ತಿಂದಿಲ್ಲವೆಂದು ಸಾಭೀತು ಮಾಡಿದರೆ ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಲು ನಾನು ಸಿದ್ಧನಿದ್ದೇನೆ. ಇಂತಹ ಅವ್ಯವಹಾರಗಳನ್ನು ಸರ್ಕಾರದ ಗಮನಕ್ಕೆ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೂ ತಂದರೂ ಸಹ ಅವರು ಯೋಗ್ಯ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೆ ಇರುವುದು ನಿಜಕ್ಕೂ ವಿಷಾದನೀಯ, ಮತ್ತು ದುಃಖಕರವಾಗಿದೆ, ಆದುದರಿಂದ ಮತ್ತೆ ಈ ಪ್ರಕರಣವನ್ನು ಸದನದ ಗಮನಕ್ಕೆ ತರಲು ನಾನು ಇಲ್ಲಿ ನಿಂತಿದ್ದೇನೆ ಅದಕ್ಕೋಸ್ಕರ ಮಾನ್ಯ ಮಂತ್ರಿಗಳು ಈ ಪ್ರಕರಣವನ್ನು ಸಿ.ಓ.ಡಿ. ಗೆ ರೆಫರ್ ಮಾಡುತ್ತಾರೋ ಅಥವಾ ಈಗಾಗಲೇ ಪ್ರೂವ್ ಆಗಿರತಕ್ಕಂಥ ವಿಷಯದ ಮೇಲೆ ಬಂದಿರತಕ್ಕ ವರದಿಯ ಆಧಾರದಮೇಲೆ ತಾವೇ ಕೋರ್ಟ್‌ನಲ್ಲಿ ಚಾರ್ಜ್ ಷೀಟ್ ಹಾಕಿಸಿ ಸಂಬಂಧಪಟ್ಟ ಅಧಿಕಾರಿಗಳು ಯಾರೇ ಇರಲಿ ಮೇಲಾಧಿಕಾರಿಗಳೇ ಆಗಿರಲಿ ತಾಲ್ಲೂಕು ಮಟ್ಟದ ಅಧಿಕಾರಿಗಳೇ ಆಗಿರಲಿ, ಅವರನ್ನು ಈ ಕೂಡಲೇ ಅಮಾನತ್ತುಗೊಳಿಸಿ ತನಿಖೆ ಮಾಡುವುದಕ್ಕೆ ದಯಮಾಡಿ ಮಾನ್ಯ ಮಂತ್ರಿಗಳು ನಮಗೆ ಆಶ್ವಾಸನೆಯನ್ನು ಕೊಡಬೇಕು. ಜನ ಏನು ಮಾತಾಡಿಕೊಳ್ಳುತ್ತಿದ್ದಾರೆ ಎಂದರೆ ಸರ್ಕಾರವು ಈ ಪ್ರಕರಣದಲ್ಲಿ ಶಾಮೀಲಾಗಿರಬೇಕು ಅಥವಾ ಇದಕ್ಕೆ ಆಸ್ಪದ ಮಾಡಿಕೊಡುತ್ತಿರಬೇಕೆಂಬ ಸಂಶಯ ವ್ಯಕ್ತಮಾಡುತ್ತಿದ್ದಾರೆ. ಏಕೆಂದರೆ ನಾನು ಈ ಮೊದಲೇ ಅವರು ಮಾಡಿರತಕ್ಕಂತಹ ಅವ್ಯವಹಾರಗಳನ್ನು ಹಿಂದಿನ ಸರ್ಕಾರದ ಮುಖ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೆ ಆಗಲೂ ಸಹ ನಡೆದಂತಹ ಅವ್ಯವಹಾರಗಳನ್ನು ಮುಚ್ಚುವುದಕ್ಕೆ ಪ್ರಯತ್ನ ನಡೆದಿತ್ತು; ಆದರೆ ನಾನೇ ಕೊನೆಗೆ ಜಯಶಾಲಿಯಾದೆ. ಮತ್ತೆ ಈಗ ೨ನೇ ಸಲ ಅಂತಹ ಚಾರ್ಜಸ್‌ಗಳನ್ನು ನಾನು ಮಾಡಿದರೂ ಕೂಡ ಇದನ್ನು ಮುಚ್ಚಿ ಹಾಕಲು ಪ್ರಯತ್ನಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿವೆ. ನಾನು ಮಂತ್ರಿಗಳ ಮೇಲಾಗಲೀ ಸರ್ಕಾರದ ಮೇಲಾಗಲೀ ಈ ವಿಷಯದ ಮೇಲೆ ಲಂಚದ ಆರೋಪಣೆ ಮಾಡುತ್ತಿಲ್ಲ. ಒಂದು ಪಕ್ಷ ಆರೋಪ ಹೊತ್ತಿರುವವರು ಮುಕ್ತರಾಗಬೇಕಾದರೆ ಯಾವುದೇ ಅವ್ಯವಹಾರದಲ್ಲಿ ಶಾಮೀಲಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಬಹಿರಂಗಪಡಿಸಲಿ. ಇಲ್ಲದೆ ಇದ್ದರೆ ಯಾರು ಇದಕ್ಕೆ ಮುಖ್ಯ ಕಾರಣಕರ್ತರೋ ಯಾರು ಈ ಅವ್ಯವಹಾರಕ್ಕೆ ಕಾರಣಕರ್ತರಾಗಿದ್ದಾರೋ ಅಂತಹವರು ಈ ದೋಷಾರೋಪಣೆಯನ್ನು ಹೊರಲಿ. ಸರ್ಕಾರ ಇದರಲ್ಲಿ ಭಾಗಿಯಾಗಿದೆಯೆಂದು ಜನಗಳಿಂದ ಕೆಟ್ಟ ಹೆಸರನ್ನು ತೆಗೆದುಕೊಳ್ಳಬಾರದು. ಇದು ಪ್ರೂವ್ ಆಗಬೇಕು ಇದಕ್ಕಾಗಿ ನಾನು ಕೊಟ್ಟಿರತಕ್ಕ ಸಲಹೆಯನ್ನು ಒಪ್ಪಿಕೊಳ್ಳಬೇಕು. ಆದ್ದರಿಂದ ಸರ್ಕಾರವು ಇದರ ಕಡೆ ಗಮನ ಹರಿಸಬೇಕೆಂದು ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಈಗ ಹೊರಗೆ ಹೋಗುವವನಾಗಿರುವುದರಿಂದ ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಯಾವುದೇ ಉತ್ತರವಾಗಲೀ ಅಥವಾ ಆಶ್ವಾಸನೆಯನ್ನಾಗಲೀ ಕೊಡುತ್ತಾರೆಂದು ಭಾವಿಸುತ್ತೇನೆ. ಸಹಕಾರ ಮಂತ್ರಿಗಳಾದ ಶ್ರೀಮಾನ್ ಜಾಲಪ್ಪನವರು ಸಹಕಾರಿ ಇಲಾಖೆಯಲ್ಲಿರತಕ್ಕ ಕುಂದು ಕೊರತೆಗಳನ್ನು ನಿವಾರಿಸಲು ಪಟ್ಟಭದ್ರಹಿತಾಶಕ್ತಿಗಳ ಕೈನಲ್ಲಿದ್ದಂತಹ ಸಂಸ್ಥೆಗಳನ್ನು ಅವರ ಕೈಯಿಂದ ಬಿಡಿಸುವುದರಲ್ಲಿ ಬಹಳ ಪ್ರಯತ್ನಪಟ್ಟಿದ್ದಾರೆ. ಅವರು ನಿಜವಾಗಿಯೂ ಒಳ್ಳೆಯ ಸುಧಾರಣೆಯನ್ನು ಸಹಕಾರ ಇಲಾಖೆಯಲ್ಲಿ ತಂದಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಇದೇ ರೀತಿ ಗ್ರಾಮೀಣ ಅಭಿವೃದ್ಧಿ ಸಚಿವರಾದ ನಜೀರ್‌ಸಾಬ್‌ರವರು ಕೂಡ ಜಿಲ್ಲಾಪರಿಷತ್ತು ತರಬೇಕೆಂಬ ಆತುರದಲ್ಲಿ ಯೋಜನೆಗಳ ಕಡೆಗೆ ಹೆಚ್ಚು ಆಸಕ್ತಿ ವಹಿಸಲಿಲ್ಲ ಎನ್ನುವ ಭಾವನೆ ನನಗೆ ಬಂದಿದೆ. ಐ.ಆರ್.ಡಿ.ಪಿ., ಡಿ.ಪಿ.ಐ.ಆರ್. ಡಿ.ಆರ್.ಡಿ.ಎಸ್., ಎನ್.ಆರ್.ಇ.ಪಿ. ಕಾರ್ಯಕ್ರಮದ ವ್ಯಾಪ್ತಿಯನ್ನು ಅಂಕಿ ಸಂಖ್ಯೆಗಳ ಮುಖಾಂತರ ನೋಡಿದರೆ ಈ ಕಡೆಗೆ ಹೆಚ್ಚಿನ ಆಸಕ್ತಿ ವಹಿಸದಂತೆ ಕಾಣುವುದಿಲ್ಲ. ಜಿಲ್ಲಾ ಪರಿಷತ್ತನ್ನು ತಾವು ತಂದಿ ಆದರಿಂದ ನಿಮಗೆ ಕ್ರೆಡಿಟ್ ಬರುತ್ತದೆ. ಇದರ ಬಗ್ಗೆ ಪೀರಿಯಾಡಿಕಲ್ ರಿವ್ಯೂ ಮಾಡಿ. ಪ್ರತಿ ತಿಂಗಳೂ ಜಿಲ್ಲಾಧಿಕಾರಿಗಳನ್ನು ಕರೆಸಿ ಯಾವ ಯಾವ ಹಂತದಲ್ಲಿ ಎಷ್ಟೆಷ್ಟು ಹಣವನ್ನು ವಿನಿಯೋಗಿಸಬೇಕಾಗಿದೆ ? ಅದು ಸರಿಯಾದ ರೀತಿಯಲ್ಲಿ ವಿನಿಯೋಗಿಸಲಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ರಿವ್ಯೂ ಮಾಡುವುದು ಒಳ್ಳೆಯದು. ಕೊಟ್ಟಂತಹ ಹಣ ಜನರಿಗೆ ತಲುಪಿ ಜನರಲ್ಲಿರುವ ಬಡತನ ಮತ್ತು ಅವರಿಗೆ ಆಗಿರತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಒಳ್ಳೆಯ ಮಾರ್ಗದರ್ಶನ ನೀವು ನೀಡುತ್ತೀರೆಂದು ನಾನು ಭಾವಿಸುತ್ತೇನೆ.

೨-೦೦ ಪಿ. ಎಂ.

ಇನ್ನು ಮುಂದಿನ ವರ್ಷ ಅಂದರೆ ೧೯೮೪-೮೫ರಲ್ಲಿ ಸಹ ಅನೇಕ ಯೋಜನೆಗಳನ್ನು ಹಾಕಿಕೊಂಡಿರತಕ್ಕ ಸರ್ಕಾರ ಅವುಗಳನ್ನು ಜಾಗ್ರತೆ ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ. ೧೯೮೩-೮೪ರಲ್ಲಿ ಏನು ಹಿಂದುಳಿದ ಸಮಾಜದ ಮತ್ತು ಹರಿಜನ ಗಿರಿಜನರ ಸಲುವಾಗಿ ವಿಶೇಷ ಘಟಕಯೋಜನೆಗಳನ್ನು ಹಾಕಿಕೊಂಡು ಹಣ ಕೊಟ್ಟಿದ್ದೀರಿ ಅವುಗಳನ್ನು ಸ್ವಲ್ಪವೂ ತೃಪ್ತಿಕರವಾಗಿ ಕಾರ್ಯರೂಪಕ್ಕೆ ತಂದಿಲ್ಲ. ಈ ಯೋಜನೆ ೨೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಕೇವಲ ೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕೆಲವು ಅಧಿಕಾರಿಗಳಿಗೆ ಹರಿಜನ ಗಿರಿಜನರ ಕಲ್ಯಾಣ ಮಾಡಬೇಕೆಂಬ ಭಾವನೆ ಇಲ್ಲದಿರುವುದರಿಂದ ಹಣವನ್ನು ಖರ್ಚು ಮಾಡುವುದಕ್ಕೆ ಮನಸ್ಸು ಬಂದಿರುವುದಿಲ್ಲವೆಂದು ನನ್ನ ಭಾವನೆಗೆ ಬರುತ್ತಿದೆ. ಈ ರೀತಿ ಆಗದಂತೆ ನಜೀರ್ ಸಾಹೇಬರು ಮತ್ತು ಜಾಲಪ್ಪನವರು ಎಚ್ಚರಿಕೆ ವಹಿಸಿ ಉತ್ತಮ ರೀತಿಯಲ್ಲಿ ಕೆಲಸ ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲಿ ಎದು ಹೇಳುತ್ತೇನೆ. ಗ್ರಾಮೀಣ ಅಭಿವೃದ್ಧಿ ಕೆಲಸವನ್ನು ನಿರ್ವಹಿಸತಕ್ಕ ಕಾರ್ಯ ನಿಮ್ಮಿಂದಲೇ ಆಗಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಒಂದು ವಿನಂತಿ ಏನೆಂದರೆ, ಈ ದಿವಸ ರೂಲ್ ೬೯ರ ಪ್ರಕಾರ ಒಂದು ವಿಚಾರ ಇದೆ. ಬಹುಶಃ ಅದು ೪ ಗಂಟೆಗೆ ಬರುತ್ತದೆಂದು ಕಾಣುತ್ತದೆ. ಆದರೆ ಇವತ್ತು ಚಂದ್ರಶೇಖರ್‌ರವರು ಕೂಡ ಡೆಲ್ಲಿಗೆ ಹೋಗುವವರಿದ್ದಾರೆ. ಆದ್ದರಿಂದ ಇದನ್ನು ಮತ್ತೊಂದು ದಿನ ತೆಗೆದುಕೊಳ್ಳೋಣ ಎಂಬುದಕ್ಕೆ ಮಂತ್ರಿಗಳು ಒಪ್ಪಿದರೆ ಆಗಬಹುದು.

ಶ್ರೀ ಎಂ. ಚಂದ್ರಶೇಖರ್.—ಮಂಗಳವಾರ ತೆಗೆದುಕೊಳ್ಳಿ.

ಛೇರ್ಮನ್.—ಆಗಬಹುದು.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಅಧ್ಯಕ್ಷರೆ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಬದಲಾವಣೆಯಾಗಿದೆ. ಬದಲಾವಣೆ ಆದನಂತರ ಜನರ ಮನಸ್ಸಿನಲ್ಲಿ ಬದಲಾವಣೆ ಆಗಬೇಕೆಂಬ ಭಾವನೆ ಇತ್ತು. ಆದರೆ ಯಾರೋ ಮಾಡಿದ ತಪ್ಪಿಗೋಸ್ಕರ ರೊಚ್ಚಿಗೆದ್ದ ಜನ, ಈ ಜನ ಕುರ್ಚಿ ಮೇಲೆ ಕೂರಲಿಕ್ಕೆ ಲಾಯಕ್ಕು ಇಲ್ಲವೆಂದು ಹೇಳಿದರು. ನಾವು ಜನತೆಯ ಮುಂದೆ ಹೋಗಬೇಕಾದರೆ ಜನತಾ ರಂಗ ಎಂದು ಮಾಡಿಕೊಂಡು ಹೋಗಿದ್ದೆವು. ವಿರೋಧ ಪಕ್ಷಗಳ ಒಕ್ಕೂಟ ಎಂದು ಮಾಡಿಕೊಂಡು ಹೋಗಿದ್ದೆವು, ಚುನಾವಣಾ ಪ್ರಣಾಳಿಕೆಯಲ್ಲಿ ಕೂಡ ಅದೇ ರೀತಿ ಹೇಳಿದ್ದೇವೆ.

ಛೇರ್ಮನ್.—ಇವತ್ತು ಇರತಕ್ಕ ಬೇಡಿಕೆ ಸಹಕಾರ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟದ್ದು. ಒಕ್ಕೂಟಕ್ಕೆ ಸಂಬಂಧಪಟ್ಟದ್ದು ಅಲ್ಲ. ನೇರವಾಗಿ ಬೇಡಿಕೆಗಳ ಬಗ್ಗೆ ಮಾತನಾಡಿ.

ಶ್ರೀ ಕೆ. ಶಿವಮೂರ್ತಿ.—ಚುನಾವಣಾ ಸಂದರ್ಭದಲ್ಲಿ ಜನರಿಗೆ ಮಾತು ಕೊಟ್ಟಾಗ ಮುಖ್ಯಮಂತ್ರಿಗಳು ಇರಲಿಲ್ಲ. ಆಗ ಕೊಟ್ಟ ಮಾತು ಏನೆಂದರೆ, ನಾವು ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ, ಬಡವರಿಗೆ ಮತ್ತು ಹರಿಜನ-ಗಿರಿಜನರಿಗೆ ಭೂಮಿ ಕೊಡುತ್ತೇವೆ. ಸಾಲ ಕೊಡುತ್ತೇವೆ, ಹಾಗೂ ಸಣ್ಣ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂಬ ಮಾತನ್ನು ಹೇಳಿದ್ದರು. ನಾವು ಈ ರೀತಿ ವಚನ ಕೊಟ್ಟಿದ್ದೇವೆ ಅಂದಾಗ ನಾವು ನೀವು ಎಲ್ಲರೂ ಒಂದೇ ಅಭಿಪ್ರಾಯ ಇಟ್ಟುಕೊಂಡು ಮಾತು ಕೊಟ್ಟಿದ್ದೆವು. ಅಂದು ನಾವು ನೀವು ಒಂದಾಗಿದ್ದಾಗ ಭಾಷಣ ಮಾಡಿರುವವರು ಬೇರೆಯವರು ಇವತ್ತು ಅಧಿಕಾರದಲ್ಲಿರುವವರು ಬೇರೆಯವರು. ಬಹುಶಃ ಮುಖ್ಯಮಂತ್ರಿಗಳಿಗೆ ಅದು ಗೊತ್ತಿಲ್ಲ.

ಶ್ರೀ ಕೆ.ಬಿ. ಮಲ್ಲಪ್ಪ.—ಅಧಿಕಾರದಲ್ಲಿಲ್ಲದಿದ್ದರೂ ಸಲಹೆಗಳನ್ನು ಕೊಡುವುದಕ್ಕೆ ಅವಕಾಶ ಇದೆ.

ಛೇರ್ಮನ್.—ಇಂದು ಸಭೆಯ ಮುಂದಿರತಕ್ಕ ಬೇಡಿಕೆಗಳ ಮೇಲೆ ಮಾತನಾಡಿ.

ಶ್ರೀ ಕೆ. ಶಿವಮೂರ್ತಿ.—ಜನತೆಯ ಮುಂದೆ ಹೋಗಬೇಕಾದರೆ ಏನು ಹೇಳಿದಿರಿ ? ವಾರ್ಷಿಕ ವರದಿಯಲ್ಲಿ ಏನು ಹೇಳಿದ್ದೀರೆಂಬುದನ್ನು ಈಗ ತಮ್ಮ ಮುಂದಿಡುತ್ತಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ ಶೇಖಡ ೧೦ ರಷ್ಟು ಜನರು ಶ್ರೀಮಂತ ವರ್ಗದವರಿದ್ದಾರೆ. ಈ ಸಹಕಾರ ವ್ಯವಸ್ಥೆಯನ್ನು ಯಾರಿಗೋಸ್ಕರ ಮಾಡಿದ್ದಾರೆ ? ಸಹಕಾರ ಆಂದೋಳನ ಇರತಕ್ಕದ್ದನ್ನು ನೋಡಿ. ರಷ್ಯ, ಜಪಾನ್‌ನಲ್ಲಿ ಸಹಕಾರ ವ್ಯವಸ್ಥೆ ಯಾವ ರೀತಿ ಇದೆ ಎಂಬುದನ್ನು ಆಲೋಚನೆ ಮಾಡಿ. ಯಾರು ದುರ್ಬಲರು ಇರುತ್ತಾರೋ ಆ ವರ್ಗಕ್ಕೆ ಲಾಭ ದೊರೆಯಬೇಕೆಂಬ ರೀತಿಯಲ್ಲಿ ಸಹಕಾರ ವ್ಯವಸ್ಥೆ ಆಗಬೇಕು. ಅಂದರೆ ಪರಸ್ಪರ ಸಹಕಾರ ವ್ಯವಸ್ಥೆ ಬಲಿಷ್ಟರನ್ನು ತುಳಿಯುವುದಕ್ಕೆ, ದುಷ್ಟ ಶಕ್ತಿಯನ್ನು ತುಳಿಯುವುದಕ್ಕೆ ಉಪಯೋಗವಾಗಬೇಕು. ಆದರೆ ಇಲ್ಲಿನ ಸಹಕಾರ ವ್ಯವಸ್ಥೆಯಲ್ಲಿ ಎಂಥಹ ಜನ ಸೇರಿಕೊಂಡಿದ್ದಾರೆಂಬುದನ್ನು ನೋಡಿ. ಶೇಕಡ ೧೦ ಭಾಗ ಶ್ರೀಮಂತರೇನಿದ್ದಾರೆ ಇವರು ಇದನ್ನು ಸಂಪೂರ್ಣವಾಗಿ ಮನಾಪಲಿ ಮಾಡಿಕೊಂಡಿದ್ದಾರೆ. ಈ ಆಂದೋಲನದಲ್ಲಿ ಶ್ರೀಮಂತವರ್ಗದವರಿದ್ದಾರೆಯೇ ಹೊರತು ಬಡವರು ಇಲ್ಲ. ಹರಿಜನಗಿರಿಜನರು ಇಲ್ಲವೇ ಇಲ್ಲ. ಶಕ್ತಿವಂತರು ಇರತಕ್ಕ ಸಹಕಾರ ವ್ಯವಸ್ಥೆ ಏನಿದೆ ಇದು ಬಡವರಿಗೆ ಅನುಕೂಲವಾಗುವುದಕ್ಕೆ ಸಾಧ್ಯವಿಲ್ಲ. ಈ ರೀತಿಯ ಸಹಕಾರ ವ್ಯವಸ್ಥೆ ನಮ್ಮ ರಾಜ್ಯದಲ್ಲಿದೆ.

ಇನ್ನು ಮಾರುಕಟ್ಟೆಯ ವ್ಯವಸ್ಥೆ ಯಾವ ರೀತಿ ಆಗಿದೆ ಎಂದರೆ ದಾವಣಗೆರೆಯಲ್ಲಿ ಮತ್ತು ಚಿತ್ರದುರ್ಗದಲ್ಲಿ ರೈತರು ಬೆಳೆದಿರತಕ್ಕ ದವಸ ಧಾನ್ಯಗಳನ್ನು ಮಾರುಕಟ್ಟೆಗೆ ತರುತ್ತಾರೆ, ಅಲ್ಲಿ ಇವರನ್ನು ಶೋಷಣೆ ಮಾಡತಕ್ಕವರು ಯಾರು ಎಂದರೆ ರೈತರ ಹೆಸರನ್ನು ಹೇಳಿಕೊಂಡು ಶ್ರೀಮಂತರು ದಳ್ಳಾಳಿಗಳಾಗಿ ಕೆಲಸ ಮಾಡುತ್ತಾರೆ. ಇಂಥ ಶ್ರೀಮಂತರಿಂದ ಶೋಷಣೆಯಾಗತಕ್ಕ ಮಾರುಕಟ್ಟೆ ವ್ಯವಸ್ಥೆ ಅಲ್ಲಿದೆ. ಇವರನ್ನು ಬಗ್ಗುಬಡಿಯಲಿಕ್ಕೆ ಕಾನೂನು ಇದೆ. ಆದರೆ ಅದು ಕಾರ್ಯರೂಪಕ್ಕೆ ಬರುತ್ತಿಲ್ಲ. ಆ ಚಾಲನೆ ಕೊಡತಕ್ಕ ಶಕ್ತಿ, ಧೈರ್ಯ, ನೈತಿಕ ಬಲವನ್ನು ಇವರು ಕಳೆದುಕೊಂಡಿದ್ದಾರೆ. ಆದುದರಿಂದ ಮಾರುಕಟ್ಟೆ ವ್ಯವಸ್ಥೆಯಲ್ಲಿ ಎಲ್ಲ ಹಂತದಲ್ಲೂ ದಳ್ಳಾಳಿಗಳಿಂದ ರೈತರ ಶೋಷಣೆ ಆಗುತ್ತಿದೆ. ಮಾರುಕಟ್ಟೆ ಸೆಸ್ ಎಂದು ಏನು ಸಂಗ್ರಹ ಮಾಡುತ್ತೀರಿ ಅದು ಸುಮಾರು ೧೦೦ ರಷ್ಟು ರೈತರಿಂದಲೇ ಬರುತ್ತದೆ. ಈ ರೀತಿ ಬರತಕ್ಕ ಸೆಸ್ ಲೋಕೋಪಯೋಗಿ ಇಲಾಖೆಯವರಿಗೆ ಹೋಗುತ್ತದೆ. ಆಮೇಲೆ ಅದು ರೂರಲ್ ರೋಡ್ ಸ್ಕೀಮಿಗೆ ಹೋಗತಕ್ಕ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಇದು ಒಳ್ಳೆಯದು. ಆದರೆ ಮಾರ್ಕೆಟ್ ಅಭಿವೃದ್ಧಿ ಆಗುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ರೈತರ ಅಭಿವೃದ್ಧಿಗೋಸ್ಕರ ಎಷ್ಟು ಹಣವನ್ನು ವಿನಿಯೋಗ ಮಾಡಿದ್ದೀರಿ ? ಮಾರ್ಕೆಟ್ ಕಮಿಟಿಗಳು ಎಂದು ಏನಿವೆ ಅವು ಎಲೆಕ್ಟೆಡ್ ಬಾಡಿಗಳು. ಆದರೆ ಅವರ ಹತ್ತಿರ ಯಾವ ಅಧಿಕಾರವೂ ಇಲ್ಲದೆ ಎಲ್ಲಾ ಅಧಿಕಾರವು ಅಧಿಕಾರಿಗಳ ಹತ್ತಿರ ಇರುತ್ತದೆ. ಅಧಿಕಾರವನ್ನು ವಿಕೇಂದ್ರೀ ಕರಣ ಮಾಡಬೇಕೆಂದು ಹೇಳುವ ಜನ ಎಲೆಕ್ಟೆಡ್ ಬಾಡಿಗೆ ಯಾವ ಅಧಿಕಾರವನ್ನು ಕೊಟ್ಟಿಲ್ಲ. ದನದ ಮತ್ತು ಕುರಿಯ ಮಾರುಕಟ್ಟೆಯಲ್ಲಿ ಕಮಿಷನ್ ತೆಗೆದು ಕೊಳ್ಳತಕ್ಕ ದಳ್ಳಾಳಿಗಳ ಸಂಖ್ಯೆ ಜಾಸ್ತಿ ಯಾಗುತ್ತಿದೆ. ಈ ದಳ್ಳಾಳಿಗಳನ್ನು ತಪ್ಪಿಸತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಇದರ ಬಗ್ಗೆ ಏನು ಕಾನೂನು ಇದೆ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಇವತ್ತಿನ ದಿವಸ ರೈತ ಸಂಘದ ಬೇಡಿಕೆ ಕೂಡ ಇದೆ. ಅವರು ರೈತರ ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತಿದ್ದಾರೆ. ಚುನಾವಣಾ ಸಂದರ್ಭದಲ್ಲಿ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಒಪ್ಪಲಾಗಿದೆ. ಅಂದಾಗ ಸಣ್ಣ ರೈತರ ಮತ್ತು ಅತಿ ಸಣ್ಣ ರೈತರ ಸಾಲವನ್ನು ಏತಕ್ಕೆ ಮನ್ನಾ ಮಾಡಬಾರದು ? ರೈತರ ಮತವನ್ನು ತೆಗೆದು ಕೊಂಡು ಅವರಿಗೆ ದ್ರೋಹ ಮಾಡತಕ್ಕ ಕೆಲಸಕ್ಕೆ ಕೈಹಾಕುತ್ತಿದ್ದೀರಿ. ಸಹಕಾರ ವ್ಯವಸ್ಥೆಯಲ್ಲಿ ದೊಡ್ಡ ದೊಡ್ಡ ರೈತರು ಇದ್ದಾರೆ. ಅವರೊಡನೆ ಕೆಲಸ ಮಾಡುವುದಕ್ಕೆ ಸಹಕಾರ ಕ್ಷೇತ್ರದಲ್ಲಿ ಎಷ್ಟು ಜನ ಅಧಿಕಾರಿಗಳನ್ನು ಹಾಕಿದ್ದೀರಿ ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಚಿಕ್ಕಪುಟ್ಟ ಸಹಕಾರ ಸಂಘಗಳನ್ನು ನಡೆಸತಕ್ಕದ್ದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೀರೇ ಹೊರತು ದೊಡ್ಡ ದೊಡ್ಡ ಸಹಕಾರ ಸಂಘಗಳಲ್ಲಿ ಯಾವ ರೀತಿ ಕೆಲಸ ನಡೆಯಬೇಕೆಂಬುವರ ಬಗ್ಗೆ ಗಮನ ಹರಿಸಿದ ಹಾಗೆ ಕಾಣುವುದಿಲ್ಲ. ಅಲ್ಲಿ ದೊಡ್ಡದೊಡ್ಡವರು ಸೇರಿಕೊಂಡು ಹೆಗ್ಗಣದ ರೂಪದಲ್ಲಿ ಎಳೆದು ಹಾಕುತ್ತಿದ್ದಾರೆ. ಅದನ್ನು ತಪ್ಪಿಸಿ ಸಣ್ಣ ಮತ್ತು ದೊಡ್ಡ ಸಹಕಾರ ಸಂಘಗಗಳು ಮುಂದುವರಿಯುವುದಕ್ಕೆ ಅನುವು ಮಾಡಿಕೊಡಬೇಕೆಂದು ಹೇಳುತ್ತೇನೆ. ಗ್ರಾಮೀಣ ಅಭಿವೃದ್ಧಿ ಸಚಿವರು ಪ್ರಚಾರದಲ್ಲಿ ಬಹಳ ಮುಂದಿದ್ದಾರೆ. ಅವರು ನೀರು ಕೊಡತಕ್ಕ ಮಂತ್ರಿಗಳು ಎಂದು ಹೆಸರುವಾಸಿಯಾಗಿದ್ದಾರೆ ಅವರ ಪ್ರಚಾರ ಪತ್ರಿಕೆಗಳಲ್ಲಿ ಬಹಳಷ್ಟು ಬಂತು. ಅವರು ಊರಿಗೆ ಬಂದ ತಕ್ಷಣ, ಅವರು ನಮಗೆ ನೀರುಕೊಟ್ಟಿದ್ದಾರೆಂಬ ಮಾತು ಕೇಳಿ ಬರುತ್ತಿತ್ತು. ಆದರೆ ಈಗ್ಗೆ ೨ ತಿಂಗಳಿಂದ ಏಕೋ ಆ ಕೆಲಸ ನಿಂತು ಹೋಗಿದೆ ? ಏಕೆ, ಸರ್ಕಾರದ ಹತ್ತಿರ ದುಡ್ಡಿಲ್ಲವೇ ?

ಮೊದಲೆಲ್ಲಾ ದುಡ್ಡು ಬಂತು, ಈಗ ಬರಲಿಲ್ಲವೆ? ಮಾನ್ಯ ಮಂತ್ರಿಗಳು ಹೇಳುತ್ತಿದ್ದರು ಹಳ್ಳಿಗಳಲ್ಲಿ ಬೋರ್ ಕೊರೆಸಿ ಒಂದೇ ಸಾರಿಗೆ ನೀರು ಕೊಟಿದ್ದೇವೆ ಎಂದು. ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಿದ್ದೀರಿ? ಅದರಲ್ಲಿ ಎಷ್ಟು ಬೋರ್‌ವೆಲ್‌ಗಳಲ್ಲಿ ನೀರು ಬಂತು? ಎಷ್ಟು ವಿಫಲವಾಯಿತು? ಇದರ ಬಗ್ಗೆ ಅಂಕಿಸಂಖ್ಯೆ ಕೊಡಿ. ಎಲ್ಲೆಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದೀರಿ ಎಂಬ ಬಗ್ಗೆ ನಿಮ್ಮಲ್ಲಿ ಮಾಹಿತಿ ಇದೆಯೆ? ಸುಮ್ಮನೆ ಎಲ್ಲಾ ಕಡೆ ಬೋರ್‌ವೆಲ್‌ಗಳನ್ನು ಹಾಕಿದ್ದೇವೆಂದು ಅಂಕಿಸಂಖ್ಯೆಗಳನ್ನು ಕೊಟ್ಟು ಜನರನ್ನು ತಪ್ಪುದಾರಿಗೆ ಎಳೆದಿದ್ದೀರಿ. ನನ್ನ ಕ್ಷೇತ್ರದಿಂದಲೇ ನೀರಿನ ಸಮಸ್ಯೆ ಬಗ್ಗೆ ವಿದ್ಯಾವಂತ ಯುವಕರು ಜಾತಾ ಬಂದರು. ದೊಡ್ಡ ಹಾಲಘಟ್ಟದಿಂದ ಸೈಕಲ್‌ನಲ್ಲಿ ಜಾತಾ ಬಂದಿದ್ದರು. ನಮ್ಮ ಕ್ಷೇತ್ರದಲ್ಲಿ ಎಲ್ಲಿ ಬೋರ್‌ವೆಲ್ ಹಾಕಿದ್ದೀರಿ? ನಾನು ನಮ್ಮಲ್ಲಿರುವ ನೀರಿನ ತೊಂದರೆಯನ್ನು ತಮಗೆ ಪತ್ರ ಬರೆದು ತಿಳಿಸಿದ್ದೇನೆ, ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನಿಯಮ ೩೩೪ರ ಪ್ರಕಾರ ನಾನು ಪ್ರಸ್ತಾಪ ಮಾಡಲು ಪ್ರಯತ್ನಪಟ್ಟಾಗ ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಡಲಿಲ್ಲ. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲದೆ ಹಾಹಾಕಾರ ಎದ್ದಿದೆ. ಇದೇ ದೃಷ್ಟಿಯಿಂದ ನನಗೆ ಚರ್ಚೆ ಮಾಡಲು ಅವಕಾಶ ಸಿಗದಿದ್ದಾಗ ಸಭಾತ್ಯಾಗ ಮಾಡಬೇಕಾಗಿ ಬಂತು. ಈ ರೀತಿ ಕುಡಿಯುವ ನೀರಿನ ಅವ್ಯವಸ್ಥೆ ಇದೆ. ಆದರೆ ತಾವು ಮಾತ್ರ ಕುಡಿಯುವ ನೀರಿನ ಬಗ್ಗೆ ಎಲ್ಲಾ ಕಡೆ ವ್ಯವಸ್ಥೆ ಮಾಡಿದ್ದೇವೆಂದು ಪ್ರಚಾರ ಮಾಡಿದ್ದೀರಿ. ಕೊರೆದಂಥ ಬೋರ್‌ವೆಲ್‌ಗಳು ಏನಾಗಿವೆ? ರಿಪೇರಿಗೆ ಏನು ವ್ಯವಸ್ಥೆ ಮಾಡಿದ್ದೀರಿ? ಪಿ.ಎಚ್.ಇ. ಆಫೀಸಿನಲ್ಲಿ ಹಣ ಇದೆಯೋ ಅಲ್ಲಿ ಕೇಳಿದರೆ ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ೫ ಸಾವಿರ ರೂಪಾಯಿಗಳಲ್ಲಿ ಮೈನ್‌ಟೇನ್ ಮಾಡಬೇಕು, ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಅವರಿಗೆ ಹೆಚ್ಚಾಗಿ ಹಣ ಕೊಡಿಸಿ ಎಂದು ಹೇಳಿದರೂ ಕೊಡಿಸಿಲ್ಲ. ಡೆಪ್ಯುಟಿ ಕಮಿಷನರ್ ಅವರನ್ನು ಕೇಳಿದರೆ ಅವರು ನಮ್ಮಲ್ಲಿ ಪ್ರಾವಿಷನ್ ಇಲ್ಲ ಎಂದು ಹೇಳುತ್ತಾರೆ. ಹೀಗಾಗಿ ಹಳ್ಳಿ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಇಲ್ಲ. ಒಂದು ವಾರಕ್ಕೆ ೩೦–೪೦ ಬೋರ್‌ವೆಲ್‌ಗಳು ಕೆಟ್ಟುಹೋಗುವ ಪರಿಸ್ಥಿತಿ ಇದೆ. ಮಾರ್ಕ್–೨ ಪಂಪುಗಳನ್ನು ರಿಪ್ಲೇಸ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಮಾಡಲಿಲ್ಲ. ನನ್ನ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಆಗಿಲ್ಲ. ಏತಕ್ಕೆ ಈ ರೀತಿ ತಾರತಮ್ಯ ಮಾಡಿದ್ದೀರಿ? ೮೨ ಕಡೆ ನನ್ನ ಕ್ಷೇತ್ರದಲ್ಲಿ ಹೊಸದಾಗಿ ಬೋರ್‌ವೆಲ್ ಹಾಕುವುದಕ್ಕೆ ಅಧಿಕಾರಿಗಳು ಗುರುತು ಮಾಡಿ ವರದಿ ಕೊಟ್ಟಿದ್ದಾರೆ. ತುರ್ತಾಗಿ ಹಾಕಬೇಕಾದ ಬೋರ್‌ವೆಲ್‌ಗಳ ಪಟ್ಟಿ ಇದೆ. ತಾವು ಏತಕ್ಕೆ ಅದಕ್ಕೆ ಸಮ್ಮತಿ ಕೊಟ್ಟಿಲ್ಲ? ಬೋರ್ ಮಾಡಿರುವ ಕಡೆ ಪಂಪ್ ಹಾಕುವುದಕ್ಕೆ ಏತಕ್ಕೆ ವ್ಯವಸ್ಥೆ ಮಾಡಿಲ್ಲ? ಪ್ರತಿ ವಾರ ೩೦–೪೦ ಬೋರ್‌ವೆಲ್‌ಗಳು ಕೆಟ್ಟುಹೋಗುತ್ತಿವೆಯಲ್ಲ ಅದರ ರಿಪೇರಿಗೆ ಏನು ವ್ಯವಸ್ಥೆ ಮಾಡಿದ್ದೀರಿ? ಅದಕ್ಕೆ ಮೊಬೈಲ್ ವ್ಯಾನ್ ಇದೆಯೇ? ರೊಕ್ಕ ಇದೆಯೇ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ನಿಮ್ಮ ಹತ್ತಿರ ಹಣ ಇಲ್ಲ ಎಂದು ಹೇಳುತ್ತಿದ್ದೀರಿ. ರಿಪೇರಿ ಮಾಡುವುದಕ್ಕೂ ಹಣ ಇಲ್ಲದೆ? ಬೋರ್‌ವೆಲ್ ಕೊರೆಯುವುದಕ್ಕೆ ಮುಂತಾದ ಕೆಲಸಗಳಿಗೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಹಣ ಬೇಕಾಗುತ್ತದೆ. ಅದಕ್ಕೆ ಹಣಕಾಸಿನ ತೊಂದರೆ ಇದೆ ಎಂದು ಹೇಳಬಹುದು. ಆದರೆ ರಿಪೇರಿ ಮಾಡುವುದಕ್ಕೆ ಹಣ ಇಲ್ಲ ಎಂದು ಹೇಳಿದರೆ ಹೇಗೆ? ಕಮ್ಯುನಿಟಿ ವಾಟರ್ ಸಪ್ಲೈ ಸ್ಕೀಂ ಎಂದು ಮಾಡಿದ್ದೀರಿ. ಅಲ್ಲಿ ಹಾಕತಕ್ಕ ಮೋಟಾರುಗಳು ಸುಟ್ಟುಹೋಗುತ್ತಿರುತ್ತವೆ. ಒಂದು ದಿವಸ ಬಂದು ರಿಪೇರಿ ಮಾಡಿದರೆ ಮಾರನೆಯ ದಿವಸವೇ ಮತ್ತೆ ಸುಟ್ಟುಹೋಗುತ್ತವೆ. ಇಂಥ ಕಡೆ ಮೋಟಾರುಗಳನ್ನು ರೀಪ್ಲೇಸ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಎನ್.ಆರ್.ಡಬ್ಲ್ಯು.ಎಸ್. ಸ್ಕೀಮಿನ ಪ್ರಕಾರ ಪೈಪ್ ಹಾಕಿದ್ದೀರಿ. ಭರಮಸಾಗರದಲ್ಲೂ ಹಾಕಿದ್ದೀರಿ. ಆದರೆ ಪೈಪೆಲ್ಲಾ ಫಿಲ್ಟ್ ಆಗಿವೆ. ಇದನ್ನು ಸರಿಪಡಿಸಿಲ್ಲ. ಎಸ್.ಸಿ., ಎಸ್.ಟಿ., ಜನಗಳಿಗೆ ಕಮ್ಯುನಿಟಿ ಬೋರ್‌ವೆಲ್‌ಗಳನ್ನು ಮಾಡಿ ನೀರು ಕೊಡತಕ್ಕ ಯೋಜನೆ ಇದೆ. ಅಲ್ಲಿ ವಿದ್ಯುಚ್ಛಕ್ತಿ ಸರಿಯಾಗಿ ಬಾರದಿರುವುದರಿಂದ ಮತ್ತು ಮೋಟಾರ್ ಸುಟ್ಟುಹೋಗುವುದರಿಂದ ಜನರಿಗೆ ನೀರು ಸಿಗದೆ ಬೆಳೆ ಬರುತ್ತಿಲ್ಲ. ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಇಂಡಿವಿಜುಯಲ್ ಬೋರ್‌ವೆಲ್ ಸ್ಕೀಮುಗಳನ್ನು ಮಾಡಿದ್ದೀರಿ. ಇದು ಬಹಳ ಒಳ್ಳೆಯದು. ಆದರೆ ಇದಕ್ಕೆ ಎಷ್ಟು ಹಣ ಇಟ್ಟಿದ್ದೀರಿ? ಯಾವರೀತಿ ಕಾರ್ಯಕ್ರಮ ಮಾಡಿದ್ದೀರಿ? ಬಜೆಟ್ಟಿನಲ್ಲಿ ಹರಿಜನಗಿರಿಜನರು ಮತ್ತು ಸಮಾಜದಲ್ಲಿ ಹಿಂದುಳಿದಿರತಕ್ಕ ದುರ್ಬಲವರ್ಗದವರ ಬಗ್ಗೆ ಚಕಾರ ಎತ್ತಿಲ್ಲ. ಇದರಿಂದ ತಮಗೆ ಈ ಜನರ ಮೇಲೆ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಾಗುತ್ತದೆ. ಆದರೆ ಮಾನ್ಯ ಅಬ್ದುಲ್ ನಜೀರ್‌ಸಾಬ್ ಅವರು ಪ್ರಚಾರದಲ್ಲಿ ಮಾತ್ರ ಬಹಳಷ್ಟು ಇದ್ದಾರೆ. ಬಹಳ ಸಂತೋಷ. ಆದರೆ ಅದಕ್ಕೆ ತಕ್ಕಂತೆ ಕೆಲಸ ಮಾಡಬೇಕು. ನೀವು ಹಳ್ಳಿಯಲ್ಲಿ ಬಂದು ಭಾಷಣ ಮಾಡಿದರೆ ಗೊತ್ತಾಗುತ್ತದೆ. ಹಳ್ಳಿಯವರು ಏನು ಹೇಳುತ್ತಾ

ರೇಬುದನ್ನು ಕೇಳಿ. ಬೋರ್‌ವೆಲ್ ಹಾಕಿದ ತಕ್ಷಣ ಎರಡು ಮೂರು ತಿಂಗಳವರೆಗೆ ವಿದ್ಯುಚ್ಛಕ್ತಿ ಸರಬರಾಜು ಇರುವುದಿಲ್ಲ. ಜಿಯಾಲಿಜಿಸ್ಟ್‌ಗಳು ಬಂದು ಎಲ್ಲಿ ಹಾಕಬೇಕು ಎಂಬ ಬಗ್ಗೆ ಪಾಯಿಂಟ್ ಗುರಿತಿಸುತ್ತಾರೆ. ಆದರೆ ೨೦–೩೦ ಸಾವಿರ ಅರ್ಜಿಗಳು ಹಾಗೆ ಪೆಂಡಿಂಗ್ ಇವೆ. ಹಳ್ಳಿ ಜನರು ಬಂದು ಓಡಾಡುತ್ತಿದ್ದಾರೆ. ಕೆಲಸ ಮಾತ್ರ ಆಗಿಲ್ಲ. ಎಲೆಕ್ಟ್ರಿಸಿಟಿ ಸಪ್ಲೈ......

ಶ್ರೀ ಅಬ್ದುಲ್ ನಜೀರ್‌ಸಾಬ್.—ಸಣ್ಣ ರೈತರಿಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೀರಾ ?

ಶ್ರೀ ಕೆ. ಶಿವಮೂರ್ತಿ.—ಹೌದು. ವಿದ್ಯುಚ್ಛಕ್ತಿ ಸಪ್ಲೈ ಇಲ್ಲದಿರುವುದರಿಂದ ಕೆಲಸ ಮಾಡಿದರೂ ಏನೂ ಪ್ರಯೋಜನವಾಗುತ್ತಿಲ್ಲ. ನೀವು ಹಣ ಕೊಟ್ಟು ಕೆಲಸಮಾಡಿದರೂ ಒಂದು ವರ್ಷದವರೆಗೆ ವಿದ್ಯುಚ್ಛಕ್ತಿ ಸರಬರಾಜು ಮುಂತಾದ ತೊಂದರೆಗಳಾಗಿ ಬೆಳೆ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಣ ಮಂಜೂರಾತಿಯಾಗಿದ್ದರೂ ಯೋಜನೆಯನ್ನು ಜಾರಿ ಮಾಡುವುದರಲ್ಲಿ ವಿಳಂಬವಾಗುತ್ತಿದೆ. ಇದರಿಂದ ಸಣ್ಣ ರೈತರಿಗೆ ಅತಿ ಸಣ್ಣ ರೈತರಿಗೆ ಲುಕ್ಸಾನಾಗುತ್ತಿದೆ. ಇದನ್ನು ಜಾರಿ ಮಾಡುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿಯಬೇಕು. ತಾವೆಲ್ಲಾ ಹಳ್ಳಿಗಾಡಿನಿಂದ ಬಂದಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಹಳ್ಳಿಗಳಲ್ಲಿ ಹೆಣ್ಣು ಮಕ್ಕಳಿಗೆ ಶೌಚಗೃಹವಿಲ್ಲದೆ ಯಾವರೀತಿ ತೊಂದರೆಯಾಗುತ್ತಿದೆ ಎಂಬುದು ತಮಗೆಲ್ಲಾ ಗೊತ್ತಿದೆ. ಆ ಹೆಣ್ಣುಮಕ್ಕಳು ಸಮಾಜದಲ್ಲಿ ಮರ್ಯಾದೆಯಿಂದ ಬಾಳಲು ಶೌಚಗೃಹದ ವ್ಯವಸ್ಥೆ ಮಾಡಬೇಕು. ಆ ಮಾತೆಯರಿಗೆ ಏನು ವ್ಯವಸ್ಥೆ ಮಾಡಿದ್ದೀರಿ ? ಅದಕ್ಕೆ ಎಷ್ಟು ಹಣ ಇಟ್ಟಿದ್ದೀರಿ ? ಬಯಲುಸೀಮೆ ಕಡೆ ತಾವು ಹೋಗಿ ನೋಡಿದರೆ ನೀವೇ ತಲೆ ತಗ್ಗಿಸುತ್ತೀರಿ. ಗಂಡಸರಾದರೆ ಹೇಗೋ ಮಾಡಿ ಕೊಳ್ಳುತ್ತಾರೆ. ಅವರ ಸಮಸ್ಯೆ ಹೆಚ್ಚಾಗಿಲ್ಲ. ಆದರೆ ಹೆಣ್ಣುಮಕ್ಕಳಿಗೆ ಅವಶ್ಯಕವಾಗಿ ಹಳ್ಳಿಗಾಡಿನಲ್ಲಿ ಶೌಚಗೃಹದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಪ್ರಾಥಮಿಕ ಶಾಲಾ ಕಟ್ಟಡದ ಬಗ್ಗೆ ಹೇಳ ಬೇಕೆಂದರೆ ಕಟ್ಟಡಗಳನ್ನು ಹೊಸದಾಗಿ ಕಟ್ಟಿಸುವುದಕ್ಕೆ ಮತ್ತು ರಿಪೇರಿಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ? ಎಷ್ಟು ಹಣ ಇಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿ ಜೀತದಾಳುಗಳಿದ್ದಾರೆ. ೭೨೧ ಜನರಿಗೆ ಮೊನ್ನೆ ಪರಿಹಾರ ಕೊಟ್ಟಿದ್ದೀರಿ. ಆದರೆ ಇನ್ನೂ ೧೧೧೨ ಜೀತದಾಳುಗಳನ್ನು ಹೊಸದಾಗಿ ನನ್ನ ಕ್ಷೇತ್ರದಲ್ಲಿ ಗುರುತಿಸಿದ್ದಾರೆ. ಆದರೆ ಈ ಜೀತದಾಳುಗಳ ಪುನರ್‌ವ್ಯವಸ್ಥೆಗಾಗಲಿ, ಜಮೀನು ಕೊಡುವ ಬಗ್ಗೆಯಾಗಲೀ, ಮನೆ ಕೊಡತಕ್ಕ ವಿಚಾರದಲ್ಲಾಗಲೀ ಯಾವ ರೀತಿ ಕ್ರಮ ತೆಗೆದುಕೊಂಡಿದ್ದೀರಿ ? ಜೀತದಾಳುಗಳು ಹಾಗೆಯೇ ಇರಬೇಕು, ಅವರು ಹಾಗೆಯೇ ಮುಂದುವರಿಯಬೇಕು ಎಂಬುದು ನಿಮ್ಮ ಇಚ್ಛೆಯೆ ? ಅವರು ಗುಲಾಮಗಿರಿ ರೂಪದಲ್ಲಿ ಮುಂದುವರೆಯಬೆ ಕೆಂಬ ಆಸೆ ಇದೆಯೆ ? ಜೀತದಾಳುಗಳ ಬಗ್ಗೆ ಯಾವ ನೀತಿಯನ್ನು ಅನುಸರಿಸಿದ್ದೀರಿ ? ಭೂಮಿ ಕೊಡತಕ್ಕ ವಿಚಾರ ದಲ್ಲಿ ಹೇಳುವುದಾದರೆ ಅಕ್ವಿಜಿಶಿನ್ ಇನ್ನೂ ಆಗಬೇಕು. ಗ್ರಾಮಗಳು ದಿನೆ ದಿನೇ ಬೆಳೆಯುತ್ತಿದೆ. ಎಲ್ಲರಿಗೂ ಮನೆ ಬೇಕು ಎಂದು ಕೇಳುತ್ತಿದ್ದಾರೆ. ಗ್ರಾಮ ಠಾಣಕ್ಕೆ ಭೂಮಿ ಇಲ್ಲ. ತಹಸಿಲ್ದಾರರು ಅಸಿಸ್ಟೆಂಟ್ ಕಮಿಷನರ್ ಅವರು ಜಾಯಿಂಟ್ ಇನ್‌ಸ್ಪೆಕ್ಷನ್ ಮಾಡಿ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಬೇಕು ಎಂದು ಇದೆ. ಆದರೆ ಇದುವರೆಗೆ ಎಷ್ಟು ಅಕ್ವಿಸಿಷನ್ ಮಾಡಿದ್ದೀರಿ ? ತಿ ಪ್ರಗತಿ ಯಿಂದ ಕೆಲಸ ಸಾಗಿದೆಯೆ ? ಭೂಮಿಯನ್ನು ಸ್ವಾಧಿನಪಡಿಸಿಕೊಂಡು ಹರಿಜನಗಿರಿಜನರು ಮತ್ತು ದುರ್ಬಲವರ್ಗದವರಿಗೆ ಹಾಗೂ ಬಡವರಿಗೆ ಎಷ್ಟು ಕೊಟ್ಟಿದ್ದೀರಿ ? ಹರಿಜನಗಿರಿಜನರಿಗೆ ಮತ್ತು ದುರ್ಬಲವರ್ಗದವರಿಗೆ ಭೂಮಿಯನ್ನು ಕೊಡುವ ವಿಚಾರದಲ್ಲಿ ಒಂದು ಮಾತನ್ನೂ ಹೇಳಿಲ್ಲ. ಇದರ ಬಗ್ಗೆ ತಮಗೆ ಮನಸ್ಸಿಲ್ಲ. ಕಾಳಜಿ ಇಲ್ಲ. ಈ ಆಯವ್ಯಯ ಪತ್ರವನ್ನು ನೋಡಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಕೊನೆಯದಾಗಿ ಜಿಲ್ಲಾ ಪರಿಷತ್ತಿನ ಬಗ್ಗೆ ಹೇಳುತ್ತೇನೆ. ಜಿಲ್ಲಾ ಪರಿಷತ್ತಿನ ಬಗ್ಗೆ ಬಹಳ ವಿಷಯಗಳನ್ನು ಹೇಳಿದ್ದೀರಿ. ಮೆಂಟಲ್ ಎಫರ್ಟ್ಸ್, ಫಿಸಿಕಲ್ ಎಫರ್ಟ್ಸ್ ಎಲ್ಲಾ ಹಾಕಿದ್ದೀರಿ. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಹೇಳಿದ್ದೀರಿ. ಅಧಿಕಾರವನ್ನು ಯಾರಿಂದ ಯಾರಿಗೆ ಕೊಡುತ್ತೀರಿ ? ಜನ ಪ್ರತಿನಿಧಿಗಳು ಎಲ್ಲಿದ್ದಾರೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಜಿಲ್ಲಾ ಪರಿಷತ್ತಿನ ಮಸೂದೆ ಸಭೆಯ ಮುಂದೆ ಬಂದಾಗ ಏನು ಬೇಕಾದರೂ ಹೇಳಿ.

ಶ್ರೀ ಕೆ. ಶಿವಮೂರ್ತಿ.—ಇದು ತಮ್ಮ ಖಾತೆ ಬರುವುದಿಲ್ಲವೆ ? ಹಳ್ಳಿ ಜನರನ್ನು ಹೆದರಿಸಿ ಕೊಂಡು ಓಡಾಡುತ್ತಿರುವ ಜನ ವಿಕೇಂದ್ರೀಕರಣದ ಮಾತು ಆಡುತ್ತಿದ್ದೀರಲ್ಲ. ಜನರನ್ನು ಅಧಿಕಾರದ ಚುಕ್ಕಾಣಿಯಲ್ಲಿ ಕೂರಿಸುತ್ತೇವೆಂದು ತಂತ್ರ ಮಾಡುತ್ತಿದ್ದೀರಿ. ತಮಗೆ ಪ್ರಾಕ್ಟಿಕಲ್ ತೊಂದರೆ ಏನು ಎಂಬುದು ಗೊತ್ತಾಗುತ್ತಿಲ್ಲ.

ಇವತ್ತು ನೀವು ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೋಸ್ಕರವಾಗಿ ತಾವು ಇದನ್ನು ಜಾರಿಗೆ ತರುತ್ತಿದ್ದೀರಿ. ಇದನ್ನು ಜಾರಿಗೆ ತರುವಾಗ ತಾವು ದುರ್ಬಲವರ್ಗದವರ ಬಗ್ಗೆ ಹೆಚ್ಚಿನ ಒಂದು ಕಾಳಜಿಯನ್ನು ವಹಿಸಬೇಕಾಗುತ್ತದೆ. ಈ ಒಂದು ವರ್ಗದ ಜನರ ಕೈಯಲ್ಲಿ ಅಧಿಕಾರ ಸಿಗುವ ರೀತಿಯಲ್ಲಿ ಈ ಒಂದು ಕಾನೂನನ್ನು ತೆಗೆದುಕೊಂಡು ಬನ್ನಿ. ಈ ರೀತಿಯ ಜಿಲ್ಲಾ ಪರಿಷತ್ ಮಸೂದೆ ಬಂದರೆ ತೊಂದರೆ ಏನೂ ಇಲ್ಲ. ಇನ್ನು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ ಈ ವಿಷಯವಾಗಿಯೇ ಸದನದಲ್ಲಿ ಅನೇಕ ಸದಸ್ಯರಿಂದ ನಿಯಮ ೩೩ರ ಕೆಳಗೆ ನೋಟೀಸ್‌ಗಳು ಬಂದಿರುತ್ತವೆ. ಇದು ಒಂದು ದೊಡ್ಡ ಸಮಸ್ಯೆಯಾಗಿದೆ, ಇವತ್ತು ನೀರಿನ ಸಮಸ್ಯೆ ಹೆಚ್ಚು ಇರುವ ನಮ್ಮ ಚಿತ್ರದುರ್ಗಕ್ಕೆ ಮೊಬೈಲ್ ವ್ಯಾನ್ ಕೊಟ್ಟಿಲ್ಲ. ಆದರೆ ನೀವು ಚಳ್ಳಕೆರೆಗೆ ಮೊಬೈಲ್ ವ್ಯಾನ್ ಕೊಟ್ಟಿದ್ದೀರಿ. ನಾವು ಕ್ರಾಂತಿರಂಗದವರು ಎಂದು ಏನಾದರೂ ಅಸಡ್ಡೆಯನ್ನು ತೋರಿಸಿದ್ದೀರಾ? ನೀರಿನ ಬಗ್ಗೆಯೇ ಅಲ್ಲಿಂದ ಸೈಕಲ್ ಜಾತಾ ಕೂಡಾ ಬಂತು. ಇವತ್ತು ಅಲ್ಲಿ ನೀರಿನ ಪ್ರಾಬ್ಲಮ್ ಹೆಚ್ಚು ಇದೆ. ಆದ್ದರಿಂದ ಅಲ್ಲಿಗೆ ತುರ್ತಾಗಿ ಕಾರ್ಯವನ್ನು ಕೈಗೊಳ್ಳಬೇಕು. ಇನ್ನು ಕೆಲವು ಮೋಟರ್‌ಗಳನ್ನು ಅಲ್ಲಿ ರಿಪ್ಲೇಸ್ ಮಾಡಬೇಕಾಗಿದೆ. ಕೆಲವು ಕಡೆ ಪೈಪ್‌ಗಳು ಸಿಲ್ಟ್ ಆಗಿದ್ದು ಅವನ್ನು ಬದಲಾವಣೆ ಮಾಡಬೇಕಾಗಿದೆ. ಎನ್.ಆರ್.ಡಬ್ಲ್ಯು. ಸ್ಕೀಮ್‌ನಲ್ಲಿ ನಮಗೆ ಒಂದೂ ವಾಟರ್ ಸಪ್ಲೈ ಸ್ಕೀಮ್‌ನ್ನು ಕೊಟ್ಟಿರುವುದಿಲ್ಲ. ಏಕೆ ಈ ತಾರತಮ್ಯ?

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾವು ಅಧಿಕಾರ ವಹಿಸಿಕೊಂಡ ಮೇಲೆ ಒಂದೂ ಹೊಸದನ್ನು ಕೊಟ್ಟಿಲ್ಲ.

ಶ್ರೀ ಕೆ. ಶಿವಮೂರ್ತಿ—ನಾನು ಹೊಸದನ್ನು ಕೇಳುತ್ತಿಲ್ಲ. ಹಳೆಯದನ್ನು ನಾನು ಕೇಳುತ್ತಿದ್ದೇನೆ. ಚಿತ್ರದುರ್ಗಕ್ಕೆ ಎಷ್ಟು ಅಲಾಟ್ ಆಗಿದೆ ಅಷ್ಟನ್ನಾದರೂ ಕೊಡಿ. ಮಾತೆತ್ತಿದರೆ ಇವರು ಹಣ ಇಲ್ಲ ಎಂದು ಹೇಳಿ ಬರೀ ಪ್ರಚಾರವನ್ನು ತೆಗೆದುಕೊಳ್ಳುವುದಕ್ಕೆ ಕೆಲಸ ಮಾಡುತ್ತಿದ್ದಾರೆ. ಕುಡಿಯುವ ನೀರಿನ ಬಗ್ಗೆ ಇವರು ಇನ್ನೂ ಹೆಚ್ಚಿನ ಆಸಕ್ತಿವಹಿಸಬೇಕೆಂದು ಹೇಳಿ ಗಾಳಿ ಎಷ್ಟು ಮುಖ್ಯವೋ ನೀರು ಅಷ್ಟೇ ಮುಖ್ಯ ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಅಪ್ಪಣ್ಣ ಹೆಗ್ಡೆ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರುಗಳು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಇದಕ್ಕೆ ಸದನದ ಎಲ್ಲ ಸದಸ್ಯರೂ ಬೆಂಬಲವನ್ನು ನೀಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಎರಡು ಸಲಹೆ ಸೂಚನೆಗಳನ್ನು ಈ ಬಗ್ಗೆ ನೀಡಬಯಸುತ್ತೇನೆ. ಸಹಕಾರಿ ಇಲಾಖೆಯ ವ್ಯವಸಾಯ ಸೇವಾ ಸಹಕಾರ ಸಂಘಗಳು ಗ್ರಾಮಾಂತರ ಪ್ರದೇಶದಲ್ಲಿ ರೈತರ ಹಾಗೂ ಹಿಂದುಳಿದ ವರ್ಗದವರ ದುರ್ಬಲ ವರ್ಗದವರ ಅಭಿವೃದ್ಧಿಗೆ ಹೆಚ್ಚಿನ ಆರ್ಥಿಕ ನೆರವನ್ನು ಕಲ್ಪಿಸಿ ಕೊಡತಕ್ಕ ಸಂಸ್ಥೆಗಳಾಗಿವೆ. ಸುಮಾರು ೧೯೭೫–೭೬ರಲ್ಲಿ ಈ ಸಂಸ್ಥೆಗಳನ್ನು ಒಂದುಗೂಡಿಸಿದ್ದರ ಪ್ರಯುಕ್ತ ಈ ಸಂಸ್ಥೆಗಳಿಂದ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಒಂದು ಸೌಲತ್ತು ಸಿಗುತ್ತಾ ಇಲ್ಲ. ಏಕೆಂದರೆ ಇವನ್ನು ಕೇಂದ್ರೀಕರಿಸಿರುವುದರಿಂದ ಅವುಗಳ ಸದುಪಯೋಗ ಗ್ರಾಮಾಂತರ ಪ್ರದೇಶದಲ್ಲಿ ಆಗಿಲ್ಲ. ಆದ್ದರಿಂದ ಪಂಚಾಯಿತಿ ಮಟ್ಟದಲ್ಲಿ ಈ ಪ್ರಾಥಮಿಕ ವ್ಯವಸಾಯ ಸೇವಾ ಸಹಕಾರಿ ಸಂಘಗಳನ್ನು ಸ್ಥಾಪಿಸುವುದರಿಂದ ಹೆಚ್ಚಿನ ಒಂದು ಅನುಕೂಲವಾಗುತ್ತದೆಯಲ್ಲದೇ ಬೇನಾಮಿ ಸಾಲ ಕೊಡುವುದನ್ನು ತಪ್ಪಿಸುವುದರಿಂದ ಹೆಚ್ಚಿನ ಒಂದು ಸಹಾಯ ಆಗುತ್ತದೆ ಎನ್ನುವ ಒಂದು ಅಂಶವನ್ನು ಮಾನ್ಯ ಸಹಕಾರಿ ಕ್ಷೇತ್ರದ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇನ್ನು ಪ್ರಾಥಮಿಕ ವ್ಯವಸಾಯ ಸಹಕಾರಿ ಸಂಘಗಳು ಅಥವಾ ಪ್ರಾಥಮಿಕ ಹಂತದಲ್ಲಿರುವ ಇನ್ನಿತರೆ ಸಹಕಾರಿ ಸಂಘಗಳು ಆಹಾರ ಪದಾರ್ಥಗಳನ್ನು ವಿತರಣೆ ಮಾಡುವ ಹೊಣೆಯನ್ನು ಇಟ್ಟುಕೊಂಡಿವೆ. ಇವತ್ತಿನ ದಿವಸ ಹೆಚ್ಚಿನ ಸಹಕಾರಿ ಸಂಘಗಳು ಚೆನ್ನಾಗಿ ನಡೆಯುತ್ತಿಲ್ಲ. ಇದು ಮುಖ್ಯವಾಗಿ ಈ ಸಹಕಾರಿ ಸಂಘಗಳಲ್ಲಿ ಇರತಕ್ಕ ಆರ್ಥಿಕ ಅನಾನುಕೂಲ. ಬಹುಶಃ ಅವರು ಸರಬರಾಜು ಮಾಡತಕ್ಕ ಆಹಾರ ಪದಾರ್ಥಗಳ ವಿಚಾರದಲ್ಲಿ ಹೆಚ್ಚಿನ ಹೊಣೆಗಾರಿಕೆಯನ್ನು ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರಿ ಸಂಘಗಳು ವಹಿಸಿಕೊಂಡು ಸ್ವಲ್ಪ ವಿನಾಯಿತಿಯನ್ನು ಎಂದರೆ ಆರ್ಥಿಕ ವಿನಾಯಿತಿಯನ್ನು ಮಾಡಿ ಕ್ಲುಪ್ತ ಕಾಲಕ್ಕೆ ವಿತರಣೆ ಮಾಡುವ ವ್ಯವಸ್ಥೆಯನ್ನು ಚೆನ್ನಾಗಿ ಮಾಡುವ ಕೆಲಸ ಆಗಬೇಕು. ಅದೂ ಅಲ್ಲದೆ ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಅನೇಕ ಜನ ಕಾರ್ಯದರ್ಶಿಗಳು ಏನಿದ್ದಾರೆ ಅವರು ಸಾಮಾನ್ಯವಾಗಿ ನಮ್ಮ ಗ್ರಾಮ ಲೆಕ್ಕಿಗರ ರೀತಿ ಒಂದೇ ಸಂಸ್ಥೆಯಲ್ಲಿ ಇರುವುದರಿಂದ ಸಾಮಾನ್ಯ ಜನರ ಕಷ್ಟಸುಖ ಏನನ್ನೂ ಅರಿಯದೇ ಯಾವ ಕಾಲದಲ್ಲಿ ಏನು ಸಹಾಯ ಮಾಡಬೇಕೋ ಅವನ್ನು ಸಲ್ಲಿಸುವುದರಲ್ಲಿ ಬಹಳ ವಿಳಂಬ ಮಾಡುತ್ತಿದ್ದಾರೆ. ಅದೂ ಅಲ್ಲದೆ ಜನರನ್ನು ಸಾಕಷ್ಟು ಸಂಕಷ್ಟಕ್ಕೆ ಈಡು

ಮಾಡುತ್ತಿದ್ದಾರೆ. ಆದುದರಿಂದ ಏರೂಪದ ಒಂದು ಕಾನೂನು ವ್ಯವಸ್ಥೆಗೆ ಒಳಪಡಿಸಿ ಅವರನ್ನು ವರ್ಗಾವಣೆ ಮಾಡತಕ್ಕ ಒಂದು ಅಧಿಕಾರವನ್ನು ಇಲಾಖೆಗೆ ಕೊಡಬೇಕು. ಸ್ಥಳೀಯವಾಗಿರತಕ್ಕ ಆಡಳಿತ ಮಂಡಲಿಗೆ ಯಾವುದೋ ಒಂದು ರೀತಿಯ ಮುಲಾಜು ಇರುವುದರಿಂದ ಈ ಬಗ್ಗೆ ಸಾಕಷ್ಟು ಗಮನವನ್ನು ಕೊಡುತ್ತಿಲ್ಲ. ಆದ್ದರಿಂದ ನೇರವಾಗಿ ಇವನನ್ನು ಇಲಾಖೆಗೆ ಒಳಪಡಿಸಿ ವರ್ಗಾವಣೆ ಮಾಡತಕ್ಕ ಅಧಿಕಾರವನ್ನು ಇಟ್ಟುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ಮುಖ್ಯವಾಗಿ ಹೇಳಬೇಕೆಂದರೆ, ವ್ಯವಸಾಯ ಉತ್ಪನ್ನ ಉಪ ಮಾರುಕಟ್ಟೆಗಳನ್ನು ನಮ್ಮ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಲಕ್ಷಾಂತರ ರೂಪಾಯಿ ವ್ಯಯಮಾಡಿ ಕಟ್ಟಡ ಹಾಗೂ ಪ್ರಾಂಗಣಗಳನ್ನು ಕಟ್ಟಿದ್ದಾರೆ. ಇದು ವಿಶ್ವ ಬ್ಯಾಂಕಿನ ಸಹಾಯವನ್ನು ಪಡೆದು ಕೆಲಸ ಮಾಡಿದ್ದು. ಆದರೆ ಇದರ ಉಪಯೋಗ ಇವತ್ತು ರೈತ ಬಂಧುಗಳಿಗೆ ಸಿಗುತ್ತಾ ಇಲ್ಲ. ಆದ್ದರಿಂದ ಬಹಳ ದಿನ ಮಾಡದೇ ಅತಿ ಶೀಘ್ರವಾಗಿ ಈ ಮಾರುಕಟ್ಟೆ ಸ್ಥಾಪನೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮೀಣ ಅಭಿವೃದ್ಧಿ ಸಚಿವರ ಗ್ರಾಮಾಂತರ ನೀರು ಸರಬರಾಜು ಕಾರ್ಯಕ್ರಮ ಬಹಳ ಮಂದಗತಿಯಲ್ಲಿ ಸಾಗಿದೆ. ಏಕೆಂದರೆ ಹಿಂದಿನ ಸರ್ಕಾರದಲ್ಲಿ ಮಂಜೂರಾಗಿರತಕ್ಕ ಕಾರ್ಯಕ್ರಮಗಳು ಇನ್ನೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇವು ಯಾವ ಕಾರಣಕ್ಕೆ ನಿಂತಿವೆಯೋ ನನಗೆ ಗೊತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಶೀಘ್ರವಾಗಿ ಕಾರ್ಯಕ್ರಮಗಳನ್ನು ಕೈಗೊಂಡು ಹಿಂದೆ ಮಂಜೂರಾಗಿರತಕ್ಕ ಕೆಲಸಗಳನ್ನು ಬೇಗ ಮುಗಿಸಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಈಗ ಪಂಚಾಯಿತಿಗಳು ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಬಗ್ಗೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ನೀಡಿ ಆ ಬಗ್ಗೆ ಆದೇಶ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಕೊನೆಯದಾಗಿ ಗ್ರಾಮಾಂತರ ಉದ್ಯೋಗ ಯೋಜನೆ ಕೆಲಸವನ್ನು ನಿರ್ವಹಿಸಬೇಕಾದರೆ ಅನೇಕ ಸಂದರ್ಭಗಳಲ್ಲಿ ತಾಂತ್ರಿಕ ಲೋಪದೋಷಗಳು ಬರುತ್ತವೆ. ಈ ತಾಂತ್ರಿಕ ಅಡಚಣೆಗಳನ್ನು ನಿರ್ವಹಿಸಬೇಕಾದರೆ ಜಿಲ್ಲಾಧಿಕಾರಿಗಳಿಗೆ ವಿಶೇಷವಾದ ಒಂದು ಅಧಿಕಾರವನ್ನು ನೀಡಿದರೆ ಈ ಯೋಜನೆಗಳು ಯಶಸ್ವಿಯಾಗುವುದಕ್ಕೆ ಸಾಧ್ಯವಿದೆಯಾದ್ದರಿಂದ ಈ ದಿಸೆಯಲ್ಲಿ ಮಾನ್ಯ ಸಚಿವರು ಹೆಚ್ಚಿನ ಗಮನವನ್ನು ಹರಿಸಿದರೆ ಗ್ರಾಮಾಂತರ ಮಟ್ಟದಲ್ಲಿ ಇರತಕ್ಕ ತಾಂತ್ರಿಕ ಅಡಚಣೆಯನ್ನು ನಿವಾರಿಸುವಲ್ಲಿ ಜಿಲ್ಲಾಧಿಕಾರಿಗಳು ಸಫಲರಾಗುತ್ತಾರೆಂದು ಹಾಗೂ ಆ ಯೋಜನೆಯು ಶೀಘ್ರವಾಗಿ ಆಗುವಂತೆ ಪ್ರೋತ್ಸಾಹಿಸಿದಂತಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೨–೩೦ ಪಿ.ಎಂ.

† ಶ್ರೀ ಎನ್. ಶಿವರಾವ್ (ಬಂಟವಾಳ).—ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ತಮ್ಮ ಮುಖಾಂತರ ಇಲಾಖೆಯ ಪರಿಷ್ಕಾರಿಗೆ ಅರುಹಲು ಇಲ್ಲಿ ನಿಂತಿದ್ದೇನೆ. ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡಬೇಕಾಗಿದ್ದರೆ ಅದಕ್ಕೆ ಸಿಬ್ಬಂದಿವರ್ಗ ಬಹಳ ಅಗತ್ಯವಿದೆ. ಆದರೆ ಸಹಕಾರ ಇಲಾಖೆಯಿಂದ ಬಾಧಿತ ಆದೇಶದಿಂದ ಇವೊತ್ತು ಸಹಕಾರ ಸಂಘಗಳಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡು ಕೆಲಸಕಾರ್ಯ ನಿರ್ವಹಿಸಲಿಕ್ಕೆ ಬಹಳ ಕಷ್ಟವಾಗುತ್ತಿದೆ. ಇವೊತ್ತು ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಆವಶ್ಯಕ ಸಾಮಗ್ರಿಗಳ ವಿತರಣೆ ಮಾಡುವುದರಲ್ಲಿ ಟೋಟಲ್ ಟರ್ನ್‌ಓವರ್ ಜಾಸ್ತಿಯಾಗುತ್ತಿದೆ. ಆದ್ದರಿಂದ, ಅಲ್ಲಿ ಸಿಬ್ಬಂದಿ ವರ್ಗ ಬಹಳ ಅಗತ್ಯವಿದೆ. ಆದ್ದರಿಂದ, ತಾವು ಗೈಡ್‌ಲೈನ್ಸ್ ಸಡಿಲಗೊಳಿಸಿ, ಸಹಕಾರ ಸಂಘಗಳಿಗೆ ನೇಮಕ ಮಾಡತಕ್ಕ ಸವಲತ್ತು ಒದಗಿಸಿಕೊಡದಿದ್ದರೆ ಪ್ರಾಥಮಿಕ ಸಹಕಾರ ಸಂಘಗಳು ಕೆಲಸ ಮಾಡಲಿಕ್ಕೆ ಕಷ್ಟವಾಗುತ್ತದೆ. ಇನ್ನು ರೈತ ಸೇವಾ ಸಹಕಾರ ಸಂಘದಲ್ಲಿ, ಕೇಂದ್ರ ಸಹಕಾರಿ ಬ್ಯಾಂಕಿನ ಅಧಿಕಾರಿ. ಮ್ಯಾನೇಜಿಂಗ್ ಡೈರೆಕ್ಟರ ಆಗಿರಬೇಕೆಂದು ಇದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಎಂ. ಡಿ. ಮಾಡಬೇಕೆಂದು ಉಂಟು. ಮೂರು ವರ್ಷಗಳ ಕಾಲ ಸಂಬಳ ಕೊಡಬೇಕೆಂದು ಮಾಡಿದ್ದೀರಿ. ಅನಂತರ ಅವರೇ ಕೊಡಬೇಕೆಂದು ಮಾಡಿದ್ದೀರಿ. ರೈತ ಸೇವಾ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡದೆ ಇರುವುದರಿಂದ, ಎಂ. ಡಿ. ಸಂಬಳ ಕೊಡಲಿಕ್ಕೆ ಬಹಳ ಕಷ್ಟ ಇದೆ. ಈ ಮೂರು ವರ್ಷದ ಅವಧಿಯನ್ನು ಐದು ವರ್ಷಕ್ಕೆ ಮುಂದೂಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಎಲ್ಲೆಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಸಹಾಯವಿಲ್ಲದೆ, ಸಹಕಾರ ಸಂಘಗಳು ತೊಂದರೆಯಲ್ಲಿವೆ, ಅಲ್ಲಿಗೆ ಕೇಂದ್ರ ಸಹಕಾರ ಬ್ಯಾಂಕಿನಿಂದ ಸಹಾಯ ಸೌಲಭ್ಯಗಳನ್ನು ಒದಗಿಸಿಕೊಡ

ಬೇಕೆಂದು ಹೇಳುತ್ತೇನೆ. ಇನ್ನು ಇವೊತ್ತು ಟಿಎಪಿಎಂಸಿ ಗಿರಣಿಗಳು ಮುಚ್ಚುವಂಥ ಪರಿಸ್ಥಿತಿ ಬಂದಿದೆ. ನಮ್ಮ ಜಿಲ್ಲೆಯಲ್ಲಿ ಹರಾಜು ಹಾಕುವ ಪರಿಸ್ಥಿತಿ ಬಂದಿದೆ. ಮೊದಲು ರೈತರಿಂದ ಲೆವಿ ಪಡೆಯುವುದು ಇತ್ತು. ಆಗ ಭತ್ತ ಸರಿಯಾಗಿ ಸಿಕ್ಕುತ್ತಿತ್ತು. ಈಗ ಮಿಲ್ ಪಾಯಿಂಟ್‌ನಲ್ಲಿ ಲೆವಿ ಬಿದ್ದ ಕಾರಣ, ಅಲ್ಲಿ ಇನ್ನೊಬ್ಬರಿಂದ ತೆಗೆದುಕೊಂಡುಬಂದು ಅಕ್ಕಿ ಮಾಡಿಸಿಕೊಟ್ಟರೆ ಅದರಲ್ಲಿ ೫೦ ಪರ್‌ಸೆಂಟ್ ಲೆವಿ ಕೊಡಬೇಕಾದ ಪ್ರಸಂಗ ಬರುತ್ತದೆ. ಅದರಿಂದ ನಷ್ಟವಾಗುತ್ತದೆ. ಆದುದರಿಂದ ಇವರ ಬಗ್ಗೆ ಸರಿಯಾಗಿ ಯೋಚನೆ ಮಾಡಿ ಅವರು ೫೦ ಪರ್‌ಸೆಂಟ್ ನಷ್ಟ ಹೊಂದುವುದನ್ನು ಸರ್ಕಾರ ತುಂಬಿಸುವಂತೆ ಮಾಡಬೇಕು. ಮಿಲ್‌ಪಾಯಿಂಟ್‌ನಲ್ಲಿ ಟಿಎಪಿಎಂಸಿಯವರಿಗೆ ವಿನಾಯ್ತಿ ಕೊಡಬೇಕು. ಇನ್ನು ಸಹಕಾರಿ ಯೂನಿಯನ್‌ಗಳು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿವೆ. ಅದನ್ನು ಆಡಿಟ್ ಫೀಜ್‌ಗೆ ಒಳಪಡಿಸಿ, ಅಲ್ಲಿ ಫೀಜ್ ಕೊಡಬೇಕೆಂದು ಹೇಳುತ್ತಿದ್ದಾರೆ. ಇವು ಲಾಭ ಮಾಡತಕ್ಕ ಸಂಸ್ಥೆಗಳಲ್ಲ. ಈ ಯೂನಿಯನ್‌ಗಳನ್ನು ಆಡಿಟ್ ಫೀ ಬಂಧನದಿಂದ ಬಿಡುಗಡೆಗೊಳಿಸಿ ಅವುಗಳನ್ನು ಸ್ವಯಂಸಂಸ್ಥೆಗಳಾಗಿ ಇಡಬೇಕೆಂದು ಹೇಳುತ್ತೇನೆ. ಸೂಪರ್‌ವೈಸರಿ ಯೂನಿಯನ್ ಎಂದು ಉಂಟು. ಅದಕ್ಕೆ ರಿಯಾಯಿತಿ ಉಂಟು. ಅದೇ ರೀತಿ ಈ ಸಹಕಾರಿ ಯೂನಿಯನ್‌ಗಳಿಗೆ ತರಬೇಕು. ದಿನಬಳಕೆ ವಸ್ತುಗಳನ್ನು ವಿತರಣೆ ಮಾಡತಕ್ಕ ಕಾಲದಲ್ಲಿ ಮಾರ್ಜಿನ್ ಪ್ರಾಫಿಟ್ ಕಡಿಮೆ ಇರುತ್ತದೆ. ಅವರಲ್ಲಿ ಸಾಗಾಣಿಕೆ ವೆಚ್ಚ ಸಿಬ್ಬಂದಿ ಖರ್ಚು ಎಲ್ಲಾ ಸೇರಿಸಿ, ಸಹಕಾರ ಸಂಘಗಳಿಗೆ ಸರಿಯಾದ ನಿಗದಿ ಮಾಡುವಂಥ ಅಧಿಕಾರ ಬೇಕು. ಇಲ್ಲದೇ ಹೋದರೆ ಆ ಸಂಘಗಳಿಗೆ ಕಷ್ಟ ಉಂಟಾಗುತ್ತದೆ. ಆದುದರಿಂದ, ಎಲ್ಲಾ ಸಹಕಾರ ಸಂಘಗಳಿಗೂ, ತಮ್ಮಿಂದ ಒಂದು ಆದೇಶ ಕಳುಹಿಸಿ ಒಂದು ಬೆಲೆಯನ್ನು ನಿಗದಿ ಮಾಡಿದರೆ, ಸಹಕಾರ ಸಂಘಗಳು ಲಾಭಗಳಿಸಬಹುದು. ಪ್ರಾಯೋಗಿಕವಾಗಿ, ತಾಲ್ಲೂಕಿನಲ್ಲಿರತಕ್ಕ ಕೆಲವು ಸಹಕಾರ ಸಂಘಗಳನ್ನು ತೆಗೆದುಕೊಂಡು ಒಂದೇ ಸಂಘದ ವ್ಯಾಪ್ತಿಯಲ್ಲಿ ಬರುವಂತೆ ಮಾಡಿ, ಎಲ್ಲಾ ರೈತರಿಗೂ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಈ ಸಹಕಾರ ಸಂಘಗಳ ಮುಖಾಂತರ ಒದಗಿಸಿ ಸ್ಥಳೀಯವಾಗಿ ಎಲ್ಲಾ ಸವಲತ್ತುಗಳು ಸಿಕ್ಕುವಂಥ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಮಾಡಿ ಅದರ ಫಲ ಅವರಿಗೆ ಸಿಕ್ಕುವಂತೆ ಆಗಬೇಕು. ಪ್ರಾಥಮಿಕ ಸೇವಾ ಸಹಕಾರ ಸಂಘಗಳ ಬಗ್ಗೆ ತ್ವರಿತವಾಗಿ ಆದೇಶ ಕೊಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಸಹಕಾರ ಸಂಘಗಳು ಪ್ರಗತಿಯನ್ನು ಹೊಂದಿವೆ. ಸಹಕಾರ ತರಬೇತಿ ಕೇಂದ್ರವನ್ನು ಒದಗಿಸಿಕೊಡಬೇಕೆಂದು ನಾವು ಎಲ್ಲಾ ಮಟ್ಟದಲ್ಲಿಯೂ ಹೇಳಿದರೂ ಅದು ನಿಷ್ಫಲವಾಗಿದೆ. ಅದು ಇವೊತ್ತು ಮಂಜೂರಾತಿಗಾಗಿ ನಿಮ್ಮ ಬಳಿ ಉಂಟು. ಅದನ್ನು ಬೇಗ ಮಾಡಿಕೊಡಬೇಕೆಂದು ಹೇಳುತ್ತೇನೆ.

ಡಾ॥ ವಿ. ಎಸ್. ಆಚಾರ್ಯ.—ದಕ್ಷಿಣ ಕನ್ನಡ ಜಿಲ್ಲೆಯ ತರಬೇತಿ ಕೇಂದ್ರದ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಅದರ ಬಗ್ಗೆ ಬೇಗ ಸರ್ಕಾರಿ ಆಜ್ಞೆ ಹೊರಡಿಸಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಆದಷ್ಟು ಬೇಗ ಮಾಡಬೇಕೆಂದು ನಾನೂ ಸಹ ಹೇಳುತ್ತೇನೆ.

ಶ್ರೀ ಎನ್. ಶಿವರಾವ್.—ನಮ್ಮ ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆ. ಕೇಂದ್ರ ಸಹಕಾರಿ ಬ್ಯಾಂಕ್, ಉತ್ತಮವಾಗಿ ಕೆಲಸ ಮಾಡತಕ್ಕ ಬ್ಯಾಂಕು. ೬ ಕೋಟಿ ರೂಪಾಯಿ ಅಲ್ಪಾವಧಿ ಸಾಲವನ್ನು ರೈತರಿಗೆ ಕೊಟ್ಟಿದೆ. ಮೂರು ಕೋಟಿ ರೂಪಾಯಿ ಮಾತ್ರ ನಬಾರ್ಡ್ ಅವರ ರಿಯಾಯ್ತಿ ದರ ತುಂಬಿಸಲಿಕ್ಕೆ ಕೊಟ್ಟಿದ್ದಾರೆ. ಮೂರು ಕೋಟಿ ರೂಪಾಯಿ ತನ್ನ ಸ್ವಂತ ಹಣ ಕೊಟ್ಟಿದೆ. ಸರ್ಕಾರದ ಆದೇಶದ ಪ್ರಕಾರ ರಿಯಾಯಿತಿ ಬಡ್ಡಿ ಕೊಟ್ಟಿದ್ದರಿಂದ, ಕೇಂದ್ರ ಸಹಕಾರಿ ಬ್ಯಾಂಕು ಬಹಳಷ್ಟು ಹಣ ಕಳೆದುಕೊಂಡಿದೆ. ಆದ್ದರಿಂದ ನಾವು ಕೇಂದ್ರ ಸಹಕಾರಿ ಬ್ಯಾಂಕಿಗೆ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಕೇಂದ್ರ ಸಹಕಾರಿ ಬ್ಯಾಂಕು ಫಿಷ್ ಮಾರ್ಕೆಟಿಂಗ್ ಫೆಡರೇಷನ್‌ನವರಿಗೆ ೫೦ ಲಕ್ಷ ರೂಪಾಯಿ ಕೊಟ್ಟಿದೆ. ಅವರ ಹಣ ಮತ್ತು ಬಡ್ಡಿ ವಾಪಸ್ಸು ಬರದೇ ಕೇಂದ್ರ ಸಹಕಾರಿ ಬ್ಯಾಂಕ್ ಆರ್ಥಿಕ ಸ್ಥಿತಿಯಲ್ಲಿ ಬಹಳ ಹಿಂದುಳಿದಿದೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು, ಸರ್ಕಾರ ಗ್ಯಾರಂಟಿ ಇರುವುದರಿಂದ, ಅವರು ೫೦ ಲಕ್ಷ ರೂಪಾಯಿ ಅಸಲು ಕೊಡಲಿಕ್ಕೆ ಸಾಧ್ಯವಾಗದೇ ಇದ್ದರೂ ಬಡ್ಡಿಯನ್ನಾದರೂ ಕೊಡಿಸಿ, ಕೇಂದ್ರ ಸಹಕಾರಿ ಬ್ಯಾಂಕಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈಗ ಮೊನ್ನೆ ತಿದ್ದುಪಡಿಯಾಗಿರತಕ್ಕ ಮಸೂದೆಯ ವಿಚಾರದಲ್ಲಿ ಒಂದು ಇಂಟರ್‌ಪ್ರಿಟೇಷನ್ ಮಾಡಿಕೊಂಡಿದ್ದಾರೆ. ಒಂದು ಸಂಘಕ್ಕೆ ಅಧ್ಯಕ್ಷರಾಗಬೇಕಾದರೆ, ಉಪಾಧ್ಯಕ್ಷರಾಗಬೇಕಾದರೆ ಅವರು ಆರು ವರ್ಷದವರೆಗೆ ಇದ್ದು, ಮತ್ತೆ ಮೂರು ವರ್ಷದವರೆಗೆ ಅವರು ಇರಬಾರದು ಎಂದು ಕೊಟ್ಟಿದ್ದೀರಿ. ಈ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಬಹಳ ವ್ಯಾಖ್ಯಾನ

ನಡೆಯುತ್ತಿದೆ. ಅದರ ಬಗ್ಗೆ ಆದೇಶ ಬಂದನಂತರ ಆರು ವರ್ಷದವರೆಗೆ ಎಂದು ಹೇಳುತ್ತಿದ್ದಾರೆ. ೬ ವರ್ಷ ಅಂದರೆ, ಅವರ ಹಿಂದಿನ ದಿನಗಳು ಸೇರಿ ೬ ವರ್ಷಗಳು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರೋ ಅಥವಾ ಆದೇಶ ಬಂದನಂತರ ೬ ವರ್ಷ ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರೋ ಅದನ್ನು ಸ್ಪಷ್ಟವಾಗಿ ತಿಳಿಸಬೇಕು. ಈ ಬಗ್ಗೆ ಇರತಕ್ಕ ಸಂಶಯವನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೇರೆ ಬೇರೆ ಇಲಾಖೆಯವರು ಜನತಾ ಗೃಹಗಳನ್ನು ದುರ್ಬಲವರ್ಗದವರಿಗೆ ಕೊಡುತ್ತಿದ್ದಾರೆ. ಇದು ಇಷ್ಟೇ ಸಾಲದು. ದುರ್ಬಲರನ್ನು ಉತ್ತಮ ಪಡಿಸುವುದಕ್ಕಾಗಿ, ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಲಿಕ್ಕೆ ಅವಕಾಶ ಕೊಟ್ಟು, ಹೆಚ್ಚಿನ ಹಣವನ್ನು ಆ ಸಂಸ್ಥೆಗಳಿಗೆ ಕೊಡಬೇಕಾದುದು ಅಗತ್ಯವಿದೆ. ಆದ್ದರಿಂದ, ಈ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಿ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ನಿರ್ಮಾಣ ಮಾಡಿ ಆರ್ಥಿಕ ಸಹಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕ್ಯಾಂಪ್ಕೋ ಬಹಳ ನಷ್ಟದಲ್ಲಿದೆ, ಈಗ ಅದಕ್ಕೆ ಬಡ್ಜೆಟ್ಟಿನಲ್ಲಿರತಕ್ಕ ಹಣ ಸಾಲದು. ಆದುದರಿಂದ ಅದಕ್ಕೆ ಹೆಚ್ಚು ಆರ್ಥಿಕ ಸವಲತ್ತು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬ್ರಹ್ಮಾವರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಉಂಟು. ಅಲ್ಲಿಗೆ ಆದಷ್ಟು ಮುತವರ್ಜಿ ಮಾಡಿ ಆರ್ಥಿಕ ಸಹಾಯವನ್ನು ಈ ವರ್ಷದಲ್ಲಿ ಮಾಡಿದರೆ, ಅಲ್ಲಿ ಕಬ್ಬನ್ನರೆದು ಸಕ್ಕರೆ ಮಾಡುವ ಪರಿಸ್ಥಿತಿ ಉಂಟಾಗುತ್ತದೆ. ಮೂರು ಹಂತದ ವ್ಯಾಪ್ತಿಯ ಬಗ್ಗೆ ಬಹಳಷ್ಟು ಸಮಯದಿಂದ ಬೇಡಿಕೆ ಉಂಟು. ಇದನ್ನು ತಪ್ಪಿಸಿ ಎರಡು ಹಂತಕ್ಕೆ ಇಳಿಸಿ. ಈ ಸಾಲಿಗೆ ೭ ಪರ್ಸೆಂಟ್ ಬಡ್ಡಿ ನಿಗದಿ ಮಾಡಿದ್ದೀರಿ. ೭ ಪರ್ಸೆಂಟ್ ಖಾಯಂ ಆಗಿ ಇರುವಂಥ ವ್ಯವಸ್ಥೆ ಮಾಡಿ. ಮೂರು ಹಂತ ತೆಗೆದು ಎರಡು ಹಂತಕ್ಕೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಭಿವೃದ್ಧಿ ಸಚಿವರು ಕಳೆದ ೬ ತಿಂಗಳ ಪೂರ್ವದಲ್ಲಿ ತೋರಿಸಿದ ಆಸಕ್ತಿ ತೀವ್ರ ಪ್ರಗತಿಯಲ್ಲಿತ್ತು. ಅನಂತರ ಮತ್ತೆ ೬ ತಿಂಗಳಿಂದ ಇತ್ತೀಚೆಗೆ ಏನೇನಾಗಿದೆ ಎಂದರೆ ಎಲ್ಲವೂ ಕುಂಠಿತಗೊಂಡಿದೆ. ಏಕೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ತಮಗೆ ೩ ಲಿಸ್ಟ್‌ಗಳನ್ನು ನಾವು ಕಳುಹಿಸಿ ಕೊಟ್ಟಿದ್ದೇವೆ. ಎನ್. ಆರ್. ಇ. ಪಿ. ಯಲ್ಲಿ ಹಾಸ್ಟೆಲ್‌ಗಳಿಗೆ ೨ ಬೋರ್‌ವೆಲ್‌ಗಳನ್ನು ಹಾಕುವ ಸಲುವಾಗಿ ಇದನ್ನು ಕಳುಹಿಸಿಕೊಟ್ಟಿರತಕ್ಕದ್ದು. ಇದನ್ನು ತಾವು ಇದುವರೆಗೂ ಮಂಜೂರು ಮಾಡಲಿಲ್ಲ. ಕಳೆದ ನವೆಂಬರ್ ಅಥವಾ ಡಿಸೆಂಬರ್‌ನಿಂದ ಈಚೆಗೆ ಹೊಸದಾಗಿ ತಾವು ಬೋರ್‌ವೆಲ್‌ಗಳನ್ನು ಒಂದನ್ನೂ ಹಾಕಿಸಿಕೊಡಲಿಲ್ಲ. ಕೇವಲ ಸ್ಕೇರ್ಸಿಟಿ ಲಿಸ್ಟ್‌ನಲ್ಲಿ ಯಾವುದು ಇತ್ತು ಅದರ ಕಡೆಗಾದರೂ ನಿಗಾ ಹರಿಸಿದ್ದಾರೆಯೇ ಅಂದರೆ ಅದನ್ನೂ ಕೂಡ ತಾವು ಪೂರ್ತಿಯಾಗಿ ಮಾಡಲಿಲ್ಲ. ಆದ್ದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ನಾವು ಕಳುಹಿಸಿಕೊಟ್ಟಿರತಕ್ಕ ಕೊಳವೆಬಾವಿಗಳಿಗೆ ತಾವು ದಯವಿಟ್ಟು ಮಂಜೂರಾತಿಯನ್ನು ನೀಡಿ ಆ ಜಿಲ್ಲೆಯ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಅಭಿವೃದ್ಧಿ ಕಾರ್ಯಗಳಿಗೆ ಬೇಕಾದಂಥ ಹಣವನ್ನು ಬಿಡುಗಡೆ ಮಾಡಿ ತಮ್ಮ ಹೆಸರನ್ನು ಉಳಿಸಿಕೊಂಡು ನಮಗೆ ಉಪಕಾರ ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಶ್ರೀಪಾದ ಹೆಗಡೆ (ಅಂಕೋಲ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಸಹಕಾರ ಇಲಾಖೆ ಮತ್ತು ಗ್ರಾಮಾಭಿವೃದ್ಧಿ ಇಲಾಖೆ ಸಚಿವರುಗಳು ಸದನದ ಮುಂದೆ ಮಂಡಿಸಿರತಕ್ಕ ಬಜೆಟ್‌ನ್ನು ಪರಿಶೀಲಿಸಿದಾಗ ಈ ವಿಚಾರದಲ್ಲಿ ನನ್ನ ಅನಿಸಿಕೆಗಳು ಏನು ಎಂಬುದನ್ನು ಹೇಳಬಯಸುತ್ತೇನೆ.

ಈ ಸಹಕಾರಿ ಆಂದೋಲನ ಎಂದರೆ ಕೋಆಪರೇಟಿವ್ ಮತ್ತು ಡೆವಲಪ್‌ಮೆಂಟ್ ಇವೆರಡೂ ಬೃಹತ್ ಖಾತೆಗಳ ಬೇಡಿಕೆಗಳನ್ನು ಸದನದ ಮುಂದಿಟ್ಟು ಕೇವಲ ಸ್ವಲ್ಪ ಸಮಯದಲ್ಲಿಯೇ ಇದನ್ನು ಮಂಜೂರು ಮಾಡಿಕೊಡಬೇಕೆಂದು ಹೇಳುವುದಾದರೆ ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಯಾವ ರೀತಿ ತಿಳಿಸಬೇಕೋ ಗೊತ್ತಾಗುತ್ತಿಲ್ಲ. ಇಷ್ಟೊಂದು ತರಾತುರಿಯಿಂದ ಏಕೆ ಈ ಬೇಡಿಕೆಗಳನ್ನು ಮಂಜೂರು ಮಾಡಿಸಿಕೊಳ್ಳಲು ಮಾನ್ಯ ಮಂತ್ರಿಗಳು ಆಸಕ್ತಿ ವಹಿಸುತ್ತಿದ್ದಾರೆಂಬುದು ನನಗೆ ಅರ್ಥವಾಗುವುದಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇಂಥ ಬೃಹತ್ ಇಲಾಖೆಗಳಲ್ಲಿ ಯಾವ ರೀತಿ ವ್ಯವಹಾರಗಳನ್ನು ನಡೆಸಬೇಕೆಂಬ ಬಗ್ಗೆ ಬಹಳ ಕೂಲಂಕಷವಾಗಿ ಯೋಚನೆ ಮಾಡಬೇಕಾದುದು ಅವಶ್ಯಕವಾಗಿದೆ. ಸಹಕಾರಿ ಆಂದೋಳನ ಎಂದರೆ ಸುಲಭವಾದುದೇನೂ ಅಲ್ಲ. ಆರ್ಥಿಕ ಪರಿಸ್ಥಿತಿಯಲ್ಲಿ ನಮ್ಮನ್ನು ಸಮತೋಲನದಲ್ಲಿ ಇಡುವುದರ ಜೊತೆಗೆ ದೇಶದಲ್ಲಿರತಕ್ಕ ಹಣದುಬ್ಬರವನ್ನು ಕಡಿಮೆ ಮಾಡಿ ಬಡವ ಬಲ್ಲಿದರಲ್ಲಿರತಕ್ಕ ಅಂತರವನ್ನು ಕಡಿಮೆ ಮಾಡಿ ಶೋಷಣಾರಹಿತವಾದ ಸಮಾಜವನ್ನು ರಚನೆ ಮಾಡುವ ದಿಸೆಯಲ್ಲಿ ಅತಿ ಮಹತ್ತರ ಪಾತ್ರವನ್ನು ವಹಿಸುವಂಥಾದ್ದು. ಇದರಲ್ಲಿ ಪ್ರತಿಯೊಂದು ಅಂಶವನ್ನೂ ಪ್ರತಿಯೊಂದು ಶಾಖೆಯನ್ನೂ ಬಹಳ ಆಳವಾಗಿ ಅಭ್ಯಾಸ ಮಾಡಬೇಕಾಗಿದೆ.

ಮೊದಲನೆಯದಾಗಿ ಪತ್ತಿನ ಸಹಕಾರ ಸಂಘಗಳು. ಇಂದು ಈ ಸಹಕಾರೀ ಸಂಘಗಳು ಒಳ್ಳೆಯ ರೀತಿಯಲ್ಲಿ ಬೆಳೆದಿವೆ. ಎಲ್ಲ ಕ್ಷೇತ್ರಗಳಲ್ಲೂ ಸಹಕಾರಿ ಸಂಘಗಳು ಬೆಳೆದಿವೆ. ಈ ಪತ್ತಿನ ಸಹಕಾರಿ ಸಂಘಗಳನ್ನು ನಡೆಸಿಕೊಂಡ ರೀತಿ, ಇವುಗಳ ಉದ್ದೇಶ, ಈ ಸಂಘಗಳನ್ನು ಬೆಳೆಸುವುದಕ್ಕೆ ನಾವು ಏನೇನು ಮಾಡಿದ್ದೇವೆ ಎಂಬುದನ್ನು ನಾವು ವಿಚಾರ ಮಾಡಿ ನೋಡಿದರೆ ಇಂದು ನಾವು ಶೋಷಣಬದ್ಧ ಸಮಾಜವನ್ನು ರಚನೆ ಮಾಡುವುದಕ್ಕೆ ಹೊರಟಿದ್ದೇವೆ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಈ ಪತ್ತಿನ ಸಹಕಾರ ಸಂಘಗಳ ಸಲುವಾಗಿ ಕಳೆದ ಸಾರಿ ತಾವು ಮಹತ್ತರ ನಿರ್ಣಯವನ್ನು ತೆಗೆದುಕೊಂಡಿರಿ ರೈತರು ಬಹಳ ಕಟ್ಟುಬಾಕಿದಾರರಾಗಿದ್ದಾರೆ, ಹಣವನ್ನು ಹಿಂದರುಗಿಸಿ ಕೊಡುವುದಕ್ಕೆ ಸಾಧ್ಯವಾಗಲಿಲ್ಲ, ಆದ್ದರಿಂದ ಅವರಿಗೆ ರಿಯಾಯಿತಿ ಕೊಡುತ್ತೇವೆಂದು ಹೇಳಿದಿರಿ ಇದು ಬಹಳ ಸಂತೋಷ ಆದರೆ ರಿಯಾಯಿತಿಯನ್ನು ಕೊಡಬೇಕಾದರೆ ಯಾರಿಗೆ ಕೊಡಬೇಕು ? ಏತಕ್ಕೆ ಕೊಡಬೇಕು ? ಯಾವ ರೀತಿ ಲುಕ್ಸಾನಾಗಿದೆ ? ಈ ಲುಕ್ಸಾನು ಅವನ ಬೇಜವಾಬ್ದಾರಿಯಿಂದ ಆಗಿದೆಯೆ ? ಅಥವಾ ಅವ್ಯವಹಾರದಿಂದ ಆಗಿದೆಯೆ ? ಎಂಬುದನ್ನು ವಿಚಾರ ಮಾಡದೆ ಕೊಡುತ್ತೇವೆಂದು ಹೇಳುವುದಾದರೆ ಈ ಹಣವನ್ನು ಎಲ್ಲಿಂದ ತಂದುಕೊಡುತ್ತಿದ್ದೀರಿ ಎಂಬುದನ್ನು ತಾವು ಇಲ್ಲಿ ಏನೂ ಹೇಳಿಲ್ಲ. ಯಾವುದಾದರೂ ಒಂದು ವಿಚಾರವನ್ನು ಹೇಳಬೇಕಾದರೆ ಅದನ್ನು ಸರಿಯಾಗಿ ಯೋಚನೆಮಾಡಿ ನಂತರ ಹೇಳಬೇಕು. ಯಾರದ್ದೊ ಹಣವನ್ನು ನೀವು ಕೊಟ್ಟಿದ್ದೀರಿ. ಇವತ್ತು ಸಹಕಾರ ಸಂಘಗಳ ಮುಖಾಂತರ ಇಷ್ಟು ಹಣವನ್ನು ಕೊಟ್ಟಿದ್ದೇವೆ, ಇಷ್ಟು ಸೌಲತ್ತುಗಳನ್ನು ಕೊಟ್ಟಿದ್ದೇವೆಂದು ತಾವು ಹೇಳಿಕೊಂಡಿದ್ದೀರಿ. ಇದರಿಂದಾಗಿ ಸಹಕಾರಿ ಆಂದೋಳನಕ್ಕೆ ನಿಶ್ಚಿತವಾದ ಒಂದು ಕೊಡಲಿ ಪೆಟ್ಟನ್ನು ನೀವು ಹಾಕಿದ್ದೀರಿ. ಇವತ್ತು ಯಾರು ಪ್ರಾಮಾಣಿಕವಾಗಿ ವ್ಯವಹಾರ ಮಾಡುತ್ತಾನೆ ಅವನಿಗೆ ಯಾವುದೇ ಸೌಲತ್ತುಗಳೂ ಇಲ್ಲ. ಯಾರು ಕಟ್ಟುಬಾಕಿದಾರರಾಗಿರುತ್ತಾರೆ ಅವನು ಏತಕ್ಕೆ ಈ ರೀತಿ ಆಗಿದ್ದಾನೆ ? ಅವನ ಅವ್ಯವಹಾರದಿಂದ ಆಗಿದ್ದಾನೆಯೇ ? ಸೊಸೈಟಿಯ ಅವ್ಯವಹಾರದಿಂದ ಆಗಿದ್ದಾನೆಯೆ ? ಅಥವಾ ಬೇರೆ ರೀತಿ ಏನಾದರೂ ಆಗಿರಬಹುದೇ ಎಂಬುದನ್ನು ನೋಡದೆ ಉದ್ದೇಶಪೂರ್ವಕವಾಗಿ ಕಟ್ಟುಬಾಕಿದಾರರಾಗಿರುವವರಿಗೂ ಈ ಸೌಲತ್ತುಗಳನ್ನು ನೀವು ಕೊಟ್ಟಿದ್ದೀರಿ. ಪ್ರಾಮಾಣಿಕವಾಗಿ ನಡೆದುಕೊಳ್ಳುವವರಿಗೆ ನೀವು ಸವಲತ್ತುಗಳನ್ನು ಕೊಟ್ಟಿಲ್ಲ. ಈ ಸವಲತ್ತುಗಳನ್ನು ಕೊಡುವಾಗ ನೀವು ಸ್ವಲ್ಪ ಮಾತ್ರ ಕೊಟ್ಟಿದ್ದೀರಿ. ಆದರೆ ಇದನ್ನು ಯಾರಿಂದ ಕೊಡಿಸಬೇಕಾಗಿತ್ತು. ಹೆಚ್ಚಿನ ಪಾಲು ಬಂಡವಾಳವನ್ನು ಹಾಕಿದಂಥ ಅಪೆಕ್ಸ್ ಬ್ಯಾಂಕ್‌ಗಳು ಇವೆ. ನೀವು ಅವರಿಗೆ ಷೇರು ಹಣವನ್ನು ಬಹಳವಾಗಿ ಕೊಟ್ಟಿದ್ದೀರಿ. ಇದೇ ರೀತಿ ಮಧ್ಯವರ್ತಿಗಳ ಬ್ಯಾಂಕುಗಳು ಇವೆ. ಅವರು ಒಂದೂವರೆ ಪರ್ಸೆಂಟ್ ಷೇರನ್ನು ತೆಗೆದುಕೊಳ್ಳಬೇಕು, ಪ್ರೈಮರಿ ಸಹಕಾರ ಸಂಘಗಳು ಏತಕ್ಕೆ ಸಂಪೂರ್ಣವಾಗಿ ಇದನ್ನು ಭರಿಸಬೇಕು. ನೀವು ಕೊಟ್ಟಂಥ ಹಣವನ್ನು ಅವರು ಕೊಡುವಾಗ ಅಡ್ಜಸ್ಟ್ ಮಾಡಿಕೊಂಡು ಮಾಡಿದ್ದಾರೆ. ಇದಕ್ಕಿಂತಲೂ ಪ್ರೈಮರಿ ಸಹಕಾರ ಸಂಘಗಳಿಗೆ ಈ ಸವಲತ್ತನ್ನು ಕೊಟ್ಟು ನಿಮಗೆ ಹತ್ತಿರ ಇರತಕ್ಕ ಅಫೆಕ್ಸ್ ಬ್ಯಾಂಕುಗಳು ಸರಿಯಾಗಿ ಹಣವನ್ನು ಕೊಟ್ಟಿದ್ದರೆ ಇವತ್ತು ಈ ಕಷ್ಟ ಬರುತ್ತಿರಲಿಲ್ಲ. ನಿಜವಾಗಿ ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಎಂದು ನಾವು ಹೇಳುತ್ತಿದ್ದೆವು. ಆದರೆ ಇವತ್ತು ಸಹಕಾರ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಬೇಕೆಂದಿದ್ದರೂ ಕೂಡ ಅನೇಕ ಪಟ್ಟಭದ್ರ ಹಿತಾಸಕ್ತಿಗಳು ಅವರನ್ನು ಬಿಡುತ್ತಿಲ್ಲ. ಇವತ್ತು ಪ್ರೈಮರಿ ಸಹಕಾರಿ ಸಂಘಗಳನ್ನು ಬಲಪಡಿಸುತ್ತೇವೆಂದು ಅವರನ್ನು ಅಡ್ಡದಾರಿಗೆಳೆಯುತ್ತಿದ್ದೀರಿ. ಲಾಭಗಣೆಯಲ್ಲಿ ಇದನ್ನು ತೋರಿಸಿ ಕೊಟ್ಟರೆ ಸಹಕಾರ ಸಂಘಗಳು ನಾಶವಾಗುತ್ತವೆ. ಆದ್ದರಿಂದ ನೀವು ಇದನ್ನು ಹಾಕಬಾರದೆಂದು ಹೇಳಿದರೂ ಕೂಡ ನೀವು ಏತಕ್ಕೆ ಇದನ್ನು ತೋರಿಸಿದ್ದೀರಿ ? ಇದನ್ನು ತೋರಿಸದಿದ್ದರೆ? ಸಹಕಾರ ಸಂಘಗಳು ನಷ್ಟದಲ್ಲಿ ಹೋಗುತ್ತವೆ ಎನ್ನುವ ಉದ್ದೇಶದಿಂದ ಇದನ್ನು ಹಾಕಿದ್ದೀರಿ. ಇದರಿಂದಾಗಿ ಜನರಲ್ಲಿ ಏನು ಅಭಿಪ್ರಾಯ ಬಂದಿದೆ ಎಂದರೆ, ಇಷ್ಟೊಂದು ಸಹಕಾರವನ್ನು ನೀಡಿದರೂ ಕೂಡ ಇಷ್ಟೊಂದು ನಷ್ಟದಲ್ಲಿ ನಡೆಯುತ್ತಿವೆ ಎನ್ನುವ ಭಾವನೆ ಬರುತ್ತಿದೆ. ನೀವು ಕೊಟ್ಟಂತೆ ಸವಲತ್ತುಗಳನ್ನು ನಾನು ಹೇಳುವುದಿಲ್ಲ. ಆದರೆ ನಮ್ಮ ಕಡೆ ಸುಡುಗಾಡು ಸಿದ್ದನ ಕತೆ ಹೇಳುವಂಥ ನೀವು ಕೆಲಸ ಮಾಡಿದ್ದೀರಿ. ಈ ಸಹಕಾರ ಸಂಘವನ್ನೇ ಕಿತ್ತು ಅದಕ್ಕೇ ಕೊಟ್ಟು ನಾವು ಇಷ್ಟು ಚೆನ್ನಾಗಿ ಕೆಲಸ ಮಾಡಿದ್ದೇವೆಂದು ಹೇಳಿಕೊಳ್ಳುತ್ತಿದ್ದೀರಿ. ಒಂದೊಂದು ಸಹಕಾರಿ ಸಂಘಕ್ಕೂ ಸುಮಾರು ೧-೨ ಲಕ್ಷದವರೆಗೂ ಕೂಡ ಸರ್ಕಾರದಿಂದ ಹಣ ಬರಬೇಕಾಗಿದೆ. ಆ ಹಣವನ್ನು ನೀವು ಕೊಡದಿದ್ದರೆ ಈ ಸಹಕಾರ ಸಂಘಗಳು ಉಳಿಯುವುದಿಲ್ಲ. ಅಂದ ಮೇಲೆ ನೀವು ಇನ್ನು ಮುಂದೆ ಯಾವುದೇ ಯೋಜನೆಯನ್ನು ಮಾಡಬೇಕಾದರೂ ಕೂಡ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಕೆಲಸ ಮಾಡಿದ್ದೇನೆ, ಮಾರ್ಕೆಟಿಂಗ್ ಸೊಸೈಟಿಯನ್ನು ಸ್ಥಾಪನೆ ಮಾಡಿದ್ದೇನೆ, ಬಳಕೆದಾರರ

ಸೊಸೈಟಿಯನ್ನು ಸ್ಥಾಪನೆ ಮಾಡಿದ್ದೇನೆ. ಗ್ರಾಹಕರ ಸಹಕಾರಸಂಘಗಳಲ್ಲಿ ಕೆಲಸ ಮಾಡಿದ್ದೇನೆ, ಎ.ಪಿ.ಎಂ.ಸಿ.ಯಲ್ಲಿ ಛೇರ್ಮನ್ ಆಗಿ ಕೆಲಸ ಮಾಡಿದ್ದೇನೆ. ಸಾಮಾನ್ಯವಾಗಿ ಸಹಕಾರ ಸಂಘಗಳು ಎಲ್ಲ ಚಟುವಟಿಕೆಗಳಲ್ಲೂ ನಾನು ಕೆಲಸ ಮಾಡಿದ್ದೇನೆ. ಎಲ್ಲೆಲ್ಲಿ ಇವುಗಳಿಗೆ ಕಷ್ಟ ಬರುತ್ತದೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಆಗಲೇ ಹೇಳಿದೆ, ನೀವು ಏನು ಸೌಲತ್ತುಗಳನ್ನು ಕೊಡುತ್ತೇವೆಂದು ಹೇಳಿದಿರಿ, ಆ ಕೂಡಲೇ ನಾನು ಎಲ್ಲ ಸಹಕಾರ ಸಂಘದವರನ್ನೂ ಕರೆದು ಹೇಳಿದ್ದೇನೆ, ಸರ್ಕಾರದವರು ಒಂದು ಒಳ್ಳೆಯ ರೀತಿಯಿಂದ ಸವಲತ್ತನ್ನು ಕೊಟ್ಟಿದ್ದಾರೆ, ನಾವು ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ತಿಳಿಸಿದ್ದೇನೆ ಆದರೆ ಕೇವಲ ಸರ್ಕಾರದಿಂದ ಹಣ ಬರುತ್ತದೆಂದು ನಾವು ಕೆಲಸ ಮಾಡಬಾರದು. ಸರ್ಕಾರ ಈ ಘೋಷಣೆಯನ್ನು ಮಾಡದಿದ್ದರೆ ರೈತನಿಗೆ ಕಷ್ಟದಲ್ಲಿರುವವರಿಗೆ ಸಹಾಯವನ್ನು ಮಾಡಬೇಕೆಂದಿದ್ದರೂ ಕೂಡ ಹಣವನ್ನು ಕೊಡುವುದಕ್ಕೆ ಆಗುತ್ತಿರಲಿಲ್ಲ. ಇವತ್ತು ನಮ್ಮ ರೈತರಿಗೆ ಹಣವನ್ನು ಕೊಡುವುದಕ್ಕೆ ಅವಕಾಶ ಇದೆ. ಇವತ್ತು ನೀವು ನಬಾರ್ಡ್‌ನವರನ್ನು ಕರೆಸಿ ವಿಚಾರ ಮಾಡಿ ಮುಂದೆ ಮಾಡುತ್ತೇವೆ. ನೋಡುತ್ತೇವೆ ಎಂದು ಏನು ಹೇಳುತ್ತಿದ್ದೀರಿ ಇದು ಸರಿಯಲ್ಲ. ನಾನು ಹೇಳುತ್ತೇನೆ, ಅವರನ್ನು ನೀವು ಕರೆಸುವ ಅವಶ್ಯಕತೆ ಇಲ್ಲ. ನಿಮಗೆ ಅಪೆಕ್ಸ್ ಬ್ಯಾಂಕುಗಳು ಮಧ್ಯವರ್ತಿ ಬ್ಯಾಂಕುಗಳು ಇವೆ ನೀವು ಅವರಿಗೆ ಷೇರನ್ನು ಕೊಟ್ಟಿದ್ದೀರಿ. ಆದ್ದರಿಂದ ಪ್ರೈಮರಿ ಸಹಕಾರ ಸಂಘಗಳು ಯಾವರೀತಿ ಇದರಲ್ಲಿ ಪಾಲ್ಗೊಂಡಿವೆ, ಆ ಪಾಲನ್ನು ನೀವು ಕೊಡಿ ಎಂದು ಅವರಿಗೆ ನೀವು ಆದೇಶವನ್ನು ಕೊಟ್ಟು ಕೂಡಲೇ ಹಣವನ್ನು ಕೊಡಿಸಬೇಕು.

ಮಾನ್ಯ ಅಧ್ಯಕ್ಷರೇ, ಸಹಕಾರಿ ಕ್ಷೇತ್ರದ ಬಗ್ಗೆ ಹೇಳುತ್ತಾ ಹೋದರೆ ಪ್ರತಿಯೊಂದು ಸಹಕಾರಿ ಕ್ಷೇತ್ರದಲ್ಲೂ, ಮಾರಾಟ ಸಹಕಾರಿ ಸಂಘಗಳಲ್ಲೂ ಎಲ್ಲ ಸಂಘ ಸಂಸ್ಥೆಗಳಲ್ಲೂ ಅಕ್ರಮ ಅವ್ಯವಹಾರಗಳು ನಡೆಯುತ್ತಿರುತ್ತವೆ. ಎಲ್ಲಕಡೆ ಗಂಟನ್ನು ಹೊಡೆಯಲಿಕ್ಕೆ ಹತ್ತಿದ್ದಾರೆ. ಆದ್ದರಿಂದ ನಾನು ಸಹಕಾರಿ ಆಂದೋಳನದ ಬಗ್ಗೆ ಒಂದು ಮುಖ್ಯವಾದ ಅಂಶವನ್ನು ಹೇಳಿ ಮುಗಿಸುತ್ತೇನೆ. ಸಹಕಾರಿ ಕ್ಷೇತ್ರ ಮುಖ್ಯವಾಗಿ ಹಾಳಾಗಲಿಕ್ಕೆ ಕಾರಣವೇನೆಂಬುದನ್ನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ ಸಹಕಾರಿ ಕ್ಷೇತ್ರಕ್ಕೆ ಇನ್ನಿತರೆ ಇಲಾಖೆಗಳು ಕೋ-ಆಪರೇಷನ್ ಕೊಡದೇ ಇರುವುದೇ ಒಂದು ಮುಖ್ಯವಾದ ಕಾರಣವಾಗಿರುತ್ತದೆ. ಆಹಾರ ಮಂತ್ರಿಗಳು ರೆವಿನ್ಯೂ ಮಂತ್ರಿಗಳು ಸಹಕಾರ ಕೊಡದಿರುವುದರಿಂದ ಸಹಕಾರ ಕ್ಷೇತ್ರ ಮುಂದೆ ಬರುವುದಕ್ಕೆ ಆಗುತ್ತಿಲ್ಲ. ಸಹಕಾರಿ ಕ್ಷೇತ್ರದಲ್ಲಿ ಮುಂದುವರಿಯಬೇಕಾದರೆ ಈ ಇಲಾಖೆಗಳವರು ಒಬ್ಬರಿಗೊಬ್ಬರಿಗೂ ಕೋ-ಆಪರೇಷನ್ ಇಟ್ಟುಕೊಂಡಿರಬೇಕು.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಆಹಾರಮಂತ್ರಿಗಳು ಸಹಕಾರವನ್ನು ಕೊಡುತ್ತಿಲ್ಲ ಎನ್ನುವ ಅಭಿಪ್ರಾಯವನ್ನು ಏನು ವ್ಯಕ್ತಪಡಿಸುತ್ತಾರೆ, ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಹಿಂದಿನಿಂದಲೂ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇದೆ, ಮಧುರ ಬಾಂಧವ್ಯ ಇದೆ. ನಮ್ಮಲ್ಲಿ ಎಲ್ಲಾ ಸರಿಯಾಗಿಯೇ ಇದೆ. ಅವರು ಹೇಳತಕ್ಕಂಥ ಮಾತು ಸರಿಯಲ್ಲ. ದಯವಿಟ್ಟು ಆ ಮಾತನ್ನು ವಾಪಸ್ ಪಡೆಯಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಮ್ಮಲ್ಲಿ ಏತಕ್ಕೆ ಸಹಕಾರವಿಲ್ಲವೆಂದು ಹೇಳುತ್ತಿದ್ದಾರೆಂದರೆ ಅವರ ಟಿ.ಎ.ಪಿ.ಸಿ.ಎಂ.ಎಸ್.ಗೆ ಹಣವನ್ನು ಕೊಟ್ಟಿಲ್ಲ, ಅದನ್ನು ಕೊಡಬೇಕು ಎನ್ನುವ ಅರ್ಥದಲ್ಲಿ ಹೇಳುತ್ತಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸಭಾಪತಿಯವರೇ, ಅದೇನು ತೊಂದರೆ ಇದೆಯೋ ಅದನ್ನು ಸರಿಪಡಿಸಿಕೊಡುತ್ತೇವೆ.

ಶ್ರೀ ಶ್ರೀಪಾದ ಹೆಗಡೆ.—ಸಹಕಾರಿ ಆಂಧೋಳನದಲ್ಲಿ ನಿಜವಾಗಿಯೂ ಸರಿಯಾದ ರೀತಿಯಲ್ಲಿ ಬದಲಾವಣೆ ಯಾಗದಿರುವುದಕ್ಕೆ ಮುಖ್ಯವಾದ ಕಾರಣ ಏನೆಂದರೆ ಸಹಕಾರಿ ರಂಗದಲ್ಲಿ ಕೆಲಸ ಮಾಡತಕ್ಕಂಥವರು ತ್ಯಾಗಬುದ್ಧಿಯಿಂದ ಇರಬೇಕು. ಧೈರ್ಯವಾಗಿ ಇರಬೇಕು. ಸ್ವಚ್ಛವಾಗಿ ಇರಬೇಕು. ತನ್ನ ಗುರಿಯನ್ನು ಇಟ್ಟುಕೊಂಡು ನೇರವಾಗಿ ಹೋಗಲಿಕ್ಕೆ ಪ್ರಯತ್ನ ಮಾಡಬೇಕು. ಸಹಕಾರಿ ಆಂದೋಲನದಲ್ಲಿ ಕೆಲಸ ಮಾಡತಕ್ಕಂಥವರು ಬೇರೆ ಯಾರೊಬ್ಬರ ಮೇಲೂ ಅವಲಂಬಿತರಾಗಿರಕೂಡದು. ಹೀಗಿದ್ದರೆ ಮಾತ್ರ ಸಹಕಾರಿ ಆಂದೋಲನವನ್ನು ಒಂದು ಹೆಚ್ಚಿನ ರೀತಿಯಲ್ಲಿ ಪೋಷಣೆ ಮಾಡುವುದರ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲು ಸಾಧ್ಯವಾಗುತ್ತದೆ. ಆದ್ದರಿಂದ ಸಣ್ಣ ಸಣ್ಣ ಸಹಕಾರಿ ಸಂಘಗಳನ್ನು ಒಂದುಗೂಡಿಸಿ ಬೃಹದಕಾರವಾಗಿ ಮಾಡಿ ಸಹಕಾರಿ ಸಂಘಗಳ

ಆಂದೋಳನವನ್ನು ಮಾಡುವುದರ ಜೊತೆಗೆ ಅಂತರ್‌ಗತವಾಗಿ ಇರತಕ್ಕಂತ ಶಕ್ತಿಯನ್ನು ಯಾವ ರೀತಿಯಿಂದಲೂ ನಶಿಸಿ ಹೋಗದಂತೆ ಸಹಕಾರಿ ಕ್ಷೇತ್ರದಲ್ಲಿ ಒಂದು ಹೊಸ ವ್ಯವಸ್ಥೆ ಮಾಡಿ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಪ್ರತಿಯೊಂದು ವಿಚಾರದಲ್ಲಿಯೂ ಹಲವಾರು ಅಂಶಗಳನ್ನು ಹೇಳಬಹುದು. ಅದೆಲ್ಲವನ್ನೂ ಹೇಳುವುದಕ್ಕೆ ಸಮಯವಿಲ್ಲದ ಕಾರಣ ಕೆಲವು ಸೂಚನೆಗಳನ್ನು ಮಾತ್ರ ಮಾನ್ಯ ಸಚಿವರಿಗೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಸಹಕಾರಿ ಆಂದೋಳನವನ್ನು ಯಾವುದೇ ರಾಜಕೀಯ ದೃಷ್ಟಿಯಿಂದ ವಿಚಾರ ಮಾಡಿ ನೋಡಬಾರದು. ಅದರಲ್ಲಿ ಪ್ರಯೋಜನ ಯಾರಿಗೂ ದೊರಕುವುದಿಲ್ಲ. ಅಲ್ಲಿ ನಿಷ್ಪಕ್ಷಪಾತವಾಗಿ ನಿಷ್ಠೂರವಾಗಿ ಶಿಕ್ಷೆಯನ್ನು ಕೊಡತಕ್ಕಂತಹ ಕೆಲಸವಾಗಬೇಕು. ಸಹಕಾರಿ ಆಂದೋಲನವು ಸ್ವತಂತ್ರವಾಗಿ ಬೆಳೆಯಲಿಕ್ಕೆ ಅವಕಾಶವನ್ನು ಮಾಡಿ ಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕರೀಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ನಜೀರ್‌ಸಾಬ್‌ರವರು ಕರ್ನಾಟಕದಲ್ಲಿ ೨೦ ಸಾವಿರ ಕೊಳವೆ ಬಾವಿಗಳನ್ನು ತೋಡಿಸಿ ನಿಜಕ್ಕೂ ಬಹಳ ಕೀರ್ತಿಯನ್ನು ಸಂಪಾದನೆ ಮಾಡಿದ್ದಾರೆ. ಆದರೆ ಬರೀ ಕೊಳವೆ ಬಾವಿಗಳನ್ನು ತೋಡಿದುದರಿಂದ ಜನತೆಯ ಬವಣೆಯನ್ನು ಪರಿಹರಿಸಿದಂತಾಗಲಿಲ್ಲವೆಂದು ಹೇಳಲು ಇಷ್ಟಪಡುತ್ತೇನೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನತೆಗೆ ಕುಡಿಯುವ ನೀರಿನ ಸಲುವಾಗಿ ೨೦ ಸಾವಿರ ಕೊಳವೆ ಬಾವಿಗಳನ್ನು ತೋಡಿಸಿದರೂ ಕೂಡ ಅವುಗಳಿಗೆ ಪಂಪ್‌ಗಳನ್ನು ಫಿಕ್ಸ್ ಮಾಡಲಿಕ್ಕೆ ಹೋದಾಗ ಅದಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಸಹಕಾರ ಇಲ್ಲವಾದ ಕಾರಣ ಗ್ರಾಮಾಂತರ ಪ್ರದೇಶಗಳಲ್ಲಿ ಈ ಯೋಜನೆಯ ಅಡಿಯಲ್ಲಿ ತೋಡಿರುವ ಬಾವಿಗಳು ಹಾಗೆಯೇ ಇರುತ್ತದೆ. ಇದಕ್ಕೋಸ್ಕರವಾಗಿಯೆ ಈ ಬಡ್ಜೆಟ್‌ನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಿದ್ದೀರಿ. ಆದರೆ ಮಂಜೂರು ಮಾಡಿರುವಷ್ಟೇ ಸಾಲದು, ತೋಡಿರುವ ಕೊಳವೆ ಬಾವಿಗಳಿಗೆ ಪಂಪುಗಳನ್ನು ಅಳವಡಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮತ್ತೊಂದು ವಿಚಾರ ಎಂದರೆ ಸರ್ಕಾರದವರು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳಲ್ಲಿ ದೊಡ್ಡ ದೊಡ್ಡ ಗ್ರಾಮಗಳು ಅಂದರೆ ಜನಸಂಖ್ಯೆ ಜಾಸ್ತಿ ಇರುವ ಕಡೆ ಒಂದು ಟ್ಯಾಂಕನ್ನು ಕಟ್ಟಿಸಿ ಪಂಪ್‌ಗಳನ್ನು ಫಿಕ್ಸ್ ಮಾಡತಕ್ಕಂಥ ಕಾರ್ಯಕ್ರಮ. ನನ್ನ ತಾಲ್ಲೂಕಿನಲ್ಲಿ ಸುಮಾರು ೨೦ ಗ್ರಾಮಗಳಿಗೆ ಈ ರೀತಿಯಾದ ಒಂದು ಸೌಲಭ್ಯವನ್ನು ಒದಗಿಸಲು ಕಾರ್ಯಕ್ರಮವನ್ನೂ ಹಾಕಿ ಕೊಂಡಿದ್ದರೂ ಕೂಡ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ತೋಡಿಸಿರುವ ಬಾವಿಗಳಿಗೆ ಪಂಪ್‌ಗಳನ್ನು ಅಳವಡಿಸಿ ವಿದ್ಯುಚ್ಛಕ್ತಿ ಇಲಾಖೆಯವರಿಂದ ವಿದ್ಯುತ್ ಸರಬರಾಜು ಮಾಡಲಿಕ್ಕೆ ಅವರಿಗೆ ಹಣವನ್ನು ಕಟ್ಟದೇ ಇದ್ದುದರಿಂದ ಅವರು ವಿದ್ಯುತ್ತನ್ನು ಸರಬರಾಜು ಮಾಡದಿದ್ದುದರಿಂದ ಕುಡಿಯುವ ನೀರಿನ ಸೌಕರ್ಯ ಜನರಿಗೆ ದೊರೆತ್ತಿಲ್ಲ. ಆದ್ದರಿಂದ ಟ್ಯಾಂಕ್‌ಗಳನ್ನು ತೋಡುವುದರಲ್ಲಿ ತಡವಾದರೂ ಚಿಂತೆಯಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಲುವಾಗಿ ಪಂಪ್‌ಗಳನ್ನು ಅಳವಡಿಸಿ ೪-೫ ನಲ್ಲಿಗಳನ್ನು ಹಾಕತಕ್ಕಂಥ ಕಾರ್ಯಕ್ರಮವನ್ನಾದರೂ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ೪-೫ ಸಾವಿರ ಜನಸಂಖ್ಯೆ ಇರತಕ್ಕಂಥ ಊರುಗಳಲ್ಲಿ ಬೋರ್‌ವೆಲ್‌ಗಳನ್ನು ತೋಡಿಸಿದ್ದರೂ ಅವುಗಳಿಗೆ ಪಂಪ್‌ಗಳನ್ನು ಅಳವಡಿಸತಕ್ಕಂಥ ಕಾರ್ಯಕ್ರಮವನ್ನು ಕೈಗೊಳ್ಳದೆ ಇರುವುದರಿಂದ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಬಹಳ ಅನಾನುಕೂಲವಾಗಿದೆ. ಸಂಬಂಧಪಟ್ಟ ಜೂನಿಯರ್ ಇಂಜಿನಿಯರನ್ನು ಕೇಳಿದರೆ, ಚೀಫ್ ಇಂಜಿನೀಯರ್‌ರವರ ಕಡೆಯಿಂದ ಆಜ್ಞೆ ಬರಬೇಕೆಂದು ಹೇಳುತ್ತಾರೆ. ಈ ವಿಚಾರವನ್ನು ಮೊನ್ನೆ ಮಾನ್ಯ ಸಚಿವರಿಗೂ ಕೂಡ ಹೇಳಿರುತ್ತೇನೆ. ಕೂಡಲೇ ಪಂಪ್‌ಗಳನ್ನು ಫಿಕ್ಸ್ ಮಾಡಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಸಹಕಾರಿ ಸಚಿವರು ಈವತ್ತಿನ ದಿವಸ ಪಿ. ಎಲ್. ಡಿ. ಬ್ಯಾಂಕ್ ಮುಖಾಂತರ ಓಪನ್ ವೆಲ್‌ಗಳನ್ನು ತೆಗೆಸಿಕೊಡುತ್ತೇವೆಂದು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಸುಮಾರು ೨೬ ಓಪನ್ ವೆಲ್‌ಗಳನ್ನು ತೆಗೆಸಿದರು. ಆ ಓಪನ್ ವೆಲ್‌ಗಳನ್ನು ಸುಮಾರು ೬೦-೭೦ ಅಡಿ ತೆಗೆದರೂ ಕೂಡ ನೀರು ಬರತಕ್ಕಂಥದ್ದು ಬಹಳ ಕಷ್ಟವಾಗಿರುತ್ತದೆ. ಕೊನೆಯಪಕ್ಷ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನ ಜಿಯಾಲೆಜಿಸ್ಟ್‌ರವರು ಸಜೆಸ್ಟ್ ಮಾಡಿದ ಜಾಗದಲ್ಲಿ ವಿಫಲ ಆದರೆ ರೈತರಿಗೆ ರಿಯಾಯಿತಿಯಾದರೂ ಸಿಗುತ್ತದೆ ಎನ್ನುವ ಉದ್ದೇಶದಿಂದ ಪಿ. ಎಲ್. ಡಿ. ಬ್ಯಾಂಕ್ ಮುಖಾಂತರ ಕಾರ್ಯಕ್ರಮವನ್ನು ಇಟ್ಟು ಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಸುಮಾರು ಮೂರು ಬಾರಿ ಕಳ್ಳತನವಾಗಿರುತ್ತದೆ. ಕಳೆದ ವರ್ಷವೂ ಕೂಡ ಆಗಿರುತ್ತದೆ. ಅಲ್ಲಿ ಒಬ್ಬ ನಾಲ್ಕನೇ ದರ್ಜೆಯ ನೌಕರ ಸರ್ಕಾರಿ ವಾಹನವನ್ನು ತೆಗೆದುಕೊಂಡುಹೋಗಿ ಮರಕ್ಕೆ ಡಿಕ್ಕಿ ಹೊಡೆಸಿ ನಷ್ಟ ಮನ್ನುಂಟು ಮಾಡಿರುತ್ತಾನೆ. ಮೊದಲನೆಬಾರಿಗೆ ೨೦ ಸಾವಿರ ರೂಪಾಯಿಗಳನ್ನು ಕದ್ದು ಹೊತ್ತು ಕೊಂಡು ಹೋಗಿದ್ದರೂ ಅದನ್ನು ಪತ್ತೆ ಮಾಡಲಿಲ್ಲ. ಮತ್ತೆ ಒಂದು ಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳನ್ನು ಕದ್ದು ಹೊತ್ತುಕೊಂಡು ಹೋಗಿದ್ದರು ಅವರ ಬಗ್ಗೆ ಯಾರು ಕದ್ದುಕೊಂಡು ಹೋದರು ಎಂಬುದನ್ನು ಪತ್ತೆ ಮಾಡಲಿಲ್ಲ. ಸೊಸೈಟಿ ಬಹಳ ಚೆನ್ನಾಗಿ ಒಳ್ಳೆಯ ಆದಾಯದಿಂದ ನಡೆಯುತ್ತಿತ್ತು. ಸೊಸೈಟಿ ಪಂಜಾಬಿನಿಂದ ಆಲೂಗೆಡ್ಡೆಯನ್ನು ತರಿಸುತ್ತಿದ್ದು ಅದನ್ನು ಎಲ್ಲಿ ಯಾರಿಗೆ ಕೊಡುತ್ತಾರೆಂಬುದು ಗೊತ್ತಾಗುತ್ತಿಲ್ಲ. ವಿತರಣೆ ಮಾಡತಕ್ಕಂಥ ವೇಳೆಯಲ್ಲಿ ಯಾರಿಗೆ ಕೊಡುತ್ತಾರೆಂಬುದು ಗೊತ್ತಾಗುತ್ತಿಲ್ಲ. ಈ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಯಾವಾಗಲೂ ಕೂಡ ೧೦-೧೨ ಲಕ್ಷ ರೂಪಾಯಿಗಳ ಲಾಭದಿಂದ ನಡೆಯುತ್ತಿತ್ತು. ಆದರೆ ಇದು ಈಗ ಯಾವ ದಿಕ್ಕನಲ್ಲಿ ನಡೆಯುತ್ತಿದೆ ಎಂಬುದು ಗೊತ್ತಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ತಿಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಕುಡಿಯುವ ನೀರಿನ ಬಗ್ಗೆ ಪಟ್ಟಣ ಪ್ರದೇಶಗಳಲ್ಲಿ, ಬೆಂಗಳೂರು ನಗರದಂತ ಪಟ್ಟಣಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಯಾವರೀತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ, ಅದೇ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

೩.೦೦ ಪಿ. ಎಂ.

ಪ್ರತಿ ಒಂದು ತಾಲ್ಲೂಕ್‌ನಲ್ಲಿ ಒಂದು ಹಳ್ಳಿಯನ್ನು ಆರಿಸಿ ನೀವು ನೀರಿನ ವ್ಯವಸ್ಥೆ ಮಾಡುವ ಗುರಿ ಯನ್ನು ಇಟ್ಟುಕೊಂಡಿದ್ದೀರಿ, ನನ್ನ ಕ್ಷೇತ್ರದಲ್ಲಿ ೮೦ ಪಂಚಾಯಿತಿಗಳಿವೆ. ಆದ್ದರಿಂದ ಇಲ್ಲಿಗೆಲ್ಲಾ ನೀರನ್ನು ಒದಗಿಸಬೇಕಾದರೆ ನಿಮ್ಮ ಲೆಕ್ಕದ ಪ್ರಕಾರ ಇನ್ನು ೮೦ ವರ್ಷಗಳು ಬೇಕಾಗುತ್ತದೆ. ಇದಕ್ಕೆ ಬದಲು ಪ್ರತಿವರ್ಷವೂ ಪ್ರತಿ ತಾಲ್ಲೂಕ್‌ನಲ್ಲಿ ಹತ್ತಿಪ್ಪತ್ತು ಹಳ್ಳಿಗಳನ್ನಾದರೂ ಆರಿಸಿಕೊಂಡು ಕುಡಿ ಯುವ ನೀರನ್ನು ಒದಗಿಸಬೇಕು ಮತ್ತು ಈ ಕೆಲಸವನ್ನು ಇನ್ನು ೫ ವರ್ಷಗಳಲ್ಲಿಯಾದರೂ ಮುಗಿಸಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಹಾಸನ ತಾಲ್ಲೂಕು ಬರಗಾಲ ಪೀಡಿತ ವಾದಂಥ ತಾಲ್ಲೂಕು ಆಗಿದೆ. ಭತ್ತ ಬೆಳೆದು ೫ ವರ್ಷಗಳ ಮೇಲಾಯಿತು. ಎಲ್ಲ ಕೆರೆಗಳಲ್ಲಿಯೂ ನೀರು ಬತ್ತಿ ಹೋಗಿದೆ. ದನಕರುಗಳಿಗೆ ಕುಡಿಯಲು ನೀರೇ ಇಲ್ಲ ಮೊನ್ನೆ ೨-೩ ಅಂಗುಲ ಮಳೆ ಯಾಯಿತು, ಮಾನ್ಯ ಮಂತ್ರಿಗಳು ಬರಗಾಲ ಪೀಡಿತ ಪ್ರದೇಶಗಳ ಬಗ್ಗೆ ಹೆಚ್ಚಿನ ಅಭಿಮಾನವಿಟ್ಟು ಹೆಚ್ಚು ಹಣ ಒದಗಿಸಬೇಕು ಮತ್ತು ಎಲ್ಲ ಹಳ್ಳಿಗಳಿಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡ ಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಬಸಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ಮತ್ತು ಮಾನ್ಯ ಗ್ರಾಮಾಭಿವೃದ್ಧಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ಕಾಲದ ಒಂದು ಮಿತಿಯ ಕಾರಣದಿಂದ ನಾನು ಸುದೀರ್ಘವಾಗಿ ಭಾಷಣ ಮಾಡದೆ ಕೆಲವು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಚೌಡಯ್ಯನವರ ಹಾಗೆ ನಾನೂ ಸಹ ಸಹಕಾರ ಕ್ಷೇತ್ರದಲ್ಲಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ಈ ಕಾರಣದಿಂದ ಅವರು ಹೇಳಿದಂಥ ಕೆಲವಾರು ವಿಚಾರಗಳನ್ನು ನಾನೂ ಸಹ ಪುಷ್ಟೀಕರಿಸುತ್ತಿದ್ದೇನೆ. ಪ್ರಾರಂಭದಲ್ಲಿ ಈ ಸಹಕಾರಿ ಕ್ಷೇತ್ರ ಯಾವ ಒಂದು ಮಟ್ಟದಲ್ಲಿ ಇತ್ತೋ, ಯಾವ ರೀತಿಯಿಂದ ಬೆಳವಣಿಗೆಯಾಗಿತ್ತೋ, ಯಾವ ಒಂದು ಗುಣಮಟ್ಟವನ್ನು ಸಾಧಿಸಿತ್ತೋ ಅದೆಲ್ಲವನ್ನೂ ಈ ಸಹಕಾರಿ ಕ್ಷೇತ್ರ ಇತ್ತೀಚಿನ ವರ್ಷ ಗಳಲ್ಲಿ ಕಳೆದುಕೊಂಡಿದೆ ಎಂದು ನಾನೂ ಸಹ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಲದ ವಿತರಣೆ ಕೂಡ ನಾವು ನಿರೀಕ್ಷೆ ಮಾಡಿದ ಮಟ್ಟಕ್ಕಿಂತ ಕಡಿಮೆ ಮಟ್ಟದಲ್ಲಿ ಆಗಿದೆ ಎಂಬುದು ಈ ವರದಿಯಿಂದ ನಮಗೆ ತಿಳಿದುಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಈ ಸಹಕಾರ ಸಂಘಗಳು ತಮ್ಮ ಒಂದು ಯೋಗ್ಯತೆಯನ್ನು ಕಳೆದುಕೊಂಡ ಕಾರಣದಿಂದ ಈ ಒಂದು ಪರಿಸ್ಥಿತಿ ಉಂಟಾಗಿದೆ ಎಂದು ನಾನು ತಿಳಿಯುತ್ತೇನೆ. ಸಾಲ ಪಡೆದವರು ಸಕಾಲದಲ್ಲಿ ಮರುಪಾವತಿ ಮಾಡದ ಕಾರಣದಿಂದ ಈ ಪರಿಸ್ಥಿತಿ ಉಂಟಾಗಿದೆ. ಇದನ್ನು ಹೋಗಲಾಡಿಸಲು ಇರುವಂತಹ ಒಂದೇ ಔಷಧವೆಂದರೆ, ಮಾರ್ಕೆಟಿಂಗ್ ಸೊಸೈಟಿಗಳನ್ನು ಬಲಪಡಿಸಬೇಕು. ಲಿಂಕಿಂಗ್ ಕ್ರೆಡಿಟ್ ವಿತ್-ಮಾರ್ಕೆಟಿಂಗ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ರೈತರು ತಾವು ಬೆಳೆದ ಮಾಲನ್ನು ಮಾರ್ಕೆಟಿಂಗ್ ಸೊಸೈಟಿಗಳ ಗೊಡೌನ್‌ಗಳಲ್ಲಿಟ್ಟು ಸಾಲವನ್ನು ವಾಪಸ್ ಮಾಡುವಂತಹ ವ್ಯವಸ್ಥೆಯನ್ನು ಜಾರಿಗೆ ತಂದರೆ ಅವರು ಸುಸ್ತಿದಾರರಾಗುವುದು ತಪ್ಪುತ್ತದೆಂದು ಹೇಳುತ್ತೇನೆ.

ಇನ್ನು ಲೆಕ್ಕ ಪರಿಶೋಧನೆಯ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ಮಾನ್ಯ ಚೌಡಯ್ಯನವರು ಹೇಳಿದಂತೆ ಪ್ರತಿವರ್ಷದ ಜನರಲ್ ಬಾಡಿ ಮೀಟಿಂಗ್ ಹೊತ್ತಿಗೆ ಲೆಕ್ಕಪತ್ರಗಳೆಲ್ಲಾ ಆಡಿಟ್ ಆಗಿರಬೇಕು. ನನಗೆ ತಿಳಿದಂತೆ ಅನೇಕ ಕಡೆಗಳಲ್ಲಿ ಕಳೆದ ೨-೩ ವರ್ಷಗಳಿಂದ ಆಡಿಟ್ ಆಗಿಲ್ಲ. ಲೆಕ್ಕಕ್ಕೆ ಈ ಇಲಾಖೆಯನ್ನು ದೊಡ್ಡದಾಗಿ ಬೆಳೆಸಿದ್ದಾರೆ. ಆದರೆ ಕ್ರಮಬದ್ಧವಾಗಿ ಆಡಿಟ್ ಆಗುತ್ತಿಲ್ಲ. ಈ ವರದಿಯ ೧೩೫ನೇ ಪುಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೊಸೈಟಿಗಳೆಷ್ಟು ಮತ್ತು ನಿಷ್ಕ್ರಿಯವಾಗಿರುವ ಸೊಸೈಟಿಗಳೆಷ್ಟು ಹಾಗೂ ಸಮಾಪನ ಹಂತದಲ್ಲಿರುವ ಸೊಸೈಟಿಗಳೆಷ್ಟು ಎಂಬುದರ ವಿವರಗಳನ್ನು ಕೊಟ್ಟಿದ್ದಾರೆ. ಲಿಕ್ವಿಡೇಷನ್‌ಗೆ ಬಂದಿರುವ ಸೊಸೈಟಿಗಳ ಸಂಖ್ಯೆಯನ್ನೂ ಸಹ ಇಲ್ಲಿ ತೋರಿಸಿದ್ದಾರೆ. ಇಂತಹ ಸೊಸೈಟಿಗಳಲ್ಲಿ ಆಡಿಟ್ ಮಾಡುವುದು ಏನಿರುತ್ತದೆ ? ಆದರೂ ಇಂತಹ ೨೮೪೧ ಸೊಸೈಟಿಗಳಲ್ಲಿ ಆಡಿಟ್ ಮಾಡಲಾಗಿದೆ ಮತ್ತು ೧೯೧೭ ಸೊಸೈಟಿಗಳಲ್ಲಿ ಆಡಿಟ್ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಆಡಿಟ್ ಮಾಡುವುದನ್ನು ಇನ್ನೂ ಚುರುಕುಗೊಳಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸರ್ಕಾರದವರು ಸಕಾಲದಲ್ಲಿ ಅಸಲನ್ನು ವಾಪಸ್ಸು ಕೊಟ್ಟವರಿಗೆ ಸುಸ್ತಿಬಡ್ಡಿಯನ್ನು ಮನ್ನಾ ಮಾಡುವುದರ ಮೂಲಕ ಅನುಕೂಲ ಮಾಡಿಕೊಟ್ಟಿದ್ದಾರೆ ೧೯೮೩ನೇ ಜೂನ್ ಕೊನೆಯೊಳಗಾಗಿ ಸಾಲವನ್ನು ಮರುಪಾವತಿ ಮಾಡಲು ತೊಂದರೆಯಾದವರಿಗೆ ಅನುಕೂಲ ಮಾಡಿಕೊಡಲು ಮತ್ತೆ ಸಮಯವನ್ನು ಇದೇ ತಿಂಗಳ ೩೧ರ ವರೆಗೆ ವಿಸ್ತರಣೆ ಮಾಡಿದ್ದಾರೆ. ಇದನ್ನು ನಮ್ಮ ರೈತರು ಉಪಯೋಗ ಮಾಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಕೆಲವರಿಗೆ ಈ ಸಮಯದಲ್ಲಿಯೂ ಸಾಲವನ್ನು ವಾಪಸ್ ಮಾಡಲು ಸಾಧ್ಯವಾಗಿದ್ದರೆ ಜೂನ್-೩೦ರ ವರೆಗೂ ಸಮಯವನ್ನು ವಿಸ್ತರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸುಗ್ಗಿ ಕಾಲವಾದ್ದರಿಂದ ರೈತರು ತಾವು ಪಡೆದ ಸಾಲವನ್ನು ಮಾಯಿದ್ದಿಗೆ ಮೊದಲೇ ತೀರಿಸಿದರೆ ರಿಜರ್ವ್ ಮತ್ತು ಪ್ರೈಮರಿ ಬ್ಯಾಂಕ್ ಬ್ಯಾಂಕ್ ನಡುವೆ ಇರುವಂತಹ ವ್ಯತ್ಯಾಸದ ಬಡ್ಡಿಯಿಂದ ರಿಯಾಯಿತಿ ಕೊಡುವುದಾಗಿ ಸರ್ಕಾರದವರು ಹೇಳಿದ್ದಾರೆ. ಆದ್ದರಿಂದ ಎಲ್ಲ ಬಾಕಿದಾರರೂ ಇದನ್ನು ಸದುಪಯೋಗ ಪಡಿಸಿಕೊಳ್ಳ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಜೀವನದ ಎಲ್ಲ ರಂಗಗಳಲ್ಲಿಯೂ ಈ ಸಹಕಾರಿ ಕ್ಷೇತ್ರ ಪ್ರವೇಶ ಮಾಡಿದೆ ಹೊಸದಾಗಿ ಹಲವಾರು ಸಹಕಾರಿ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ಕರ್ನಾಟಕ ರಾಜ್ಯ ಹರಿಜನ ಮತ್ತು ಗಿರಿಜನ ಸಹಕಾರ ವಸತಿ ನಿಗಮ ನಿಯಮಿತ. ಬೆಂಗಳೂರು. ಇದು ೧೯೭೬-೭೭ ರಲ್ಲಿ ಅಸ್ತಿತ್ವಕ್ಕೆ ಬಂತು. ಈ ಸಹಕಾರ ವಸತಿ ನಿಗಮದ ಬಗ್ಗೆ ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದಾಗ ಇದು ಬಹಳ ಶೋಚನೀಯ ಪರಿಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಈಗ ಈ ಸಂಘ ಎಲ್ಲಿದೆ ಎಂಬುದಕ್ಕೆ ಬೋರ್ಡಾಗಲೀ, ಹೆಸರಾಗಲೀ ಇಲ್ಲ. ಈ ಸೊಸೈಟಿಯ ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಯಾರು ಎಂಬುದು ಗೊತ್ತಿಲ್ಲ. ಲಕ್ಷಾಂತರ ರೂಪಾಯಿಗಳಷ್ಟು ಹಣ ಸುಸ್ತಿಯಲ್ಲಿರುತ್ತೆ ಎಂದು ಇಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಅನೇಕ ಮನೆಗಳು ಪೂರ್ತಿಯಾಗದೇ ಅರ್ಧದಲ್ಲಿಯೇ ಇವೆ ಎಂದು ಹೇಳಿದ್ದಾರೆ. ಇಂತಹ ಮನೆಗಳನ್ನು ಸರ್ಕಾರದವರೇ ಜನತಾ ಮನೆಗಳ ಯೋಜನೆಯ ಅಡಿಯಲ್ಲಿ ಕಟ್ಟಿಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಹೊಸದುರ್ಗದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಪ್ರಾರಂಭವಾಗಿ ಹಲವಾರು ವರ್ಷಗಳಾಯಿತು. ಆದರೂ ಅಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಇನ್ನೂ ಆಗಿಲ್ಲ. ರೈತರು ತಂದ ಮಾಲನ್ನು ಹರಾಜು ಮಾಡಲು ಬೇಕಾದ ಅನುಕೂಲಗಳು ಇನ್ನು ಆಗಿಲ್ಲ. ಮೊನ್ನೆ ಇದರ ಚುನಾವಣೆ ನಡೆಯಬೇಕಾಗಿತ್ತು. ಆದರೆ ಹೈಕೋರ್ಟನಿಂದ ತಡೆಯಾಜ್ಞೆ ಬಂದ ಕಾರಣದಿಂದ ಚುನಾವಣೆ ನಡೆಯಲಿಲ್ಲ. ಈ ಕಾರಣದಿಂದ ಕಮಿಟಿಯ ರಚನೆ ಪೂರ್ತಿಯಾಗಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೇ ತಡೆಯಾಜ್ಞೆಯನ್ನು ತೆರವು ಮಾಡಿಸಿ ಚುನಾಯಿತ ಸದಸ್ಯರು ಈ ಕಮಿಟಿಯಲ್ಲಿದ್ದು ಕಾರ್ಯನಿರ್ವಹಣೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳ ಬಗ್ಗೆ ನಾನು ಕಳೆದ ೨-೩ ಅಧಿವೇಶನಗಳಿಂದ ಪ್ರಶ್ನೆಗಳನ್ನು ಕಳುಹಿಸಿಕೊಡುತ್ತಿದ್ದೇನೆ. ಆದರೆ ಉತ್ತರ ಬರುತ್ತಿಲ್ಲ. ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿರುವ ಅಧಿಕಾರಿಗಳು ಹಣದ ದುರುಪಯೋಗ ಮಾಡಿಕೊಂಡ ಬಗ್ಗೆ ಡಿಕ್ರಿ ಕೂಡ ಆಗಿದೆ. ಆದರೆ ಮೇಲಿನ ಅಧಿಕಾರಿಗಳು ಎಕ್ಸಿಕ್ಯೂಷನ್ ಮಾಡುವುದನ್ನು ಮುಂದಕ್ಕೆ ಹಾಕುತ್ತಿದ್ದಾರೆ ಇದಕ್ಕೆ ಕಾರಣವೇನು ? ಮೇಲಧಿಕಾರಿಗಳು ಕಾಲಕ್ಕೆ ಸರಿಯಾಗಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತಿಲ್ಲ. ಈ ಕಾರಣದಿಂದಲೇ ಕೆಲವರು ಹಣ ದುರುಪಯೋಗ ಮಾಡಿ

ಕೊಳ್ಳಲು ಕಾರಣವಾಗಿದೆ. ಈಗಲಾದರೂ ಮೇಲಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿ ಮಾಡಬೇಕು ಡಿಕ್ರಿಯಾಗಿರುವ ಹಣವನ್ನು ಕೂಡಲೇ ವಸೂಲ್ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ವಾರ್ಷಿಕ ವರದಿಯಲ್ಲಿ ಅಬ್ರಿಟ್ರೇಷನ್ ಕೇಸ್‌ಗಳು ಎಷ್ಟಿವೆ, ಅವುಗಳಲ್ಲಿ ವಿಲೇವಾರಿ ಎಷ್ಟಾಗಿವೆ. ಬಾಕಿ ಇರುವಂತಹ ಕೇಸ್‌ಗಳೆಷ್ಟು ಎಂಬುದನ್ನೆಲ್ಲಾ ಹೇಳಿದ್ದಾರೆ. ಪೋಲೀಸ್ ಇಲಾಖೆಯಲ್ಲಿರುವ ಕೇಸ್‌ಗಳೆಷ್ಟು, ಅಮಲ್‌ಜಾರಿ ಕೇಸ್‌ಗಳೆಷ್ಟು ಎಂಬುದನ್ನೆಲ್ಲಾ ಹೇಳಿದ್ದಾರೆ. ಈ ದಿಶೆಯಲ್ಲಿ ಕೆಲಸಗಳು ತ್ವರಿತಗತಿಯಿಂದ ಆಗಬೇಕು ಮತ್ತು ಹಣ ದುರುಪಯೋಗ ಪಡಿಸಿಕೊಂಡಂಥವರಿಗೆ ಯಾರಿಗೂ ಇಲ್ಲಿಯವರೆಗೆ ಶಿಕ್ಷೆಯಾಗಿಲ್ಲ. ಒಬ್ಬಿಬ್ಬರನ್ನು ನೀವು ಜೈಲಿಗೆ ಕಳುಹಿಸಿದಾಗ ಮಾತ್ರ ಈ ರೀತಿಯಿಂದ ಹಣ ದುರುಪಯೋಗವಾಗುವುದು ತಪ್ಪುತ್ತದೆಂದು ಹೇಳುತ್ತೇನೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಯೋಜನೆ ಮಾಡಬೇಕೆಂದು ಸಲಹೆ ಕೊಡುತ್ತೇನೆ.

ಮಾನ್ಯ ಅಧ್ಯಕ್ಷರೇ ಈಗ ಐ. ಆರ್. ಡಿ. ಪಿ. ಪ್ರೋಗ್ರಾಂನಲ್ಲಿ ಫಲಾನುಭವಿಗಳಿಗೆ ಎಮ್ಮೆ, ಕುರಿ ಮುಂತಾದುವನ್ನು ಕೊಡುತ್ತಾರೆ. ಸರ್ಕಾರದವರು ಇವುಗಳನ್ನು ಕೊಟ್ಟ ಕೆಲವು ದಿನಗಳಲ್ಲೇ ರೈತರು ಮಾರಾಟ ಮಾಡಿಕೊಳ್ಳುತ್ತಾರೆ. ಇದರಿಂದ ರೈತ ಈ ಸವಲತ್ತನ್ನು ದುರುಪಯೋಗ ಮಾಡಿಕೊಂಡಂತೆ ಆಗುತ್ತದೆ. ಆದರೆ ಅವರನ್ನು ಜಿಲ್ಲಾಧಿಕಾರಿಗಳು ಪ್ರಾಸಿಕ್ಯೂಟ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಆ ರೀತಿ ಏನಾದರೂ, ಯಾರಾದರೂ, ದುರುಪಯೋಗ ಮಾಡಿಕೊಂಡರೆ ಅವರನ್ನು ಪ್ರಾಸಿಕ್ಯೂಟ್ ಮಾಡುವಂಥ ಒಂದು ಕೆಲಸ ಮಾಡಬೇಕು ನಾನು ಸಲಹೆ ಕೊಡುತ್ತೇನೆ. ಆದರೆ ಇದುವರೆಗೂ ಯಾರನ್ನು ಕೂಡ ಪ್ರಾಸಿಕ್ಯೂಟ್ ಮಾಡಿದಂತೆ ಕಾಣಲಿಲ್ಲ. ಪ್ರಾಸಿಕ್ಯೂಟ್ ಮಾಡಿದರೆ ಜನರಲ್ಲಿ ಒಂದು ಭಯ ಉಂಟಾಗುತ್ತದೆ. ಆಗ ಯಾರೂ ಕೂಡ ದುರುಪಯೋಗ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆಗ ನಿಜವಾಗಿ ಯಾರು ಬಡವರು ಇರುತ್ತಾರೋ ಅವರಿಗೆ ಸಹಾಯ ಮಾಡಿದಂತೆ ಆಗುತ್ತದೆ. ಮತ್ತು ಸರ್ಕಾರದ ಉದ್ದೇಶ ಕೂಡಾ ಸಫಲವಾಗುತ್ತದೆ. ಈ ಮೂಲಕ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ದೊರಕಿಸಿ ಕೊಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಕೊಳವೆ ಬಾವಿಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ, ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವ ಇದ್ದಾಗ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರನ್ನು ಒದಗಿಸಿ ಕೊಡಲು ಕೊಳವೆ ಬಾವಿಗಳನ್ನು ತೋಡಿಸಿದ್ದೀರಿ. ಆದರೆ ಎಲ್ಲಿ ಕೊಳವೇ ಬಾವಿಗಳನ್ನು ತೋಡಿಸಿದ್ದೀರಿ ಆದರೆ ಎಲ್ಲಿ ಕೊಳವೆ ಬಾವಿಗಳು ಕೆಟ್ಟು ಹೋಗಿರುತ್ತವೆಯೋ ಆ ಕೊಳವೆ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಿಲ್ಲ. ಸ್ವಾಮಿ ಇವತ್ತು ನಮ್ಮ ತಾಲ್ಲೂಕಿನಲ್ಲಿ ಸುಮಾರು ೬೦೦ ಕೊಳವೆ ಬಾವಿಗಳು ಕೆಟ್ಟು ಹೋಗಿವೆ ಅದರ ರಿಪೇರಿ ಕೆಲಸ ಮಾತ್ರ ಮಾಡಿಲ್ಲ. ಮೊದಲು ಹಂಗಾಮಿ ಯಾಗಿ ಆದರೂ ನೇಮಿಸಿಕೊಂಡು ರಿಪೇರಿ ಕೆಲಸವನ್ನು ಮಾಡುತ್ತಿದ್ದರು ಆದರೆ ಇತ್ತೀಚೆಗೆ ಅದನ್ನೂ ಸಹ ಮಾನ್ಯ ಮಂತ್ರಿಗಳು ನಿಲ್ಲಿಸಿದ್ದಾರೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಹೋಗಲೂ ಅವರಿಗೆ ವಾಹನ ಸೌಕರ್ಯ ಇಲ್ಲ. ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಬ್ಬಂದಿ ಇಲ್ಲ. ಮತ್ತೆ ಕೊಳವೇ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ಹಣವಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ ಈಗ ಪರಿಸ್ಥಿತಿ ಏನಾದರೂ ಉತ್ತಮಗೊಂಡಿದೆಯೋ ಇಲ್ಲವೋ ಗೊತ್ತಿಲ್ಲ, ಒಂದು ವೇಳೆ ಹಣಕಾಸಿನ ಪರಿಸ್ಥಿತಿ ಏನಾದರೂ ಉತ್ತಮಗೊಂಡಿದ್ದರೆ ಮಾನ್ಯ ಮಂತ್ರಿಗಳು ದಯವಿಟ್ಟು ಅವರಿಗೆ ಒಂದು ವಾಹನ ವ್ಯವಸ್ಥೆಯನ್ನು ಮಾಡಿಕೊಡಬೇಕು. ಮತ್ತು ಸರಿಯಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಎಲ್ಲಿ ಕೊಳವೇ ಬಾವಿಗಳು ಕೆಟ್ಟುಹೋಗಿವೆಯೋ ಅಲ್ಲಿಗೆ ಈ ಸಿಬ್ಬಂದಿಗಳು ಹೋಗಿ ಕೂಡಲೇ ಆ ಕೊಳವೆ ಬಾವಿಗಳನ್ನು ರಿಪೇರಿ ಮಾಡುವಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಾಕಷ್ಟು ಸಿಬ್ಬಂದಿಯನ್ನು ತಾವು ನೇಮಕ ಮಾಡಿಕೊಂಡರೆ ಒಂದು ರೀತಿಯಲ್ಲಿ ನಿರುದ್ಯೋಗ ಸಮಸ್ಯೆ ಕೂಡ ಬಗೆಹರಿಸಿದಂತೆ ಆಗುತ್ತದೆ. ಮತ್ತೆ ಕೆಟ್ಟು ಹೋದ ಕೊಳವೆ ಬಾವಿಗಳನ್ನು ಕೂಡ ರಿಪೇರಿ ಮಾಡಿಸಿದಂತೆ ಆಗುತ್ತದೆ. ಎರಡೂ ರೀತಿಯಲ್ಲಿ ಉಪಯೋಗವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇತ್ತ ಕಡೆ ಸ್ವಲ್ಪ ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಾನು ಸಹಕಾರ ಕ್ಷೇತ್ರದ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಯಾರು ಈ ಸಹಕಾರ ಕ್ಷೇತ್ರದಲ್ಲಿ ಅಚಲವಾದಂಥ ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೋ ಅಂಥ ಒಬ್ಬ ಮಂತ್ರಿಗಳು ಇವತ್ತು ಸಹಕಾರ ಸಚಿವರಾಗಿ ಬಂದಿದ್ದಾರೆ. ಆದರೆ ಈ ಮನೆಯ ಸದಸ್ಯರಲ್ಲಿ ಕೆಲವರು ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿರುವರು ಕೂಡ ಬಂದಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಯಾರು ಕೆಲಸ ಮಾಡುತ್ತಾರೋ ಅವರು ಪ್ರಾಮಾಣಿಕವಾಗಿ

ಕೆಲಸ ಮಾಡುವಂತೆ ಒಂದು ವ್ಯವಸ್ಥೆಯನ್ನು ಮಾನ್ಯಮಂತ್ರಿಗಳು ತರುತ್ತಾರೆಂದು ಹೇಳಿ ಇದುವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್).—ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ನನಗೆ ಸಮಯದ ಅಭಾವ ಕಡಿಮೆ ಇರುವುದರಿಂದ ಮತ್ತು ಮಾನ್ಯ ಮಂತ್ರಿಗಳು ಪಾಟ್ನಕ್ಕೆ ಹೋಗಬೇಕಾಗಿರುವುದರಿಂದ ಅವರೂ ಕೂಡ ಆತುರಾತುರವಾಗಿ ಇದ್ದಾರೆ. ಆದರೆ ನನಗೆ ಇರತಕ್ಕಂಥ ಸಮಯದಲ್ಲಿ ನಾನು ಕೆಲವಾರು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ ಮಾನ್ಯ ಗ್ರಾಮೀಣ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಕೆಲವಾರು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಆದ್ದರಿಂದ ನಾನು ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಮಾನ್ಯಮಂತ್ರಿಗಳ ಬಗ್ಗೆ ನನಗೆ ಮೊದಲಿನಿಂದಲೂ ಕೂಡ ಗೌರವ ಇದೆ. ಆದರೆ ನಮ್ಮ ಹಿಂದಿ ಭಾಷೆಯಲ್ಲಿ ಒಂದು ಗಾದೆ ಹೇಳುತ್ತಾರೆ. ಆ ಗಾದೆ ನನಗೆ ಈಗ ಜ್ಞಾಪಕಕ್ಕೆ ಬರುತ್ತಿದೆ. ಅದರಂತೆ ಇವರಿಗೆ ಒಂದು ರೀತಿಯಲ್ಲಿ ಒಳ್ಳೆಯ ಪ್ರಚಾರ ಕೂಡ ಸಿಕ್ಕಿದೆ. ಆದರೆ ಅವರ ವೈಯಕ್ತಿಕ ವಿಷಯದ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಮಾನ್ಯ ಮಂತ್ರಿಗಳ ಖಾತೆಯಲ್ಲಿ ಸುಮಾರು ೧೭ ಯೋಜನೆಯಗಳನ್ನು ಹಾಕಿಕೊಂಡಿದ್ದಾರೆ. ಆದರೆ ಈ ಎಲ್ಲಾ ಯೋಜನೆಗಳನ್ನು ಇವರು ಇಟ್ಟುಕೊಡಂತಹ ಒಂದು ವೇಳೆಯಲ್ಲಿ ಮುಗಿಸಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ೧೭ ಯೋಜನೆಗಳು ಯಾವುವೆಂದರೆ ಅಂತ್ಯೋದಯ, ನೇಗಿಲು ಭಾಗ್ಯ, ಐ. ಆರ್. ಡಿ ಪಿ. ಎನ್. ಆರ್. ಇ. ಪಿ. ಇನ್ನೂ ಅನೇಕ ಯೋಜನೆಗಳನ್ನು ಇವರು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ಆದರೆ ಈ ೧೭ ಯೋಜನೆಗಳನ್ನು ಯಾವ ರೀತಿಯಲ್ಲಿ ತಮ್ಮ ಟಾರ್‌ಗೆಟ್‌ನಲ್ಲಿ ಮುಗಿಸಿದ್ದಾರೆ? ಎಷ್ಟರ ಮಟ್ಟಿಗೆ ಕಾರ್ಯಸಾಧನೆ ಮಾಡಿದ್ದಾರೆ ಎಂಬುದನ್ನು ಇದರಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಅಂಶ. ಬರೀ ನಾವು ಯೋಜನೆಗಳನ್ನು ರೂಪಿಸಿಕೊಳ್ಳುವುದರಿಂದ ಬಡ ಜನತೆಯ ಉದ್ಧಾರವಾಗುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ಪ್ರತಿಯೊಂದು ಯೋಜನೆಯ ಟಾರ್‌ಗೆಟ್ ರೀಚ್ ಆಗಿದೆಯೋ ಇಲ್ಲವೇ ಎಂಬುದನ್ನೂ ಕೂಡ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಹಿಂದೆ ಶ್ರೀಮಾನ್ ಬೇಗಾನ್ ರಾಮಯ್ಯನವರು ಈ ಖಾತೆಯನ್ನು ವಹಿಸಿ ಕೊಂಡಿದ್ದರು. ಅವರು ಕೂಡ ನಾನಾ ರೀತಿಯ ಯೋಜನೆಗಳನ್ನು ರೂಪಿಸಿಕೊಂಡಿದ್ದರು. ಆದರೆ ಐ.ಆರ್.ಡಿ.ಪಿ. ಪ್ರೋಗ್ರಾಂನ್ನು ಇಂಪ್ಲಿಮೆಂಟ್ ಮಾಡಿರುವುದರಲ್ಲಿ ಕರ್ನಾಟಕ ರಾಜ್ಯ ಮೊದಲನೆಯ ಸ್ಥಾನವನ್ನು ಪಡೆದಿತ್ತು. ಆದರೆ ಅದೇ ಒಂದು ಸ್ಥಾನವನ್ನು ನಮ್ಮ ಮಾನ್ಯ ಮಂತ್ರಿಗಳು ಇದುವರೆಗೂ ಮುಂದುವರಿಸಿಕೊಂಡು ಬಂದಿರಬಹುದು ಎಂದು ನಾನು ನಂಬಿರುತ್ತೇನೆ. ಇವತ್ತು ನಮ್ಮ ಮಾನ್ಯ ಮಂತ್ರಿಗಳು ರೂಪಿಸಿಕೊಂಡಿರತಕ್ಕಂಥ ೧೭ ಯೋಜನೆಗಳಲ್ಲಿ ಎಷ್ಟು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದೀರಿ ? ಎಂಬುದು ಬಹಳ ಮುಖ್ಯವಾದುದು. ಇವತ್ತು ಹಳ್ಳಿಗಳಲ್ಲಿ ಶೇಕಡ ೮೦ ರಷ್ಟು ಜನ ವಾಸ ಮಾಡುತ್ತಿದ್ದಾರೆ ಆದರೆ ಸರ್ಕಾರದವರು ಯಾವ ಯೋಜನೆಗಳನ್ನು ರೂಪಿಸುತ್ತಾರೋ ಆ ಯೋಜನೆಗಳು ಪೂರ್ತಿ ಫಲ ನೇರವಾಗಿ ಹಳ್ಳಿಗಾಡಿನ ಜನತೆಗೆ ತಲುಪಬೇಕು. ಈ ಇಲಾಖೆಯಲ್ಲಿ ಎನ್. ಆರ್. ಇ. ಪಿ., ಐ. ಆರ್. ಡಿ. ಪಿ. ಪ್ರೋಗ್ರಾಮ್ ಮತ್ತು ಎಂಪ್ಲಾಯಿಮೆಂಟ್ ಗ್ಯಾರೆಂಟಿ ಸ್ಕೀಮ್, ಸೆಂಟ್ರಲ್ ಇಂಪ್ಲಾಯ್‌ಮೆಂಟ್ ಸ್ಕೀಮ್ ಇತ್ಯಾದಿ ಹೊಸ ಹೊಸ ಹೆಸರುಗಳನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಬರತಕ್ಕಂಥ ಪ್ರತಿಯೊಂದು ಯೋಜನೆಕೂಡ ಬಡವರಿಗೆ ಉಪಯೋಗವಾಗತಕ್ಕಂಥ ಯೋಜನೆಗಳು. ಇವತ್ತು ಅಂತ್ಯೋದಯ ಕಾರ್ಯಕ್ರಮಕ್ಕೆ ಬಡ್ಜೆಟ್‌ನಲ್ಲಿ ಸುಮಾರು ೧.೭೫ ಲಕ್ಷ ರೂಪಾಯಿಗಳನ್ನು ಇಟ್ಟು ಸುಮಾರು ೮೦-೮೭ ಲಕ್ಷರೂಪಾಯಿಗಳನ್ನು ಮಾತ್ರ ತಾವು ರಿಲೀಜ್ ಮಾಡಿದ್ದೀರಿ. ಮತ್ತೆ ಎಂಪ್ಲಾಯ್‌ಮೆಂಟ್ ಗ್ಯಾರೆಂಟಿ ಸ್ಕೀಮ್‌ಗೆ ತಾವು ಈ ವರ್ಷದ ಬಡ್ಜೆಟ್‌ನಲ್ಲಿ ಹಣವನ್ನು ಇಟ್ಟಿಲ್ಲ. ಬಡ್ಜೆಟ್‌ನಲ್ಲಿ ಹಣವನ್ನು ಇಡದೆ ತಾವು ಯಾವ ರೀತಿಯಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತೀರಿ ? ಇವತ್ತು ಸರ್ಕಾರದವರು ನಿಗದಿ ಮಾಡಿರುವ ಪ್ರಕಾರ ಒಬ್ಬ ಕೂಲಿಗಾರನಿಗೆ ಒಂದು ದಿವಸಕ್ಕೆ ೬-೫೦ ಪೈಸೆ ಕೊಡಬೇಕಾಗುತ್ತದೆ. ಅಂದರೆ ಸುಮಾರು ೧೦ ಸಾವಿರ ಜನರಿಗೆ ತಾವು ಉದ್ಯೋಗವನ್ನು ಒದಗಿಸಿ ಕೊಟ್ಟರೆ ಸುಮಾರು ೬೦ ಸಾವಿರ ರೂಪಾಯಿಗಳ ಮೇಲೆ ಆಗುತ್ತದೆ. ಇದೇ ರೀತಿಯಲ್ಲಿ ತಾವು

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರತಿಯೊಂದು ಸ್ಕೀಮ್‌ಗಳಲ್ಲಿ ಕೂಡ ಮಾಡಿದ್ದೀರಿ. ಆದರೆ ಆ ಎಲ್ಲಾ ವಿಷಯಗಳನ್ನು ನಾನು ಹೇಳುವುದಕ್ಕೆ ಸಮಯವಿಲ್ಲ. ಈ ಯೋಜನೆಗಳಿಗೆ ತಮಗೆ ಕೇಂದ್ರ ಸರ್ಕಾರದಿಂದ ಕೂಡ ಹಣವನ್ನು ಕೊಡುತ್ತಾರೆ. ಇದರಲ್ಲಿ ೫೦ ಪರ್ಸೆಂಟ್ ರಾಜ್ಯ ಸರ್ಕಾರದ್ದು ಇನ್ನು ೫೦ ಪರ್ಸೆಂಟ್ ಕೇಂದ್ರ ಸರ್ಕಾರದ್ದು ಇರಬೇಕೆಂದು ಕಾಣುತ್ತದೆ. ನೀವು ಎಷ್ಟು ಖರ್ಚು ಮಾಡುತ್ತೀರಿ ? ನೀವು ಖರ್ಚು ಮಾಡಿರತಕ್ಕಂಥದ್ದನ್ನು ಲೆಕ್ಕ ಹಾಕಿದರೆ ಐ.ಆರ್.ಡಿ.ಪಿ. ಟಾರ್ಗೆಟ್ ೧ ಲಕ್ಷದ ೫ ಸಾವಿರ ಫಲಾನುಭವಿಗಳಿಗೆ ಕೊಡುತ್ತೇವೆಂದು ಹೇಳಿದ್ದೀರಿ ನೀವು ಖರ್ಚುಮಾಡಬೇಕಾದ ಹಣ ೧೪ ಕೋಟಿ ರೂಪಾಯಿಗಳು ನೀವು ಈಗ ಖರ್ಚುಮಾಡಿರತಕ್ಕದ್ದು ೩ ಕೋಟಿ ೩೨ ಲಕ್ಷ ರೂಪಾಯಿಗಳು ನೀವು ೩ ಕೋಟಿ ೩೨ ಲಕ್ಷ ಖರ್ಚು ಮಾಡಿರುವುದರಿಂದ ಕೇಂದ್ರದವರೂ ಸಹ ಅಷ್ಟೇ ಹಣವನ್ನು ಕೊಡುತ್ತಾರೆ. ನಿಮ್ಮ ಟಾರ್ಗೆಟ್ ಇರುವುದು ೧೪ ಕೋಟಿ ರೂಪಾಯಿ, ಅದರಲ್ಲಿ ನೀವು ಖರ್ಚುಮಾಡಿರತಕ್ಕದ್ದು ಕೇವಲ ಆರುವರೆ ಕೋಟಿ ರೂಪಾಯಿ ಮಾತ್ರ. ೯ ತಿಂಗಳಲ್ಲಿ ೬ ಕೋಟಿ ಖರ್ಚುಮಾಡಿರತಕ್ಕವರು ಇನ್ನು ಉಳಿದಿರತಕ್ಕ ಮೂರು ತಿಂಗಳಲ್ಲಿ ೮ ಕೋಟಿ ರೂಪಾಯಿ ಹಣವನ್ನು ಖರ್ಚುಮಾಡುತ್ತೀರಾ ? ಇದ್ದ ಹಣವನ್ನು ಖರ್ಚು ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ನೀವು ಅಂತ್ಯೋದಯ ಕಾರ್ಯಕ್ರಮ ಜಾರಿಗೆ ತರುತ್ತೇವೆಂದು ಹೇಳುತ್ತೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇದು ಮಾನ್ಯ ಮೊಯ್ಲಿಯವರಿಗೆ ಅರ್ಥವಾಗುತ್ತದೆ. ಈ ಹಣವೆಲ್ಲಾ ಡಿ.ಆರ್.ಡಿ.ಎಸ್. ನಲ್ಲಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿ.ಆರ್.ಡಿ.ಎಸ್. ಸೊಸೈಟಿ ಇದ್ದಹಾಗೆ, ೧೦ ವರ್ಷ ಹಣ ಇರುತ್ತದೆ. ಆದ್ದರಿಂದ ಪ್ರಯೋಜನ ಯಾರಿಗೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಪೂರ ಹಣವೆಲ್ಲಾ ಬ್ಯಾಂಕುಗಳಿಗೆ ಹೋಗಿದೆ. ಇದು ಮಾನ್ಯ ಮೊಯ್ಲಿಯವರಿಗೆ ಗೊತ್ತಾಗುತ್ತದೆ, ನನ್ನ ಲೆಕ್ಕದಲ್ಲಿ ಹೇಳುವುದಾದರೆ ೧೪ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಹಣ ಖರ್ಚಾಗಿದೆ. ಸಬ್ಸಿಡಿಗೆ ಅಡ್ಜಸ್ಟ್ ಆಗುವುದನ್ನೆಲ್ಲಾ ಲೆಕ್ಕದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ೧೪ ಕೋಟಿ ರೂಪಾಯಿಗಳಿಗಿಂತ ನಮಗೆ ಜಾಸ್ತಿ ಹಣ ಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಕೊಟ್ಟಿರತಕ್ಕ ಲೆಕ್ಕದ ಪ್ರಕಾರ ಡಿಸೆಂಬರ್ ಕೊನೆಯ ವರೆಗೆ ಕೊಟ್ಟಿದ್ದೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ನವೆಂಬರ್ ವರೆಗೆ ಮಾತ್ರ ಲೆಕ್ಕ ಇದೆ ದಯವಿಟ್ಟು ತಾವು ನೋಡ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ನಮಗೆ ಕೊಟ್ಟಿರುವ ವಾರ್ಷಿಕ ವರದಿಯ ಪ್ರಕಾರ ನಾನು ಹೇಳುತ್ತಿದ್ದೇನೆ. ತಮ್ಮ ಫೈಲಿನಲ್ಲಿ ಏನಿದೆಯೋ ಗೊತ್ತಿಲ್ಲ. ತಾವು ತಮ್ಮ ಉತ್ತರದಲ್ಲಿ ಹೇಳಿದರೆ ಗೊತ್ತಾಗುತ್ತದೆ. ತಮ್ಮ ವರದಿಯ ಪ್ರಕಾರ ತಾವು ಸ್ಪೆಂಡ್ ಇಲ್ಲವೆಂಬುದು ಗೊತ್ತಾ ತ್ತದೆ. ಮಂತ್ರಿಗಳು ಉತ್ತರ ಕೊಡುವಾಗ ಅಂಕಿ ಸಂಖ್ಯೆಗಳ ಸಮೇತ ಹೇಳಿದರೆ ಒಪ್ಪೋಣ. ನೀವು ೧೪ ಕೋಟಿ ರೂಪಾಯಿ ಟಾರ್ಗೆಟ್ ಇಟ್ಟು ಕೊಂಡಿದ್ದೀರಿ. ಈ ವರ್ಷ ಎಷ್ಟು ಹಣವನ್ನು ಇಟ್ಟಿದ್ದೀರಿ ? ೧೯೮೪-೮೫ ರಲ್ಲಿ ೧೪ ಕೋಟಿ ರೂಪಾಯಿ ಇಟ್ಟಿದ್ದೀರಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇವತ್ತು ಬೆಲೆ ಏರಿಕೆಯಾಗಿದೆ, ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನೀವು ಇಟ್ಟಿರತಕ್ಕ ಹಣ ಸಾಲುವುದಿಲ್ಲ ೧೩ ಕೋಟಿ ರೂಪಾಯಿ ಕೊಡುವ ಕಡೆ ೧೪ ಕೋಟಿ ರೂಪಾಯಿ ಕೊಟ್ಟರೆ ಅದು ಹೆಚ್ಚಿಗೆ ಆದಂತೆ ಆಗುವುದಿಲ್ಲ. ಬೇರೆ ಬೇರೆ ಇಲಾಖೆಗಳಿಂದ ಬರತಕ್ಕ ಹಣ ೧೦ ಕೋಟಿ ಇದ್ದುದನ್ನು ೧೩ ಕೋಟಿ ಮಾಡಿಕೊಂಡಿದ್ದೀರಿ. ಬಡವರಿಗೆ ಸಹಾಯವಾಗತಕ್ಕ ಕಾರ್ಯಕ್ರಮ ೧೪ ಕೋಟಿ ಇರುವುದನ್ನು ೨೦ ಕೋಟಿ ಮಾಡಿದರೆ ತಪ್ಪೇನು ಆಗುತ್ತದೆ ? ಕಡುಬಡವರಿಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಭೂಹೀನರಿಗೆ ಕೃಷಿ ಕಾರ್ಮಿಕರಿಗೆ. ಕುಶಲ ಕರ್ಮಿಗಳಿಗೆ ಅನುಕೂಲವಾಗತಕ್ಕ ಕಾರ್ಯಕ್ರಮ ಶೇಕಡ ೫೦ರಷ್ಟು ಬಡತನ ರೇಖೆಯ ಕೆಳಗೆ ಇದ್ದಾರೆ. ಅವರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಆ ಜನರ ಕಲ್ಯಾಣಕ್ಕಾಗಿ ಹಣ ಇಡದಿದ್ದರೆ ಹೇಗೆ ? ನೀವು ಯಾವ ರೀತಿಯ ಅಭಿವೃದ್ಧಿ ಕಾರ್ಯಕ್ರಮ ಗಳನ್ನು ಮಾಡುತ್ತೀರಿ ಎಂಬುದನ್ನು ಹೇಳಬೇಕು. ಎನ್. ಆರ್. ಇ. ಪಿ. ಇದು ೧೯೮೦ರಲ್ಲಿ ಪ್ರಾರಂಭವಾಯಿತು. ಅದಕ್ಕಿಂತ ಹಿಂದೆ ಫುಡ್ ಫಾರ್ ವರ್ಕ್ ಎಂದು ಇತ್ತು. ಎನ್.ಆರ್.ಇ.ಪಿ. ಕಾರ್ಯಕ್ರಮ ಬಂದ ಮೇಲೆ ಅದರ ಉದ್ದೇಶ ಯಾರು ಕೃಷಿಕಾರ್ಮಿಕರು, ಅತಿ ಸಣ್ಣ ರೈತರು. ಕಡುಬಡವರು ಇದ್ದಾರೆ. ಅಂತವರಿಗೋಸ್ಕರ ಹಳ್ಳಿಗಳಲ್ಲಿ ರಸ್ತೆ ಮಾಡಿಸುವುದು ಸೇತುವೆ ಮಾಡಿಸು ವುದು ಕ್ವಾರ್ಟರ್ಸ್ ಕಟ್ಟಿಸುವುದು ಈ ತರಹ ಕೆಲಸಗಳನ್ನು ಮಾಡುವುದರಿಂದ ಅವರಿಗೆ ಉದ್ಯೋಗ ಸಿಗುವಂತೆ ಮಾಡಿ, ಅವರು ಜೀವನ ಮಾಡಲು ಅನುಕೂಲ ಮಾಡುವ ರೀತಿಯಲ್ಲಿ ಕಾರ್ಯಕ್ರಮ ಇತ್ತು

ಅದರ ಉದ್ದೇಶ ಹಳ್ಳಿಗಾಡುಪ್ರದೇಶಗಳಲ್ಲಿ ಬಡವರ ಶೋಷಣೆ ಯಾಗುತ್ತಿದೆ ಅದನ್ನು ನಿಲಿಸಬೇಕು. ಎನ್ನತಕ್ಕ ದೃಷ್ಟಿಯಿಂದ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯನ್ನು ಮೊದಲು ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿಗಳಾಗಿದ್ದ ವಸಂತರಾವ್ ಪಾಟೀಲ್ ಅವರು ಪ್ರಾರಂಭ ಮಾಡಿದರು. ಈ ಯೋಜನೆ ಚೆನ್ನಾಗಿದೆಯೆಂದು ತಿಳಿದುಕೊಂಡು ನಮ್ಮ ರಾಜ್ಯದಲ್ಲೂ ಈ ಯೋಜನೆ ಪ್ರಾರಂಭ ಮಾಡಿದರು ಆಮೇಲೆ ಈ ಯೋಜನೆಯನ್ನು ಕೇಂದ್ರ ಸರ್ಕಾರ ಕೂಡ ಒಪ್ಪಿಕೊಂಡಿದೆ. ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಆಗ ನಮ್ಮ ಜೊತೆಯಲ್ಲೇ ಇದ್ದರು. ಎನ್.ಆರ್.ಇ.ಪಿ. ಯೋಜನೆ ಇರುವಾಗ ನೀವು ಹೆಸರು ಬದಲಾವಣೆ ಮಾಡಿ ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಮ್ ಎಂದು ಮಾಡಿಕೊಂಡಿದ್ದೀರಿ. ಜೊತೆಗೆ ಕೇಂದ್ರ ಸರ್ಕಾರದ ಯೋಜನೆ ರೂರಲ್ ಲ್ಯಾಂಡ್‌ಲ್ಯಾಸ್ ಎಂಪ್ಲಾಯಿಮೆಂಟ್‌ಸ್ಕೀಮ್ ಇದೆ. ನೀವು ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಮ್ ಎಂದು ಸ್ವಲ್ಪ ಬದಲಾವಣೆಮಾಡಿ ಒಂದು ಹೆಸರು ಕೊಟ್ಟಿದ್ದೀರಿ. ಈ ಯೋಜನೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಈ ಯೋಜನೆಗೆ ಬಡ್ಜೆಟ್‌ನಲ್ಲಿ ಹಣವನ್ನು ಪ್ರಾವಿಜನ್ ಮಾಡಿಕೊಂಡಿಲ್ಲ ಹೆಸರು ಮಾತ್ರ ಇದೆ. ಇನ್ನೊಂದು ಅಂತ್ಯೋದಯ ಎಂದು ಮತ್ತೊಂದು ಯೋಜನೆಯನ್ನು ಮಾಡಿದ್ದೀರಿ. ಇದರ ಬಗ್ಗೆ ಮಾನ್ಯ ಚೌಡಯ್ಯನವರು ಮಾತನಾಡುತ್ತಾ ಬಹಳ ಚೆನ್ನಾಗಿ ಹೇಳಿದ್ದಾರೆ. ನಿಮ್ಮ ಅಂಕಿ ಸಂಖ್ಯೆಗಳ ಪ್ರಕಾರ ೪೫ ತಾಲ್ಲೂಕುಗಳಲ್ಲಿ ಎಷ್ಟು ಜನರನ್ನು ಗುರುತು ಮಾಡಿದ್ದೀರಿ ಒಂದು ತಾಲ್ಲೂಕಿಗೆ ಎಷ್ಟು ಜನರು ಬರುತ್ತಾರೆ ? ಈ ಯೋಜನೆಗೆ ಹಣವನ್ನು ಇಟ್ಟಿಲ್ಲ. ಈ ಯೋಜನೆಯನ್ನು ಕೂಡ ಪ್ರಚಾರ ಕ್ಕೋಸ್ಕರ ಮಾಡಿದ್ದೀರಿ ಎಂದು ಹೇಳಬೇಕಾಗುತ್ತದೆ. ಈಗ ೩೦ ಸಾವಿರ ಜನರನ್ನು ಗುರುತಿಸ ಬೇಕಾಗಿದೆ. ಆದರೆ ತಮ್ಮ ಅಚೀವ್‌ಮೆಂಟ್ ಸಾಲದು ಬಹುಶಃ ಇದುವರೆಗೆ ೧೭ ಸಾವಿರ ಜನರನ್ನು ಗುರುತಿಸಿದ್ದೀರಿ ಎಂದು ಕಾಣುತ್ತದೆ, ಇದರಲ್ಲೂ ಕೂಡ ನಿಮ್ಮ ಅಚೀವ್‌ಮೆಂಟ್ ಬಹಳ ಕಡಿಮೆ ಇದೆ. ನೀವು ಏನು ಮಾಡುತ್ತೇವೆ. ಎಂದು ಹೇಳಿದ್ದೀರಿ ಆ ಯಾವ ಕೆಲಸವನ್ನೂ ಕೂಡ ಮಾಡಿಲ್ಲ. ೧೭ಸಾವಿರ ಅಂದರೆ ಒಂದು ತಾಲ್ಲೂಕಿಗೆ ೨೦–೩೦ ಜನ ಬರಬಹುದು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅಂತ್ಯೋದಯ ಯೋಜನೆಗೆ ಸ್ವಲ್ಪ ಹಣ ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಮ್‌ಗೆ ಸ್ವಲ್ಪ ಹಣ ಈ ರೀತಿ ಹಣವನ್ನು ಇಡುವುದರಿಂದ ಏನು ಆಗುವುದಿಲ್ಲ. ಕೇಂದ್ರ ಸರ್ಕಾರದ ಯೋಜನೆಗಳು ಏನಿವೆ ಆ ಯೋಜನೆಗಳಿಗೆ ನೀವು ಹಣವನ್ನು ಖರ್ಚು ಮಾಡಿ ನೀವು ಎಷ್ಟು ಹಣವನ್ನು ಖರ್ಚುಮಾಡುತ್ತೀರಿ ಅದರಲ್ಲಿ ಅರ್ಧ ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಆ ರೀತಿ ಮಾಡುವುದರಿಂದ ಜನರಿಗೆ ಹೆಚ್ಚಿನ ಸಹಾಯ ಸಿಗುತ್ತದೆ. ಕೇಂದ್ರ ಸರ್ಕಾರದ ಹಣ ಸಿಗುವಾಗ ನೀವು ಕೇಂದ್ರ ಸರ್ಕಾರದ ಯೋಜನೆಗಳನ್ನು ಒಪ್ಪಿಕೊಂಡರೆ ಜನರಿಗೆ ಲಾಭವಾಗುತ್ತದೆ. ಎನ್.ಆರ್.ಇ.ಪಿ. ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಶೇಕಡ ೫೦ರಷ್ಟು ಹಣ ಬರುವಾಗ ನೀವು ಆ ಯೋಜನೆಗೆ ಏತಕ್ಕೆ ಹಣವನ್ನು ಖರ್ಚುಮಾಡಬಾರದು ? ಅದರಿಂದ ಹೆಚ್ಚಿನ ಪ್ರಯೋಜನವನ್ನು ಜನರಿಗೆ ಮಾಡಬಹುದು ನೀವು ಹೆಸರು ಬದಲಾವಣೆ ಮಾಡಿ ಯೋಜನೆಗಳನ್ನು ಹಾಕಿಕೊಳ್ಳುತ್ತೀರಿ ನಿಮ್ಮ ಹತ್ತಿರಹಣ ಇರುವು ದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ಯೋಜನೆಗಳನ್ನು ಒಪ್ಪಿಕೊಂಡು ಹಣವನ್ನು ಖರ್ಚುಮಾಡಿ. ಹಳ್ಳಿಯಲ್ಲಿ ನೀವು ಬೋರ್‌ವೆಲ್‌ಗಳನ್ನು ಹಾಕಿಸಿದರೆ ನಜೀರ್‌ಸಾಬ್‌ರವರ ಬೋರ್‌ವೆಲ್, ರಾಮಯ್ಯ ನವರ ಬೋರ್‌ವೆಲ್ ಎಂದು ಹೇಳುತ್ತಾರೆ. ಯಾವ ಪಕ್ಷದಿಂದ ಯಾವ ಸರ್ಕಾರದಿಂದ ಬೋರ್ ಹಾಕಿಸಿದ್ದಾರೆಂದು ಹೇಳುವುದಿಲ್ಲ. ಯಾವ ಸರ್ಕಾರ ಕೊಟ್ಟಿದೆ ಎನ್ನುವ ಕಡೆ ಜನರು ಗಮನ ಹರಿಸುವುದಿಲ್ಲ ಆಮೇಲೆ.

೩–೩೦ ಪಿ.ಎಂ.

ಅಧ್ಯಕ್ಷರೇ, ಅಂತ್ಯೋದಯಕ್ಕೆ ಎಷ್ಟು ಹಣವನ್ನು ಮೀಸಲಿಟ್ಟಿದ್ದಾರೆ ಎಂದರೆ ಎರಡು ಕೋಟಿ ರೂಪಾಯಿಗಳು ಮಾತ್ರ ಅಂದರೆ ಎರಡು ಕೋಟಿಯಲ್ಲಿ ಇಡೀ ರಾಜ್ಯದಲ್ಲಿರತಕ್ಕಂಥ ೫೦ ಪರ್ಸೆಂಟ್ ಬಡತನದ ರೇಖೆಯ ಕೆಳಗಿರತಕ್ಕಂಥವರ ಕಲ್ಯಾಣ ಆಗುತ್ತದೆಯೆ ? ಸಮಸ್ಯೆ ಬಹಳ ದೊಡ್ಡದು ಇದೆ. ಎರಡು ಕೋಟಿಯಿಂದ ಏನೂ ಆಗುವುದಿಲ್ಲ. ಅದರ ಬದಲು ಇನ್ಟೆಂಟಿವ್ ಆಗಿ ಹತ್ತು ತಾಲ್ಲೂಕುಗಳಲ್ಲಿ ಅಂತ್ಯೋದಯದಲ್ಲಿ ಎನ್.ಆರ್.ಇ.ಪಿ., ಐ.ಆರ್.ಡಿ.ಪಿ.ಯಲ್ಲಿ ಅವರಿಗಾಗಿಯೇ ಮೀಸಲಾಗಿಡಿ ಇಲ್ಲದಿದ್ದರೆ ಇದರ ಲಾಭ ಐ.ಆರ್.ಡಿ.ಪಿ.ಯಲ್ಲಿ ಪಡೆದುಕೊಂಡ ಮೇಲೆ ಎನ್.ಆರ್.ಇ.ಪಿ. ಅಂತ್ಯೋದಯದ ಲಾಭ ಪಡೆದುಕೊಳ್ಳುತ್ತಾರೆ. ಯಾವುದೂ ಕೂಡ ಸರಿಯಾಗಿ ಉದ್ದೇಶ ಸಫಲವಾಗುವುದಿಲ್ಲ. ನಾನು ಕೂಡ ಐದು ತಿಂಗಳು ಕಾಲ ಮಂತ್ರಿಯಾಗಿದ್ದೆ...

ಶ್ರೀ ಬಿ. ದೊಡ್ಡಬೋರೇಗೌಡ.—ಆದರೆ ಯಾವ ಪ್ರಯೋಜನವೂ ಆಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಐದು ತಿಂಗಳಲ್ಲಿ ಏನಾಗಿದೆ ಎಂದು ದಾಖಲೆ ತೆಗೆದುನೋಡಿ ಗೊತ್ತಾಗುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಮಾನ್ಯ ಖರ್ಗೆಯವರಿಗೆ ಜನತೆಯ ಬಗ್ಗೆ ಎಷ್ಟು ಅನುಕಂಪ ಇದೆಯೆಂಬುದು ನಮಗೆ ಗೊತ್ತು. ಅವರಿಗೂ ತೃಪ್ತಿಯಾಗುವ ರೀತಿಯಲ್ಲಿ ೧೨ ತಿಂಗಳಲ್ಲಿ ಈ ಸರ್ಕಾರ ಕಾರ್ಯ ಮಾಡಿ ತೋರಿಸುತ್ತದೆ. ಅವರು ನಂಬಿಕೆ ಇಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಇದರಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡು ಇದನ್ನು ಪ್ರತ್ಯೇಕ ಮಾಡಬೇಕು. ಹಾಗಾದರೆ ಮಾತ್ರ ಫಿಸಿಕಲ್ ಟಾರ್ಗೆಟ್ ಅಂಡ್ ಅಚೀವ್‌ಮೆಂಟ್ಸ್ ಆಗುತ್ತದೆ. ಅದರ ಜೊತೆಗೆ ಯಾರಿಗೆ ಸಹಾಯ ಮಾಡಬೇಕೆಂಬುದನ್ನು ತಿಳಿದುಕೊಂಡು ಆ ಪ್ರಕಾರ ಅಂತಹವರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಯುವಕರಿಗೆ ಟ್ರೈನಿಂಗ್ ಕೊಡತಕ್ಕದ್ದು—ಎಲ್ಲಾ ಯುವಕರಿಗೂ ಕೊಡತಕ್ಕದ್ದರ ಬಗ್ಗೆ ಅವಕಾಶವಿಲ್ಲ. ಏಕೆಂದರೆ ೪೦–೪೨ ಲಕ್ಷ ರೂ.ಗಳನ್ನು ಮಾತ್ರ ಪ್ರಾವಾಯ್ಡ್ ಮಾಡಿದ್ದೀರಿ. ತಾವು ಎಷ್ಟು ಸರ್ವೆ ಮಾಡಿದ್ದೀರಿ? ತಮ್ಮ ಸರ್ಕಾರ ಬಂದಮೇಲೆ ನಮ್ಮ ಯೂತ್ ಟ್ರೈನಿಂಗ್, ಅನ್‌ಎಂಪ್ಲಾಯಿಡ್ ಆರ್ಟಿಸಾನ್ಸ್ ಟ್ರೈನಿಂಗ್, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಎನ್‌ಕರೇಜ್‌ಮೆಂಟ್ ಇವೆಲ್ಲದರ ಬಗ್ಗೆ ಒಂದು ಅಕ್ಷರ ಕೂಡ ಇಲ್ಲವೇ ಇಲ್ಲ. ಇವುಗಳ ಬಗ್ಗೆ ಏನೂ ಇಲ್ಲ. ಬರೀ ೨೦ ಅಂಶದ ಕಾರ್ಯಕ್ರಮ ಮಾತ್ರ ಮಾಡುತ್ತೀರಾ? ಇದರಲ್ಲಿ ಎಲ್ಲವನ್ನೂ ಕೂಡ ರಿವ್ಯೂ ಮಾಡಬಹುದು. ಕೇವಲ ೨೦ ಅಂಶ ಅಂದರೆ ಅಲ್ಲಿಗೇ ಗಂಟು ಹಾಕಿಕೊಂಡು ಕೊಡುತ್ತೀರಾ? ೪೮ ಲಕ್ಷ ಇಟ್ಟಿದ್ದೀರಿ. ೪೮ ಲಕ್ಷ ಎಂದರೆ ಪ್ರತಿಯೊಂದು ತಾಲೂಕಿಗೆ ೩೦ ಸಾವಿರ ಕೂಡ ಬರುವುದಿಲ್ಲ ನಮ್ಮಲ್ಲಿ ಒಟ್ಟು ೧೭೫ ತಾಲ್ಲೂಕುಗಳಿವೆ. ೪೮ ಲಕ್ಷ ಎಂದರೆ ಪ್ರತಿಯೊಂದು ತಾಲ್ಲೂಕಿಗೂ ಹೆಚ್ಚೆಂದರೆ ೧೦೦–೨೦೦ ರೂಪಾಯಿ ಬಂದರೆ ಜಾಸ್ತಿ. ಟಾರ್ಗೆಟ್ ಎಷ್ಟು ಇಟ್ಟುಕೊಂಡಿದ್ದೀರಿ? ೩.೨೨೩ youths-, undergoing... ಈ ವರ್ಷ ಕೂಡ ಅಷ್ಟೆ. ಹೋದವರ್ಷ ಎಷ್ಟು ಇತ್ತೋ ಈ ವರ್ಷ ಕೂಡ ಅಷ್ಟೇ ಇದೆ. ಐ.ಆರ್.ಡಿ.ಪಿ. ಎನ್.ಆರ್.ಇ ಪಿ. ಹೋದ ವರ್ಷ ಎಷ್ಟು ಇತ್ತೋ ಈ ವರ್ಷವೂ ಅಷ್ಟೇ ಇದೆ ಜಾಸ್ತಿ ಹಣ ಕೇಳುವುದೇ ಬೇಡ......

SRI ABDUL NAZIR SAB.—That is for infrastructural development.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಾಸ್ತಿ ಏಕೆ ಮಾಡಬಾರದು? ನೀವು ಏನು ಮಾಡುತ್ತೀರಿ ಎನ್ನುವುದು ಬಹಳ ಮುಖ್ಯ. ಆಮೇಲೆ ಸರ್‌ಪ್ಲಸ್ ಲ್ಯಾಂಡ್ ಗ್ರ್ಯಾಂಟ್‌ಗೆ ೩೦ ಲಕ್ಷ ಮಾತ್ರ ಇಟ್ಟಿದ್ದೀರಿ. ತಮಗೆ ಗೊತ್ತಿದೆ ಸುಮಾರು ನಾಲ್ಕು ಲಕ್ಷಕ್ಕಿಂತ ಹೆಚ್ಚು ಗೇಣಿದಾರರು ಇದ್ದಾರೆ.

SRI ABDUL NAZIR SAB.—Surplus land grantees is different from the tenants.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಲ್ಕು ಲಕ್ಷಕ್ಕಿಂತ ಹೆಚ್ಚು ಗೇಣಿದಾರರು ಇದ್ದಾರೆ. ಸರಪ್ಲಸ್ ಲ್ಯಾಂಡ್ ಇರುವವರು ಇವತ್ತಿನ ದಿವಸ ಸುಮಾರು ೩೦–೩೫ ಸಾವಿರಕ್ಕಿಂತಲೂ ಹೆಚ್ಚು ಜನ ಇದ್ದಾರೆ, ಒಂದು ಲಕ್ಷದ ೪೦ ಸಾವಿರ ಎಕರೆ ಜಮೀನಿನ ಹಂಚಿಕೆಯಲ್ಲಿ ಲೆಕ್ಕ ಹಾಕಿದರೆ ೭೦ ಸಾವಿರ ಜನ ರೈತರು ಇದ್ದಾರೆ. ಎಷ್ಟು ಹಂಚಿದ್ದೀರಿ? ಕನಿಷ್ಟ ಪಕ್ಷ ಎಲ್ಲಾ ರೈತರಿಗೂ ಎರಡು ವರ್ಷವಾದರೂ ಟಾರ್ಗೆಟ್ ಫಿಕ್ಸ್ ಮಾಡಿ ಈ ವರ್ಷ ೫೦ ಪರ್ಸೆಂಟ್, ಮುಂದಿನ ವರ್ಷ ೫೦ ಪರ್ಸೆಂಟ್ ಕೊಡುವ ವ್ಯವಸ್ಥೆ ಮಾಡಿ. ಅದೂ ಕೂಡ ಕೊಡುತ್ತಿರುವುದು ಐದು ನೂರರಿಂದ ಒಂದು ಸಾವಿರ ರೂಪಾಯಿ. ನಮ್ಮ ಕಡೆಯಲ್ಲಿ ಜೋಡಿ ಎತ್ತುಗಳಿಗೆ ಐದು ಸಾವಿರಕ್ಕಿಂತ ಕಡಿಮೆ ಆಗುವುದಿಲ್ಲ. ನೀವೇನು ಕೊಡುತ್ತೀರಿ, ಇಂಪ್ಲಿಮೆಂಟ್ಸ್, ಸೀಡ್ಸ್, ಫರ್ಟಿಲೈಸರ್ಸ್ ಕೊಂಡುಕೊಳ್ಳಲಿಕ್ಕೆ ಕೊಡುತ್ತೀರಿ. ಕೊನೆಗೆ ಆತ ಹೊಲ ಊಳಬೇಕಾದರೆ ಮತ್ತೊಬ್ಬರ ಹತ್ತಿರ ಸಾಲಮಾಡಿಕೊಂಡು ಹೋಗಬೇಕು. ಇದರ ಬದಲು ಇನ್ನೆರಡು ವರ್ಷದಲ್ಲಿ ಎಲ್ಲರಿಗೂ ಸಹಾಯ ಮಾಡುವ ವ್ಯವಸ್ಥೆ ಮಾಡಬೇಕು. ನೇಗಿಲು ಭಾಗ್ಯ ಅದಕ್ಕೂ ಕೂ ೫೧ಡ ಲಕ್ಷ. ಹೋದವರ್ಷವೂ ೫೧ ಲಕ್ಷ, ಈ ವರ್ಷವೂ ಕೂಡ ೫೧ ಲಕ್ಷ.

ಶ್ರೀ ಅಬ್ದುಲ್ ನಜೀರ್ ಸಾಬ್.—ಶ್ರೀ ವೀರಪ್ಪ ಮೊಯಿಲಿಯವರ ಪ್ರೋಗ್ರಾಂ ಇದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೈತರಿಗೆ, ಬಡವರಿಗೆ ಹೆಚ್ಚಿನ ಸಹಾಯ ಮಾಡುತ್ತೇನೆ ಎಂದು ಹೇಳಿದ ನೀವು ೫೧ ಲಕ್ಷ ರೂಪಾಯಿ ಇಟ್ಟಿದ್ದೀರಿ.

ಶ್ರೀ ಬಾಪುಗೌಡ ದರ್ಶನಾಪುರ.—ಮಾನ್ಯ ಖರ್ಗೆಯವರು ೨೦ ಅಂಶದ ಕಾರ್ಯಕ್ರಮ ಅಂತ ಕೂಗಿ ಕೂಗಿ ಎಷ್ಟು ಬಡಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲಕ್ಕೆ ಏರಿಸಿದ್ದೀರಿ ? ನೀವು ಮಾಡಿದ್ದರ ಅಂಕಿಅಂಶಗಳನ್ನು ಹೇಳಲಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಕೆಲವು ತಪ್ಪು ಲೆಕ್ಕದಿಂದಾಗಿ ನೀವು ಬಂದಿದ್ದೀರಿ ಹೊರತು ಬೇರೆ ಅಲ್ಲ. ನಾವು ಕೆಲಸ ಮಾಡಿದ್ದೆವೆ ಲೆಕ್ಕ ಹಾಕುವಾಗ ತಪ್ಪಿಹೋಯಿತು. ಇಲ್ಲದಿದ್ದರೆ ಹೈದರಾಬಾದ್ ಕರ್ನಾಟಕದಿಂದ ಆರಿಸಬೇಕಾದರೆ ಬಹಳ ಕಷ್ಟ ಇತ್ತು ತಾವು ಈಗ ಬಿಟ್ಟು ಹೋಗಿದ್ದೀರಿ. ನಾವು ಸುಧಾರಿಸಿದ್ದೇವೆ. ಬಾಪೂಗೌಡರು, ರಾಮಕೃಷ್ಣ ಹೆಗಡೆಯವರು ೧೯೭೮ರಲ್ಲಿ ಬಿಟ್ಟರು. ಅವರು ಬಿಟ್ಟಮೇಲೆ ನಾವು ಮಾಡಿದ್ದು. ಅದಕ್ಕೇ ಜನ ಓಟು ಕೊಟ್ಟರು. ನೀವು ಪದೇ ಪದೇ ಹೇಳುತ್ತಿರಲ್ಲ, ೩೦ ವರ್ಷಗಳಿಂದ ೩೫ ವರ್ಷಗಳಿಂದ ನೀವು ಮಾಡಿದ್ದು ನೀವು ಮಾಡಿದ್ದು ಎಂದು'' ೩೫ ವರ್ಷಗಳಲ್ಲಿ ಅವರದ್ದು ೨೫ ವರ್ಷದ ಭಾಗ. ಹತ್ತು ವರ್ಷಗಳಲ್ಲಿ ಏನಾದರೂ ಮಾಡಿದ್ದರೆ ಅದು ನಾವು ಮಾಡಿದ್ದು. ಆಗ ನಜೀರ್‌ಸಾಬ್ ಅವರು, ಬಸವಣ್ಣಪ್ಪನವರು ನಮ್ಮ ಜೊತೆಯಲ್ಲಿ ಇದ್ದರು. ನಮಗೆ ಸಹಾಯ ಮಾಡಲಿಕ್ಕೆ ಇದ್ದರು. ಈ ಹತ್ತು ವರ್ಷಗಳಲ್ಲೇ ಬಡವರು ಕಣ್ಣು ತೆರೆದಿದ್ದು. ಇಲ್ಲದಿದ್ದರೆ ಇನ್ನೂ ನೂರು ವರ್ಷಗಳಾದರೂ ಅವರು ಮೇಲೆ ಏರುತ್ತಿರಲಿಲ್ಲ. ಇದನ್ನು ನೀವು ಬರೆದಿಟ್ಟುಕೊಳ್ಳಿ.

ಶ್ರೀ ಹೆಚ್. ಗಂಗಾಧರನ್.—ಜನರು ಕಣ್ಣು ಬಿಟ್ಟದ್ದರಿಂದಲೇ ಅವರು ಈ ಕಡೆ ಬಂದರು, ತಾವು ಆ ಕಡೆ ಹೋದಿರಿ. ಅವರು ಕಣ್ಣು ಮುಚ್ಚಿಕೊಂಡಿದ್ದರೆ ಈ ರೀತಿ ಎಲ್ಲಿ ಮಾಡುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎನ್.ಆರ್.ಇ.ಪಿ.ಗೆ ಸುಮಾರು ೨೦ ಕೋಟಿ ರೂಪಾಯಿ ಇಟ್ಟಿದ್ದೀರಿ. ಈ ವರ್ಷ ೨೬ ಕೋಟಿ ಐವತ್ತು ಲಕ್ಷ ಖರ್ಚಾಗುತ್ತದೆಂದು ಗೊತ್ತಿದ್ದರೂ ಕೂಡಾ ಏಕೆ ಕಡಿಮೆ ಇಟ್ಟಿದ್ದೀರಿ? ಹೆಚ್ಚಿಗೆ ಹಣ ಖರ್ಚಾಗುತ್ತದೆಂದು ನಿಮಗೆ ಗೊತ್ತಿರಲಿಲ್ಲವೇ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಅದಕ್ಕೆ ಕೇಂದ್ರ ಸರ್ಕಾರದವರು ಒಪ್ಪಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳುತ್ತೇನೆ, ಕೇಂದ್ರ ಸರ್ಕಾರ ಒಪ್ಪಲಿ ಬಿಡಲಿ ಅವರು ಏನು ಹಣ ಕೊಡುತ್ತಾರೆ, ಅದಕ್ಕಿಂತ ಜಾಸ್ತಿ ಹಣ ಖರ್ಚಾದರೆ ನೀವೇ ಖರ್ಚು ಮಾಡಿ. ಏಕೆಂದರೆ ಪ್ಲಾನ್ಡ್ ಮತ್ತು ನಾನ್ ಪ್ಲಾನ್ಡ್ ಯೋಜನೆಗಳಿಗೆ ಖರ್ಚುಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಏತಕ್ಕೆ ಖರ್ಚು ಮಾಡುವುದಕ್ಕಾಗುವುದಿಲ್ಲ? ಸ್ಟೇಟ್ ಫಂಡ್ ಹಣ ಏನಿದೆ, ಅದನ್ನೆಲ್ಲಾ ಖರ್ಚು ಮಾಡಿ. ಏಕೆಂದರೆ ಅದರಲ್ಲಿ ಅನೇಕ ಸ್ಕೂಲ್‌ಗಳಿವೆ, ಬಿಲ್ಡಿಂಗ್‌ಗಳು, ಹಾಸ್ಟಲ್‌ಗಳು ಇನ್ನೂ ಮುಂತಾದವು ಬರುತ್ತದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಕೇಳಿದರೆ ನೀವು ಹಣ ಕೊಡುತ್ತೀರೋ ಇಲ್ಲವೋ? ಪಿ.ಡಬ್ಲ್ಯು.ಡಿ. ಇಲಾಖೆಯವರು ಬಂದು ರೋಡ್ ಮಾಡುವುದಕ್ಕೆ ಹಣ ಕೇಳಿದರೆ ಅದಕ್ಕೆ ಕೊಡುತ್ತೀರೋ ಇಲ್ಲವೋ? ನಾನು ಹೇಳುವುದೇನೆಂದರೆ ಈ ಹಣ ನೀವೇ ತೆಗೆದುಕೊಂಡು ಹೆಚ್ಚಿಗೆ ಕೆಲಸ ಮಾಡುವುದಕ್ಕೆ ಏತಕ್ಕೆ ಸಾಧ್ಯವಾಗುವುದಿಲ್ಲ? ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನೀವು ಈ ರೀತಿ ಕೆಲಸ ಮಾಡಿದರೆ ಒಂದು ಕಡೆ ಹಳ್ಳಿಗಳಲ್ಲಿ (ರೂರಲ್ ಡೆವಲಪ್‌ಮೆಂಟ್ ವರ್ಕ್ಸ್) ಮಾಡಿದಂತಾಗುತ್ತದೆ. ಇನ್ನೊಂದು ಕಡೆ ಅಸೆಟ್ಸ್ ಮಾಡಿದಂತಾಗುತ್ತದೆ. ೫೬ ಸಾವಿರ ರೆವಿನ್ಯೂ ಹಳ್ಳಿಗಳು ಇವೆ. ಅದರಲ್ಲಿ ೨೬ ಸಾವಿರ ಹ್ಯಾಮ್ಲೆಟ್‌ಗಳಿವೆ. ಈ ಪೈಕಿ ೧೧,೧೦೮ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ಇದೆ. ಈಗ ನೀವು ಬೋರ್‌ವೆಲ್ ತೆಗೆಸುವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಅದು ಬಹಳ ಸಂತೋಷ. ಆದರೆ ಕೆಲವು ಹಳ್ಳಿಗಳಲ್ಲಿ ಈ ಕುಡಿಯುವ ನೀರಿನ ಅಭಾವ ಬಗೆಹರಿಯುವುದಿಲ್ಲ. ಇದು ಏತಕ್ಕೆ ಬಗೆಹರಿಯುವುದಿಲ್ಲ ಅಂದರೆ ನಮ್ಮ ಪಕ್ಷದವರೇ ಇರಲಿ, ನಿಮ್ಮ ಪಕ್ಷದವರೇ ಇರಲಿ ಅಥವಾ ಯಾವುದೇ ಪಕ್ಷ ಅಧಿಕಾರದಲ್ಲಿ ಇದ್ದರೂ ಕೂಡಾ ಬೋರ್‌ವೆಲ್ ಹಾಕುವಾಗ ಯಾರು ಪ್ರಭಾವಶಾಲಿಗಳಿದ್ದಾರೆ, ಅವರ ಮನೆ ಮುಂದೆ ಅಥವಾ ಅವರ ಓಣಿಗೆ ಈ ಬೋರ್‌ವೆಲ್ ಹೋಗುತ್ತದೆ. ಅಲ್ಲಿಗೆ ಹರಿಜನರು

ಅಥವಾ ಬೇರೆ ಜನರು ಹೋಗುವಂತಿಲ್ಲ. ನಿಮಗೇನೋ ಸಂತೋಷ. ಏಕೆಂದರೆ ಅಲ್ಲಿ ಕುಡಿಯುವ ನೀರು ಇರಲಿಲ್ಲ. ಈಗ ಅಲ್ಲಿ ಬೋರ್‌ವೆಲ್ ಹಾಕಿದ್ದೇವೆ ಎಂದು ಹತ್ತು ಪರ್ಸೆಂಟ್. ೧೫ ಪರ್ಸೆಂಟ್ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾದರೂ ಕೂಡಾ ಇನ್ನು ೬೦–೭೦ ಪರ್ಸೆಂಟ್ ಈ ಕುಡಿಯುವ ನೀರಿನ ಸಮಸ್ಯೆ ಹಾಗೆಯೇ ಉಳಿಯಿತು. ರೂರಲ್ ವಾಟರ್ ಸಪ್ಲೈ ಸ್ಕೀಂ ಅನ್ನು ತೆಗೆದುಕೊಂಡರೆ, ನೀವು ಏನು ಹೇಳುತ್ತಿದ್ದೀರಿ ಅಂದರೆ ಅವರಿಗೆ ನಲ್ಲಿ ಮುಖಾಂತರ ಅವರೂ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಮತ್ತು ನಮ್ಮ ಸರ್ಕಾರ ಬಂದ ಮೇಲೆ ಎನ್.ಆರ್.ಡಬ್ಲ್ಯು. ಸ್ಕೀಂನಲ್ಲಿ ಒಂದನ್ನೂ ಸೇರಿಸಿಲ್ಲ ಎಂದು ಹೇಳಿದ್ದೀರಿ. ಆದರೆ ಅರಸೂರು ಹಳ್ಳಿಯನ್ನು ನೀವು ಬಂದ ಮೇಲೆ ಹೊಸದಾಗಿ ಸೇರಿಸಿದ್ದೀರಿ. ೧೯೭೩–೭೪ರಲ್ಲಿ ಇದು ಇರಲಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೭೪–೭೫ರಲ್ಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೭೪_೭೫ರಲ್ಲಿ ಏನು ಮಾಡಿದ್ದೀರಿ ಅಂದರೆ ಚಿತ್ತಾಪುರ ತಾಲ್ಲೂಕಿನಲ್ಲಿ ನಾಲ್ವಾ, ಸುಳ್ಳ, ನಾಗಾವರ ಈ ಮೂರನ್ನು ತೆಗೆದುಕೊಂಡಿದ್ದೀರಿ. ಯಾದ್ಗೀರ್‌ನಲ್ಲಿ ಮೈಲಾಪುರ ಇನ್ನೊಂದು ಹಳ್ಳಿ. ಅದು ಬಹುಶಃ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಅವರ ಸ್ವಕ್ಷೇತ್ರ. ಆದುದರಿಂದ ತಾವು ತೆಗೆದುಕೊಂಡಿರಬೇಕು. ಶಹಾಪುರದಲ್ಲಿ ದರ್ಶನಾಪುರ ಅನ್ನುವ ಊರಿನಲ್ಲಿ ಕೊಟ್ಟಿದ್ದೀರಿ. ಅದು ಶ್ರೀ ಬಾಪುಗೌಡರ ಊರಿಗೆ ಸೇರಿದ್ದುಂಟು. ಇನ್ನು ಆಳಂದ, ಚಿಳಂಗಿ ಸರಸಂಬ.

ಶ್ರೀ ಅಬ್ದುಲ್ ನಜೀರ್ ಸಾಬ್.—ಯಾವ ಯಾವ ಶಾಸಕರು ಪತ್ರಗಳನ್ನು ಬರೆದಿದ್ದಾರೆ ಅವುಗಳನ್ನೆಲ್ಲಾ ಇದರಲ್ಲಿ ಸೇರಿಸಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದೆಲ್ಲಾ ಮಹಂತೇಶ್ವರ ದೇವಸ್ಥಾನಕ್ಕೆ ಹೋಯಿತು. ನಮ್ಮ ಊರಿಗೆ ಬರಲಿಲ್ಲ. ಇದನ್ನು ನೀವು ಮಾಡಬೇಕೆಂದು ಮಾಡಲಿಲ್ಲ. ಒತ್ತಾಯದಿಂದ ಮಾಡಿದ್ದೀರಿ. ನಮ್ಮ ಕಡೆ ನೀರಿಗೆ ಬಹಳ ತೊಂದರೆ ಇದೆ. ದಯವಿಟ್ಟು ಇದರಲ್ಲಿ ರಾಜಕೀಯ ಮಾಡುವುದು ಬೇಡ. ಎಲ್ಲೆಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ, ಎಲ್ಲಿ ಅಸ್ಪೃಶ್ಯತೆ ಎಂಬುದು ಇದೆ, ಅಂಥ ಕಡೆ ಮೊದಲು ಈ ಕೆಲಸ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ನೀವು ಕೆಲಸ ಮಾಡುತ್ತೀರಿ ಎನ್ನುವ ನಂಬಿಕೆ ನನಗಿದೆ. ಆದ್ದರಿಂದಲೇ ನಾನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇನ್ನೂ ಬಹಳಷ್ಟು ಹೇಳುವುದು ಇತ್ತು ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ ಹಾಗೂ ಮಾನ್ಯ ಮಂತ್ರಿಗಳು ಪಾಟ್ನಾಕ್ಕೆ ಹೋಗುತ್ತಾರೆಂದು ತಾವು ಹೇಳಿದ್ದರಿಂದ ನಾನು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಚರ್ಚೆಯು ಮುಕ್ತಾಯವಾಗಿದೆ. ಮಾನ್ಯ ಮಂತ್ರಿಗಳು ಉತ್ತರ ನೀಡುತ್ತಾರೆ.

ಶ್ರೀ ಪಂಪಾಪತಿ.—ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಲಿಲ್ಲವಲ್ಲ.

ಉಪಾಧ್ಯಕ್ಷರು.—ನಾನು ಆಗಲೇ ಶ್ರೀ ಬೈರಪ್ಪಾಜಿ ಹಾಗೂ ನಿಮ್ಮನ್ನು ಕರೆದೆ, ಆದರೆ ನೀವು ಇರಲಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ೧೭ ಕಾರ್ಯಕ್ರಮಗಳ ಬಗ್ಗೆ ಮಾನ್ಯ ಸದಸ್ಯರು ಸಕ್ರಿಯ ಪತ್ರ ವಹಿಸಿ ಅನೇಕ ಚುಚ್ಚು ಮಾತುಗಳನ್ನು ಆಡಿದ್ದಾರೆ. ಕೆಲವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮೊಟ್ಟಮೊದಲನೆಯದಾಗಿ ತಮ್ಮ ಮೂಲಕ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರತಿಯೊಬ್ಬ ಸದಸ್ಯರೂ ಹೇಳಿದ ಮಾತಿನ ಮೂಲ ಸಿದ್ಧಾಂತವನ್ನು ಇಟ್ಟುಕೊಂಡು ನಾನು ಮಾತನಾಡುವುದಕ್ಕೆ ಪ್ರಯತ್ನಮಾಡುತ್ತೇನೆ. ಶ್ರೀಮಾನ್ ಚೌಡಯ್ಯನವರು ಮತ್ತು ಇತರರೆಲ್ಲರೂ ಕಳಕಳಿಯಿಂದ ಮಾತನಾಡಿದ್ದಾರೆ. ಮುಕ್ಕಾಲು

ಪಾಲು ಹಳ್ಳಿಗಾಡಿನಲ್ಲಿ ವಾಸಿಸುವ ಜನರ ಕಲ್ಯಾಣವಾಗಬೇಕು ಅವರ ಅಭ್ಯುದಯ ಆಗಬೇಕೆಂದು ಹೇಳಿದ್ದಾರೆ. ಅವರ ಪ್ರಾಮಾಣಿಕತನದ ಬಗ್ಗೆ ನನಗೆ ವಿಶ್ವಾಸವಿದೆ.

ಮೊದಲನೆಯದಾಗಿ ಐ.ಆರ್.ಡಿ.ಪಿ. ಬಗ್ಗೆ ಹೇಳುತ್ತೇನೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ವರ್ಷಕ್ಕೆ ೬೦೦ ಜನ ಒಂದು ತಾಲ್ಲೂಕಿನಲ್ಲಿ ತೆಗೆದುಕೊಳ್ಳುತ್ತೀರಿ, ಇದರಿಂದ ವರ್ಷದಲ್ಲಿ ಎಷ್ಟು ಸಾಧನೆ ಮಾಡುವುದಕ್ಕೆ ಸಾಧ್ಯವೆಂದು ಶ್ರೀ ಚೌಡಯ್ಯನವರು ಮತ್ತು ಖರ್ಗೆಯವರು ಮತ್ತಿತರರು ಕೇಳಿದ್ದಾರೆ. ನಾನು ಸಂಪೂರ್ಣವಾಗಿ ಅದನ್ನು ಒಪ್ಪುತ್ತೇನೆ. ಈ ಕಾರ್ಯಕ್ರಮದ ಮೂಲ ಹೇಗಾಯಿತು ಎಂಬುದನ್ನು ನನ್ನ ಮಿತ್ರರಿಗೆ ಜ್ಞಾಪಿಸುತ್ತೇನೆ. ೧೯೭೭-೮೦ರಲ್ಲಿ ಜನತಾ ಸರ್ಕಾರ ಈ ಕಾರ್ಯಕ್ರಮವನ್ನು ರಾಷ್ಟ್ರೀಯವಾಗಿ ಚಿಂತನೆ ಮಾಡಿದ್ದು ಅದಕ್ಕೆ ಪರಿಣತರ ಸಮಿತಿಯ ಅಭಿಪ್ರಾಯವನ್ನು ಕೇಳಿತು. ಈ ದೇಶದಲ್ಲಿ ೧೦೦ಕ್ಕೆ ೫೦ರಷ್ಟು ಜನ ಬಡತನ ರೇಖೆಯಿಂದ ಕೆಳಗೆ ಇರತಕ್ಕಂಥಾ ಜನರಾಗಿದ್ದಾರೆ. ಇವರನ್ನು ಮೇಲಕ್ಕೆ ತರಬೇಕಾದರೆ ಪಂಚವಾರ್ಷಿಕ ಯೋಜನೆ ಆಗಬೇಕಾಗಿದೆ. ಅದರಂತೆ ಪ್ರತಿ ವರ್ಷದಲ್ಲಿ ಒಂದು ಬ್ಲಾಕ್‌ನಲ್ಲಿ ೩೦ ಸಹಸ್ರ ಸಂಸಾರಗಳಿಗೆ ಸಹಾಯವನ್ನು ಒದಗಿಸತಕ್ಕಂಥ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಮಾಡಿ ಅದಕ್ಕೆ ತಗಲತಕ್ಕ ಸುಮಾರು ೭ ಸಾವಿರ ಕೋಟಿ ರೂಪಾಯಿಗಳ ಒಂದು ವ್ಯವಸ್ಥೆಯನ್ನು ಮಾಡಿದರು. ೧೯೭೭-೮೦ರಲ್ಲಿ ಪ್ರಾರಂಭವಾದ ಯೋಜನೆಯಲ್ಲಿ ಪ್ರತಿಯೊಂದು ಬ್ಲಾಕ್‌ನಲ್ಲಿ ಮೂರು ಸಹಸ್ರ ಸಂಸಾರಗಳಿಗೆ ಸಹಾಯ ಕೊಡಬೇಕೆಂದು ಪ್ರಾರಂಭವಾಗಿ ಇದು ಐದು ವರ್ಷಗಳಲ್ಲಿ ಮುಗಿಯಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಯಿತು. ೧೯೮೦-೮೧ರಲ್ಲಿ ಹೊಸ ಸರ್ಕಾರ ಕೇಂದ್ರದಲ್ಲಿ ಬಂದಾಗ ಈ ಯೋಜನೆಯನ್ನು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಎಂಬ ಹೆಸರಿನಲ್ಲಿ ಉಳಿಸಿಕೊಂಡರೂ ಏಳು ಸಹಸ್ರ ಕೋಟಿ ರೂಪಾಯಿಗಳ ಬದಲಾಗಿ ೨ ಸಹಸ್ರ ಕೋಟಿ ರೂಪಾಯಿಗೆ ಇಳಿಸಿ ೩೦ ಸಹಸ್ರ ಸಂಸಾರಗಳ ಬದಲು ೬೦೦ ಸಂಸಾರಗಳಿಗೆ ಸಹಾಯವನ್ನು ಏತಕ್ಕೆ ಮಾಡಬಾರದೆಂದು ಕೇಳಿದರು. ರಾಜ್ಯ ಸರ್ಕಾರಕ್ಕೆ ಕೆಲವು ಇತಿಮಿತಿಗಳಿವೆ. ಅದರಂತೆ ನಾವು ಮಾಡಬೇಕು. ಈ ಯೋಜನೆಗೆ ೧೫ ಕೋಟಿ ರೂಪಾಯಿ ಏತಕ್ಕೆ ಇಡುತ್ತೀರಿ ಎಂದು ಕೇಳಿದ್ದಾರೆ. ಕೇಂದ್ರಸರ್ಕಾರಕ್ಕೆ ಅನುಗುಣವಾಗಿ ಯೋಜನೆಯನ್ನು ನಾವು ಸಿದ್ಧಗೊಳಿಸಬೇಕು. ಒಂದು ತಾಲ್ಲೂಕಿನಲ್ಲಿ ೬೦೦ ಜನರಿಗೆ ಸಹಾಯವಾಗುವ ಯೋಜನೆಯನ್ನು ತಯಾರು ಮಾಡಬೇಕು, ಅದಕ್ಕಾಗಿ ಸಹಾಯಧನ ಇಡಬೇಕು, ಏಳು ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆ, ನಿಮ್ಮ ಭಾಗದಿಂದ ಏಳು ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದರು. ೧೫ ಕೋಟಿ ರೂಪಾಯಿನಲ್ಲಿ ಎಷ್ಟು ಜನರಿಗೆ ಸಹಾಯ ಮಾಡಬಹುದು ಎಂದರೆ ಒಂದು ವರ್ಷದಲ್ಲಿ ಒಂದು ಲಕ್ಷ ಐದು ಸಾವಿರ ಸಂಸಾರಗಳಿಗೆ ಸಹಾಯಧನ ಒದಗಿಸುವ ಯೋಜನೆಯನ್ನು ಸಿದ್ಧಗೊಳಿಸಿದ್ದೇವೆ. ಆದರೆ ಈ ಯೋಜನೆಯನ್ನು ಹೇಗೆ ಮಾಡುತ್ತೀರಾ ಎಂಬ ಅನುಮಾನ ಪಡಬಹುದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಜಿಲ್ಲೆಯನ್ನೇ ಉದಾಹರಣೆಯಾಗಿ ಹೇಳುತ್ತೇನೆ. ನಾನು ದಾಖಲಾ ಪ್ರಕಾರ ಹೇಳುತ್ತಿದ್ದೇನೆ. ಅಲ್ಲಿ ೧೯೭೧-೭೨ರಲ್ಲಿ ೨.೨೦೦ ಫಲಾನುಭವಿಗಳು ಇದ್ದರು. ೧೯೮೧-೮೨ರಲ್ಲಿ ೩,೪೦೦ ಜನ ಫಲಾನುಭವಿಗಳು ಇದ್ದರು. ೧೯೮೩-೮೪ರಲ್ಲಿ ೧೦ ಸಹಸ್ರ ಜನ ಫಲಾನುಭವಿಗಳನ್ನು ಗುರುತಿಸಿದ್ದಾರೆ. ಈಗಾಗಲೇ ಸುಮಾರು ೭೦ ರಷ್ಟು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದಕ್ಕೆ ೧೫ ಕೋಟಿ ರೂಪಾಯಿ ಸೀಮಿತವಲ್ಲ. ಫಲಾನುಭವಿಗಳು ಬಂದಾಗ ಯೋಜನೆಗಳನ್ನು ವಿಸ್ತಾರ ಮಾಡುವುದಕ್ಕೆ ರಾಜ್ಯ ಸರ್ಕಾರ ಹಿಂದೆ ಮುಂದೆ ನೋಡದೆ ಸಹಾಯವನ್ನು ಮಾಡಿದೆಯೆಂದು ಹೇಳುತ್ತಿದ್ದೇನೆ. ಇದಕ್ಕೆ ಇಟ್ಟಿರತಕ್ಕ ೧೫ ಕೋಟಿಯಲ್ಲಿ ಆರೂವರೆ ಕೋಟಿ ರೂಪಾಯಿ ವೆಚ್ಚ ಮಾಡಿದ್ದಾರೆಂದು ಹೇಳಿದ್ದಾರೆ. ಇದು ವೆಚ್ಚದ ಅರ್ಥವಲ್ಲ, ಲೆಕ್ಕದ ಅರ್ಥ. ಇದು ಮಾನ್ಯ ವೀರಪ್ಪಮೊಯ್ಲಿಯವರಿಗೆ ಅರ್ಥವಾಗುತ್ತದೆ. ನಾವು ಈ ಹಣವನ್ನು ಬ್ಯಾಂಕುಗಳಿಗೆ ಕೊಡುತ್ತೇವೆ. ಸಬ್ಸಿಡಿ ರಿಲೀಸ್ ಮಾಡುತ್ತೇವೆ. ಐ.ಆರ್.ಡಿ.ಪಿ.ಯಲ್ಲಿ ಫಲಾನುಭವಿಗಳನ್ನು ಗುರುತಿಸಲಾಗಿದೆ. ಈಗಾಗಲೇ ಸುಮಾರು ೧ ಲಕ್ಷ ೪೮ ಸಾವಿರಕ್ಕೂ ಹೆಚ್ಚು ಫಲಾನುಭವಿಗಳ[illegible] ಇದನ್ನು ಗುರುತಿಸಬೇಕಾದರೆ ಗ್ರಾಮ ಸಭೆ ಕರೆಯುತ್ತಾರೆ.

ಶ್ರೀ ಹೆಚ್.ಡಿ. ಚೌಡಯ್ಯ.—ಆ ರೀತಿಯಾಗಿ ಮಾಡುತ್ತಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲವೆಂದು ನಿರ್ದಿಷ್ಟವಾಗಿ ಕೊಟ್ಟರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಉಗ್ರ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಅಧಿಕಾರಿಗಳು ಗುರುತಿಸುತ್ತಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಎಲ್ಲಿ ಆ ರೀತಿ ಆಗಿಲ್ಲ ಎನ್ನುವ ನಿದರ್ಶನ ತೋರಿಸಿದರೆ ನಾವು ನೋಡುತ್ತೇವೆ

ಶ್ರೀ ಹೆಚ್.ಡಿ. ಚೌಡಯ್ಯ.—ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದರೆ ಗ್ರಾಮ ಸಭೆ ಕರೆಯಬೇಕೆಂದು ಹೇಳಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಆ ರೀತಿ ಕರೆಯುತ್ತಿಲ್ಲ. ದಯವಿಟ್ಟು ವಿಚಾರಣೆ ಮಾಡಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾನು ಸ್ಪಷ್ಟವಾಗಿ ಆದೇಶ ಕೊಟ್ಟಿದ್ದೇನೆ. ಕೆಲವು ಕಡೆ ಪ್ರಾಯೋಗಿಕವಾಗಿ ಇದನ್ನು ಮಾಡಿದ್ದೇವೆ. ಇಡೀ ರಾಜ್ಯದಲ್ಲೆಲ್ಲಾ ಮುಂದಿನ ವರ್ಷದಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ತುಮಕೂರು, ಮೈಸೂರು ಮತ್ತು ಧಾರವಾಡದಲ್ಲಿ ಪ್ರಾಯೋಗಿಕವಾಗಿ ಮಾಡಿದ್ದೇವೆ. ಫಲಾನುಭವಿಗಳನ್ನು ಗುರುತು ಮಾಡಬೇಕಾಗಿದ್ದರೆ ಅವರು ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ಮೇ ತಿಂಗಳಿನಿಂದ ಜೂನ್ ತಿಂಗಳವರೆಗೆ ಇಂತಿಂಥ ಗ್ರಾಮಸಭೆ ಇಂಥ ಕಾಲದಲ್ಲಿ ನಡೆಯುತ್ತದೆ ಎಂಬ ವಿಷಯವನ್ನು ಶಾಸಕರಿಗೆ ಪ್ರಿಂಟಾದ ಫಾರಂನಲ್ಲಿ ತಿಳಿಸಬೇಕು. ಶಾಸಕರು ಎಲ್ಲಿ ಗುರುತಿಸುತ್ತಾರೋ ಆ ಪ್ರಕಾರವಾಗಿ ಫಲಾನುಭವಿಗಳನ್ನು ನಿರ್ಧಾರ ಮಾಡಬೇಕೆಂದು ಹೇಳಿದ್ದು, ಇದು ಮಾನ್ಯ ಉಪಾಧ್ಯಕ್ಷರಿಗೂ ಕೂಡ ಗೊತ್ತಿದೆ. ತಮ್ಮ ಜಿಲ್ಲೆಯಲ್ಲೂ ಅದನ್ನು ಮಾಡಿದ್ದಾರೆ. ಗ್ರಾಮಸಭೆ ಕರೆದು ಫಲಾನುಭವಿಗಳನ್ನು ಗುರುತಿಸಬೇಕು. ನಂತರ ಬ್ಯಾಂಕಿನ ಅಧಿಕಾರಿ ಮತ್ತು ನಮ್ಮ ಅಭಿವೃದ್ಧಿ ಇಲಾಖೆಯ ಅಧಿಕಾರಿ ಇವರನ್ನು ಆಯ್ಕೆ ಮಾಡಬೇಕು. ನಾವು ಅವರಲ್ಲಿ ೫೦ ಜನ ಸೆಲೆಕ್ಟ್ ಮಾಡುತ್ತೇವೆ. ೨೫ ಜನರು ಹೆಚ್ಚಾಗಿ ಇರಬಹುದು ಅವರಿಗೆ ಬ್ಯಾಂಕಿನಲ್ಲಿ ಸೊಸೈಟಿಯಲ್ಲಿ ಸಾಲ ಇದೆಯೋ ಇಲ್ಲವೋ ಎಂಬುದನ್ನು ನೋಡಿ ಸಹಾಯ ಮಾಡಬೇಕು ಎನ್ನುವ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಚೌಡಯ್ಯನವರು ನಮ್ಮ ಜಿಲ್ಲೆಯಲ್ಲಿ ಆಗಿಲ್ಲವೆಂದು ಹೇಳಿದ್ದಾರೆ. ಈ ಪ್ರಯೋಗವನ್ನು ಸದ್ಯದಲ್ಲಿ ಮೂರು ಜಿಲ್ಲೆಗಳಲ್ಲಿ ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ಇದನ್ನು ಮುಂದಿನ ವರ್ಷ ಜಾರಿಗೆ ತರುತ್ತೇನೆ. ನಿಗದಿಯಾದ ಕಾಲದಲ್ಲಿ ಇಂಥ ಕಡೆ ಗ್ರಾಮ ಸಭೆ ನಡೆಯುತ್ತವೆಂದು ಮುಂಚಿತವಾಗಿ ಪ್ರಿಂಟ್ ಮಾಡಿ ಗ್ರಾಮದ ಜನರಿಗೆ, ಶಾಸಕರಿಗೆ, ಸಾರ್ವಜನಿಕರಿಗೆ ಸಾಕಷ್ಟು ಪ್ರಚಾರ ಮಾಡಿ ಮಾಡಬೇಕೆಂದು ಮಾಡಿದ್ದೇವೆ. ಮುಂದಿನ ವರ್ಷ ಎಲ್ಲಾ ಕಡೆಗೂ ವಿಸ್ತರಿಸುವುದಕ್ಕೆ ಆದೇಶ ಕೊಡುತ್ತೇನೆಂದು ಭರವಸೆಯನ್ನು ಕೊಡುತ್ತೇನೆ. ಫಲಾನುಭವಿಗಳಿಗೆ ೩ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆಂದು ಹೇಳಿದ್ದಾರೆ, ನಿಜ. ಅದಕ್ಕೆ ಡಿ.ಆರ್ ಡಿ.ಎಸ್. ನಿಂದ ಹಣ ಕೊಟ್ಟಿದ್ದೇವೆ. ಫಲಾನುಭವಿಗಳನ್ನು ಗುರುತಿಸಿದ ಮೇಲೆ ಬ್ಯಾಂಕುಗಳಿಗೆ ತಿಳಿಸಿ ಅವರು ಸಬ್ಸಿಡಿ ಅಡ್ಜಸ್ಟ್‌ಮೆಂಟ್ ಮಾಡಿ ಸಬ್ಸಿಡಿ ಅಡ್ಜಸ್ಟ್ ಆಯಿತೆಂದು ಹೇಳುವವರೆಗೆ ವೆಚ್ಚ ಆಯಿತೆಂದು ಹೇಳುವುದಕ್ಕೆ ಆಗುವುದಿಲ್ಲ. ಶಾಸನ ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ೪ ವಿಭಾಗಗಳಿಗೆ ಖುದ್ದಾಗಿ ಹೋಗಿ ಅಲ್ಲಿಯ ತಜ್ಞರ ವರದಿಯನ್ನು ನೋಡಿದಾಗ ಲೆಕ್ಕದಲ್ಲಿರತಕ್ಕ ೧೪೮ ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ಮಾಡಿಕೊಡಬೇಕಾದರೆ ಅದಕ್ಕೆ ೧೪ ಕೋಟಿ ರೂಪಾಯಿ ಸಾಲುವುದಿಲ್ಲ ಇನ್ನು ಹೆಚ್ಚಿನ ಹಣ ಬೇಕಾಗುತ್ತದೆ ಎಂಬುದು ಗೊತ್ತಾಯಿತು. ಈ ದೃಷ್ಟಿಯಿಂದ ಹಣವನ್ನು ವೆಚ್ಚ ಮಾಡಿಲ್ಲ ಎಂಬುದು ಒಂದು ಲೆಕ್ಕಪತ್ರದ ವ್ಯತ್ಯಾಸದಿಂದ ಎಂಬುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ಅನೇಕ ನ್ಯೂನತೆಗಳಿವೆ. ಸಾವಿರಾರು ಜನ ಚುನಾಯಿಸಿ ಬ್ಯಾಂಕಿನ ಮುಖಾಂತರ ಎಮ್ಮೆ ಕೊಡಿಸುವುದು, ಗಾಡಿ ಕೊಡಿಸುವುದು ಮಾತ್ರಕ್ಕೆ ಬಡತನ ಹೋಗುತ್ತಿದೆ, ಬಡವರು ಉದ್ಧಾರವಾಗುತ್ತಾರೆ ಎಂಬ ನಂಬಿಕೆ ನನಗೆ ವೈಯಕ್ತಿಕವಾಗಿ ಇಲ್ಲ. ಏಕೆಂದರೆ ಪ್ರಯೋಗಾತ್ಮಕವಾಗಿ ಕೆಲವು ಕಡೆ ತಪಾಸಣೆ ನಡೆಸಿದ್ದೇನೆ. ಐ.ಆರ್.ಡಿ.ಪಿ. ಯೋಜನೆಯಲ್ಲಿ ಬಡತನ ರೇಖೆಯಿಂದ ಕೆಳಗೆ ಇರುವವರಿಗೆ ಸಹಾಯ ಕೊಟ್ಟಿದೆ. ಇದರಿಂದ ಅವರು ಮೇಲಕ್ಕೆ ಬಂದಿದ್ದಾರೆಯೋ ಇಲ್ಲವೇ ಎಂಬುದನ್ನು ಪತ್ತೆ ಹಚ್ಚುವುದಕ್ಕೆ ಅವಕಾಶ ಇಲ್ಲದಿರುವುದರಿಂದ ಬುದ್ಧಿಜೀವಿಗಳು ಮತ್ತು ಆಡಳಿತದಲ್ಲಿ ಅನುಭವ ಇರುವವರನ್ನು ಸೇರಿಸಿ ಸಮಿತಿ ಮಾಡಿ ಪ್ರತಿ ಜಿಲ್ಲೆಯಲ್ಲಿ ಆ ಸಮಿತಿಯವರು ತನಿಖೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡುವಂತೆ ವ್ಯವಸ್ಥೆ ಮಾಡುವ ಯೋಚನೆ ಇದೆ ಎಂದು ಹೋದ ವರ್ಷ ನಾನು ಹೇಳಿದ್ದೆ. ಆದರೆ ಅದನ್ನು ಏತಕ್ಕೆ ಮಾಡಲಿಲ್ಲ ಎಂದರೆ ಹೈದ್ರಾಬಾದ್‌ನಲ್ಲಿ ಇರತಕ್ಕ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಏನು ಇವೆ ಅದರ ಮೂಲಕ ಕೇಂದ್ರ ಸರ್ಕಾರದವರು ಈ ಒಂದು ಕಾರ್ಯಕ್ರಮವನ್ನು ಹಾಕಿರುವುದರಿಂದ ಅವರು ಕರ್ನಾಟಕದ ಕೆಲವು ಕಡೆ ಬಂದು ಆ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಕೂಡ ಪ್ರಾಯೋಗಿಕವಾಗಿ ಇದನ್ನು ಮಾಡುತ್ತಿದೆ. ಈ ಒಂದು ಕಾರ್ಯಕ್ರಮ ಆಗುವಾಗ ಯಾವ ಬಡವನಿಗೆ ಸಹಾಯ ಮಾಡಿದ್ದಾರೆ, ಇವರ ಸ್ಥಿತಿ ಏನಾಗಿದೆ ಎಂಬುದನ್ನು ಮಂತ್ರಿಗಳಿಗಿಂತ ಅಧಿಕಾರಿಗಳಿಗಿಂತ ಜನರ ಹತ್ತಿರ

ಇರುವ ಶಾಸಕರು ತಮ್ಮ ಕ್ಷೇತ್ರದಲ್ಲಿ ಯಾವ ರೀತಿ ಇದೆ ಎಂಬುದನ್ನು ತಿಳಿದುಕೊಂಡು ತಮ್ಮ ಅನುಭವವನ್ನು ಹೇಳಿದರೆ ನಮಗೆ ಇನ್ನು ಹೆಚ್ಚು ಬಲ ಬರುತ್ತಿತ್ತು. ಎಂಬ ಸದಭಿಪ್ರಾಯ ನನಗೆ ಇತ್ತು.

೪ ಪಿ. ಎಂ.

ಏಕೆಂದರೆ, ಈ ಒಂದು ವರದಿಯನ್ನು ಈ ಸಭೆಯ ಮುಂದೆ ಇಡಬೇಕೆಂದು ಇದ್ದೆ ಬೇಕಾದರೆ ಮಾನ್ಯ ಸದಸ್ಯರಿಗೂ ಅದನ್ನು ಕೊಡುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಒಂದು ಪ್ರಯೋಗ ಮಾಡಿದ್ದೇವೆ. ಅಲ್ಲಿ ಕೂಡ ಎಮ್ಮೆಗಳನ್ನು ಕೊಟ್ಟಿದ್ದೇವೆ. ಬಿಜಾಪುರದಲ್ಲಿ ಕೂಡ ಜನತೆ ಬಡತನದ ರೇಖೆಯಿಂದ ಕೆಳಗೆ ಬಂದಿದ್ದಾರೆ ಎಂಬುದು ತಪಾಸಣೆಯಿಂದ ಗೊತ್ತಾಗಿದೆ ಬಡತನದ ರೇಖೆಯಿಂದ ಜನ ಅಲ್ಲಿ ಮೇಲಕ್ಕೆ ಹೋಗುವ ಬದಲು ಶೇಕಡ ೫೦ರಷ್ಟು ಕೆಳಗೆ ಹೋಗಿದ್ದಾರೆಂದು ವರದಿ ಬಂದಿದೆ. ಇದು ರಾಷ್ಟ್ರೀಯ ಚಿಂತನೆ ಆಗಬೇಕು. ಅತ್ಯಂತ ಘೋರ ಬಡತನದಲ್ಲಿರತಕ್ಕ ಗ್ರಾಮೀಣ ಬಡವರ ಬೆಳವಣಿಗೆ ಆಗಬೇಕಾದರೆ, ಯಾವರೀತಿ ಯೋಜನೆ ಆಗಬೇಕು, ಇವತ್ತು ನಮ್ಮ ಯೋಜನೆಗಳಲ್ಲಿ ಏನೇನು ಮಾಡಲಾಗಿದೆ ಎಂಬುದರ ಬಗ್ಗೆ ಸ್ವಲ್ಪ ವಿಷದವಾಗಿ ಹೇಳಬೇಕಾಗುತ್ತದೆ. ಅಂತ್ಯೋದಯ ಕಾರ್ಯಕ್ರಮದ ಅಡಿಯಲ್ಲಿ ನೂರಕ್ಕೆ ನಲವತ್ತರಷ್ಟು ಜನರಿಗೆ ಎಮ್ಮೆಗಳನ್ನು ಕೊಡುವುದು, ಹಸುಗಳನ್ನು ಕೊಡುವುದು ಇತ್ಯಾದಿ ಕಾರ್ಯಕ್ರಮವಿದೆ. ಉದಾಹರಣೆಗೆ ಗುಲ್ಬರ್ಗಾ ಜಿಲ್ಲೆಯನ್ನೇ ತೆಗೆದುಕೊಳ್ಳೋಣ. ಇಲ್ಲಿ ಎಮ್ಮೆಗಳನ್ನು ಕೊಟ್ಟಿದ್ದೇವೆ, ಹಸುಗಳನ್ನು ಕೊಟ್ಟಿದ್ದೇವೆ. ಆದರೆ ಇಷ್ಟು ಕೊಟ್ಟ ಮಾತ್ರಕ್ಕೆ ಬಡವರಿಗೆ ಎಲ್ಲಾ ಸೌಕರ್ಯ ಸಿಕ್ಕಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಈ ಹಿಂದೆ ಅಲ್ಲಿ ವಿಚಾರ ಮಾಡಿದಾಗ, ಅಲ್ಲಿ ಹಾಲಿನಕೇಂದ್ರವಿರಲಿಲ್ಲ. ಇವತ್ತು ಅಲ್ಲಿ ಉತ್ತಮ ರಾಸುಗಳನ್ನು, ಉತ್ತಮ ಎಮ್ಮೆಗಳನ್ನು ಕೊಡಬೇಕಾಗಿರುತ್ತದೆ. ಬಡವರಿಗೆ ೫ ಲೀಟರ್ ಹಾಲು ಬಂದರೆ, ಅವನು ಬ್ಯಾಂಕಿನಿಂದ ಪಡೆದ ಸಾಲವನ್ನು ತೀರಿಸಿಕೊಂಡು ಅಲ್ಪಸ್ವಲ್ಪ ಜೀವನ ಉತ್ತಮಪಡಿಸಿಕೊಳ್ಳಬಹುದು, ನಂತರ ಉತ್ಪಾದನೆ ಮಾಡಬಹುದು. ಈ ದೃಷ್ಟಿಯಿಂದ ಹೇಳುವುದಾದರೆ, ಜನತೆ ಇನ್ನೂ ಬಡತನದ ರೇಖೆಯಿಂದ ಮೇಲೆ ಹೋಗಿಲ್ಲವೆಂದು ಹೇಳುತ್ತೇನೆ. ಈ ದಿನ ಆತನಿಗೆ ಕೊಟ್ಟ ಎಮ್ಮೆ ದಿನಕ್ಕೆ ಒಂದು ಲೀಟರ್ ಹಾಲು ಕೊಟ್ಟರೆ ಹೇಗೆ? ಒಂದು ಲೀಟರ್ ಹಾಲು ಕೊಟ್ಟರೆ, ಅದನ್ನು ಮಾರಿ ಆತ ಹೇಗೆ ಜೀವನವನ್ನು ನಡೆಸಬಲ್ಲ? ಇದರಿಂದಾಗಿ ಆತ ಬಡತನದ ರೇಖೆಗಿಂತ ಕೆಳಗೆ ಇಳಿಯಬೇಕಾಗುತ್ತದೆ ಗುಲ್ಬರ್ಗಾದಲ್ಲಿ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. ಅವರಿಗೆ ನಾನು ಹೇಳಿದೆ, ನೀವು ಹೀಗೆ ಮಾಡಿದರೆ ಆಗುವುದಿಲ್ಲ. ನೀವು ಕೊಡುವಂಥ ಎಮ್ಮೆಗಳು ಏನಿವೆ, ಅವುಗಳನ್ನು ನೀವೇ ಹೋಗಿ ತರಬೇಕೆಂದು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹೇಳಿದೆ. ಕರ್ನಾಟಕದಲ್ಲೇ ಉತ್ಪಾದನೆಯಾಗತಕ್ಕ ಒಳ್ಳೆಯ ತಳಿಯ ರಾಸುಗಳನ್ನು ಇವರಿಗೆ ಕೊಟ್ಟು ವ್ಯವಸ್ಥಿತವಾಗಿ ಮಾಡಬೇಕೆಂದು ಹೇಳಿದೆ. ಈ ದಿನ ಕೇವಲ ಎಮ್ಮೆ ಕೊಟ್ಟರೆ ಆಗುವುದಿಲ್ಲ, ಎಮ್ಮೆ ಕಟ್ಟುವುದಕ್ಕೆ ಅವರಲ್ಲಿ ವ್ಯವಸ್ಥೆ ಆಗಬೇಕು. ಈಗ ಅವರಲ್ಲಿ ಎಮ್ಮೆ ಕಟ್ಟುವುದಕ್ಕೆ ಕೂಡ ವ್ಯವಸ್ಥೆ ಇಲ್ಲ. ಈ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿದೆ. ಎಮ್ಮೆ ಕಟ್ಟುವುದಕ್ಕೆ ಐದುನೂರು ರೂಪಾಯಿ ವೆಚ್ಚದಲ್ಲಿ ಷೆಡ್ಡುಗಳನ್ನು ಹಾಕುವ ವ್ಯವಸ್ಥೆ ಮಾಡಬೇಕೆಂದು ಹೇಳಿದೆ. ಹಾಗೂ ಈ ಎಮ್ಮೆಗಳು ಮೇಯುವುದಕ್ಕೆ ಈ ದಿನ ಹುಲ್ಲುಗಾವಲು ಇರಬೇಕಾಗುತ್ತದೆ. ಈ ಬಗ್ಗೆ ಹುಲ್ಲು ಬೆಳೆಸಲು ಸರ್ಕಾರಿ ಜಾಗದಲ್ಲಿ ೨೦ ಎಕರೆ ಪ್ರದೇಶದಲ್ಲಿ ವ್ಯವಸ್ಥೆ ಮಾಡಲಾಯಿತು. ಮತ್ತೆ ಹಾಲಿನ ಕೇಂದ್ರಗಳನ್ನು ಅಲ್ಲಿ ಹೊಂದಾಣಿಕೆ ಮಾಡಿರುವುದರಿಂದ, ಸ್ವಲ್ಪ ಮಟ್ಟಿಗೆ ಜಿಲ್ಲೆಯಲ್ಲಿ ಪ್ರಗತಿಯಾಗಿದೆ.

ಗುಲ್ಬರ್ಗ ಡೈರಿ ಬಗ್ಗೆ ಹೇಳಬೇಕೆಂದರೆ, ಈ ಡೈರಿಗೆ ಮೊದಲು ಎರಡು ಸಾವಿರ ಲೀಟರ್ ಹಾಲು ಬರುತ್ತಿತ್ತು. ಇವೆಲ್ಲಾ ಕಾರ್ಯಕ್ರಮವಾದ ಮೇಲೆ ೬೦೦೦ ದಿಂದ ೮೦೦೦ ಲೀಟರ್‌ವರೆಗೆ ಹಾಲು ಈಗ ಬರುತ್ತಿದೆ. ಈ ಹಾಲನ್ನು ಯಾರು ಉತ್ಪಾದನೆ ಮಾಡುತ್ತಿದ್ದಾರೆ, ಅವರು ಆ ಹಾಲನ್ನು ಉಪಯೋಗಿಸುತ್ತಿಲ್ಲ. ಎಲ್ಲಾ ಹೊರಗಡೆ ಡೈರಿಗೆ ಅವರು ಹಾಲನ್ನು ಹಾಕುತ್ತಿದ್ದಾರೆ. ಗ್ರಾಮೀಣ ಬಡವರ ಮೇಲೆ ಯಾವರೀತಿ ಪರಿಣಾಮವಾಗುತ್ತದೆ ಎಂಬುದನ್ನು ಚಿಂತನೆ ಮಾಡಬೇಕಾಗಿದೆ. ಇವತ್ತು ಇವರಿಗೆ ಇಷ್ಟು ಹಣ ಕೊಟ್ಟಿದ್ದೇವೆಂದು ಹೇಳಿ ಅಂಕಿಅಂಶ ಕೊಟ್ಟು ತೃಪ್ತಿಪಡಬೇಕಾಗಿಲ್ಲ. ಇವತ್ತು ೫೦ ಸಾವಿರ ರೂಪಾಯಿ ಕೊಡುವುದು ಹೆಚ್ಚು ಅಲ್ಲ. ಇವತ್ತು ಇವರ ಬಡತನದ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಶ್ರೀಮಾನ್ ಧರ್ಮಸಿಂಗ್ ಅವರ ಊರನ್ನೇ ತೆಗೆದುಕೊಳ್ಳಿ ಅಲ್ಲಿಗೆ ನಾನು ಹೋಗಿದ್ದೆ. ಅಲ್ಲಿ ನಮ್ಮ ಇಲಾಖೆಗೆ ಸಂಬಂಧಿಸಿದಂತೆ, ೬೦ರಿಂದ ನೂರು ಎಮ್ಮೆಗಳನ್ನು ಕೊಟ್ಟಿದ್ದಾರೆ ಜಿಲ್ಲಾಧಿಕಾರಿಗಳೇ ಹೋಗಿ ಉತ್ತಮ ತಳಿಯ ರಾಸುಗಳನ್ನು ಕೊಡಿಸಿದ್ದಾರೆ. ಇವುಗಳಿಂದ ಐನ್ನೂರು ಲೀಟರ್ ಹಾಲು ಉತ್ಪಾದನೆ ಆಗುತ್ತಿದೆ. ಐ.ಆರ್.ಡಿ.ಪಿ. ನಿಂದ ಕೊಟ್ಟಿರುವ ರಾಸುಗಳು ಬಿಟ್ಟು, ಬೇರೆ ಯಾರ ಹತ್ತಿರ ಎಮ್ಮೆಗಳು ಆ ಊರಿನಲ್ಲಿ ಇವೆಯೆಂದು ಕೇಳಿದೆ. ಅಲ್ಲಿ

ಶ್ರೀಮಂತರುಗಳಾದ ೩-೪ ಜನರನ್ನು ಬಿಟ್ಟರೆ ಬೇರೆ ಯಾರ ಹತ್ತಿರ ಇಲ್ಲವೆಂದು ಗೊತ್ತಾಯಿತು. ಅಲ್ಲಿ ಜನಸಂಖ್ಯೆ ಸುಮಾರು ೩ ಸಾವಿರ ಇದೆ. ಅಲ್ಲಿ ಶಾಲೆಗೆ ಹೋಗತಕ್ಕಂಥ ಮಕ್ಕಳ ಸಂಖ್ಯೆ ಸುಮಾರು ೯೦೦ ಇದೆ. ೪೫೦ ಲೀಟರ್ ಹಾಲು ಉತ್ಪಾದನೆ ಆಗುತ್ತಿದೆ. ಈಗ ಅಲ್ಲಿನ ಮಕ್ಕಳು ಒಬ್ಬೊಬ್ಬರು ಅರ್ಧ ಲೀಟರ್ ಹಾಲು ಸೇವಿಸಿದರೂ ಸಹ ೪೫೦ ಲೀಟರ್ ಹಾಲು ಅಲ್ಲಿ ಖರ್ಚಾಗಬೇಕಾಗಿದೆ. ಆದರೆ ಅಲ್ಲಿ ಉಪಯೋಗಿಸುವುದು ಕೇವಲ ೨೦ ಲೀಟರ್ ಮಾತ್ರ. ಉಳಿದ ಹಾಲನ್ನು ಗುಲ್ಬರ್ಗಾಕ್ಕೆ ಕಳುಹಿಸುವ ವ್ಯವಸ್ಥೆ ಅಲ್ಲಿ ಇದೆ. ಇವತ್ತು ಬಡತನದ ರೇಖೆಯಿಂದ ಮೇಲಕ್ಕೆ ತರುತ್ತೇವೆಂದು ಹೇಳುತ್ತೇವೆ. ಇವತ್ತು ರೈತ ಏನು ಹಾಲು ಉತ್ಪಾದನೆ ಮಾಡುತ್ತಾನೆ, ಅದನ್ನು ತಾನು ಉಪಯೋಗಿಸುತ್ತಿಲ್ಲ. ಅದನ್ನು ಆತ ಮಾರಿ ಹಣ ತೆಗೆದುಕೊಳ್ಳುತ್ತಿದ್ದಾನೆ. ಈ ಪರಿಸ್ಥಿತಿ ಇವತ್ತು ಆಗಬಾರದು ಇವತ್ತು ಆತನಿಗೆ ಮತ್ತು ಆತನ ಕುಟುಂಬಕ್ಕೆ ಆಗುವಷ್ಟು ಹಾಲನ್ನು ಉಪಯೋಗಿಸಿ, ಹೆಚ್ಚುವರಿ ಹಾಲನ್ನು ಮಾತ್ರ ಮಾರುವ ವ್ಯವಸ್ಥೆ ಆಗಬೇಕು. ಈ ರೀತಿ ಮಾಡದೇ ಬಡತನದ ವಿರುದ್ಧ ಘೋಷಣೆ ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಈ ಬಗ್ಗೆ ನಮಗೂ ಕಳಕಳಿ ಇದೆ, ನಿಮಗೂ ಕಳಕಳಿ ಇದೆ. ಇವತ್ತು ಹಳ್ಳಿಗಳ ಕಡೆ ನೂರಕ್ಕೆ ನಲವತ್ತರಷ್ಟು ಸಂಸಾರಗಳಿಗೆ Industry, Service and Business ಮಾಡಬೇಕೆಂದಿದ್ದೇವೆ. ನೂರಕ್ಕೆ ನಲವತ್ತರಷ್ಟು ಜನಕ್ಕೆ ಹಣ ಕೊಡುತ್ತೇವೆಂದು ಮಾಡಿದ್ದೇವೆ.

ಈ ಕಾರ್ಯಕ್ರಮದಲ್ಲಿ ಸೈಕಲ್ ಷಾಪು ಇಡುವವರಿಗೆ ಸಾಲ ಕೊಡುತ್ತಿದ್ದಾರೆ. ಈ ಪ್ರಕಾರ ೪೦ ಜನಕ್ಕೆ ಸೈಕಲ್ ಸಾಲ ಕೊಟ್ಟರೆ, ಈ ಸೈಕಲ್ ಪಡೆದು ಹೊಡೆಯುವರು ಯಾರು? ಊರಿನಲ್ಲಿ ಎಷ್ಟು ಮಂದಿ ಬಾಡಿಗೆಗೆ ಹಣ ಕೊಟ್ಟು ಸೈಕಲ್ ಪಡೆಯುತ್ತಾ ಇರುತ್ತಾರೆ? ಆದ್ದರಿಂದ ೨೦-೩೦ ಜನ ಬಡವರಿಗೆ ಕೊಟ್ಟರೆ ಇದರಿಂದ ಏನು ಪ್ರಯೋಜನವಾಗುತ್ತದೆ? ಈ ಬಗ್ಗೆ ನಾವು ಚಿಂತನೆ ಮಾಡಬೇಕು. ಸರಿಯಾದ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಬಿ. ಶಿವಮೂರ್ತಿ.—ನಿಮ್ಮ ಹತ್ತಿರ ಬಹಳಷ್ಟು ಚಿಂತನೆ ಇದೆ, ಆ ವಿಚಾರದ ಬಗ್ಗೆ ಕ್ರಾಂತಿ ಆಗಿಲ್ಲ, ಅದನ್ನು ಮಾಡಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ದೃಷ್ಟಿಯಿಂದ ಸದನದಲ್ಲಿ ಕಳಕಳಿಯನ್ನು ವ್ಯಕ್ತಪಡಿಸುತ್ತಾ, ಇವರಲ್ಲಿ ನೂರಕ್ಕೆ ನೂರರಷ್ಟು ಬಡ ಜನರಿಗೆ ಸಾಲ ಕೊಡಬೇಕಾಗಿದೆ. ಐ.ಆರ್.ಡಿ.ಪಿ. ಯಲ್ಲಿ ನಾವು ಮಾಡಿದ್ದೇವೆಂಬ ತೃಪ್ತಿ ಇರಬಹುದು. ೧೯೮೨-೮೩ರಲ್ಲಿ ೧೪೪ ಲಕ್ಷ ಜನಕ್ಕೆ ಹಣವನ್ನು ವೆಚ್ಚ ಮಾಡಿದ್ದೇವೆ. ಇಷ್ಟು ಜನ ಫಲಾನುಭವಿಗಳನ್ನು ಗುರುತಿಸಿದ್ದೇವೆಂದು ಹೇಳಿ ತೃಪ್ತಿ ಇರಬಹುದು. ಆದರೆ ಉದ್ದೇಶ ಏನಿದೆ, ಇವರು ಬಡತನದ ಮೇಲೆ ಹೋಗಿದ್ದಾರೆಯೆ ಇಲ್ಲವೇ ಎನ್ನುವುದು ನಮಗೆ ಸಂಶಯ ಇದೆ. ಈ ಬಗ್ಗೆ ತಮಗೂ ಸಂಶಯ ಇದೆ. ಈ ಒಂದು ಉದ್ದೇಶಕ್ಕಾಗಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಇವತ್ತು ಚಮ್ಮಾರಿಕೆ ಕೆಲಸ ಮಾಡುವವರು ಅತ್ಯಂತ ಕೆಳದರ್ಜೆಯ ಜನರಾಗಿದ್ದಾರೆ. ಐ ಆರ್.ಡಿ.ಪಿ. ಯೋಜನೆಯ ಪ್ರಕಾರ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಚಮ್ಮಾರರಿಗೆ ಸಹಾಯ ಮಾಡಬೇಕು, ಹಾಗೂ ಇವರಿಗೆ ತಾಂತ್ರಿಕ ಜ್ಞಾನ ಒದಗಿಸಿಕೊಡಬೇಕು, ಹೆಚ್ಚಿನ ಹಣ ಸಹಾಯ ಮಾಡಬೇಕು ಮತ್ತು ಒಂದೇ ಉತ್ಪಾದನಾ ಕ್ಷೇತ್ರಕ್ಕೆ ತರಬೇಕೆನ್ನುವುದು ಇದೆ. ಇವತ್ತು ಇವರು ಉತ್ಪಾದನೆ ಮಾಡಿದ ವಸ್ತುಗಳಿಗೆ ಸಾಕಷ್ಟು ಮಾರಾಟದ ಅವಕಾಶವಿದೆ. ಅದನ್ನು ಮಾಡಬೇಕೆಂದು ಇಲ್ಲಿ ನಾವು ಪ್ರಯತ್ನಪಟ್ಟಿದ್ದೇವೆ. ಶ್ರೀಮಾನ್ ಖರ್ಗೆಯವರು ನೋಡಿದ್ದಾರೋ ಇಲ್ಲವೋ, ಅವರ ಜಿಲ್ಲೆಯಲ್ಲಿ I S.B. ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ೫೦ ಗ್ರಾಮಗಳಲ್ಲಿ ಇದನ್ನು ಹಾಕಿಕೊಂಡಿದ್ದೇವೆ. ಇಂದು ಮುಗಿಯುವ ಹಂತಕ್ಕೆ ಬಂದಿದೆ. ಒಂದೊಂದು ಕ್ಷೇತ್ರದಲ್ಲಿ ೧೦-೧೦ ಜನ ಕೆಲಸ ಮಾಡುತ್ತಿದ್ದಾರೆ. ಇವತ್ತು ಐ.ಆರ್.ಡಿ.ಪಿ. ಸಾಲದ ಮುಖಾಂತರ ಚೌಡಯ್ಯನವರಿಗೆ ಗಾಡಿ ಕೊಟ್ಟರೆ, ಕೃಷ್ಣೇಗೌಡರು ಇದಕ್ಕೆ ಬಣ್ಣ ಬಳಿದು ಇದನ್ನು ತೋರಿಸಿ, ತಮಗೂ ಸಾಲ ತೆಗೆದುಕೊಳ್ಳುತ್ತಾರೆ. ಈ ರೀತಿ ಆದರೆ ಹೇಗೆ ಅಭಿವೃದ್ಧಿ ಆಗುತ್ತದೆ? ಉತ್ಪಾದನೆಗೂ ಐ.ಆರ್.ಡಿ.ಪಿ. ಗೂ ನೇರವಾದ ಸಂಪರ್ಕ ಇರಬೇಕಾಗುತ್ತದೆ. ಚಿತ್ರದುರ್ಗದಲ್ಲಿ ೪೦ ಜನ ಕಮ್ಮಾರರು, ಬಡಗಿಗಳಿಗೆ ಸಹಾಯ ಒದಗಿಸಿದ್ದೇವೆ.

ಈ ಜಿಲ್ಲೆಯಲ್ಲಿ ಕಡು ಬಡತನವಿದ್ದರೂ ಕೂಡ, ಅವರು ಈ ಕಾರ್ಯಕ್ರಮಗಳ ಉಪಯೋಗ ಮಾಡಿಕೊಂಡು, ಅವರ ಬಡತನ ನೀಗಿಸಿಕೊಳ್ಳಬಹುದು. ಇವತ್ತು ಬಡವರಿಗೆ ಒಳ್ಳೆಯ ಎಮ್ಮೆಗಳನ್ನೂ, ಒಳ್ಳೆಯ ಹಸುಗಳನ್ನೂ ಒದಗಿಸಿಕೊಡಬೇಕಾಗಿದೆ. ಅಲ್ಲದೆ ಒದಗಿಸಿದ ಎಮ್ಮೆ ಹಸುಗಳಿಗೆ ಮೇವು ಕೂಡ ಬೇಕಾಗಿದೆ. ಈ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ೨೦೦೦ ಎಕರೆ ಪ್ರದೇಶ

ದಲ್ಲಿ ಫಾರಂಗಳನ್ನು ಮಾಡಬೇಕೆಂದಿದ್ದೇವೆ. ೧೦೦ ದನಗಳನ್ನು ಕೊಂಡುಕೊಂಡಿದ್ದೇವೆ. ಅಲ್ಲಿ ಸ್ಥಳೀಯ ಜಾತಿಯ ಎಮ್ಮೆಗಳನ್ನು ಕೊಳ್ಳುವ ಯೋಜನೆ ಹಾಕಿಕೊಂಡಿದ್ದೇವೆ. ಅದೇರೀತಿ ಗುಂಡ್ಲುಪೇಟೆ, ಮೈಸೂರಿನಲ್ಲಿ ಈ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಹೆಚ್ಚು ಹೆಚ್ಚು ಹುಲ್ಲು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ನಾವು ಇಷ್ಟು ಕೆಲಸ ಮಾಡಿದ್ದೇವೆಂದು, ಇಷ್ಟಕ್ಕೇ ತೃಪ್ತರಾಗಿಲ್ಲ. ನಾವು ಈಗ ಒಂದು ಹಂತಕ್ಕೆ ಬಂದಿದ್ದೇವೆ. ಇವತ್ತು ಹಳ್ಳಿಗಳ ಕಡೆ ಹುಲ್ಲು ಬೆಳೆಯುವುದಕ್ಕೆ ಸರಿಯಾದ ಜಾಗ ಸಿಗುತ್ತಿಲ್ಲ. ಸುತ್ತಮುತ್ತ ಇರುವ ೨೦-೩೦ ಗ್ರಾಮಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಒಂದು ಕಡೆ ಹುಲ್ಲು ಬೆಳೆಯುವ ವ್ಯವಸ್ಥೆ ಆಗಬೇಕೆಂಬುದನ್ನು ನಾನು ಹೇಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥಾ ಬಡವರಿಗೆ, ಇದನ್ನೇ ನಂಬಿಕೊಂಡಿರತಕ್ಕಂಥಾ ಜನರಿಗೆ ಉತ್ತಮ ದರ್ಜೆಯ ಕರುವನ್ನು ಕೊಡಬೇಕು ಎಂದು ಮಾಡಿದ್ದೇವೆ. ಈ ಒಂದು ಫಾರಂ ಹುಲ್ಲನ್ನು ಬೆಳೆದು ಜೊತೆಗೆ ಪ್ರಾಣಿಗಳಿಗೆ ತಕ್ಕ ಆರೋಗ್ಯ ವ್ಯವಸ್ಥೆಯನ್ನೂ ಕೂಡ ಮಾಡಿಕೊಡಬೇಕು ಅಂತ ಮಾಡಿದ್ದೇವೆ. ಅಂಥಾ ಬಡವನಿಗೆ ಉತ್ತಮ ದರ್ಜೆಯ ಕರುವನ್ನು ಕೊಟ್ಟರೆ ಅವನು ಅದನ್ನು ಉತ್ತಮ ರೀತಿಯಲ್ಲಿ ಬೆಳೆಸುತ್ತಾನೆ. ಈ ತರಹ ಒಂದು ಯೋಜನೆಯನ್ನು ಮಾಡಿದ್ದೇವೆ. ಈಗಾಗಲೇ ಎರಡು ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೇವೆ ಇನ್ನೂ ಎರಡು ಜಿಲ್ಲೆಯಲ್ಲಿ ಪ್ರಾರಂಭ ಮಾಡುತ್ತೇವೆ. ಎಲ್ಲಿ ಸರ್ಕಾರಿ ಜಮೀನು ಇದೆ ಅಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ಅದೇ ರೀತಿಯಾಗಿ ಎನ್. ಆರ್. ಇ. ಪಿ. ಪ್ರೋಗ್ರಾಂನಲ್ಲೂ ಕೂಡ ಮಾಡಬೇಕೆಂದಿದ್ದೇವೆ. ಮಾನ್ಯ ವೀರಪ್ಪ ಮೊಯ್ಲಿ ಅವರಿಗೆ ಇದು ಚೆನ್ನಾಗಿ ಗೊತ್ತು. ದಯವಿಟ್ಟು ಅವರು ಕೇಂದ್ರ ಸರ್ಕಾರದವರಿಗೆ ಹೇಳಿ ಹಣಕೊಡಿಸಿದರೆ ಅವರು ಯಾವ ಪ್ರಕಾರವಾಗಿ ಈ ಯೋಜನೆ ಮಾಡಬೇಕು ಎಂದು ಹೇಳುತ್ತಾರೋ ಆ ರೀತಿಯಾಗಿ ಮಾಡುತ್ತೇವೆ. ಕೇಂದ್ರ ಸರ್ಕಾರದವರು ೧೯೮೧-೮೨, ೧೯೮೨-೮೩ ಮತ್ತು ೧೯೮೩-೮೪ ನೇ ಸಾಲಿಗೆ ಈ ಯೋಜನೆಗಾಗಿ ೧೯ ಕೋಟಿ ರೂಪಾಯಿ ನಿಗದಿ ಮಾಡಿದ್ದಾರೆ. ಇದರ ಬಗ್ಗೆ ೫ ನೇ ವಾರ್ಷಿಕ ಯೋಜನೆಯಲ್ಲಿ ಅವರು ಹೇಳಿದ ಪ್ರಕಾರ ಯೋಜನೆ ಮಾಡಿದೆವು ಆ ಪ್ರಕಾರ ಹೋದ ವರ್ಷದ ಕಾರ್ಯಕ್ರಮಕ್ಕೆ ೧೯ ಕೋಟಿ ರೂಪಾಯಿನ ಕಾರ್ಯಕ್ರಮವಾದರೂ ಕೂಡ ನಾವು ೨೬ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ೧೯೮೩ ರ ಕೊನೆಯವರೆಗೆ ೨೬ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ತಾವು ಹೇಳಿದ ಹಾಗೆ ಕೇವಲ ತುರ್ತು ಕಾಮಗಾರಿಗಳನ್ನೇ ನಡೆಸಿದ್ದರಿಂದ ಮಾಮೂಲು ಕಾರ್ಯಕ್ರಮ ಕುಂಠಿತವಾಗಿದ್ದು ನಿಜ. ಇದರಲ್ಲಿ ಆಕ್ಷನ್ ಪ್ಲಾನ್ ೨೯ ಕೋಟಿ ರೂಪಾಯಿಗಳು. ಮಾನ್ಯ ಸಭಾಪತಿಯವರೇ, ಇನ್ನೊಂದು ವಿಶೇಷ ಏನೆಂದರೆ ಈ ಎನ್. ಆರ್ ಇ. ಪಿ. ಪ್ರೋಗ್ರಾಂನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಹತ್ತಾರು ಇಲಾಖೆಗಳು ಸೇರಿಕೊಂಡಿವೆ. ನಾವು ಹತ್ತಾರು ಇಲಾಖೆಗಳಿಗೆ ಆಯಾಯ ಜಿಲ್ಲೆಗೆ ಹಣವನ್ನು ಹಂಚಿಬಿಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಅವರನ್ನು ಕೇಳಿದರೆ ಹಣವೇ ಇಲ್ಲ ಅಂತ ಹೇಳುತ್ತಾರಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಹಣವನ್ನೆಲ್ಲಾ ಖರ್ಚು ಮಾಡಿದ್ದಾರೆಯೋ ?

ಶ್ರೀ ಅಬ್ದುಲ್ ನಜೀರ್ ಸಾಬ್.—ತಮಗೆ ಹೇಳಬೇಕಾದರೆ ಎನ್. ಆರ್. ಇ. ಪಿ. ಪ್ರೋಗ್ರಾಂನ್ನು ಇಂಪ್ಲಿಮೆಂಟ್ ಮಾಡುವಾಗ ೧೯ ಕೋಟಿ ರೂಪಾಯಿ ಯೋಜನೆ ಅಂತ ಹಾಕಿತ್ತು ಆದರೆ ಅದು ಇನ್ನೂ ಜಾಸ್ತಿಯಾಗಿ ಆ ಬಗ್ಗೆ ೨೬ ಕೋಟಿ ರೂಪಾಯಿ ಯೋಜನೆ ಮಾಡಿದ್ದೇವೆ. ಅಷ್ಟು ಹಣವೂ ಖರ್ಚಾಗಿದೆ, ಅದು ಲೆಕ್ಕದಲ್ಲಿ ಇದೆ. ಅದು ತಕ್ಷಣ ಏತಕ್ಕೆ ಲೆಕ್ಕಕ್ಕೆ ಸಿಗುವುದಿಲ್ಲ ಎಂದರೆ ನಾನು ನಮ್ಮ ಜಿಲ್ಲೆಯ ಪ್ರವಾಸದಲ್ಲಿ ಹೋಗಿದ್ದಾಗ ಆ ಜಿಲ್ಲೆಗೆ ಏನು ಹಣ ಕೊಟ್ಟಿದ್ದೇನೋ ಅದೆಲ್ಲಾ ಅಕ್ಟೋಬರ್‌ನಲ್ಲಿ ಮುಗಿದು ಹೋಗಿದೆ. ಮುಂದೆ ನವೆಂಬರ್ ತಿಂಗಳಿನಲ್ಲಿ ಮಾಡಬೇಕೆಂದು ಪ್ರೋಗ್ರಾಂ ಕೊಟ್ಟಿದ್ದೇವೋ ಅದನ್ನು ಮಾಡುವುದಕ್ಕೆ ದುಡ್ಡು ಇಲ್ಲ. ಆದುದರಿಂದ ಅಧಿಕಾರಿಗಳು ಈ ಬಗ್ಗೆ ಏನೂ ಖರ್ಚು ಮಾಡಲಿಲ್ಲಾ ಅಂತ ಹೇಳಿದರು. ಈ ಒಂದು ಡಿ. ಆರ್. ಡಿ. ಎಸ್. ಯೋಜನೆಗೆ ೨೬ ಕೋಟಿ ರೂಪಾಯಿ ಅಂತ ಹಾಕಿದ್ದರೂ ಕೂಡ ಕೆಲವು ಭಾಗದಲ್ಲಿ ಹಣ ಕೊಟ್ಟಿದ್ದರೂ ಕೂಡ ವೆಚ್ಚ ಮಾಡಿಲ್ಲ. ನಾನು ಪ್ರವಾಸ ಹೋಗಿದ್ದ ಕಾಲದಲ್ಲಿ ಆ ಜಿಲ್ಲೆಯಲ್ಲಿ ಸಂಭಂಧಪಟ್ಟ ಅಧಿಕಾರಿಗಳು ಈ ದುಡ್ಡನ್ನು ಏತಕ್ಕೆ ಖರ್ಚು ಮಾಡಲಿಲ್ಲ ಅಂತ ಕೇಳಿದೆ. ಅದಕ್ಕೆ ಅವರು ಉತ್ತರ ಹೇಳಿದರು. ಏನೆಂದರೆ ನಾವು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಫಾರೆಸ್ಟ್ ಡೆವಲಪ್‌ಮೆಂಟ್‌ಗೋಸ್ಕರ ಸೋಷಿಯಲ್ ಫಾರೆಸ್ಟ್ರಿ ಅನ್ನುವ ಒಂದು ಯೋಜನೆಗೆ ಇದರಲ್ಲಿ ೧೦ ಪರ್ಸೆಂಟ್ ಕೊಡುತ್ತೇವೆ. ಹೀಗೆ ಇಂತಿಂಥಾ ಡಿಪಾರ್ಟ್‌ಮೆಂಟ್ ಇಷ್ಟಿಷ್ಟು ಲಕ್ಷ ಅಂತ ದುಡ್ಡು ಕೊಡುತ್ತೇವೆ. ಆ ಇಲಾಖೆಯವರು ಇದಕ್ಕೆ ಖರ್ಚು ಮಾಡಿದ್ದರೂ ಕೂಡ ದುಡ್ಡು ಇಲ್ಲ ಎಂದು ಸರ್ಟಿಫೈ ಮಾಡುವುದಿಲ್ಲ. ಏತಕೆಂದರೆ ಕಾನೂನು ಪ್ರಕಾರ ಈ ಇಲಾಖೆಗೆ ಸಂಬಂಧಪಟ್ಟಂಥಾ ರೇಂಜರ್ ಮತ್ತು ಫಾರೆಸ್ಟರ್ ಏನು ಇರುತ್ತಾರೋ ಅವರು ಸರ್ಟಿಫೈ ಮಾಡಬೇಕಾದರೆ ಒಬ್ಬ ಗೆಜೆಟೆಡ್ ಆಫೀಸರ್ ಹೋಗಿ ಸ್ಟಾಕ್

ಇನ್ಸ್ಪೆಕ್ಷನ್ ಮಾಡಿ ಅದಕ್ಕೆ ಸೈನ್ ಹಾಕಬೇಕು. ಅಲ್ಲಿಯವರೆಗೂ ಕೂಡ ಇವರಿಗೆ ಸರ್ಟಿಫೈ ಅಂತ ಮಾಡುವುದಕ್ಕೆ ಬರುವುದಿಲ್ಲ. ಹೀಗೆಲ್ಲ ತೊಂದರೆ ನಿದೆ. ನಾನು ಜಿಲ್ಲೆಗಳಿಗೆ ಪ್ರವಾಸ ಹೋಗಿದ್ದಾಗ ಕೇಳಿದ್ದೇನೆ. ಕೊಟ್ಟ ಹಣವನ್ನೆಲ್ಲಾ ಖರ್ಚು ಮಾಡಿದ್ದಾರೆ. ಮಾರ್ಚಿ ಕೊನೆಯವರೆಗೆ ೩ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ, ಒಟ್ಟು ಈ ಯೋಜನೆಯಲ್ಲಿ ೩೦ ಕೋಟಿ ರೂಪಾಯಿಯಷ್ಟು ಹಣವನ್ನು ವೆಚ್ಚ ಮಾಡಿದ್ದೇವೆ. ಇದರಲ್ಲಿ ಕೇಂದ್ರ ಸರ್ಕಾರದವರು ೧೦ ಕೋಟಿ ರೂಪಾಯಿಯಷ್ಟು ಹಣವನ್ನು ಕೊಡುತ್ತೇವೆ ಎಂದು ಒಪ್ಪಿದ್ದಾರೆ. ಇದರ ಬಗ್ಗೆ ಮಾನ್ಯ ವಿ ರಪ್ಪಮೊಯ್ಲಿರವರ ಸಹಕಾರ ಬೇಕು ಎಂದು ಕೇಳುತ್ತೇನೆ ಈ. ಎನ್. ಆರ್. ಇ. ಪಿ. ಪ್ರೋಗ್ರಾಂನಲ್ಲಿ ಇನ್ನೂ ಒಂದು ವ್ಯವಸ್ಥೆ ಮಾಡಿದ್ದೇವೆ. ಅದೇನೆಂದರೆ ಹರಿಜನರಿಗೆ ಮನೆಗಳನ್ನು ಕಟ್ಟಿಕೊಡುವ ಒಂದು ವ್ಯವಸ್ಥೆ ಮಾಡಿಕೊಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾವೇ ಆ ಕೆಲಸ ಮಾಡಿದ್ದೆವು.

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ದಯವಿಟ್ಟು ಸರಿಯಾಗಿ ನೋಡಿ ದಾಖಲೆಯಲ್ಲಿ ಇದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನನ್ನ ದಾಖಲೆಯಲ್ಲಿ ಇಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ದಯಮಾಡಿ ಇನ್ನೊಂದು ಸಾರಿ ಅದನ್ನು ವೆರಿಫೈ ಮಾಡಿ, ಗೊತ್ತಾಗುತ್ತದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನೋಡುತ್ತೇನೆ. ತಪ್ಪು ಇದ್ದರೆ ತಿದ್ದಿಕೊಳ್ಳುತ್ತೇನೆ. ಇನ್ನು ಎನ್ ಆರ್ ಇ ಪಿ ಬಗ್ಗೆ ಹೇಳಬೇಕಾದರೆ ಈ ಯೋಜನೆಯನ್ನು ಸೆಂಟ್ರಲ್‌ಗೈಡ್ ಲೈನ್ಸ್ ಪ್ರಕಾರ ಮಾಡಬೇಕು. ಇದರಲ್ಲಿ ಕೆರೆಗಳ ಹೂಳು ತೆಗೆಸುವುದು, ಗ್ರೂಫ್ ಹೌಸಿಂಗ್, ವಾಟರ್ ಸಪ್ಲೈ, ಬಾವಿ ತೆಗೆಸುವುದು ಇವೆಲ್ಲಾ ಬರುತ್ತದೆ. ಅವರ ಗೈಡ್ ಲೈನ್ಸ್ ಪ್ರಕಾರ ಮಾಡಿದರೆ ೫೦:೫೦ ರೇಷಿಯೋ ಪ್ರಕಾರ ಈ ಕೆಲಸಗಳನ್ನು ಮಾಡಬೇಕಾಗುತ್ತದೆ. ಈಗ ಸದ್ಯದಲ್ಲಿ ಎನ್ ಆರ್ ಇ ಪಿ ಪ್ರೋಗ್ರಾಂ ಪ್ರಕಾರ ಧಾರವಾಡ, ಗುಲ್ಬರ್ಗ ಮತ್ತು ಬೀದರ್ ಈ ಮೂರು ಜಿಲ್ಲೆಗಳಲ್ಲಿ ಹರಿಜನರಿಗೆ ಗ್ರೂಫ್‌ಹೌಸಿಂಗ್ ಅನ್ನು ಪ್ರಾರಂಭ ಮಾಡಿದ್ದೇವೆ. ಮುಂದಿನ ವರ್ಷ ಹೆಚ್ಚು ಸಹಾಯ ಸಿಕ್ಕಿದರೆ ಇನ್ನೂ ಹೆಚ್ಚಾಗಿ ತೆಗೆದು ಕೊಂಡರೆ ಹರಿಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಈ ಕಾರ್ಯ ಕ್ರಮಗಳ ಜೊತೆಗೆ ಕೇಂದ್ರ ಸರ್ಕಾರದ ಆರ್. ಎಲ್. ಇ. ಪಿ. ಕೂಡ ಸೇರಿರುತ್ತದೆ. ಈ ಬಗ್ಗೆ ಒಂದು ಯೋಜನೆಯನ್ನು ನಾವು ಆಗಸ್ಟ್‌ನಲ್ಲಿ ಕಳುಹಿಸಿದಾಗ ಪ್ರಧಾನ ಮಂತ್ರಿಯವರು ಮಾಸ್ಟರ್ ಪ್ಲಾನ್ ಬೇಕು ಅಂತ ಹೇಳಿದರು. ಜನವರಿ ತಿಂಗಳಿನಲ್ಲಿ ಇದನ್ನು ಕಳುಹಿಸಿದ್ದೇವೆ. ಅದರಲ್ಲಿ ಕೆಲವು ಪ್ಲಾನ್ ಅಪ್ರೂವ್ ಆಗಿಲ್ಲ. ಎನ್ ಆರ್ ಇ ಪಿ ಆಕ್ಷನ್ ಪ್ಲಾನ್ ಅಪ್ರೂವ್ ಮಾಡಬೇಕಾದರೆ ಅದಕ್ಕೆ ತಕ್ಕಂತೆ ಸ್ಟೇಟ್ ಪ್ಲಾನ್ ಕೂಡ ಮಾಡಬೇಕಾಗುತ್ತದೆ. ಅದರಂತೆ ಒಂದು ಪ್ರೋಗ್ರಾಂ ಲಿಸ್ಟನ್ನು ಅವರಿಗೆ ಕಳುಹಿಸಿದ್ದೇವೆ. ಈ ಬಗ್ಗೆ ಯಾವ ಕೆಲಸ ಮಾಡಬೇಕಾದರೂ ಕೇಂದ್ರ ಸರ್ಕಾರದ ಅಪ್ರೂವಲ್ ತೆಗೆದುಕೊಳ್ಳಬೇಕು. ಮಾನ್ಯ ಚೌಡಯ್ಯನವರು ಕೇಳಿದರು ನಮ್ಮ ಕಡೆ ರೋಡ್ಸ್ ಮಾಡಿ ಕಿಲ್ಲವಲ್ಲಾ ಎಂದು. ಯಾವುದೇ ಕೆಲಸ ಮಾಡಬೇಕಾದರೆ ಈ ಯೋಜನೆಯ ಪ್ರಕಾರ ಕೇಂದ್ರ ಸರ್ಕಾರದ ಅಪ್ರೂವಲ್ ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಕೇಂದ್ರ ಸರ್ಕಾರ ಪುರಸ್ಕಾರ ಕೊಡತಕ್ಕಂಥಾ ಕೆಲವು ಕಾರ್ಯ ಕ್ರಮಗಳು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಅವರು ನಮಗೆ ಸಹಾಯ ಕೊಟ್ಟಿಲ್ಲ ಎಂದು ಅವರ ಅಪ್ರೂವಲ್ ಆಗುವವರೆಗೂ ಕೂಡ ಕೆಲವು ಕೆಲಸಗಳಿಗೆ ಕಾಯುವುದಿಲ್ಲ. ಆದರೆ ಅದನ್ನು ವ್ಯವಹಾರಿಕವಾಗಿ ಮಾಡಬೇಕಾಗುತ್ತದೆ. You can just see. We will be spending more money that what is released by them. ನಾವೇನು ಅಲ್ಲಿಯವರೆಗೆ ಕಾಯಬೇಕಾಗಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಎನ್ ಆರ್ ಇ ಪಿ ಮತ್ತು ಡಿ ಪಿ ಎ ಪಿ ಪ್ರೋಗ್ರಾಂಗೆ ಕಾಯ ಬೇಕಾಗಿಲ್ಲ ಅಂತ ಹೇಳುವುದು ನನಗೇನೂ ಸಮಂಜಸವಾಗಿಲ್ಲ. ಅವರ ಅಪ್ರೂವಲ್ ಬಂದ ಹೊರತು ನಾವು ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ತಮಗೆ ಹೇಳಬೇಕಾದರೆ 20 ಪಾಯಿಂಟ್ ಪ್ರೋಗ್ರಾಂ ಬಗ್ಗೆ ಜಿಲ್ಲಾ ಮಟ್ಟದಲ್ಲಿ ತೆಗೆದುಕೊಳ್ಳುವುದಕ್ಕೆ ಅಡ್ಡಿ ಏನೂ ಇಲ್ಲ. ಆದರೆ ಎನ್. ಆರ್. ಇ. ಪಿ. ಪ್ರೋಗ್ರಾಂಗೆ ಅವರ ಅಪ್ರೂವಲ್ ಬೇಕಾದರೂ ಸಹ by the time it is approved, fifty percent of the programme is done by the taluks. ಆದ್ದರಿಂದ ಇವೆಲ್ಲಾ ವರ್ಕಿಂಗ್ ಅರೇಂಜ್‌ಮೆಂಟ್ಸ್, ಅವರ ಅಪ್ರೂವಲ್ ಬರುವ ತನಕ ಸುಮ್ಮನೆ ಕೂತುಕೊಂಡು ಅದನ್ನೇ ಕಾಯುವುದು ಬೇಕಾಗಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಬೇರೆ ಬೇರೆ ಕಾರ್ಯಕ್ರಮಕ್ಕೆ ನಾವೇನೂ ಹೋಗಬೇಕಾಗಿಲ್ಲ. ತಮಗೆ ಹೇಳಬೇಕಾದರೆ ನಮ್ಮ ರಾಜ್ಯ ಸರ್ಕಾರದವರು ರೋಡ್ಸ್ ಬಗ್ಗೆ ಒಂದು ಪ್ಲಾನ್ ಕಳುಹಿಸಿಕೊಟ್ಟರೆ ಅವನ್ನು ಇನ್ನೂ ಒಪ್ಪಿಲ್ಲ. ಅವರು ಇದರ ಬಗ್ಗೆ ಮಾಸ್ಟರ್‌ಪ್ಲಾನ್ ಯೋಜನೆ ಕೊಡಿ ಎಂದು ಹೇಳಿದ್ದಾರೆ. ಆದುದ್ದರಿಂದ ಆ ಬಗ್ಗೆ ಮತ್ತೆ ಕೂತುಕೊಂಡು ಮತ್ತೊಂದು ಪ್ಲಾನ್ ಮಾಡಬೇಕಾಯಿತು. ಹೀಗೆ ಒಪ್ಪದೇ ಹೋದರೆ ಏನು ಮಾಡುವುದು ? If the list has to be approved by them, there will be difficulty. ಮತ್ತೆ ನಾವು ಅವರಿಗೆ ಬರೆದಿದ್ದೇವೆ.

SRI. M. VEERAPPA MOILY.—You can take risk.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಲ್ಲೆಲ್ಲಾ ಬಾವಿಗಳು ಇಲ್ಲ, ರೋಡ್ಸ್ ಇಲ್ಲ ಅನ್ನುವುದು ನಮಗೆ ಗೊತ್ತು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹೇಗಾದರೂ ಕೂಡ ಮಾನ್ಯ ವಿರೋಧಪಕ್ಷದ ನಾಯಕರು ದೆಲ್ಲಿಗೆ ಹೋಗುತ್ತಾರೆ. ಹಾಗೆಯೇ ಇದನ್ನೂ ಕೂಡ ಅಪ್ರೂವ್‌ಮಾಡಿಕೊಂಡು ಬನ್ನಿ ಸ್ವಾಮಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ವರ್ಷ ಅದು ಅಪ್ರೂವ್ ಆಗಿ ಬಂದರೆ ಆ ಕೆಲಸಗಳಿಗೆ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ಮುಂದಿನ ವರ್ಷ ಆ ಪ್ರೋಗ್ರಾಂ ಎಲ್ಲಾ ತೆಗೆದುಕೊಳ್ಳುತ್ತೇವೆ. ಇನ್ನು ಮಾನ್ಯ ಖರ್ಗೆಯವರು ಈ ಕಾರ್ಯಕ್ರಮಕ್ಕೂ ಮತ್ತು ಅಂತ್ಯೋದಯ ಕಾರ್ಯಕ್ರಮಕ್ಕೂ ಏನು ವ್ಯತ್ಯಾಸ ಇದೆ ಅನ್ನುವುದು ಅವರ ವಾದ. ಈ ಐ. ಆರ್ ಡಿ ಪಿ. ಪ್ರೋಗ್ರಾಂನಲ್ಲಿ ಒಬ್ಬ ವ್ಯಕ್ತಿಯ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತೇವೆ, ಈ ಅಂತ್ಯೋದಯ ಪ್ರೋಗ್ರಾಂನಲ್ಲಿ ಒಬ್ಬ ಕಡುಬಡವನ ಇಡೀ ಸಂಸಾರವನ್ನು ಮೇಲಕೆತ್ತುವ ಕಾರ್ಯಕ್ರಮ ಇದೆ. ಈ ಐ. ಆರ್. ಡಿ. ಪಿ. ಪ್ರೋಗ್ರಾಂನಲ್ಲಿ 4 ಸಾವಿರ ರೂಪಾಯಿ ಆದಾಯ ಒಳಗೆ ಇರತಕ್ಕಂಥಾವರನ್ನು ಚುನಾವಣೆ ಮಾಡಿ ಎಂದು ಹೇಳುತ್ತೇನೆ. ಅನೇಕ ವರ್ಷಗಳಿಂದ ಒಂದು ಸಾವಿರ ರೂಪಾಯಿ ಆದಾಯ ಇದ್ದರೂ ಕೂಡ ಅಂಥಾವನನ್ನು ಚುನಾವಣೆ ಮಾಡುವುದು ಇತ್ತು. ಈಗ ಅದನ್ನು ತೆಗೆದುಹಾಕಿದುದರ ಉದ್ದೇಶ ಏನು ಎಂದರೆ ಅವನಿಗೆ ಆದಾಯ ಕಡಿಮೆ ಇರುವುದರಿಂದ ಪೇಯಿಂಗ್ ಕೆಪ್ಯಾಸಿಟಿ ಇರುವುದಿಲ್ಲ ಎಂದು, 4 ಸಾವಿರ ರೂಪಾಯಿ ಆದಾಯದ ಒಳಗೆ ಇರತಕ್ಕಂಥಾವರನ್ನು ಚುನಾವಣೆ ಮಾಡಿ ತೆಗೆದುಕೊಳ್ಳುತ್ತಾರೆ. ಇದರಿಂದ ಏನಾಗಿದೆ ಎಂದರೆ ಆ ಊರಿನಲ್ಲಿ ಯಾವನು ಕಡುಬಡವನು ಇರುತ್ತಾರೋ ಅವನು ಮುಂದೆ ಬರುವುದಕ್ಕಾಗುವುದಿಲ್ಲ ನಾವು ಬೇಕಾದರೆ ಕಾನೂನು ಬದ್ಧವಾಗಿ ಮಾತನಾಡ ಬಹುದು, ವ್ಯಾವಹಾರಿಕವಾಗಿ ಮಾತನಾಡಬಹುದು. ಕಟ್ಟುನಿಟ್ಟಾಗಿ ಹೋದರೆ ಮಾಡುವುದಕ್ಕೆ ಬರುವುದಿಲ್ಲ. ಆ ದೃಷ್ಟಿಯಿಂದಲೇ ನಾನು ಈ ಅಂತ್ಯೋದಯದ ಕಾರ್ಯಕ್ರಮ ಹಾಕಿಕೊಂಡಿರುವ ಉದ್ದೇಶ. ಇದನ್ನು ಮಾನ್ಯ ಚೌಡಯ್ಯನವರೂ ಸಹ ಸ್ವಾಗತಿಸಿದ್ದಾರೆ. ಮೊದಲು ಈ ಕಾರ್ಯಕ್ರಮ ತರಬೇಕು ಎಂದು ಹೇಳಿದಾಗ ಕೆಳಮಟ್ಟದವರಿಗೆ ಗೊತ್ತಾಗಲಿಲ್ಲ. ಈ ಅಂತ್ಯೋದಯ ಕಾರ್ಯಕ್ರಮದ ಬಗ್ಗೆ ಕಾನೂನು ಮಾಡುವಾಗ ಗೊತ್ತಾಯಿತು. ನಾವು ಬೇರೆ ಬೇರೆ ಯೋಜನೆಗಳಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೋ, ಅದರಲ್ಲಿ ಯಾವ್ಯಾವ ಗ್ರಾಮಗಳು ಕವರ್ ಆಗಿಲ್ಲವೋ ಅಂಥಾ ಗ್ರಾಮಗಳನ್ನು ಈ ಐ. ಆರ್. ಡಿ. ಪಿ. ನಲ್ಲಿ ಯಾವ ಗ್ರಾಮಗಳು ಕವರ್ ಆಗಿಲ್ಲವೋ ಅಂಥಾ ಕಡೆಗಳಲ್ಲಿ 3-4 ಜನರನ್ನು ಈ ಅಂತ್ಯೋದಯ ಕಾರ್ಯಕ್ರಮಕ್ಕೆ ಸೆಲೆಕ್ಟ್ ಮಾಡುವ ಹಾಗೆ ಆದೇಶ ಕೊಟ್ಟಿದ್ದೇವೆ. ಆದರೆ ಅದು ಏನಾಯಿತು ಅದೂ ಕೂಡಾ ನನಗೆ ತೃಪ್ತಿ ಇಲ್ಲ. 44 ಸಾವಿರ ಜನಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾವು ಅಭಿಪ್ರಾಯ ಪಟ್ಟರೆ 28 ಸಾವಿರ ಜನಕ್ಕೆ ಮಾಡಿದ್ದಾರೆ. ಅದೂ ಕೂಡ ಬೆನಿಫಿಷಿಯರಿ ಒರಿಯಂಟೆಡ್ ಪ್ರೋಗ್ರಾಂ. ಇದಕ್ಕೆ ಏನು ಎರಡು ಕೋಟಿ ಇಟ್ಟಿದ್ದೇವೆ

೧೭ ಕೋಟಿಯಲ್ಲಿ ಏಳನೇ ಒಂದು ಭಾಗ ಇಟ್ಟಿದ್ದೇವೆ. ಐ.ಆರ್.ಡಿ.ಪಿ.ಯಲ್ಲಿ ಏಳನೇ ಒಂದು ಭಾಗ ೪೦ ತಾಲ್ಲೂಕುಗಳಿವೆ ಇಟ್ಟಿದ್ದೇವೆ. ನಮ್ಮ ಹಣಕಾಸಿನ ವ್ಯವಸ್ಥೆ ಇಷ್ಟು. ಹಣ ಸಿಕ್ಕಿದರೆ ನನಗೂ ಸಂತೋಷ, ಸರಕಾರಕ್ಕೂ ಸಂತೋಷ. ನಿಮ್ಮ ಅಭಿಪ್ರಾಯದ ಬಗ್ಗೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ನಮ್ಮ ಕಷ್ಟವೇನೆಂದರೆ ಸೀಮಿತ ಕಾರ್ಯಕ್ರಮವನ್ನು ಮಾಡಬೇಕಾಗಿದೆ. ಈಗ ಕಾನೂನು ಬದಲಾವಣೆ ಮಾಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಗವರ್ನಮೆಂಟ್ ಆರ್ಡರ್ ಏನಿತ್ತು ಅದನ್ನು ಬದಲಾವಣೆ ಮಾಡಬೇಕೆಂದು ಸರಕಾರ ತೀರ್ಮಾನ ಮಾಡಿದೆ. ಐ.ಆರ್.ಡಿ.ಪಿ ಎಲ್ಲಿ ಆಗಿದೆ, ಎಲ್ಲಿ ಅನ್‌ಕವರ್ಡ್ ವಿಲೇಜಸ್. ಅನ್‌ಕವರ್ಡ್ ಪಾಪ್ಯುಲೇಷನ್ ಇದೆ. ಇದನ್ನು ಅಮೆಂಡ್‌ಮೆಂಟ್ ಮಾಡುವುದರಿಂದ ಅನುಕೂಲ ಹೆಚ್ಚು ಬೆನಿಫಿಷಿಯರೀಸ್ ಸಿಗುವುದಕ್ಕೆ ಅವಕಾಶ ಆಗುತ್ತದೆ. ನಾವು ಅಪೇಕ್ಷೆ ಪಟ್ಟಂತೆ ಇದು ಪೂರ್ಣವಾಗಿಲ್ಲ. ಇಲ್ಲಿ ಈ ವರ್ಷ ಪ್ರಾರಂಭ ಮಾಡು ವುದರಿಂದ ಬ್ಯಾಂಕುಗಳ ಮುಖಾಂತರ ಸಂಧಾನ ಮಾಡಬೇಕಾಗಿದೆ. ಅವರು ಒಪ್ಪಬೇಕು. ನಾವು ಕೊಡತಕ್ಕದ್ದು ಸಹಾಯಧನ. ಅವರು ಲೋನ್ ಕೊಡುವುದಕ್ಕೆ ಒಪ್ಪಬೇಕು. ಅವರು ಲೋನ್ ಕೊಡುವುದರಿಂದ ಬೆನಿಫಿಷಿಯರೀಸ್‌ಗೆ ಅನುಕೂಲ ಆಗುವ ದೃಷ್ಟಿಯಿಂದ ನಾವು ಪ್ರಾರಂಭ ಮಾಡಿ ದ್ದೇವೆ. ಈಗ ಬ್ಯಾಂಕುಗಳು ಸಹಾಯ ಮಾಡಲು ಒಪ್ಪಿರುವುದರಿಂದ ಈ ಕಾರ್ಯಕ್ರಮ ಮುಂದಿನ ವರ್ಷದಿಂದ ಚಾಚೂ ತಪ್ಪದೆ ನಾವು ಮಾಡುತ್ತೇವೆಂದು ಭರವಸೆ ಕೊಡುತ್ತೇನೆ. ಇನ್ನೊಂದು ವಿಫಲತೆ ನಮ್ಮದಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಡಿ.ಪಿ.ಎ.ಪಿ ಇದೆ. ಅನೇಕ ಪ್ರೋಗ್ರಾಂಗಳು ಏನಿವೆ ಇವರಿಂದ ಬಹುಶಃ ನಾವು ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳು ಇವೆ. ಆದರೆ ಮುಂದಿನ ವರ್ಷ ಈ ಗುರಿಯನ್ನು ತಲುಪುವ ಕಾರ್ಯ ಕ್ರಮ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಇನ್ನು ಲ್ಯಾಂಡ್ ಆರ್ಮಿ ಬಗ್ಗೆ ಹೇಳಿ ಎಂದು ಕೇಳಿದರು. ಲ್ಯಾಂಡ್ ಆರ್ಮಿ ಉದ್ದೇಶವೇ ಬೇರೆ. ಹಂತಹಂತವಾಗಿ ಇದನ್ನು ಜಾರಿಗೆ ತರುತ್ತಿದ್ದೇವೆ. ಎರಡು ಕೋಟಿ ರೂಪಾಯಿಗಳ ಕೆಲಸ ಮಾಡಿ ದಿನಕ್ಕೆ ನಾಲ್ಕು ಸಾವಿರ ಜನಕ್ಕೆ ಕೆಲಸ ಒದಗಿಸತಕ್ಕಂಥ ಸಂಸ್ಥೆಯಾಗಿದ್ದ, ಲ್ಯಾಂಡ್ ಆರ್ಮಿ, ಇದು ಗ್ರಾಮಾಣ ಭಾಗದಲ್ಲಿ ೨೦ ಕೋಟಿ ರೂಪಾಯಿಗಳ ಕೆಲಸ ಮಾಡತಕ್ಕ ದಿನಕ್ಕೆ ೨೪ ಸಾವಿರ ಜನಕ್ಕೆ ಕೆಲಸ ಒದಗಿಸತಕ್ಕ ಸಂಸ್ಥೆಯಾಗಿ ಬೆಳೆದಿದೆ. ಆ ಶಕ್ತಿ ಅದಕ್ಕೆ ಬಂದಿದೆ. ಇದು ಪೂರ್ಣವಾಗಿ ಸಂಘಟನೆ ಆಗಿಲ್ಲ ನಮ್ಮ ಉದ್ದೇಶ ಏನಿದೆ, ಆ ಉದ್ದೇಶದ ಮಟ್ಟಕ್ಕೆ ಇದು ಬಂದಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ನಾವು ಹೆಚ್ಚು ಗಮನಹರಿಸುತ್ತೇವೆ, ಎಲ್ಲಿ ಎನ್.ಆರ್.ಇ.ಪಿ., ಐ.ಆರ್.ಡಿ.ಎಸ್. ಮತ್ತು ಗ್ರಾಮಾಣ ಉದ್ಯೋಗ ಧೃಢಿಕರಣ ಯೋಜನೆಗಳು ಇವೆ. ಆ ಯೋಜನೆಗಳಿಗೆ ಹೊಂದುವ ಕಾರ್ಯಗಳಲ್ಲಿ ಈ ಭೂಸೇನೆಯನ್ನು ತೊಡಗಿಸಬೇಕೆಂದು ನಮ್ಮ ಉದ್ದೇಶ ಇದೆ. ಇದರ ಮೂಲಕ ಮಧ್ಯವರ್ತಿಗಳನ್ನು ತೆಗೆಯುವುದು, ಅನೇಕ ಅನಿಷ್ಟಗಳನ್ನು ತೊಡೆದು ಹಾಕುವುದು ನಮ್ಮ ಉದ್ದೇಶವಾಗಿದೆ. ಐ.ಆರ್.ಡಿ.ಎಸ್, ಎನ್.ಆರ್.ಇ.ಪಿ. ಇವೆಲ್ಲಾ ಇರುವಾಗ ಇನ್ನೊಂದು ಯೋಜನೆ ಏಕೆ ತಂದಿದ್ದೀರಿ ಎಂದು ಕೇಳಿದರು. ನಾನು ಐ.ಆರ್.ಡಿ.ಪಿ. ಬಗ್ಗೆ ಹೇಳುವಾಗ ಹೇಳಿದೆ. ಬ್ಲಾಕ್ ಪದ್ಧತಿ ಬಂದರೆ ಏನಾದರೂ ಸಹಾಯವಾಗಬಹುದು. ಇಡೀ ದೇಶದಲ್ಲಿ ಬ್ಲಾಕ್ ಅಡ್ಮಿನಿಸ್ಟ್ರೇಷನ್ ಇದೆ. ಒಂದು ಬ್ಲಾಕಿಗೆ ೬೦೦ ಗ್ರಾಮ ಎಂದು ಹೇಳಿದರೆ, ಕರ್ನಾಟಕದಲ್ಲಿ ಒಂದುನೂರು ಬ್ಲಾಕಿಗೂ ಜಾಸ್ತಿಯಾಗುತ್ತದೆ. ೮ ಕೋಟಿ ರೂಪಾಯಿ ಜಾಸ್ತಿ ಹಣ ಕೇಂದ್ರದಿಂದ ಬರುತ್ತದೆ. ಸುಮಾರು ೬೦ ಸಾವಿರ ಹೆಚ್ಚು ಬೆನಿಫಿಷಿಯರೀಸ್‌ಗೆ ಕೊಡುವುದಕ್ಕೆ ಅವಕಾಶವಾಗು ತ್ತದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯ ಸರ್ಕಾರಗಳು ಮಾತ್ರ ತಾಲ್ಲೂಕ್ ಅಡ್ಮಿನಿಸ್ಟ್ರೇಷನ್ ಒಪ್ಪಿಕೊಂಡಿವೆ. ಕೇಂದ್ರದಿಂದ ಬ್ಲಾಕ್ ಓರಿಯಂಟೆಡ್ ಮೇಲೆ ಸಹಾಯ ಬರುತ್ತದೆ. ನಾವು ಸಹಾಯ ಪಡೆಯುತ್ತಿರುವುದು ತಾಲ್ಲೂಕ್ ಓರಿಯಂಟೆಡ್ ಮೇಲೆ. ಈಗ ಕೇಂದ್ರದ ಯೋಜನಾ ಮಂತ್ರಿಗಳು ಮಹಾರಾಷ್ಟ್ರದವರೇ ಆಗಿದ್ದಾರೆ. ಇದರ ಅರಿವು ಅವರಿಗೆ ಆಗಿದೆ. ಈ ಎರಡೂ ರಾಜ್ಯಗಳಿಗೆ ಅನ್ಯಾಯ ಆಗುತ್ತಿರುವುದು ಅವರ ಗಮನಕ್ಕೆ ಬಂದಿದೆ. ಮುಂದಿನ ವರ್ಷ ಸರಿಪಡಿಸು ತ್ತೇವೆಂದು ಹೇಳಿದ್ದಾರೆ. ನಾವು ಬ್ಲಾಕ್ ಅಡ್ಮಿನಿಸ್ಟ್ರೇಷನ್ ಮಾಡುವುದಕ್ಕೆ ತಯಾರಾಗಿದ್ದೇವೆ. ಸರಕಾಗಿ ವೆಚ್ಚ ಹೊಂದಿಸುವುದಕ್ಕೆ ತಯಾರಾಗಿದ್ದೇವೆ. ಮುಂದಿನ ವರ್ಷದಿಂದ ಸಹಾಯಧನವನ್ನು ಬ್ಲಾಕ್ ಓರಿಯಂಟೆಡ್ ಆಧಾರದ ಮೇಲೆ ಕೊಡಬೇಕೆಂದು ನಾವು ಹೇಳಿದ್ದೇವೆ.

ಶ್ರೀ ಹೆಚ್.ಡಿ. ಚೌಡಯ್ಯ.—ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವೀಸ್ ಇದ್ದಾಗ ಈ ಬ್ಲಾಕ್ ಸಿಸ್ಟಮ್ ಇತ್ತು. ಕೆಲವು ಡಬ್ಬಲ್ ಬ್ಲಾಕ್ ಇದ್ದವು, ಕೆಲವು ಎರಡೂವರೆ ಕೆಲವು ಒಂದೂವರೆ ಬ್ಲಾಕ್ ಇದ್ದವು. ಇದನ್ನು ಹೇಗೆ ಬದಲಾವಣೆ ಮಾಡಿದ್ದೀರಿ, ಬ್ಲಾಕ್ ಅಬಾಲಿಷನ್ ಯಾವಾಗ ಆಯಿತು ?

ಶ್ರೀ ಅಬ್ದುಲ್ ನಜೀರ್‌ಸಾಬ್.—೧೯೭೦ನೇ ಇಸವಿಗಿಂತ ಹಿಂದೆ ಆಗಿಹೋಗಿದೆ. ಹಿಂದಿನಿಂದಲೂ ಬ್ಲಾಕ್ ಅಡ್ಮಿನಿಸ್ಟ್ರೇಷನ್ ಇಲ್ಲ. ಅದಕ್ಕೆ ನಮಗೆ ಸಹಾಯಧನ ಸರಿಯಾಗಿ ಸಿಗುತ್ತಿಲ್ಲ. ಇವೆಲ್ಲಾ ಐ.ಆರ್.ಡಿ.ಪಿ. ಪ್ರೋಗ್ರಾಂನಲ್ಲೇ ಆಗಬಹುದು ಎಂಬ ಆಶಯವನ್ನು ವ್ಯಕ್ತಪಡಿಸಿ, ಈ ಉದ್ಯೋಗ ಧೃಢೀಕರಣ ಯೋಜನೆ ಏಕೆ ಮಾಡಿದ್ದೀರಿ ಎಂದು ಪ್ರಶ್ನೆ ಮಾಡಿದರು. ನಾನು ಮಾನ್ಯ ಸದಸ್ಯರ ಸಲಹೆಯನ್ನು ಅಪೇಕ್ಷೆ ಪಡುತ್ತೇನೆ. ಇವತ್ತು ಎಲ್ಲಾ ಕಾರ್ಯಕ್ರಮಗಳ ಜೊತೆಗಿದ್ದರೂ ಕೂಡಾ, ಅಂತ್ಯೋದಯ ಕಾರ್ಯಕ್ರಮದಿಂದ ಏನು ಸಹಾಯ ದೊರಕಿಸುತ್ತಿದ್ದೇವೆ, ಅದಕ್ಕೆ ಭಿನ್ನವಾದ, ಒಂದು ಕಾರ್ಯಕ್ರಮದಿಂದ ಬಡತನದ ರೇಖೆಯ ಕೆಳಗಿರುವವರಿಗೆ ಸಹಾಯ ಮಾಡಬೇಕೆನ್ನುವುದು ಇದರ ಉದ್ದೇಶ. ಇದಕ್ಕೆ ಹೆಚ್ಚು ಖರ್ಚು ಮಾಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಈ ವರ್ಷ ಇದನ್ನು ಪ್ರಾರಂಭ ಮಾಡಿದ್ದೇವೆ, ಮುಂದಿನ ವರ್ಷ ಇದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕಾರ್ಯಕ್ರಮಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಆದರೆ ಕಾರ್ಯಕ್ರಮ ಮಾಡುವಾಗ ಸರಿಯಾಗಿ ಒಂದು ಯೋಜನೆ ಮಾಡಿ ಹಣ ಒದಗಿಸಿ. ಎಷ್ಟು ಕಾರ್ಯಕ್ರಮ ಇದ್ದರೂ ನಮಗೆ ಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಇನ್ನೊಂದು ಕಾರ್ಯಕ್ರಮ ಇದೆ, ಹೆಚ್ಚುವರಿ ಭೂಮಿಗೆ ಹಣ ಕೊಡತಕ್ಕದ್ದು ಎಷ್ಟು ಲಕ್ಷ ಜನ ಇದ್ದಾರೆ, ಸಾಲ ಕೊಡತಕ್ಕದ್ದನ್ನು ಕೇಂದ್ರ ನಿಗದಿ ಮಾಡಿಕೊಡುತ್ತಾರೆ. ೩೦ ಲಕ್ಷ ಇದಕ್ಕಾಗಿ ಬೇಕು. ೬ ಲಕ್ಷ ಕೇಂದ್ರದವರು ಕೊಡುತ್ತಾರೆ, ೬ ಲಕ್ಷ ನಾವು ಹಾಕಿಕೊಂಡು ೧೨ ಲಕ್ಷಕ್ಕೆ ಮಾಡಬೇಕು. ನೇಗಿಲಭಾಗ್ಯ ಎಂದು ಮಾನ್ಯ ಮೊಯ್ಲಿಯವರು ಒಂದು ಒಳ್ಳೆಯ ಕಾರ್ಯ ಕ್ರಮವನ್ನು ಮಾಡಿದರು ಹೆಚ್ಚು ಜನ ಗೇಣಿದಾರರಿಗೆ ಸಹಾಯ ಆಗತಕ್ಕಂಥ ಯೋಜನೆ ಇದು ೧೦೦ ಲಕ್ಷ ರೂಪಾಯಿ ಬಜೆಟ್‌ನಲ್ಲಿ ಇದಕ್ಕೆ ಅವರು ನಿಗದಿ ಮಾಡಿದ್ದರು. ಆದರೆ ವೆಚ್ಚ ಖರ್ಚಾಗಲಿಲ್ಲ. ಹೋದವರ್ಷ ೫೧ ಲಕ್ಷ ರೂಪಾಯಿ ವೆಚ್ಚ ಮಾಡಿದ್ದಾರೆ. ಈ ವರ್ಷ ಇನ್ನೂ ೫೧ ಲಕ್ಷ ಹೆಚ್ಚು ಮಾಡಬೇಕೆಂದು ನಮ್ಮ ಉದ್ದೇಶ ಇದೆ. ಹೆಚ್ಚು ಮಾಡುವುದಕ್ಕೆ ನನ್ನ ಅಭ್ಯಂತರ ಇಲ್ಲ, ಆದರೆ ನಮ್ಮ ಸಂಪನ್ಮೂಲಗಳ ಸ್ಥಿತಿಗತಿಯ ಚಿತ್ರ ಇಟ್ಟುಕೊಂಡು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಕಾರ್ಯಕ್ರಮ ಮಾಡುತ್ತಿದ್ದೇವೆಯೇ ಹೊರತು, ವೆಚ್ಚವಾಗಲಿಲ್ಲ ಎಂದು ಅಲ್ಲ. ಏಪ್ರಿಲ್ ಒಂದನೇ ತಾರೀಖು ನನ್ನ ಗೆಳೆಯರಿಗೆ ಪತ್ರ ಬರೆಯುತ್ತೇನೆ. ಏನೇನು ಆಗಿದೆ ಎಂಬ ಬಗ್ಗೆ ತಾಲ್ಲೂಕುವಾರು ಅಂಕಿಅಂಶಗಳನ್ನು ಒದಗಿಸಿ ಪತ್ರ ಬರೆಯುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ. ಇನ್ನೊಂದು ಕ್ಷೇತ್ರದಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಹತ್ತಾರು ವರ್ಷಗಳಿಂದ ಹಿಂದೆ ಬಿದ್ದಿರತಕ್ಕದ್ದು ಇದೆ. ಅದು ಜೀತಮುಕ್ತರ ಕಾರ್ಯಕ್ರಮ. ಮೊನ್ನೆ ಮೊನ್ನೆ ನನ್ನ ಇಲಾಖೆಗೆ ಈ ಕಾರ್ಯಕ್ರಮ ಬಂದಿದೆ. ಇದರಲ್ಲಿ ಹೆಚ್ಚು ಕಾರ್ಯಕ್ರಮ ಆಗಿಲ್ಲ. ೬೦ ಸಾವಿರ ಜನರನ್ನು ಗುರುತಿಸಲಾಗಿದೆ. ಕಳೆದ ೧೦–೧೨ ವರ್ಷದಲ್ಲಿ ೧೦–೨೦ ಸಾವಿರ ಜನಕ್ಕೆ ಸಹಾಯ ಕೊಟ್ಟಿದ್ದರೂ ಕೂಡಾ, ಅವರಿಗೆ ಐದುಸಾವಿರ, ಎರಡು ಸಾವಿರ, ಮೂರು ಸಾವಿರ ರೂಪಾಯಿಗಳ ಸಹಾಯಧನ ಕೊಟ್ಟಿದ್ದರೂ ಕೂಡಾ, ಅವರು ಯಾವ ರೀತಿಯಿಂದ ಹೋಗಬೇಕೆನ್ನುವ ಯೋಜನೆ ಇದೆ, ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಜಕ್ಕಹಳ್ಳಿಯಲ್ಲಿ ೩೦೦ ಎಕರೆ ಜಾಗದಲ್ಲಿ ೧೦೦ ಜನ ಜೀತವಿಮುಕ್ತರು, ಸಾಮೂಹಿಕವಾಗಿ ಬದುಕತಕ್ಕ, ಅವರು ಸಾಮೂಹಿಕವಾಗಿ ವ್ಯವಸಾಯ ಮಾಡಲು ಅವರಿಗೆ ಹೊಸ ಎತ್ತು, ಕಾಮನ್ ರಿಯರಿಂಗ್ ಹೌಸಸ್ ಇತ್ಯಾದಿ ಎಲ್ಲಾ ಕೊಟ್ಟು ಪ್ರಯೋಗ ಮಾಡುತ್ತಿದ್ದೇವೆ. ಈ ಪ್ರಯೋಗವನ್ನು ಕೇಂದ್ರದ ಅಧಿಕಾರಿಗಳೂ ಬಹಳವಾಗಿ ಮೆಚ್ಚಿದ್ದಾರೆ. ಇಡೀ ದೇಶದಾದ್ಯಂತ ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಇಂತಹ ಸಾಮೂಹಿಕ ಕಾರ್ಯಕ್ರಮವನ್ನು ಮಾಡಬೇಕೆಂಬ ದೃಷ್ಟಿ. ಇಡೀ ರಾಜ್ಯದ ಒಂದೊಂದು ಜಿಲ್ಲೆಯಲ್ಲೂ ಮಾಡಬೇಕೆಂಬ ವಿಚಾರ ಇದೆ. ಈಗ ಹಳೇ ಮೈಸೂರಿನ ಕೆಲವು ಭಾಗಗಳನ್ನು ಬಿಟ್ಟರೆ, ಉತ್ತರಭಾಗದ ಕಡೆ ಇನ್ನೂ ಆಗಿಲ್ಲ ಆ ಕಡೆ ಸಹ ಈ ಕಾರ್ಯ ಮಾಡುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಕೊನೆಯದಾಗಿ ಕುಡಿಯುವ ನೀರಿನ ಬಗ್ಗೆ ಎಲ್ಲಾ ಮಾತನಾಡಿದ್ದೇನೆ. ಕುಡಿಯುವ ನೀರಿನ ಬಗ್ಗೆ ಮಾತನಾಡುವಾಗ ಮಾನ್ಯ ಶಿವಮೂರ್ತಿಯವರು ಹೇಳಿದರು, ಪ್ರಣಾಳಿಕೆಯಲ್ಲಿ ಏನಿದೆ ಎಂದು ನೀವು ಓದಿಲ್ಲ, ನೀವು ಓದದೆ ಅಧಿಕಾರಕ್ಕೆ ಬಂದು ಕುಳಿತಿದ್ದೀರಿ ಎಂದು ಹೇಳಿದರು. ಆದರೆ ಜನತಾ–ಕ್ರಾಂತಿರಂಗದ ಪ್ರಣಾಳಿಕೆ ಬರೆದವನೇ ನಾನು. ಅವರು ಓದದೆ ಮಾತನಾಡಿದರು ಎಂದು ನನಗೆ ಸಂಕಟವಾಗುತ್ತಿದೆ. ನೀವು ಅದನ್ನು ಓದಿಲ್ಲ.

(ಮಾನ್ಯ ಸಭಾಧ್ಯಕ್ಷರು, ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಶ್ರೀ ಕೆ. ಶಿವಮೂರ್ತಿ.—ನೀರನ್ನು ಕೊಡುತ್ತೇಂಬ ವಿಚಾರ ಹೇಳುತ್ತಾ, ಕಾಲ ಬಂದಾಗ ಕೊಡುತ್ತೇವೆ ಎಂದು ಹೇಳಿದರು. ಏನು ಮಾಡಿದ್ದೀರಿ ತಾವು, ಬನ್ನಿ ನನ್ನ ಕ್ಷೇತ್ರದಲ್ಲಿ ತೋರಿಸುತ್ತೇನೆ. ಏನಾಗಿದೆ ಎಂದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯರೇ ನೀವು ಮೊದಲು ಸಭ್ಯತೆಯನ್ನು ಕಲಿತುಕೊಳ್ಳಿ.

ಶ್ರೀ ಕೆ. ಶಿವಮೂರ್ತಿ.—ತಮ್ಮಲ್ಲಿ ಎಷ್ಟು ವಿಚಾರ ಇದೆ ಅದು ನನಗೆ ಗೊತ್ತಿದೆ. ಹಳ್ಳಿಯಲ್ಲಿ ಕುಡಿಯಲಿಕ್ಕೆ ನೀರಿಲ್ಲ. ನೀರು ಕುಡಿದು ಮಾತನಾಡಿ ತಾವು ಬಹಳ ದಣಿದಿದ್ದೀರಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸಭಾಪತಿಗಳೇ, ಕುಡಿಯುವ ನೀರಿನ ವಿಷಯದಲ್ಲಿ ಒಂದು ವೈಫಲ್ಯ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ ನಾವು ಮಾತನಾಡುವಾಗ ಇವರು ಏತಕ್ಕೆ ಮಧ್ಯೆ ಬರಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ನೀರಿನ ಕಾರ್ಯಕ್ರಮದ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಬೇಕಾಗಿದೆ, ೧೯೮೧ರಲ್ಲಿ ಅಂತರಾಷ್ಟ್ರೀಯ ಕುಡಿಯುವ ನೀರಿನ ಮತ್ತು ಚರಂಡಿ ವ್ಯವಸ್ಥೆ ಬಗ್ಗೆ ಒಂದು ಕಾರ್ಯಕ್ರಮವನ್ನು ಇಡೀ ದೇಶದಾದ್ಯಂತ ಪ್ರಾರಂಭಮಾಡಲಾಯಿತು. ಅದರ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೫.೦೦೦ ಸಮಸ್ಯಾತ್ಮಕ ಹಳ್ಳಿಗಳನ್ನು ಗುರುತಿಸಿದ್ದರು ಈ ಕಾರ್ಯಕ್ರಮದ ಮೇರೆಗೆ ನೀರು ಒದಗಿಸುವ ಯೋಜನೆಯನ್ನು ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಈ ತಿಂಗಳು ಮಾರ್ಚ್ ಒಳಗೆ ಪೂರೈಸಲಿದೆ. ಅಂದರೆ ಕೇಂದ್ರ ಸರ್ಕಾರದವರು ಗೊತ್ತು ಮಾಡಿದ ಕಾಲಕ್ಕೆ ಒಂದು ವರ್ಷ ಮುಂಚಿತವಾಗಿಯೇ ಸಮಸ್ಯಾತ್ಮಕ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವಂಥ ಕಾರ್ಯಕ್ರಮವನ್ನು ಮುಗಿಸುತ್ತಿದ್ದೇವೆ. ಇವರಲ್ಲಿಟ್ಟಿದ್ದ ೧೧ ಕೋಟಿ ರೂಪಾಯಿಗಳಲ್ಲಿ ಕೇವಲ ೨ಕೋಟಿ ಮಾತ್ರ ವೆಚ್ಚವಾಗಿದೆ. ಈಗ ನಾರ್ಮಲ್ ಪ್ರೊಗ್ರಾಂ ಕಾರ್ಯಕ್ರಮದಲ್ಲಿ ಅಭಾವ ಇರತಕ್ಕ ಗ್ರಾಮಗಳಿಗೆ ಅಕ್ಟೋಬರ್ ತಿಂಗಳವರೆಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇನ್ನು ಸಮಸ್ಯಾತ್ಮಕ ಹಳ್ಳಿಗಳೆಂದು ಗುರುತಿಸಿರುವ ೯೬೦ ಹಳ್ಳಿಗಳಿಗೆ ಕುಡಿಯುವ ನೀರನ್ನು ಮಾರ್ಚ್ ಒಳಗೆ ಮುಗಿಸುವುದರಿಂದ ಆ ಕಾರ್ಯಕ್ರಮವೂ ಮುಗಿಯುತ್ತದೆ. ಅದಕ್ಕಾಗಿ ಇಟ್ಟಿರುವ ಹಣವೂ ಮುಗಿಯುತ್ತದೆ. ಪಂಚವಾರ್ಷಿಕ ಯೋಜನೆಯ ಮೇರೆಗೆ ಜಾರಿಗೆ ಬಂದಂಥ ಈ ಕಾರ್ಯಕ್ರಮವನ್ನು ಒಂದು ವರ್ಷ ಮುಂಚಿತವಾಗಿಯೇ ಮುಗಿಸಿರುವುದರಿಂದ ಕೇಂದ್ರ ಸರ್ಕಾರದವರು ನಮ್ಮ ಉತ್ತಮ ಕಾರ್ಯಕ್ಕೆ ವೆಚ್ಚ ೬೦ ಲಕ್ಷ ರೂಪಾಯಿಗಳ ಕಾಣಿ ಕೊಟ್ಟಿದ್ದಾರೆ. ಬೋನಸ್ ಕೊಟ್ಟಿದ್ದಾರೆ, ಇನ್ನು ೩೮,೦೦೦ ಹಳ್ಳಿಗಳಲ್ಲಿ ಸುಮಾರು ೫೨,೦೦೦ ಕೈ ಪಂಪುಗಳು ಇವೆ. ಇವುಗಳನ್ನು ನಿಭಾಯಿಸತಕ್ಕದ್ದು ಹೇಗೆ ? ಇದಕ್ಕಾಗಿ ಒಂದು ಕ್ರಾಸ್ ಪ್ರೋಗ್ರಾಂ ಮಾಡಿದ್ದೇವೆ. ಅಕ್ಟೋಬರ್‌ನಿಂದ ಕೆಲಸ ನಿಲ್ಲಿಸಿದ್ದೇವೆ. ಅದನ್ನು ಮುಂದುವರಿಸಲಾಗುವುದು. ೧-೨-೩ ಹೀಗೆ ಪಟ್ಟಿಗಳನ್ನು ತಯಾರು ಮಾಡಿ, ಅದರ ಪ್ರಕಾರ ೧೨,೦೦೦ ಬಾವಿಗಳನ್ನು ಈಗಾಗಲೇ ಮುಗಿಸಿದ್ದೇವೆ. ೧ನೇ ಪಟ್ಟಿಯಲ್ಲಿರತಕ್ಕ ಬಾವಿಗಳನ್ನು ತೆಗೆದುಕೊಳ್ಳಬೇಕು ಬಹುಶಃ ಶಿವಮೂರ್ತಿಯವರು ೮೨ ಬಾವಿಗಳ ಪಟ್ಟಿ ಕೊಟ್ಟಿರುವುದು ಈ ಪಟ್ಟಿಯಲ್ಲಿರಬಹುದು.' ರಾಜ್ಯದಲ್ಲಿ ೬ ಸಾವಿರ ಕೊಳವೆ ಬಾವಿಗಳ ಅಭಾವ ಏನಿದೆ, ಅವುಗಳು ಮಳೆಯ ಅಭಾವದಲ್ಲಿ ಗುರುತಿಸಿರುವ ಪಟ್ಟಿಯಲ್ಲಿವೆ. ಅವುಗಳಿಗೆ ಸಂಬಂಧಪಟ್ಟಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ನನ್ನ ಇಲಾಖೆಗೆ ಸಂಬಂಧಪಟ್ಟ ಹಣಕಾಸಿನ ವ್ಯವಸ್ಥೆಯಲ್ಲಿ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ಮತ್ತು ಅಭಾವಪೀಡಿತ ಪ್ರದೇಶಗಳ ಕಾರ್ಯಕ್ರಮಗಳು ಏನಿವೆ ಅವುಗಳ ಮೂಲಕ ಮಾಡಬೇಕಾಗುತ್ತದೆ. ಮಂತ್ರಿಮಂಡಲ ಇದಕ್ಕೆ ತಾತ್ವಿಕವಾಗಿ ಒಪ್ಪಿದೆ. ನಿರ್ಣಯ ತೆಗೆದುಕೊಂಡ ಕೂಡಲೇ ನೀರಿನ ತೊಂದರೆಯನ್ನು ಹೋಗಲಾಡಿಸುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ಮಾನ್ಯ ಸಭೆಗೆ ಭರವಸೆ ಕೊಡುತ್ತೇನೆ. ಎಲ್ಲಿ ನೀರಿನ ಅಭಾವ ಕಂಡುಬರುತ್ತದೆ. ಅಂಥ ಪ್ರದೇಶದಲ್ಲಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ನಾನು ಮಂತ್ರಿಯಾಗಿದ್ದೇನೆ. ಎನ್ನುವ ಅಹಂ ಇಲ್ಲ. ಕುಡಿಯುವ ನೀರಿನ ವಿಚಾರದಲ್ಲಿ ಯಾರೂ ರಾಜಕೀಯವನ್ನು ಹೇಳುವುದಕ್ಕೆ ಹೋಗಬೇಡಿ. ಇನ್ನತ್ತು ಸರ್ಕಾರದ ಆಜ್ಞೆ ಏನಿದೆ, ಕೊಳವೆಬಾವಿಯಾಗಲಿ ನೀರಿನ ನಳಗಳಾಗಲೀ ಮೊದಲು ಹರಿಜನ ಕೇರಿಗಳಲ್ಲಿ ಹಾಕಬೇಕೆಂದು ಇದೆ. ಅಗತ್ಯವಾದ ಬಾವಿಗಳ ಪಟ್ಟಿಯನ್ನಾಗಲೀ ನಳಗಳ ಪಟ್ಟಿಯನ್ನಾಗಲೀ ತಯಾರು ಮಾಡತಕ್ಕದ್ದು ನಮ್ಮ ಕೈಯಲ್ಲಿ ಇಲ್ಲ. ಆಯಾ ವಿಭಾಗಾಧಿಕಾರಿಗಳು ಆಯಾ ಕ್ಷೇತ್ರದ ಶಾಸಕರುಗಳ ಸಭೆಯನ್ನು ಕರೆದು, ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಗತ್ಯ ಇದೆ. ಎನ್ನುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಒಪ್ಪಿಗೆ ಪಡೆದು ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಒಪ್ಪಿಗೆ ಪಡೆದ ಮೇಲೆ ಅದರ ಪ್ರಕಾರ

ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ೫೦ ಗ್ರಾಮಗಳಿಗೆ ಕುಡಿಯುವ ನೀರಿನ ಅವಶ್ಯಕತೆ ಇದ್ದು ...ಮಗಳ ಪಟ್ಟಿಕೊಟ್ಟಿದ್ದರೆ ಅದು ನನ್ನ ತಪ್ಪಲ್ಲ.

...ೕ ಕೆ. ಶಿವಮೂರ್ತಿ.—ಸ್ವಾಮಿ, ಚಳ್ಳಕೆರೆ ತಾಲ್ಲೂಕಿಗೆ ವಾಹನ ಕಳುಹಿಸಿದ್ದೀರಿ ಆದರೆ ನನ್ನ ...ಗೆ ಏತಕ್ಕೆ ಕಳುಹಿಸಲಿಲ್ಲ ? ತಾರತಮ್ಯ ನೀತಿಯನ್ನು ಏತಕ್ಕೆ ಮಾಡುತ್ತೀರಿ ?

...ೕ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ ಸದಸ್ಯರು ಈ ರೀತಿ ಮಧ್ಯೆ ಮಧ್ಯೆ ...ಡುತ್ತಿದ್ದರೆ, ನಾನು ಉತ್ತರ ಹೇಳುವುದಕ್ಕಾಗುವುದಿಲ್ಲ.

...ೕ ಕೆ. ಶಿವಮೂರ್ತಿ.—ನನ್ನ ತಾಲ್ಲೂಕು ಬಹಳಷ್ಟು ಬರಗಾಲಕ್ಕೆ ಗುರಿಯಾಗಿರತಕ್ಕ ಪ್ರದೇಶ

...ೕ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ಆಯಾಯಾ ಕ್ಷೇತ್ರದ ಶಾಸಕರು ಕೂತು ಪಟ್ಟಿ ತಯಾರು ಮಾಡುತ್ತಾರೆ. ಅವರು ಕೊಟ್ಟಂತ ಪಟ್ಟಿಯನ್ನು ಬದಲಾಯಿಸುವುದಕ್ಕೆ ನನಗೆ ಏನೂ ಇಲ್ಲ. ಕುಡಿಯುವ ನೀರಿನ ವಿಚಾರದಲ್ಲಿ ರಾಜ್ಯದ ಅಭಿವೃದ್ಧಿ ಕಾರ್ಯಗಳಲ್ಲಿ ರಾಜ ಮಾಡತಕ್ಕಂಥ ಕೆಟ್ಟ ಪ್ರವೃತ್ತಿಗೆ ನಾನು ಹೋಗುವುದಿಲ್ಲ. ತಮ್ಮ ಪೂರ್ಣ ಸಹಕಾರವನ್ನು ...ೊಂಡು ಕಾರ್ಯಕ್ರಮ ಮಾಡುತ್ತೇನೆ. ರಿಪೇರಿ ವಿಷಯದಲ್ಲಿ ತೊಂದರೆಯಾಗಿರುವುದು ನಿಜ. ...ಕ್ಕಾಗಿ ರಿಲೀಫ್ ಹಣ ಇಟ್ಟಿದೆ. ೪ ಜನ ತಾಂತ್ರಿಕ ತಜ್ಞರನ್ನು ನೇಮಕ ಮಾಡಿ ಬಾಡಿಗೆ ...ನ್ನಾದರೂ ತೆಗೆದುಕೊಂಡು ರಾಜ್ಯದ ಎಲ್ಲಾ ಕಡೆ ಕೊಳವೆ ಬಾವಿಗಳ ಕೈಪಂಪುಗಳನ್ನು ರಿಪೇರಿ ...ಂದು ಹೇಳಿದ್ದೇನೆ. ಇವತ್ತು ಕೊಳವೆ ಬಾವಿಗಳ ರಿಪೇರಿ ಮತ್ತು ಮೆಂಟೆನೆನ್ಸ್ ವಿಷಯದಲ್ಲಿ ಮಾಡಬೇಕಾಗಿದೆ. ರಾಜ್ಯದಲ್ಲಿರತಕ್ಕ ೫೨,೦೦೦ ಕೊಳವೆ ಬಾವಿಗಳ ಪೈಕಿ ಸುಮಾರು ೨೬,೦೦೦ ...ಗೆ ಪಟೇಲ್ ಚಾವ್ಲಾ ಕೈಪಂಪುಗಳನ್ನು ಜೋಡಿಸಲಾಗಿದೆ. ಇವುಗಳನ್ನು ಸಾಯಂಕಾಲ ಮಾಡಿದರೆ ನಾಳೆ ಬೆಳಿಗ್ಗೆ ಪುನಃ ಅವು ಕೆಟ್ಟು ಹೋಗುತ್ತವೆ. ಇವುಗಳನ್ನು ಬದಲಾಯಿಸದೇ ...ರೆ ನಮಗೆ ಶಾಶ್ವತವಾದ ತಲೇ ನೋವು ಇದ್ದೇ ಇರುತ್ತದೆ. ಈಗ ರಾಜ್ಯದ ೭ ಜಿಲ್ಲೆಗಳಲ್ಲಿ ...ಶ್ ಸಹಾಯದಿಂದ ಯುನಿಸೆಫ್ ಪಂಪುಗಳನ್ನು ಹಾಕಲಿಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ...ರದಲ್ಲಿ ಸರ್ಕಾರದವರು ಯೋಜನೆ ಮಾಡುತ್ತಿದ್ದಾರೆ, ಕೆಲವು ಕಡೆ ಕೈ ಪಂಪುಗಳು ಕೆಟ್ಟು ಹೋಗಿ ...ಲವು ಕಡೆ ಕೊಳಾಯಿಗಳು ಕೆಟ್ಟು ಹೋಗಿವೆ, ಮುಂದಿನ ಎರಡು ವರ್ಷಗಳಲ್ಲಿ ಹಂತ ಹಂತವಾಗಿ ...೦ ಹಳೇ ಪಂಪುಗಳನ್ನು ಬದಲಾಯಿಸುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದರಿಂದ ೫೦ ...ಮಸ್ಯೆ ಬಗೆ ಹರಿದಂತಾಗುತ್ತದೆ, ಆಸ್ತಿಯನ್ನು ಸೃಷ್ಟಿ ಮಾಡಿದ ಮೇಲೆ ಅದು ಬಳಕೆಯಾಗದಿದ್ದರೆ ...ು ಅಪವ್ಯಯವಾಗುತ್ತದೆ, ಎನ್ನುವುದು ನನ್ನ ಅಭಿಪ್ರಾಯ. ಇವತ್ತು ಯೂನಿಸೆಫ್ ...ಗೆ ನ್ಯಾಷನಲ್ ಸ್ಟಾಂಡರ್ಡ್ ಇದೆ. ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ...೫೦ ಪಂಪುಗಳಿಗೆ ಒಬ್ಬ ಮೆಕಾನಿಕ್ ಇದ್ದರೆ, ನಮ್ಮಲ್ಲಿ ೫೦೦–೬೦೦ ಪಂಪುಗಳಿಗೆ ಒಬ್ಬ ಮೆಕಾನಿಕ್ ... ಈ ದೃಷ್ಟಿಯಿಂದಲೇ ಇದರ ಬಗ್ಗೆ ಆಳವಾಗಿ ಚಿಂತನೆಮಾಡಲು ಶಾಸಕರ ಸಮಿತಿಯನ್ನು ...ಸಾರಿ ಮಾಡಿದ್ದೆವು. ಅವರು ಮೂರು ಹಂತದ ರಿಪೇರಿ ವ್ಯವಸ್ಥೆ ಮಾಡಬೇಕೆಂದು ...ದ್ದರೆ. ಒಂದು ಗ್ರಾಮಮಟ್ಟದಲ್ಲಿ, ನನಗೆ ಒಂದು ಆಸೆ ಇದೆ, ಮಂಡಲ್ ಪಂಚಾಯಿತ್ತಿಗಳು ...ೇಲೆ ಈ ಸಮಸ್ಯೆ ಉದ್ಭವಿಸುವುದಿಲ್ಲವೆಂದು ಅಂದುಕೊಂಡಿದ್ದೇನೆ.

...ೕ ಹೆಚ್. ಡಿ. ಚೌಡಯ್ಯ.—ಅದುವರೆಗೆ ಏನು ಮಾಡುತ್ತೀರಿ ?

...ೕ ಅಬ್ದುಲ್ ನಜೀರ್‌ಸಾಬ್.—ವರದಿ ಕರಡು ತಯಾರಾಗಿದೆ.

...ೕ ಕೆ. ಶಿವಮೂರ್ತಿ.—ಸ್ವಾಮಿ. ಕುಡಿಯುವ ನೀರಿನ ವಿಚಾರ ನಾನು ಕೇಳುತ್ತಿದ್ದೇನೆ, ...ಮ್ಮ ಹಳ್ಳಿಗ ಆಧ್ಯತೆ ಕೊಟ್ಟಿಲ್ಲ.

(ಗೊಂದಲ)

...ೕ ಅಬ್ದುಲ್‌ನಜೀರ್‌ಸಾಬ್.—ಸ್ವಾಮಿ, ಇವರು ಏತಕ್ಕೆ ಹೀಗೆ ಮಾತನಾಡುತ್ತಾರೋ ... ಇವರನ್ನು ಹೇಗೆ ಸಮಾಧಾನಪಡಿಸಬೇಕೆಂದು ಗೊತ್ತಾಗುತ್ತಿಲ್ಲ, But you cannot ...ten me like this.

...ೕ ಕೆ. ಶಿವಮೂರ್ತಿ.—ಇದು ನಮ್ಮ ಹಕ್ಕು, it is our right,

SRI ABDUL NAZIR SAB.—I take strong objection. ಈ ರೀತಿ ನಡೆದು ಕೊಂಡರೆ ಹೇಗೆ......

(ಗೊಂದಲ)

(ಗಲಾಟೆ—ಗೊಂದಲ)

SRI ABDUL NAZIR SAB.—What is this ?

SRI M. VEERAPPA MOILY.—You are there to regulate.

SRI ABDUL NAZIR SAB.—I requested him.

SRI M. VEERAPPA MOILY.—Whatever the provocation, he cannot use the words against the words against the Hon. Members.

MR. SPEAKER.—Even the Hon. Members should know. ಮಾನ್ಯ ಸದಸ್ಯರುಗಳು ಪದಗಳನ್ನು ಬಳಕೆ ಮಾಡುವಾಗ ಒಂದು ಇತಿಮಿತಿಯೊಳಗೆ ಇರಬೇಕು. ಮಾನ್ಯ ಶ್ರೀ ಶಿವಮೂರ್ತಿಯವರು ಒಂದು ಸಾರಿ, ಎರಡು ಸಾರಿ, ಮೂರು ಸಾರಿ ಹೀಗೆ ಪದೇ ಪದೇ ಎದ್ದು ನಿಂತುಕೊಂಡು ಮಾತನಾಡತಕ್ಕದ್ದು ಸರಿಯಲ್ಲ. ಏನಾದರೂ ಕ್ಲಾರಿಫಿಕೇಷನ್ ಕೇಳುವ ಹಾಗಿದ್ದರೆ ಆ ಮೇಲೆ ಕೊನೆಯಲ್ಲಿ ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಕಡೆಯ ಸದಸ್ಯರುಗಳು ಸಹ ಆ ರೀತಿಯಾಗಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ರಾಜಪ್ಪ.—ನಮಗೆ ಕೇಳುವ ಹಕ್ಕು ಇದೆ ನಾವು ಕೇಳುತ್ತೇವೆ......

ಅಧ್ಯಕ್ಷರು.—ಕೇಳುವುದಕ್ಕೆ ಹಕ್ಕು ಇದ್ದರೂ ಸಹ ಅದಕ್ಕೆ ಕೆಲವೊಂದು ನಿಯಮಗಳು ಇವೆ. ಅದನ್ನು ಅನುಸರಿಸಿ ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ.—ನಾನು ನಿಯಮ ೩೩೪ರ ಕೆಳಗೆ ಪ್ರಸ್ತಾಪ ಮಾಡಿದಾಗ ಆಗಲೂ ಸಹ ನನಗೆ ಪ್ರಶ್ನೆ ಕೇಳಲು ತಾವು ಅವಕಾಶ ಮಾಡಿಕೊಡಲಿಲ್ಲ. ಈಗ ಗ್ರಾಮೀಣ ಅಭಿವೃದ್ಧಿ ಸಚಿವರು ಉತ್ತರ ನೀಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಕುಡಿಯುವುದಕ್ಕೆ ನೀರಿಲ್ಲ, ಅದನ್ನು ಮಾನ್ಯ ಮಂತ್ರಿಗಳವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಅಷ್ಟೇ, ಮತ್ತೆ ಗಲಾಟೆ ಮಾಡಬೇಕು ಎನ್ನತಕ್ಕ ಉದ್ದೇಶ ನನಗೇನೂ ಇಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಇಲ್ಲಿಯ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಒಬ್ಬರು ಎದ್ದು ನಿಂತುಕೊಂಡು ಮಾತನಾಡುತ್ತಿರುವಾಗ ಇನ್ನೊಬ್ಬರು ಎದ್ದು ಮಾತನಾಡುವ ಹಾಗಿಲ್ಲ. ಅವರು ಈಲ್ಡ್ ಆದರೆ ಮಾತ್ರ ಮಧ್ಯದಲ್ಲಿ ಮಾತನಾಡಬಹುದು ಇಲ್ಲದಿದ್ದರೆ ಇಲ್ಲ. ಆ ರೀತಿಯಾದ ನಿಯಮವಿದೆ. ಆದುದರಿಂದ ನಿಮಗೆ ಏನಾದರೂ ಕ್ಲಾರಿಫಿಕೇಷನ್ ಕೇಳುವ ಹಾಗಿದ್ದರೆ ಕೊನೆಗೆ ಅವಕಾಶ ಮಾಡಿಕೊಡುತ್ತೇನೆ. ಇದಕ್ಕೆಲ್ಲಾ ತಾವು ಎಮೋಷನ್ ಆಗಿ ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಶಿವಮೂರ್ತಿ.—ತಾವು ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡುವುದಾದರೆ ದಯವಿಟ್ಟು ಕ್ಷಮಿಸಿ, ನಾನು ಮಧ್ಯದಲ್ಲಿ ಅವರಿಗೆ ಅಡಚಣೆ ಮಾಡುವುದಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇನ್ನು ರಿಪೇರಿ ಕೆಲಸವೇನಿದೆ ಅದರ ಬಗ್ಗೆ ನನಗೆ ಅಷ್ಟು ತೃಪ್ತಿ ಇಲ್ಲ ಅದನ್ನು ನಾನು ಒಪ್ಪುತ್ತೇನೆ. ಇದಕ್ಕಾಗಿ ಒಂದು ಆದೇಶವನ್ನು ಹೊರಡಿಸಿದ್ದೇವೆ. ನಾಮಿನಲ್ ಟೈಮ್‌ನಲ್ಲಿ ಈ ಲ್ಯಾಂಡ್ ಆರ್ಮಿಯವರಿಗೆ ಟ್ರೈನಿಂಗನ್ನು ಕೊಟ್ಟು, ಅವುಗಳನ್ನು ರಿಪೇರಿ ಮಾಡುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಇದ್ದೇವೆ. ಇನ್ನು ವೆಹಿಕಲ್ಸ್ ಬಗ್ಗೆ ಮಾನ್ಯ ಸದಸ್ಯರು

ಗಳು ಹೇಳಿದ್ದಾರೆ. ವೆಹಿಕಲ್ಸನ್ನು ಒದಗಿಸಿ ಕೊಡಬೇಕೆಂದು ನಾವು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟು ರಿಪೇರಿ ಕೆಲಸವನ್ನು ಮಾಡಿಸುತ್ತೇವೆ ಇನ್ನು ಕೊನೆಯದಾಗಿ ನೀರನ್ನು ಮಾತ್ರ ಕೊಟ್ಟರಿ, ಆದರೆ ಅವು ೧ ತಿಂಗಳು, ೧೫ ದಿವಸಕ್ಕೆಲ್ಲಾ ಕೆಟ್ಟು ಹೋಗುತ್ತವೆ ಎಂದು ಹೇಳಿದ್ದಾರೆ ಅದರಲ್ಲಿ ಸತ್ಯಾಂಶವಿದೆ. ಆದುದರಿಂದ ನಾವು ಮುಂದಿನ ವರ್ಷದಿಂದ ಅದಕ್ಕೆ ಬೇಕಾಗತಕ್ಕ ಮೆಟೀರಿಯಲ್ಸ್‌ಗಳನ್ನು ಸ್ಟಾಕ್ ಇಟ್ಟುಕೊಂಡು ಅವು ಕೆಟ್ಟು ಹೋದ ಕೂಡಲೇ ರಿಪ್ಲೇಸ್ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೨೬,೦೦೦ ಹಳ್ಳಿಗಳಲ್ಲಿ, ಹ್ಯಾಮಲೆಟ್ಸ್‌ಗೆ, ಕಾಲೋನಿಗಳಿಗೆ ಬೋರ್‌ವೆಲ್‌ಗಳನ್ನು ಹಾಕುವುದರ ಜೊತೆಗೆ ಪೈಪ್ಡ್ ವಾಟರ್ ಸಪ್ಲೈ ಸ್ಕೀಂನ್ನು ಸಹ ಜಾರಿಗೆ ತಂದಿದ್ದೇವೆ. ಒಟ್ಟು ೪೮-೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪೂರ್ತಿ ಮಾಡಿದ್ದೇವೆ. ೧೯೮೦ ರಿಂದ ಏನು ಮಾಡಿದ್ದರು ಎಂದರೆ ಈ ಯೋಜನೆಗಳಿಗೆ ಬರೀ ೩ ಸಾವಿರ, ೪ ಸಾವಿರ ಟೋಕನ್ ಗ್ರಾಂಟ್ ಕೊಟ್ಟುಕೊಂಡು ಬಂದಿದ್ದರು ಆದುದರಿಂದ ೧೯೮೩ ಬಂದರೂ ಈ ಯೋಜನೆ ಮುಗಿದಿರಲಿಲ್ಲ. ಹಳ್ಳಿಗೆ ನೀರು ಕೊಡತಕ್ಕ ಕಾರ್ಯಕ್ಕೆ ತಾಂತ್ರಿಕ ಜ್ಞಾನದ ಕೊರತೆ ಇರಲಿಲ್ಲ, ಹಣದ ಕೊರತೆ ಇತ್ತು. ಆ ದೃಷ್ಟಿಯಿಂದ ನಾವು ಅಧಿಕಾರಕ್ಕೆ ಬಂದಾಗ ಯೋಚನೆ ಮಾಡಿದೆವು, ಇದಕ್ಕೆ ಎಷ್ಟು ಖರ್ಚಾಗಬಹುದೆಂದು ಅಂದಾಜು ಮಾಡಿದಾಗ ೬೦ ಕೋಟಿ ಬೇಕಾಗಬಹುದೆಂದು ಗೊತ್ತಾದಾಗ, ನಾವು ಇದನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕಾಗಿದ್ದರೆ ಬೇರೆ ಚಿಕ್ಕಪುಟ್ಟ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕಿಂತ, ಇದಕ್ಕೇ ಹೆಚ್ಚಿಗೆ ಆದ್ಯತೆ ಕೊಟ್ಟು ಮಾಡಿದ್ದೇವೆ. ಮುಂದಿನ ವರ್ಷದಿಂದ ಏನು ಮಾಡಬೇಕೆಂದಿದ್ದೇವೆ ಎಂದರೆ ಆಯಾಯ ಸ್ಥಳೀಯ ಶಾಸಕರ ಸಲಹೆಗಳನ್ನು ಪಡೆದುಕೊಂಡು ಯಾರು ಯಾರಿಗೆ ಎಷ್ಟೆಷ್ಟು ಹೊಸದಾಗಿ ಕೆಲಸಗಳನ್ನು ಕೈಗೊಳ್ಳಬೇಕಾಗಿದೆ ಯಾವುದಕ್ಕೆ ಆದ್ಯತೆ ಕೊಡಬೇಕು, ನಮ್ಮಲ್ಲಿ ಹಣವೆಷ್ಟಿದೆ ಎಂಬುದನ್ನು ನೋಡಿ ಕೈಗೊಳ್ಳುತ್ತೇವೆ. ೧ ಸಾವಿರ ಜನ ಇರತಕ್ಕ ಹಳ್ಳಿಯಲ್ಲೂ ಸಹ ನೀರಿನ ಸಮಸ್ಯೆ ಇದ್ದರೆ ೫೦೦ ಜನ ಇರತಕ್ಕ ಹಳ್ಳಿಯಲ್ಲೂ ನೀರಿನ ಸಮಸ್ಯೆ ಇದೆ. ಆ ಜನಕ್ಕೂ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿ ಕೊಡಬಾರದೇ ? ಕೆಲವು ಹಳ್ಳಿಗಳಲ್ಲಿ ೧೦ ಬೋರ್‌ವೆಲ್‌ಗಳನ್ನು ಹಾಕಿದರೂ ಸಹ ಫೈಲ್ಯೂರ್ ಆಗಿದೆ. ಒಂದು ಹನಿ ಕೂಡ ನೀರು ಸಿಗುತ್ತಿಲ್ಲ ಅದಕ್ಕೆ ಏನು ಮಾಡೋಣ ? ಅವರಿಗೆ ಏನಾದರೂ ಮಾಡಿ ನೀರನ್ನು ಕೊಡಲೇ ಬೇಕಾಗಿದೆ. ಈಗ ಬೇಸಿಗೆ ಬೇರೆ ಬರುತ್ತಿದೆ, ಬೇಸಿಗೆ ಬಂದರೆ ಊರು ಬಿಟ್ಟು ಹೋಗುತ್ತಾರೆ ಅಂಥವರಿಗೆ ನಾವು ಆದ್ಯತೆ ಕೊಟ್ಟು ಮಾಡಿಸಿ ಕೊಡಬೇಕಾಗಿದೆ. ಇನ್ನು ರಿಪೇರಿ ಮಾಡತಕ್ಕವರ ಬಗ್ಗೆ ಹೇಳುವುದಾದರೆ ೨೫೦-೩೦೦ ಬೋರ್‌ವೆಲ್ ಮತ್ತು ಪಂಪ್‌ಸೆಟ್‌ಗಳನ್ನು ರಿಪೇರಿ ಮಾಡುವುದಕ್ಕೆ ಒಬ್ಬ ಮೆಕಾನಿಕ್‌ನ್ನು ಹಾಕಬೇಕೆಂದು ಮಾಡಿದ್ದೇವೆ. ಇನ್ನು ಕೆಲವು ಸದಸ್ಯರುಗಳು ಬೋರ್‌ವೆಲ್ ಹಾಕತಕ್ಕದರಲ್ಲಿ ಅಕ್ರಮಗಳು ಆಗಿವೆಂದು ಹೇಳಿದರು ಇಲ್ಲವೆಂದು ಹೇಳುವುದಿಲ್ಲ. ಆ ದೃಷ್ಟಿಯಿಂದಲೇ ನಾವು ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಅದು ಏನೆಂದರೆ ಎಲ್ಲೆಲ್ಲಿ ಬೋರ್‌ವೆಲ್‌ಗಳನ್ನು ಹಾಕುತ್ತಾರೆ ಅಂಥಾ ಕಡೆಗಳಲ್ಲಿ ಬೋರ್‌ವೆಲ್ ಹಾಕಿದಂಥ ಸಂದರ್ಭಗಳಲ್ಲಿ ಅದು ಎಷ್ಟು ಅಡಿ ಆಳವಿದೆ, ಎಷ್ಟು ನೀರು ಇದೆ ಎನ್ನುವ ಬಗ್ಗೆ ಗ್ರಾಮದ ಮುಖಂಡರ ಎದುರಿನಲ್ಲಿ ರಿಕಾರ್ಡ್ ಮಾಡಿರಬೇಕು ಇಲ್ಲದಿದ್ದರೆ ಅವರಿಗೆ ಬಿಲ್ ಕೊಡಬಾರದೆಂದು ಹೇಳಿದ್ದೇನೆ. ತಾವು ಸಹ ಇದರ ಬಗ್ಗೆ ಸಾಕಷ್ಟು ಪ್ರಚಾರ ಮಾಡಬೇಕಾಗಿದೆ. ಇದರ ಬಗ್ಗೆ ಎಚ್ಚರಿಕೆ ವಹಿಸುವುದರ ಜೊತೆಗೆ ಇದರಲ್ಲಿ ತಮ್ಮ ಸಹಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ವಿಷಯವೇನೆಂದರೆ, ಸುಮಾರು ೬೦೦ ಉಪ್ಪು ನೀರಿನ ಸವಳು ನೀರಿನ ಹಳ್ಳಿಗಳಿವೆ. ಅಲ್ಲಿ ೧೦-೨೦ ಕಿಲೋಮೀಟರ್ ದೂರದಲ್ಲೂ ಕೂಡ ನೀರು ಸಿಕ್ಕುವುದಿಲ್ಲ. ಇದಕ್ಕೆ ಒಂದು ಬೃಹತ್ ಯೋಜನೆ ಹಾಕಬೇಕು, ಇರತಕ್ಕ ನಮ್ಮ ಸಂಪನ್ಮೂಲಗಳಿಂದ ಈ ಕಾರ್ಯಕ್ರಮ ಆಗುವುದಿಲ್ಲ. ಆದ್ದರಿಂದ ಅದಕ್ಕೆ ೭೪ ಕೋಟಿ ರೂಪಾಯಿಗಳ ಅಂದಾಜನ್ನು ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ, ಮತ್ತು ಬೇರೆ ಕಡೆಯಿಂದಲೂ ಪ್ರಯತ್ನ ಮಾಡಬೇಕಾಗಿದೆ. ಇಂತಹ ಕಾರ್ಯಕ್ರಮಕ್ಕೆ ಅನೇಕ ದೇಶಗಳು ಸಹಾಯ ಮಾಡುತ್ತವೆ. ಅಂತಹ ಸಹಾಯ ಸಿಕ್ಕಿದರೆ ಈ ಕೆಲಸ ಮಾಡಬೇಕು ಎಂದು ಇದ್ದೇವೆ, ಇಲ್ಲದೇಹೋದರೆ ನಮ್ಮ ಹಣವನ್ನು ಸ್ವಲ್ಪ ಸ್ವಲ್ಪ ಹಾಕಿ ಕಾರ್ಯಕ್ರಮ ಮಾಡಬೇಕು ಎನ್ನುವುದು ನಮ್ಮ ಒಂದು ಯೋಜನೆಯಾಗಿದೆ. ನನಗೂ ಕೂಡ ಆಸೆ ಇದೆ. ಸಾಧಾರಣ ಅಗತ್ಯಗಳಿಗೆ ಎಷ್ಟು ಬೇಕೋ ಅಷ್ಟು ಪೂರೈಸಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಶೇಕಡ ೨೫ ರಷ್ಟು, ಶೌಚಗೃಹಗಳನ್ನು ಮತ್ತು ಚರಂಡಿಗಳನ್ನು ಮಾಡಲು ಸಣ್ಣಪುಟ್ಟ ನಗರಗಳಿಗೆ, ಪುರಗಳಿಗೆ ಗ್ರಾಮಗಳಿಗೆ ನೀರು ಒದಗಿಸಲು ೮೦೦ ಕೋಟಿ ರೂಪಾಯಿಗಳು ಬೇಕು. ೨೦೦೦ ಜನ ಸಂಖ್ಯೆಗೆ ಮೇಲ್ಪಟ್ಟು ಇರತಕ್ಕಂಥ ಹಳ್ಳಿಗಳಿಗೆ ಇವುಗಳನ್ನು ಪೂರೈಸಲು ೮೦೦ ಕೋಟಿ ರೂಪಾಯಿಗಳು ಬೇಕು. ಪಿ.ಡಬ್ಲ್ಯೂ.ಡಿ.ಗೂ ಇದಕ್ಕೂ ಲಿಂಕ್ ಇರಬಹುದು. ಒಂದು ಸರ್ವ ಋತು ರಸ್ತೆಯನ್ನು ಹಳ್ಳಿಗಳಿಗೆ ಕೊಡಬೇಕಾದರೆ ೧೨೦೦ ಕೋಟಿ ರೂಪಾಯಿ ಬೇಕು. ಇವತ್ತು ಕರ್ನಾಟಕದ ೨೬

ಸಾವಿರ ಹಳ್ಳಿಗಳಿಗೆ ಸರ್ಕಾರದಿಂದ ರಸ್ತೆ ಕೊಡಬೇಕಾದರೆ ೧೨೦೦ ಕೋಟಿ ರೂಪಾಯಿಗಳಷ್ಟು ಹಣ ಬೇಕು. ೨೦೦೦ ಜನಕ್ಕೆ ಒಂದರಂತೆ ಆಸ್ಪತ್ರೆ ಕೊಡಬೇಕಾದರೆ ೩೦೦೦ ಕೋಟಿ ರೂಪಾಯಿಬೇಕು. ಇದು ಅಗತ್ಯಗಳು. ಹೊಟ್ಟೆ ಬಟ್ಟೆಗೆ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನು ಮಾಡಬೇಕು ಎನ್ನುವುದನ್ನು ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಏನು ಮಾಡಬೇಕು ಎನ್ನುವುದನ್ನು ಹೇಳುತ್ತೇನೆ. ಇದು ಒಂದು ರಾಷ್ಟ್ರೀಯ ಪ್ರಯತ್ನ ಆಗಬೇಕು, ರಾಜಕಾರಣ ಬೇಡ. ದೇಶದ ಅಭಿವೃದ್ಧಿ ಆಗಬೇಕಾದರೆ ರಾಷ್ಟ್ರೀಯ ಚಿಂತನೆ ಆಗಬೇಕಾಗಿದೆ. ಎರಡು ನಗರಸಭೆಗಳಿಗೆ ಖರ್ಚುಮಾಡಿರುವಷ್ಟು ಹಣವನ್ನು ೨೭ ಸಾವಿರ ಹಳ್ಳಿಗಳಿಗೆ ಕೊಡುವುದಕ್ಕಾಗುತ್ತಾ ಇಲ್ಲ. ಈ ದೃಷ್ಟಿಯಿಂದ ಚಿಂತನೆಯನ್ನು ಬದಲಾವಣೆ ಮಾಡಬೇಕು. ಇರತಕ್ಕ ಸಂಪನ್ಮೂಲಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗುವಂತೆ ವ್ಯವಸ್ಥೆ ಮಾಡಬೇಕು. . ತಾವು ಈ ರಿಪೇರಿ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ. ಎರಡು, ಮೂರು ತಿಂಗಳಿಂದ ರಿಪೇರಿ ಕಡೆ ಹೆಚ್ಚು ಗಮನಕೊಟ್ಟಿಲ್ಲ. ಈ ತಿಂಗಳಲ್ಲಿ ರಿಪೇರಿ ವ್ಯವಸ್ಥೆ ಮಾಡಿ ನೀರಿನ ವ್ಯವಸ್ಥೆ ಮಾಡಿಕೊಡುತ್ತೇವೆ. ಇನ್ನು ಅವರು ವಿಭಾಗಾಧಿಕಾರಿ ಬೇಕು ಎಂದು ಹೇಳಿದ್ದಾರೆ. ನಾಲ್ಕು ಸಬ್ ಡಿವಿಜನ್‌ಗಳ ಪೈಕಿ ಎರಡು ಸಬ್ ಡಿವಿಜನ್‌ಗಳಲ್ಲಿದ್ದಾರೆ. ಇನ್ನು ಎರಡು ಹುದ್ದೆಗಳನ್ನು ಕ್ರಿಯೇಟ್ ಮಾಡಬೇಕು. ಬೆಳಗಾಂ, ಮೈಸೂರು, ಬೆಂಗಳೂರು ಬಿಟ್ಟರೆ ಬಾಕಿ ಕಡೆ ಇಲ್ಲ. ಇನ್ನು ಮಂಡ್ಯ ಮತ್ತು ಕೂರ್ಗ್ ಇದೆ. ಈ ಒಂದು ವ್ಯವಸ್ಥೆಯನ್ನು ಮುಂದಿನ ವರ್ಷ ಮಾಡಬೇಕಾಗಿದೆ ಪ್ರೊಸೆಸ್ ಮಾಡಿ ಮಂತ್ರಿಮಂಡಲದ ನಿರ್ಧಾರಕ್ಕೆ ಕಳಿಸಿದೆ, ಅಲ್ಲಿ ಒಪ್ಪಿದ ತಕ್ಷಣ ಮಾಡುತ್ತೇವೆ. ಇಷ್ಟು ಹೇಳಿ. ತಮ್ಮೆಲ್ಲರಿಗೂ ವಂದಿಸಿ, ನಮ್ಮ ಬೇಡಿಕೆಗಳನ್ನು ಒಪ್ಪಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ.—೮೨ ಕಡೆ ಬೋರ್‌ವೆಲ್ ಹಾಕಬೇಕು ಎಂಬ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದೇನೆ. ಮಾನ್ಯ ಸಚಿವರೂ ಹೇಳಿದ್ದಾರೆ. ಹಾಕಲಿಕ್ಕೆ ಆಗುವುದಿಲ್ಲ ಎನ್ನುವ ವಾದ ಇಟ್ಟುಕೊಂಡು ಹೇಳಿದ್ದಾರೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿ ದಾವಣಗೆರೆ ತಾಲ್ಲೂಕು ಮತ್ತು ಚಿತ್ರದುರ್ಗ ತಾಲ್ಲೂಕು ಈ ಎರಡು ತಾಲ್ಲೂಕುಗಳಲ್ಲೂ ಅಧಿಕಾರಿಗಳು ಕೆಲಸ ಮಾಡಬೇಕು. ದಾವಣಗೆರೆ ತಾಲ್ಲೂಕಿನ ಕಾಲು ಭಾಗ ನನ್ನ ಕ್ಷೇತ್ರಕ್ಕೆ ಸೇರಿಕೊಂಡಿದೆ, ಚಿತ್ರದುರ್ಗದ ತಾಲ್ಲೂಕಿನ ಮುಕ್ಕಾಲುಭಾಗ ನನ್ನ ಕ್ಷೇತ್ರಕ್ಕೆ ಸೇರಿಕೊಂಡಿದೆ. ಹೀಗಾಗಿ ಈ ಎರಡು ತಾಲ್ಲೂಕುಗಳಲ್ಲಿ ಅಧಿಕಾರಿಗಳು ಕೆಲಸಮಾಡಬೇಕಾಗಿದೆ. ೮೨ ಕಡೆ ಬೋರ್‌ವೆಲ್ ಹಾಕಬೇಕು ಎಂದು ಹೇಳಿದ್ದೇನೆ. ಮತ್ತೆ ರಿಪೇರಿ ವ್ಯವಸ್ಥೆ ಮಾಡಬೇಕು ಮತ್ತು ವೆಹಿಕಲ್ಸ್ ಅಗತ್ಯ ಇದೆ, ಅದನ್ನು ಪೂರೈಸಬೇಕು.

ಶ್ರೀ ಎ. ಮುನಿಯಪ್ಪ.—ಅವರು ಮೊದಲು ಭಾಷಣ ಮಾಡಿದ್ದಾರೆ, ತಿರುಗಿ ಭಾಷಣ ಮಾಡುತ್ತಿದ್ದಾರೆ. ನಾವು ಭಾಷಣ ಮಾಡಿಲ್ಲ. ನಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೂ ಅವಕಾಶವಿಲ್ಲದೆ ಅವರೇ ಮಾತನಾಡುತ್ತಾ ಇದ್ದರೆ ಗತಿಯೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರು ೮೨ ಬೋರ್‌ವೆಲ್ ಮಾಡಬೇಕು ಎಂದು ಹೇಳಿದ್ದಾರೆ. ಅದು ಸರ್ಕಾರದ ಮಟ್ಟದಲ್ಲಿಲ್ಲ ಡಿಡಿಸಿ ಅಪ್ರೂವ್ ಮಾಡಿದರೆ ಈ ಎರಡು ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಮಾಡತಕ್ಕಂಥ ಆದೇಶ ಕೊಡುವ ಕಾರ್ಯವನ್ನು ಮಾಡುತ್ತೇನೆ. ಮತ್ತೆ ಅವರು ರಿಪೇರಿ ಬಗ್ಗೆ ಹೇಳಿದ್ದಾರೆ. ಭರಮಸಾಗರಕ್ಕೆ ಈಗಾಗಲೇ ಆದೇಶ ಕಳಿಸಿದ್ದೇನೆ. ವೆಹಿಕಲ್ ಕೊಟ್ಟು ರಿಪೇರಿ ಮಾಡತಕ್ಕ ಕೆಲಸಮಾಡಿ ಎಂದು ಹೇಳಿದ್ದೇನೆ.

ಶ್ರೀ ಕೆ. ಶಿವಮೂರ್ತಿ.—ನಮ್ಮಲ್ಲಿ ೧೧೧೨ ಜನ ಜೀತದಾಳುಗಳು ಎಂದು ಗುರುತಿಸಿ ದಾಖಲೆಗಳನ್ನು ಕಳಿಸಿಕೊಟ್ಟಿದ್ದೇವೆ. ಅವರಿಗೆ ಪರಿಹಾರ ಕೊಡುವ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಮೋಟಾರುಗಳು ಸುಟ್ಟು ಹೋಗುತ್ತಿವೆ. ಭರಮಸಾಗರ, ಸಿರಿಗೆರೆ ಮುಂತಾದ ಕಡೆಗಳಲ್ಲಿ ಬಹಳ ಬೇಗ ಕೆಡುತ್ತಿವೆ. ಅವರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತೀರಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಆದಷ್ಟು ಶೀಘ್ರವಾಗಿ ಪರಿಶೀಲಿಸಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಪಿ. ಹೆಚ್. ಇ. ನಲ್ಲಿ ಮಂಡ್ಯ, ಕೋಲಾರ ಕೂರ್ಗ್‌ನಲ್ಲಿ, ಸಬ್‌ಡಿವಿಜನ್ ಇವೆ. ಆದ್ದರಿಂದ ಪಾಳಪಳ್ಳಿಯಲ್ಲಿ ಪಿ. ಹೆಚ್. ಇ. ಸಬ್ ಡಿವಿಜನ್ ಇಲ್ಲದೆ ತೊಂದರೆಯಾಗಿದೆ ಅಲ್ಲಿಯೂ ಒಂದು ಸಬ್ ಡಿವಿಜನ್ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದಕ್ಕೆ ಕ್ಯಾಬಿನೇಟ್ ಅಪ್ರೂವಲ್ ಆಗಬೇಕು.

ಡಾ।। ವಿ. ಎಸ್. ಆಚಾರ್ಯ.—ನಾನು ಮಾತನಾಡಲಿಲ್ಲ. ಮಾನ್ಯ ಮಂತ್ರಿಗಳು ಒಳ್ಳೆಯ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಇಷ್ಟೆ. ನಮ್ಮಲ್ಲಿರುವ ಕೆಲವು ಜಿಲ್ಲೆಗಳಲ್ಲಿ ಬೋರ್‌ವೆಲ್‌ನಲ್ಲಿ ನೀರು ಸರಿಯಾಗಿ ಬರುವುದಿಲ್ಲ, ಅಂತಹ ಕಡೆಗಳಲ್ಲಿ ಓಪನ್ ವೆಲ್ ಕೊಡುವ ಬಗ್ಗೆ ತಾವು ತುಂಬ ರೆಡ್ ಟೇಪಿಸಂ ಮಾಡಬಾರದು.

ಅಧ್ಯಕ್ಷರು.—ನಿಮ್ಮ ಜೊತೆಗೆ ನಾನೂ ಇದ್ದೇನೆ.

ಡಾ।। ವಿ. ಎಸ್. ಆಚಾರ್ಯ.—ಎರಡನೆಯದಾಗಿ, ಎನ್. ಆರ್. ಇ. ಪಿ. ಪ್ರಕಾರ ರಾಜ್ಯ ಮಟ್ಟದಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಎಲ್ಲಾ ಜಿಲ್ಲೆಗಳಲ್ಲಿ ಎನ್. ಆರ್. ಇ. ಪಿ. ಯ ಉದ್ದೇಶವನ್ನು ಪೂರೈಸಲಿಕ್ಕೆ ಸಾಧ್ಯವಾಗಿಲ್ಲ. ಅದರ ಕಡೆ ಗಮನಕೊಡಬೇಕು. ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಸರಿಯಾಗಿ ಆಗುವಂತೆ ಗಮನಕೊಡಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಓಪನ್ ವೆಲ್ಸ್‌ಗೆ ೭೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಕೊಡಗು, ಉತ್ತರಕನ್ನಡ ಜಿಲ್ಲೆಗಳಿಗೆ ಹೆಚ್ಚು ಹಣ ಬೇಕಾದರೆ ಮತ್ತು ಓಪನ್ ವೆಲ್ಸ್ ಬೇಕಾದರೆ ಮಾಡಿಕೊಡುವುದಕ್ಕೆ ಸಿದ್ಧನಿದ್ದೇನೆ. ಆಮೇಲೆ ಎನ್. ಆರ್. ಇ. ಪಿ. ಬಗ್ಗೆ ಹೇಳಿದರು ೫೦ ಭಾಗ ಕೂಲಿ ೫೦ ಭಾಗ ಪದಾರ್ಥ ಇದೆ ಆಯಾ ಜಿಲ್ಲೆಗೆ ಅನುಸಾರವಾಗಿ ತಯಾರು ಮಾಡಿದ ಯೋಜನೆಗೆ ನಾವು ಒಪ್ಪುತ್ತೇವೆ.

ಡಾ।। ವಿ. ಎಸ್. ಆಚಾರ್ಯ.—ದುರಸ್ತಿ ಕಾರ್ಯ ಮಾಡಬೇಕಾಗಿದೆ.

ಶ್ರೀ ಪಂಪಾಪತಿ.—ನಾನು ಹೆಚ್ಚಿಗೆ ಹೇಳುವುದಿಲ್ಲ. ನಮ್ಮ ಸಚಿವರು ಅನೇಕ ವಿಷಯಗಳನ್ನು ಹೇಳಿದರು. ೩೬ ವರ್ಷಗಳಿಂದ ಏನೂ ಆಗಲಿಲ್ಲ ನಿಜ. ಆದಷ್ಟು ಬೇಗ ಅಭಿವೃದ್ಧಿ ಮಾಡಬೇಕು ಎಂಬ ಯೋಚನೆ ಇದೆ. ಅದಕ್ಕೆ ನನ್ನದೊಂದು ಸಲಹೆ. ಏನೆಂದರೆ, ನಮ್ಮ ದೇಶ ಸ್ವಾತಂತ್ರ್ಯ ಪಡೆದ ನಂತರ, ಚೀನಾದೇಶ ಏನಿದೆ, ಆ ಚೀನಾದೇಶ ನಮಗಿಂತಲೂ ಹೆಚ್ಚಿನ ಜನಸಂಖ್ಯೆ ಇರತಕ್ಕಂಥ ದೇಶ. ಆದರೂ ಆ ದೇಶ ಹೆಚ್ಚಾಗಿ ಅಭಿವೃದ್ಧಿ ಹೊಂದಿದೆ. ಈ ಬಗ್ಗೆ ಮಾನ್ಯ ಜೆ. ಹೆಚ್. ಪಟೇಲರು ಹೇಳಿದರು. ಆದುದರಿಂದ ತಾವು ಆ ದೇಶವನ್ನು ನೋಡಿಕೊಂಡು ಬಂದು ಬಿಟ್ಟು ನಮ್ಮ ದೇಶವನ್ನು ಆದಷ್ಟು ಜಾಗ್ರತೆ ಅಭಿವೃದ್ಧಿ ಪಡಿಸತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ತಾವು ಕಳಿಸಿಕೊಟ್ಟರೆ ನಾನು ಹೋಗುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ನನ್ನ ಕ್ಷೇತ್ರ ಹಳ್ಳಿಯೂ ಅಲ್ಲ, ಪಟ್ಟಣವೂ ಅಲ್ಲ. ಅಲ್ಲಿ ಪೈಪ್ಡ್ ವಾಟರ್ ಸ್ಕೀಂಗೆ ಪ್ರಯಾರಿಟಿ ಕೊಡದೇಹೋದರೆ ಜನ ಸತ್ತುಹೋಗುತ್ತಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಿಮ್ಮನ್ನು ಕರೆದು ಕೇಳಿ ಮಾಡುತ್ತೇನೆ. ಅವರ ಜೊತೆಗೆ ಸುತ್ತಿ ಬಂದಿದ್ದೇನೆ, ಇನ್ನೊಂದು ಸಾರಿ ಬರುತ್ತೇನೆ.

ಶ್ರೀ ಪಂಪಾಪತಿ.—ಚೀನಾದೇಶಕ್ಕೆ ಹೋಗಿ ನೋಡಿಕೊಂಡು ಬಂದು ಅಭಿವೃದ್ಧಿ ಪಡಿಸುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಇಲ್ಲಿಂದ ಕಳಿಸಿದರೆ ಹೋಗುತ್ತೇನೆ.

ಶ್ರೀ ಪಂಪಾಪತಿ.—ಅಮೇರಿಕ, ಲಂಡನ್‌ಗೆ ಹೋಗುತ್ತಾರೆ. ಚೀನಾದೇಶಕ್ಕೆ ಹೋಗುವುದಕ್ಕೆ ಏನು ಸ್ವಾಮಿ. ಅದು ಬೇಕಾದಷ್ಟು ಅಭಿವೃದ್ಧಿ ಹೊಂದಿದೆ. ನಮ್ಮಲ್ಲಿ ಹಣ ಇಲ್ಲ, ಏನು ಮಾಡುವುದಕ್ಕಾಗುವುದಿಲ್ಲ ಎಂದು ಅಸಹಾಯಕತೆಯನ್ನು ತೋರಿಸುತ್ತಾರೆ. ಆದ್ದರಿಂದ ದಯವಿಟ್ಟು ಚೀನಾದೇಶವನ್ನು ನೋಡಿಕೊಂಡು ಬನ್ನಿ.

ಅಧ್ಯಕ್ಷರು.—ನಾವೂ ನೀವೂ ಸೇರಿ ಕಳಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದಿದ್ದೇನೆ. ಅದೇನೆಂದರೆ, ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ಗೆ ಅನೇಕ ಮೈನರ್ ಇರಿಗೇಷನ್ ಕೆಲಸ ಹಾಗೂ ಕೆಲವು ಕಡೆ ರೋಡ್ಸ್ ಕೆಲಸಗಳನ್ನು ವಹಿಸಿಕೊಟ್ಟಿದ್ದೀರಿ. ಆದರೆ ಈ ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ನಿಂದ ಯಾವ ಕೆಲಸ ಕೂಡ ಆಗುತ್ತಿಲ್ಲ. ಏಕೆಂದರೆ ಇದು ಸ್ವಲ್ಪ ಘನತೆಯ ಪ್ರಶ್ನೆ ಆಗಿದೆ ಅಂತ ಕಾಣುತ್ತೆ. ಇವತ್ತು ಇರತಕ್ಕ ಮುಖ್ಯಮಂತ್ರಿಗಳು, ಹಿಂದೆ

೫-೩೦ ಪಿ.ಎಂ.

ರೂರಲ್ ಡೆವಲಪ್‌ಮೆಂಟ್ ಅಂಡ್ ಕೋ-ಆಪರೇಷನ್ ಮಂತ್ರಿಗಳಾಗಿದ್ದಾಗ ಹುಟ್ಟಿಸಿದಂತಹದು. ಅವರ ನಂತರವೂ ಇದು ಹೇಗೋ ನಡೆದುಕೊಂಡು ಬಂತು. ಹಿಂದೆ ಶ್ರೀಮಾನ್ ದೇವರಾಜ ಅರಸ್‌ರವರು ಇದ್ದ ಕಾಲದಲ್ಲೂ ನಾವು ಇದನ್ನು ವಿರೋಧ ಮಾಡಿದ್ದೆವು. ಏಕೆಂದರೆ ಈ ಸಂಸ್ಥೆಗೆ ಯಾವುದೇ ಕೆಲಸ ಕೊಟ್ಟರೂ ಸರಿಯಾಗಿ ಮಾಡುತ್ತಿಲ್ಲ. ಆಮೇಲೆ ತಿರುಗಿ ರಿಪೇರಿ ಮಾಡಬೇಕೆಂದರೆ ಅದು ನಮ್ಮ ಕೆಲಸವಲ್ಲ, ಪಿ.ಡಬ್ಲ್ಯು.ಡಿ.ಯ ಜವಾಬ್ದಾರಿ ಅಂತ ಹೇಳುತ್ತಾರೆ. ಉದಾಹರಣೆಗಾಗಿ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಗಣಾಪುರ ಅಣೆಕಟ್ಟು ಅಂತ ಇದೆ. ಸರ್ಕಾರದಲ್ಲಿ ಒಬ್ಬರಿಂದೊಬ್ಬರಿಗೆ ಸಮನ್ವಯ ಇಲ್ಲ ಅನ್ನುವುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಆ ಅಣೆಕಟ್ಟು ಮಂಜೂರಾಗಿ ೨ ವರ್ಷಕ್ಕೆ ಬರುತ್ತಿದೆ. ಆದರೆ ಇಲ್ಲಿಯವರೆಗೂ ಆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಈ ಮಾತನ್ನು ನಾನೊಬ್ಬ ಮಾತ್ರ ಹೇಳುವುದಿಲ್ಲ. ಆ ಕಡೆ ಕುಳಿತಂತಹ ಸದಸ್ಯರೂ ಈ ಮಾತನ್ನು ಹೇಳುತ್ತಾರೆ. ಅವರಿಗೆ ಕೊಟ್ಟಂತಹ ಕೆಲಸವನ್ನು ವಿತ್‌ಡ್ರಾ ಮಾಡಿಕೊಂಡು ರೆಗ್ಯೂಲರ್ ಪಿ.ಡಬ್ಲ್ಯು.ಡಿ.ಗಾದರೂ ಕೊಡಿ. ಅಥವಾ ಇನ್ನಾವುದಾದರೂ ಬೇರೆ ಏಜೆನ್ಸಿಗಾದರೂ ಕೊಟ್ಟರೆ, ಆವಾಗ ತ್ವರಿತಗತಿಯಿಂದ ಕೆಲಸಗಳಾಗುತ್ತವೆ. ಇಲ್ಲದಿದ್ದರೆ ಇಲ್ಲ. ಇದರ ಬಗ್ಗೆ ತಮ್ಮ ನಿರ್ಧಾರವೇನೆಂಬುದನ್ನು ಹೇಳಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಅವರು ಹೇಳಿದ ವಿಚಾರದ ಬಗ್ಗೆ ನಾನು ಈಗಾಗಲೇ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಅವರು ಯಾವುದೋ ಕಲ್ಪನಾ ಲೋಕದಲ್ಲಿದ್ದಾರೆ. ಅವರು ಹೇಳಿದಂತಹ ಕೆಲಸವನ್ನು ಲ್ಯಾಂಡ್ ಆರ್ಮಿಗೆ ವಹಿಸಿಕೊಟ್ಟಿಲ್ಲ. ಲ್ಯಾಂಡ್ ಆರ್ಮಿಗೆ ಏನು ಕೆಲಸವನ್ನು ಕೊಟ್ಟಿದ್ದೇವೆ, ಅದರ ವಿರೋಧವಾಗಿ ಕಂಟ್ರಾಕ್ಟುದಾರರ ಪರವಾಗಿ ಲಾಬಿಯಾಗುತ್ತಿದೆ. ಇದು ಎಲ್ಲಾ ಕಡೆ ಇದನ್ನೇ ಹೇಳುತ್ತಿದ್ದಾರೆ. ಅದು ಆಗುವುದಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಟ್ಟು, ಭೂ ಸೇನೆಯ ವತಿಯಿಂದಲೇ ಮಾಡಬೇಕು. ಅದಕ್ಕೆ ಬೇಕಾದ ಎಲ್ಲ ಶಕ್ತಿಯನ್ನು ಕೊಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳುವಂತಹ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ.

SRI M. MALLIKARJUNA KHARGE.—This is what the P.W.D. officials told me. They have started that this work has been entrusted to Land Army and that is why we have not been able to take up.

ಶ್ರೀ ಅಬ್ದುಲ್ ನಜೀರ್ ಸಾಬ್.—ವಿಷಯವನ್ನು ಪೂರ್ಣವಾಗಿ ಹೇಳಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳ ಸಭೆಯಲ್ಲೇ ಮಾತನಾಡಿ ನಿಮಗೆ ಭರವಸೆ ಕೊಟ್ಟಿದ್ದೇನೆ. ಇದಕ್ಕಿಂತ ಹೆಚ್ಚು ಇನ್ನೇನು ಮಾಡಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ.ಜಿ. ಸತ್ಯನಾರಾಯಣ.—ಬಿ.ಡಿ.ಓ. ಅಧಿಕಾರಿಗಳನ್ನಾಗಿ, ಬೇರೆ ಇಲಾಖೆಯ ವತಿಯಿಂದ ಎರವಲು ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದಾರೆ. ಕೃಷಿ ಇಲಾಖೆಯಿಂದ ಹಾಗೂ ಸಹಕಾರ ಇಲಾಖೆಯಿಂದ ತೆಗೆದುಕೊಂಡಿದ್ದಾರೆ. ಅಲ್ಲಿಂದ ಬಂದಂತಹವರು ಏನು ಸಿಗುತ್ತದೆ? ಏನನ್ನು ದೋಚಿಕೊಂಡು ಹೋಗೋಣ? ಎಂಬುದನ್ನೇ ಯೋಚನೆ ಮಾಡುತ್ತಿದ್ದಾರೆಯೇ, ಹೊರತು

ಅಭಿವೃದ್ಧಿ ಕೆಲಸ ಕಾರ್ಯಗಳ ಕಡೆಗೆ ಅವರ ಗಮನವೇ ಇರುವುದಿಲ್ಲ. ಆದ್ದರಿಂದ ನೇರವಾಗಿ ಬಿ.ಡಿ.ಒ.ಗಳನ್ನು ನಿಮ್ಮ ಇಲಾಖೆಯ ವತಿಯಿಂದ ನೇಮಿಸಿಕೊಂಡು ಅವರ ಕಡೆಯಿಂದ ಹೆಚ್ಚಿನ ಅನುಕೂಲದ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಮ್ಮ ಅಭಿವೃದ್ಧಿ ಇಲಾಖೆಯಲ್ಲಿ ಈಗ ಇರತಕ್ಕಂತಹ ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟು ಮತ್ತೆ ನೇರವಾಗಿ ಬಿ.ಡಿ.ಒ.ಗಳನ್ನು ನೇಮಕ ಮಾಡಿಕೊಳ್ಳತಕ್ಕಂತಹ ಸಲಹೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಮುಂದಿನ ವರ್ಷ ಅದನ್ನು ಜಾರಿಗೊಳಿಸುವಂತಹ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಎನ್. ಆರ್. ಇ. ಪಿ.ಯಲ್ಲಿ ಬೇಗ ಕೆಲಸವನ್ನು ಮಾಡಿಸುವುದಕ್ಕೆ ಏರ್ಪಾಡು ಮಾಡಬೇಕು. ವಿದ್ಯಾರ್ಥಿನಿಲಯಗಳ ಹತ್ತಿರ, ಹೈಸ್ಕೂಲುಗಳ ಹತ್ತಿರ ಪ್ರತ್ಯೇಕವಾಗಿ ಬೋರ್‌ವೆಲ್‌ಗಳನ್ನು ಹಾಕಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ನಮ್ಮ ತಾಲ್ಲೂಕಿನ ಮಳೆಬೆನ್ನೂರು ಗ್ರಾಮ ಅಂತ ಇದೆ. ಸುಮಾರು ೨೦ ಸಾವಿರಕ್ಕೆ ಪ್ರಜಾಸಂಖ್ಯೆ ಇರತಕ್ಕಂತಹ ಗ್ರಾಮ. ಅಲ್ಲೊಂದು ಬೋರ್‌ವೆಲ್ ಇದೆ. ಅಲ್ಲೊಂದು ಓವರ್‌ಹೆಡ್ ಟ್ಯಾಂಕ್ ಅನ್ನು ಕಟ್ಟಿಸಿ ಕೊಳಾಯಿಗಳ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಇದು ಬಹಳ ವರ್ಷದ ಹಿಂದಿನಿಂದಲೂ ಈ ಒಂದು ಬೇಡಿಕೆ ಇದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—ಹಳೇ ಬಾವಿಗಳನ್ನು ತೋಡಿದ್ದಾರೆ. ನೀರು ಚೆನ್ನಾಗಿದೆ. ಅಲ್ಲೊಂದು ಓವರ್‌ಹೆಡ್ ಟ್ಯಾಂಕ್ ಅನ್ನು ಕಟ್ಟಿಕೊಟ್ಟು. ಅದರ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಅವರ ತಾಲ್ಲೂಕಿನಲ್ಲಿ ಆಗಬೇಕಾಗಿರುವಂತಹ ಕೆಲಸಗಳ ಬಗ್ಗೆ ನನ್ನೊಡನೆ ಚರ್ಚೆ ಮಾಡಿದರೆ, ಆ ಸಮಸ್ಯೆಯನ್ನು ಬಗೆಹರಿಸಿಕೊಡುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—ತೆರೆದ ಬಾವಿಗಳು ಇದ್ದು ಅವುಗಳನ್ನು ಬಹಳ ವರ್ಷಗಳ ಹಿಂದಿನಿಂದಲೂ ರಿಪೇರಿ ಮಾಡಿರುವುದಿಲ್ಲ. ಅಂತಹ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ಎನ್.ಆರ್.ಇ.ಪಿ.ಯಲ್ಲಿ ಅವಕಾಶ ಮಾಡಿಕೊಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಎನ್.ಆರ್.ಇ.ಪಿ.ಯಲ್ಲಿ ರಿಪೇರಿ ಮಾಡುವುದಕ್ಕೆ ಅವಕಾಶ ಇಲ್ಲ. ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ಕಾರ್ಯಕ್ರಮಗಳನ್ನು ಆ ಬಗ್ಗೆ ಮಾಡಬೇಕಾಗಿದೆ. ಆದರೆ ಎಲ್.ಆರ್. ಗ್ರಾಂಟ್‌ನಿಂದ ಈ ಕೆಲಸವನ್ನು ಮಾಡಿಕೊಡುತ್ತೇನೆ.

ಶ್ರೀ ವಿ. ಮುನಿಯಪ್ಪ.—ಐ.ಆರ್.ಡಿ.ಪಿ.ಯ ಯೋಜನೆಯಲ್ಲಿ ಬಹಳ ಅನ್ಯಾಯ, ಅಧರ್ಮ ನಡೆದುಹೋಗಿಬಿಟ್ಟಿವೆ. ಈ ಯೋಜನೆಯಿಂದ ಬಡತನದ ರೇಖೆಯಿಂದ ಮೇಲೆ ಬರುತ್ತಾರೆಂದು ನಾವು ತಿಳಿದುಕೊಂಡಿದ್ದರೆ, ಅವರು ತೀರ ಕೆಳಮಟ್ಟಕ್ಕೆ ಬಂದಿದ್ದಾರೆ ಅಂತ ಹೇಳುತ್ತಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಐ.ಆರ್.ಡಿ.ಪಿ ಯೋಜನೆಯಲ್ಲಿ ಮಾಡಿರತಕ್ಕ ಅನ್ಯಾಯ ಇನ್ನೆಲ್ಲೂ ಮಾಡಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇನ್ನು ಮುಂದಾದರೂ ಇದನ್ನು ಪರಿಹರಿಸಬೇಕೆಂದು ಈಗಾಗಲೇ ಅಲ್ಲಲ್ಲಿ ಆಗಿರತಕ್ಕಂತಹ ಅನ್ಯಾಯಗಳನ್ನು ಸರ್ಕಾರದ ಗಮನಕ್ಕೆ ತಿಳಿಸಬೇಕೆಂದು ತಾಲ್ಲೂಕು ಮಟ್ಟದಲ್ಲಿ ಪ್ರತಿಭಟನಾ ಸಭೆಗಳನ್ನು ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಇದಕ್ಕೆ ತಮ್ಮ ಸಲಹೆ ಏನು?

ಶ್ರೀ ಅಬ್ದುಲ್ ನಜೀರ್ ಸಾಬ್.—ನನ್ನ ಗಮನಕ್ಕೆ ಇಂತಹ ದುರುಪಯೋಗವಾಗಿದೆ ಎಂದು ತನ್ನಿ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪುತ್ತೇನೆ. ಈ ರೀತಿ ಇಂತಹ ಕಡೆ ಆಗಿದೆ ಎಂದು ನನ್ನ ಗಮನಕ್ಕೆ ತಂದರೆ ಕೂಡಲೇ ಆ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ.—ನಮ್ಮ ಜಿಲ್ಲೆಯಲ್ಲಿರತಕ್ಕ ವಿಶೇಷ ಜಿಲ್ಲಾಧಿಕಾರಿಗಳು ಬಹಳ ಅನ್ಯಾಯ ಮಾಡಿದ್ದಾರೆ. ಇದರಿಂದಾಗಿ ನಾವು ಬಹಳ ನೊಂದುಬಿಟ್ಟಿದ್ದೇವೆ. ಬಡವರಿಗೆ ಅನ್ಯಾಯವಾಗಿದೆ. ಹರಿಜನ–ಗಿರಿಜನರಿಗೆ ಅನ್ಯಾಯವಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನನಗೆ ಇಂತಹ ಕಡೆ ಈ ರೀತಿಯಾದ ಘಟನೆಯಾಗಿದೆ ಎಂದು ಸ್ಪಷ್ಟವಾಗಿ ನನ್ನ ಗಮನಕ್ಕೆ ತಂದರೆ ಕೂಡಲೇ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ.—ವಿನಾನಿಸಹಳ್ಳಿ ಹಾಗೂ ಸಿಡುಗಿನ ಊರು, ಹಳ್ಳಿಗಳಿಗೆ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಮಾಡಬೇಕೆಂದು ಬಹಳ ವರ್ಷಗಳ ಹಿಂದಿನಿಂದಲೂ ಬೇಡಿಕೆ ಇದೆ. ಅಲ್ಲಿ ಈಗ ಕುಡಿಯುತ್ತಿರತಕ್ಕಂತಹ ನೀರು ಯೋಗ್ಯವಾಗಿಲ್ಲವೆಂದು ವರದಿ ಕೂಡ ಸರ್ಕಾರಕ್ಕೆ ಬಂದಿದೆ. ಆದರೆ ಇದುವರೆವಿಗೂ ಆ ಕೆಲಸ ಆಗಿಲ್ಲ. ಪ್ರತಿ ಸಾರಿ ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಈ ವಿಷಯದ ಬಗ್ಗೆ ಕೇಳಿದಾಗ ಅಧಿಕಾರಿಗಳು ಹಣ ಇಲ್ಲವೆಂದು ಯಾವಾಗಲೂ ಹೇಳುತ್ತಿರುತ್ತಾರೆ. ಬಹಳ ವರ್ಷದಿಂದಲೂ ಇದನ್ನು ಆ ಗ್ರಾಮದ ಜನರು ಕೇಳುತ್ತಿದ್ದಾರೆ. ಯಾವುದಾದರೂ ಸ್ಪೆಷಲ್ ಗ್ರಾಂಟನ್ನು ಕೊಟ್ಟು ಆ ಕೆಲಸವನ್ನು ಮಾಡುತ್ತೀರೋ ಅಥವಾ ಇಲ್ಲವೋ ದಯಮಾಡಿ ತಿಳಿಸಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೂಡಲೇ ಯಾವುದಾದರೂ ಮೂಲದಿಂದ ಆ ವೆಚ್ಚವನ್ನು ಹಾಕಿ ಒಳ್ಳೆಯ ನೀರನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಮುಖ್ಯಮಂತ್ರಿಗಳು ಗ್ರಾಮಾಂತರ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಒಂದು ನೀತಿಯನ್ನು ಅನುಸರಿಸುತ್ತೇವೆಂದು ಹೇಳಿದ್ದಾರೆ. ಅದೇನೆಂದರೆ ಪ್ರಜಾಸಂಖ್ಯೆಗನುಗುಣವಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದರ ಸ್ಪಷ್ಟೀಕರಣವನ್ನು ತಾವು ಕೊಡಬೇಕು. ನಮ್ಮ ಕ್ಷೇತ್ರದಲ್ಲಿ ೯ ಸಾವಿರ ಇರುವ ಊರು, ೬ ಸಾವಿರ ಪ್ರಜಾಸಂಖ್ಯೆ ಇರುವ ಊರು ಇದ್ದರೂ ಇದುವರೆವಿಗೂ ಪೈಪ್ಡ್ ವಾಟರ್ ಸಪ್ಲೈ ಕೊಡುವ ಯೋಜನೆಯನ್ನು ಜಾರಿಗೆ ತರುತ್ತೀರಾ? ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದೆಲ್ಲಾ ನಿಜ, ಹಿಂದೆ ಏನು ಮಾಡಿದ್ದಾರೆ ಅದರ ಬಗ್ಗೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಈಗ ೨ ಸಾವಿರ ಪ್ರಜಾಸಂಖ್ಯೆಗಿಂತ ಜಾಸ್ತಿ ಇರತಕ್ಕಂತಹ ಗ್ರಾಮಗಳಿಗೆ ನಳದ ಯೋಜನೆಯನ್ನು ಮಾಡಬೇಕೆಂದು ಈಗಾಗಲೇ ಯೋಚನೆ ಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಇವತ್ತಿನ ದಿವಸ ಹಳ್ಳಿಗಳ ಕಡೆ ಏನೋ ಬೋರ್‌ವೆಲ್‌ಗಳನ್ನು ಹಾಕಿದ್ದೀರಿ. ಬೆಂಗಳೂರಿನ ಸುತ್ತಮುತ್ತ ತಮ್ಮ ಕ್ಷೇತ್ರ ಇದೆ, ಅಲ್ಲಿಗೆ ನೀವು ಎಷ್ಟು ಬೋರ್‌ವೆಲ್‌ಗಳನ್ನು ಹಾಕಿದರೂ ಸಾಕಾಗುವುದಿಲ್ಲ. ಅಂದಾಗ ನಗರಾಭಿವೃದ್ಧಿ ಸಚಿವರು ಕೊಳವೆ ಬಾವಿಗಳನ್ನು ಹಾಕಿಸಿ ನೀರು ಕೊಡತಕ್ಕ ವ್ಯವಸ್ಥೆ ಮಾಡುತ್ತಾರೋ ಅಥವಾ ಕಾವೇರಿ ನೀರನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತಾರೋ ?

(ಉತ್ತರವಿಲ್ಲ)

MR. SPEAKER.—Now the question is :

"That the respective sums not exceeding the amounts shown in the demands be granted to the Government to defray the charges which will come in course of payment during the financial year ending 31st day of March 1984 in respect of Demand Nos. 55, 56, 57 and 58."

The motion was adopted and the sums were granted.

DEMAND NO. 55—RURAL WATER SUPPLY AND SANITATION

"That a sum not exceeding Rs. 66,78,00,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Rural Water Supply and Sanitation."

DEMAND No. 56—COMMUNITY DEVELOPMENT

"That a sum not exceeding Rs. 12,70,26,000 on Revenue Acccount and Rs. 16,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Community Development."

DEMAND No. 57—INTEGRATED RURAL DEVELOPMENT PROGRAMME

"That a sum not exceeding Rs. 41,40,89,000 on Revenue Account be granted, to the Government to defray the charges which will come in course of payment during the financial year ending 31st day of March 1985 in respect of Integrated Rural Development Programmes".

DEMAND No. 58—RURAL EMPLOYMENT PROGRAMME

"That a sum not exceeding Rs. 46.39,14,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Employment Affirmation Scheme."

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವತ್ತು ೪ ಗಂಟೆಗೆ ಮುಗಿಸಬೇಕೆಂದು ತೀರ್ಮಾನಿಸಿದ್ದೆವು. ಆದ್ದರಿಂದ, ಸಹಕಾರ ಇಲಾಖೆಯ ಬೇಡಿಕೆಗೆ ಸೋಮವಾರ ಉತ್ತರ ಕೊಡಿಸತಕ್ಕ ವ್ಯವಸ್ಥೆ ಮಾಡಿ. ಏಕೆಂದರೆ, ಅದು ಪ್ರಮುಖವಾದ ಇಲಾಖೆಯಾದರೂ ನಾವು ಉತ್ತರ ಕೇಳಲು ಇರುವುದಕ್ಕೆ ಆಗುತ್ತಿಲ್ಲ ಸೋಮವಾರ ಬೇಕಾದರೆ ಸ್ವಲ್ಪ ತಡವಾಗಿ ಕೂರೋಣ. ನಾವು ಇದರ ಬಗ್ಗೆ ಅನೇಕ ಸ್ಪಷ್ಟೀಕರಣಗಳನ್ನು ಕೇಳಬೇಕಾಗಿದೆ.

ಅಧ್ಯಕ್ಷರು.—ಬಹಳ ಸಂಕ್ಷಿಪ್ತವಾಗಿ ಹೇಳುತ್ತಾರೆ, ಸ್ವಲ್ಪ ಸಹಕರಿಸಿ. ಅರ್ಧ ಗಂಟೆಯಲ್ಲಿ ಮುಗಿಸಿಬಿಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಭಾಷಣವನ್ನು ನಾವು ಕೇಳಬೇಕಾಗಿದೆ, ಆದ್ದರಿಂದ ಅವರು ಸೋಮವಾರ ಕೊಡಲಿ.

ಅಧ್ಯಕ್ಷರು.—ಜಾಲಪ್ಪನವರೆ, ಶುರು ಮಾಡಿ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಯ ಮೇಲೆ ಮಾತನಾಡಿ ಸುಮಾರು ೧೪ ಜನ ಸದಸ್ಯರು ಈ ದಿವಸ ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಹೇಳಬೇಕಾದರೆ ಅವರು ಕೊಟ್ಟ ಸಲಹೆಗೂ ನನ್ನ ಅಭಿಪ್ರಾಯಕ್ಕೂ ಅಷ್ಟೇನು ವ್ಯತ್ಯಾಸ ಇಲ್ಲ. ಮಾನ್ಯ ಚೌಡಯ್ಯನವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮೊಟ್ಟ ಮೊದಲನೆಯದಾಗಿ, ಈ ಇಲಾಖೆಯನ್ನು ರಾಜಕಾರಣಿಗಳು ಅಲ್ಲದೆ ಇರುವವರ ಮತ್ತು ಅನುಭವಸ್ಥರ ಕೈಗೆ ಕೊಟ್ಟರೆ ಒಳ್ಳೆಯದೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಚೌಡಯ್ಯನವರೇ ಅಂಥವರನ್ನು ಹುಡುಕಿಕೊಂಡು ಬಂದು ಮುಖ್ಯ ಮಂತ್ರಿಗಳಿಗೆ ಹೇಳಿದರೆ ಒಪ್ಪುತ್ತೇನೆ. ಈಗ ಮನೆ ಮನೆಯಲ್ಲೂ ರಾಜಕಾರಣ ತುಂಬಿರುವಾಗ ಅಂಥವರನ್ನು ಹುಡುಕುವುದು ಕಷ್ಟವೆಂದು ಹೇಳುತ್ತೇನೆ. ಎರಡನೆಯದಾಗಿ, ನಾಮಕರಣದ ಬಗ್ಗೆ ಹೇಳಿದ್ದಾರೆ. ಈಗಾಗಲೇ ಮಸೂದೆಯ ಬಗ್ಗೆ ಮಾತನಾಡುವಾಗ ನಾಮಕರಣದ ವಿಷಯವಾಗಿ ನನ್ನ ಅಭಿಪ್ರಾಯವನ್ನು ಸೂಚಿಸಿದ್ದೇನೆ. ಆದರೆ ಒಂದನ್ನು ಸದಸ್ಯರು ಸ್ವಾಗತಿಸಬೇಕು. ನಾಲ್ಕಾರು ವರ್ಷಗಳಿಂದ ಸಹಕಾರ ಸಂಸ್ಥೆಗಳು ಸೂಪರ್‌ಸೀಡ್ ಆಗಿ ಆಡಳಿತಾಧಿಕಾರಿಗಳ ಹಿಡಿತದಲ್ಲಿದ್ದ ಸಂಸ್ಥೆಗಳಿಗೆ ಚುನಾವಣೆ ನಡಸುವುದಕ್ಕೆ ಆದೇಶ ಕೊಟ್ಟಿದ್ದೇವೆ.

ಈಗಾಗಲೇ ಮುಕ್ಕಾಲು ಭಾಗ ಚುನಾವಣೆ ನಡೆದಿದೆ. ಮೂರನೆಯದಾಗಿ, ಡಿಫಿಸಿಟ್ಸ್ ಬಗ್ಗೆ ಹೇಳುತ್ತಿದ್ದರು. ಈಗ ೪೮೦ ಕೋಟಿ ರೂಪಾಯಿ ಡಿಫಿಸಿಟ್ ಇದೆ. ಇದರಲ್ಲಿ ಇಂಡಿವಿಜುಯಲ್ ಮತ್ತು ಸಂಸ್ಥೆಗಳ ಡಿಫಿಸಿಟ್ ಎಷ್ಟಿದೆ ಎಂದರು. ಆದರ ಅಂಕಿಅಂಶಗಳನ್ನು ಹೇಳುವುದಾದರೆ ಅಪೆಕ್ಸ್ ಬ್ಯಾಂಕಿನಲ್ಲಿ ಇಂಡಿವಿಜುಯಲ್‌ಗೆ ಸಂಬಂಧಪಟ್ಟದ್ದು ೧೨೬ ಲಕ್ಷ ರೂಪಾಯಿಗಳು ಮತ್ತು ಸಂಸ್ಥೆಗಳಿಗೆ ಸಂಬಂಧಪಟ್ಟದ್ದು ೭೨೬ ಲಕ್ಷ ರೂಪಾಯಿಗಳು ಇದೆ. ನಾಲ್ಕನೆಯದಾಗಿ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಏನೇನು ಅನುಕೂಲಗಳನ್ನು ಕಲ್ಪಿಸಿಕೊಡುತ್ತಾರೋ ಆ ಎಲ್ಲಾ ಅನುಕೂಲಗಳನ್ನು ಜಿಲ್ಲಾ ಬ್ಯಾಂಕುಗಳಲ್ಲಿಯೂ ಕಲ್ಪಿಸಿಕೊಡಬೇಕೆಂದರು. ಆದರೆ ಇದಕ್ಕೆ ರಿಸರ್ವ್ ಬ್ಯಾಂಕಿನ ಅಡ್ಡಿ ಆತಂಕಗಳು ಇವೆ. ನಮ್ಮಲ್ಲಿ ಏನು ಅಕೌಂಟ್ ಇಟ್ಟಿದ್ದಾರೆ ಅವರಿಗೆ ಅಗಸ್ಟ್ ಬಂದಾಗ ೫೦೦ ಅಥವಾ ೧೦೦೦ ರೂಪಾಯಿ ಓವರ್‌ಡ್ರಾಫ್ಟ್ ಕೊಡುವುದಕ್ಕೆ ಅವಕಾಶ ಇಲ್ಲ. ರಿಸರ್ವ್ ಬ್ಯಾಂಕಿನವರು ಒಪ್ಪಿದರೆ ನಮ್ಮ ಅಭ್ಯಂತರವಿಲ್ಲ. ಅಡ್ವಾನ್ಸ್ ಬಗ್ಗೆ ಮಾತನಾಡಿ ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಸಾಲ ಕೊಟ್ಟಿದ್ದೇವೆಂದು ಹೇಳಿದ್ದಾರೆ. ೧-೪-೮೨ರಿಂದ ೩೧-೧೨-೮೨ರವರೆಗೆ ೪೪೬೬ ಸೊಸೈಟಿಗಳಲ್ಲಿ ೩೦೫೩೧೮ ಜನರಿಗೆ ೭೬.೧೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ೧-೪-೮೩ರಿಂದ ೩೧-೧೨-೮೩ ರವರೆಗೆ ನಾವು ಕೊಟ್ಟಿರುವ ಹಣ ೯೫೦೭ ಸೊಸೈಟಿಗಳಲ್ಲಿ ೪೫೯೬೧೨ ಜನರಿಗೆ ೯೨.೨೪ ಕೋಟಿ ರೂಪಾಯಿಗಳನು ಕೊಟ್ಟಿದ್ದೇವೆ. ಕಳೆದ ವರ್ಷಕ್ಕಿಂತ ಈ ವರ್ಷ ಅಲ್ಪಾವಧಿ ಸಾಲದಲ್ಲಿ ೨೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಸಾಲದ ರೂಪದಲ್ಲಿ ಕೊಟ್ಟಿದ್ದೇವೆಂದು ಹೇಳುವುದಕ್ಕೆ ಸಂತೋಷಪಡುತ್ತೇನೆ. ಮುಂದಿನ ವರ್ಷದ ಗುರಿ ಏನಿದೆ ಎಂದರೆ ನಾವು ೧೧೫ ಕೋಟಿ ರೂಪಾಯಿಗಳಷ್ಟು ಅಲ್ಪಾವಧಿ ಸಾಲವನ್ನು ಒದಗಿಸತಕ್ಕ ಗುರಿಯನ್ನು ಹಾಕಿಕೊಂಡಿದ್ದೇವೆ ಮತ್ತು ಮಧ್ಯಮಾವಧಿ ಸಾಲವಾಗಿ ೧೦ ಕೋಟಿ ರೂಪಾಯಿಗಳನ್ನು ಕೊಡತಕ್ಕ ಗುರಿ ಇಟ್ಟುಕೊಂಡಿದ್ದೇವೆ. ಅಂದರೆ ಇದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎಷ್ಟು ಸಿಕ್ಕಿದೆ ಎಂಬುದನ್ನು ಯೋಚಿಸಬೇಕಾಗುತ್ತದೆ. ಹೋದ ವರ್ಷ ೧೫೫೮೬೧ ಜನರಿಗೆ ೨೩.೪೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಈ ವರ್ಷ ೧೬೪೪೫೦ ಜನರಿಗೆ ೨೯½ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರೆ ಸುಮಾರು ೬ ಕೋಟಿ ರೂಪಾಯಿ ಹೆಚ್ಚು ಹಣವನ್ನು ಅಲ್ಪಾವಧಿ ಸಾಲವನ್ನು ಒದಗಿಸಿದ್ದೇವೆ. ಅದರ ಜೊತೆಗೆ ಎಲ್ಲೆಲ್ಲಿ ನಬಾರ್ಡ್ ಕ್ರೆಡಿಟ್ ಲಿಮಿಟ್ ಇಲ್ಲದೆ ಜಿಲ್ಲಾ ಬ್ಯಾಂಕುಗಳು ಸಾಲ ಕೊಡುವ ಪರಿಸ್ಥಿತಿಯಲ್ಲಿಲ್ಲವೋ ಅಂಥ ಬ್ಯಾಂಕುಗಳು ಯಾವುವೆಂದರೆ ಶಿವಮೊಗ್ಗ, ಕೋಲಾರ, ಗುಲ್ಬರ್ಗ ಮತ್ತು ಹಾಸನ ಶಿವಮೊಗ್ಗಕ್ಕೆ ಹೋದ ವರ್ಷ ೫೫ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ ೧೬೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಕೋಲಾರಕ್ಕೆ ೬೧ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ ೮೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಗುಲ್ಬರ್ಗಕ್ಕೆ ಹೋದ ವರ್ಷ ೬೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ ೯೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಸನಕ್ಕೆ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಅವರು ೩ ಕಾಸನ್ನು ಕೂಡ ಉಪಯೋಗಿಸಲಿಕ್ಕೆ ಅವರಿಂದ ಆಗಿಲ್ಲ. ಇದು ದುರಾದೃಷ್ಟ. ಆದುದರಿಂದ ಹಾಸನ ಬ್ಯಾಂಕನ್ನು ಸರ್ಕಾರ ತೆಗೆದುಕೊಂಡಿದೆ. ಇಡೀ ವರ್ಷದಲ್ಲಿ ಆ ಒಂದೇ ಒಂದು ಬ್ಯಾಂಕನ್ನು ಸೂಪರ್‌ಸೀಡ್ ಮಾಡಿದ್ದೇವೆ, ಮತ್ತು ಅದರ ಜೊತೆಗೆ ಪಿ.ಎಲ್.ಡಿ. ಬ್ಯಾಂಕ್ ಒಂದನ್ನು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಎಷ್ಟು ಬ್ಯಾಂಕುಗಳನ್ನು ಸೂಪರ್‌ಸೀಡ್ ಮಾಡಿದ್ದೀರೆಂದು ಕೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ನಾನು ಒಂದು ಸಂತೋಷದ ಸಮಾಚಾರವನ್ನು ಹೇಳುತ್ತಿದ್ದೇನೆ. ಈ ವರ್ಷ ಕೇಂದ್ರ ಸರ್ಕಾರದವರು ಎರಡೂವರೆ ಕೋಟಿ ರೂಪಾಯಿಗಳನ್ನು ಅಗ್ರಿಕಲ್ಚರಲ್ ಸ್ಟೆಬಿಲೈಸೇಷನ್ ಫಂಡಿಗಾಗಿ ಕೊಟ್ಟಿದ್ದಾರೆ. ಇದು ನಮ್ಮ ಫರ್‌ಫಾರ್ಮೆನ್ಸ್. ನಮ್ಮ ರಾಜ್ಯದಲ್ಲಿ ಮಳೆ ಇಲ್ಲದೆ ಅಭಾವ ಪರಿಸ್ಥಿತಿ ಬಂದಾಗ ನಾವು ಹೇಗೆ ಸಫರ್ ಮಾಡುತ್ತಿದ್ದೆವೋ ಹಾಗೆ ನಮ್ಮ ಪರಿಸ್ಥಿತಿ ಆಗಿದೆ. ನಾವು ನಮ್ಮ ತೊಂದರೆಗಳನ್ನು ತೋಡಿಕೊಂಡ ಮೇಲೆ ೨½ ಕೋಟಿ ರೂಪಾಯಿಗಳನ್ನು ಅಗ್ರಿಕಲ್ಚರಲ್ ಸ್ಟೆಬಿಲೈಸೇಷನ್ ಫಂಡಿಗಾಗಿ ಕೊಟ್ಟಿದ್ದಾರೆ. ಇದರಲ್ಲಿ ಒಂದು ಕೋಟಿ ೭೫ ಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿದ್ದಾರೆ ಮತ್ತು ೬೫ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ಇಡೀ ಭಾರತಕ್ಕೆ ಕೊಟ್ಟಿರುವುದು ಹನ್ನೆರಡೂವರೆ ಕೋಟಿ ರೂಪಾಯಿಗಳು. ಅದರಲ್ಲಿ ನಮಗೆ ೨೦ ಪರ್ಸೆಂಟ್‌ನಷ್ಟು ಬಂದಿದೆ ಎಂದು ಹೇಳುತ್ತಾ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ವಂದನೆಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು.—ಅದೇ ರೀತಿ ನಜೀರ್‌ಸಾಬ್ ರವರಿಗೂ ಕೊಟ್ಟಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ರಾಜ್ಯದ ಅಭಿವೃದ್ಧಿ ಬ್ಯಾಂಕಿನ ಸಾಲಗಳ ವಿವರಣೆಯನ್ನು ಹೇಳಬೇಕಾಗಿದೆ. ಹೋದವರ್ಷ ಅಂದರೆ ೧-೪-೮೨ ರಿಂದ ೩೧-೧೨-೮೨ರವರೆಗೆ ಎನು ೧೯೮೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು ಅದು ಈಗ ೩೦೯೬ ಲಕ್ಷ ರೂಪಾಯಿ ಆಗಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಇನ್ನೂ ಹೆಚ್ಚಿಗೆ ಹಣ ಕೊಡುವ ವ್ಯವಸ್ಥೆ ಕೂಡ ಇದೆ. ಬಹಳ ಮುಖ್ಯವಾಗಿ ಹೋದವರ್ಷ ೩೦ ಕೋಟಿ ರೂಪಾಯಿ ಡಿಬೆಂಚರ್ ಮಾಡಿದ್ದರೆ ಈ ವರ್ಷ ೪೦ ಕೋಟಿ ರೂಪಾಯಿ ಫ್ಲೋಟ್ ಮಾಡಿದ್ದೇವೆ. ಇನ್ನೊಂದು ಬಹಳ ಮುಖ್ಯವಾಗಿ ಗಮನಿಸಬೇಕಾದುದು ಬಹಳ ವರ್ಷಗಳಿಂದ ರೈತರದೊಂದು ಬೇಡಿಕೆ ಇತ್ತು. ಎಲ್ಲೆಲ್ಲಿ ಧೀರ್ಘಾವಧಿ ಸಾಲ ಕೊಟ್ಟಿದ್ದೇವೆ ಅಲ್ಲಿ ಅಲ್ಪಾವಧಿ ಸಾಲದ ಸೌಲಭ್ಯ ಇಲ್ಲದಿರುವುದರಿಂದ ಬಾವಿ ತೆಗೆದು ಬೆಳೆ ಬೆಳೆಯುವುದಕ್ಕೆ ಮುಂತಾದ ಕೆಲಸಗಳಿಗೆ ತೊಂದರೆಯಾಗುತ್ತಿತ್ತು. ಅದನ್ನು ತಪ್ಪಿಸುವುದಕ್ಕೆ ನಾವು ಹೊಸದಾದ ಯೋಜನೆ ತಂದಿದ್ದೇವೆ. ಎಲ್ಲಿ ಧಿ ರ್ಘಾವಧಿ ಸಾಲ ಮಾತ್ರ ಇದ್ದು ಅಲ್ಪಾವಧಿ ಸಾಲದ ಸೌಲಭ್ಯ ಇಲ್ಲವೋ ಅಂಥ ಕಡೆಗಳಲ್ಲಿ ಅಲ್ಪಾವಧಿ ಸಾಲ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಈ ವ್ಯವಸ್ಥೆ ಮಾಡಿದ್ದೇವೆ. ಬಿಲ್‌ನಲ್ಲಿ ಕೂಡ ಅದನ್ನು ಅಳವಡಿಸಿದ್ದೇವೆ. ಮೆಷಿನರಿ ಕೊಡಬೇಕಾದರೆ ಸ್ಟಾಂಪ್ ಡ್ಯೂಟಿ ಜಾಸ್ತಿಯಾಗುತ್ತದೆಂದು ಮೊಟ್ಟಮೊದಲನೆಯದಾಗಿ ಹೈಪಾತಿಕೇಷನ್ ಮೇಲೆ ಅದನ್ನು ಕೊಡಬಹುದು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದನ್ನು ಈಗ ಅನುಸರಿಸುತ್ತಿದ್ದೇವೆ. ಟಿ. ಎ. ಪಿ. ಸಿ. ಎಂ. ಎಸ್.ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಅದು ನಿಜ. ಕಾರಣಾಂತರಗಳಿಂದ ಬಹಳಷ್ಟು ತೊಂದರೆಗಳು ಅಲ್ಲಿವೆ. ಬಹಳ ಮುಖ್ಯವಾದ ತೊಂದರೆ ಏನೆಂದರೆ ಅವುಗಳಿಗೆ ಸ್ವಂತ ಬಂಡವಾಳ ಇಲ್ಲ. ಜಿಲ್ಲಾ ಬ್ಯಾಂಕುಗಳಿಂದ ೧೬ ಪರ್ಸೆಂಟ್ ೧೮ ಪರ್ಸೆಂಟ್ ಬಡ್ಡಿಕೊಟ್ಟು ಸಾಲ ತಂದು ಅದರಿಂದ ಕೆಲಸ ಮಾಡಬೇಕಾಗಿದೆ. ಇನ್ನೊಂದೇನೆಂದರೆ ಅಲ್ಲಿ ಕೃಷ್ಣನ ಲೆಕ್ಕ ಇಡುವುದಕ್ಕಾಗುವುದಿಲ್ಲ. ಎಲ್ಲಾ ರಾಮನ ಲೆಕ್ಕವನ್ನೇ ಇಡಬೇಕಾಗುತ್ತದೆ. ಇದರಿಂದಾಗಿ ಬಹಳ ಸಂಸ್ಥೆಗಳು ಲುಕ್ಸಾನು ಅನುಭವಿಸುತ್ತಿವೆ. ಡಾಕ್ಟರ್ ಕರ್ಕಿಯವರು ಟಿ ಎ.ಪಿ.ಸಿ.ಎಂ.ಎಸ್.ಗೆ ತೊಂದರೆಯಾಗುತ್ತಿದೆ ಎಂದು ಹೇಳಿದರು. ಅದನ್ನು ಒಪ್ಪಿಕೊಳ್ಳುತ್ತೇನೆ. ಡಿಫರೆನ್ಸ್ ಆಫ್ ರೇಟನ್ನು ಆಹಾರ ಇಲಾಖೆಯಿಂದ ತಿಂಗಳುಗಟ್ಟಲೆ ತಡವಾಗಿ ಕೊಡುತ್ತಿರುವುದರಿಂದ ತೊಂದರೆಯಾಗಿದೆ. ೯೦ ಟಿ.ಎ.ಪಿ.ಸಿ.ಎಂ.ಎಸ್.ಗಳು ರೈಸ್ ಮಿಲ್‌ಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ಅವರಿಗೆ ಎಷ್ಟು ಹಲ್ ಮಾಡುವ ಕೆಪಾಸಿಟಿ ಇದೆಯೋ ಅಷ್ಟು ಭತ್ತ ಸಿಗುತ್ತಿಲ್ಲ. ಇದರಿಂದಾಗಿಯೂ ಲುಕ್ಸಾನು ಅನುಭವಿಸುತ್ತಿದ್ದಾರೆ. ಅದನ್ನು ಏನಾದರೂ ಮಾಡಿ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾರ್ಕೆಟಿಂಗ್ ಫೆಡರೇಷನ್ನಿನವರು ಮಾರುತ್ತಿರುವ ಗೊಬ್ಬರದ ಬೆಲೆ ಖಾಸಗಿಯವರಿಗೆ ಹೋಲಿಸಿದರೆ ಜಾಸ್ತಿಯಾಗಿದೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಹೋಲಿಸಿದರೂ ಜಾಸ್ತಿ ಎಂದು ಮಾನ್ಯ ಸದಸ್ಯರು ಹೇಳಿದರು. ಖಾಸಗಿಯವರು ಮಾರಾಟ ಮಾಡುವ ಗೊಬ್ಬರದಲ್ಲಿ ೪೬ ಪರ್ಸೆಂಟ್ ಇದೆಯೋ ೪೨ ಪರ್ಸೆಂಟ್ ಇದೆಯೋ ನೋಡುವುದಿಲ್ಲ. ಜೊತೆಗೆ ತೂಕ ಹೇಗಿದೆ ಎಂಬುದನ್ನು ನೋಡುವುದಿಲ್ಲ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರಿಗೂ ಮಾರ್ಕೆಟಿಂಗ್ ಫೆಡರೇಷನ್ನವರಿಗೂ ಕೆಲವು ಗೊಬ್ಬರಗಳಲ್ಲಿ ಒಂದೆರಡು ರೂಪಾಯಿ ಹೆಚ್ಚು ಕಡಿಮೆ ಇರಬಹುದು. ಕಳೆದ ವರ್ಷ ೫೩ ಕೋಟಿ ರೂಪಾಯಿಗಳಷ್ಟು ಗೊಬ್ಬರವನ್ನು ಮಾರ್ಕೆಟಿಂಗ್ ಫೆಡರೇಷನ್‌ನಿಂದ ಮಾರಿದ್ದೇವೆ. ಒಂದು ಸಮಯ ಮಾರ್ಕೆಟಿಂಗ್ ಫೆಡರೇಷನ್ ಇಲ್ಲದೆ ೫೩ ಕೋಟಿ ರೂಪಾಯಿಗಳ ಗೊಬ್ಬರ ದಾಸ್ತಾನು ಮಾಡದಿದ್ದರೆ ಅದರಿಂದ ಮಾರುಕಟ್ಟೆ ಮೇಲೆ ಯಾವರೀತಿ ಪರಿಣಾಮ ಆಗುತ್ತಿತ್ತು ಎಂಬುದನ್ನು ಯೋಚನೆ ಮಾಡಿ. ಇದರ ಜೊತೆಗೆ ೪೦ ಹೆಕ್ಟೇರುಗಳಿಗೆ ಆಗುವಷ್ಟು ಗೊಬ್ಬರವನ್ನು ಸ್ಟಾಕ್ ಇಟ್ಟುಕೊಂಡು ಹೊಸ ಯೋಜನೆಯನ್ನು ಕಳೆದ ವರ್ಷ ತಂದೆವು. ಅದು ಮನೆ ಬಾಗಿಲಿಗೆ ಗೊಬ್ಬರ ಕೊಡುವ ಯೋಜನೆ. ಇದರಲ್ಲಿ ನಾವು ಸಫಲರಾಗಿದ್ದೇವೆ. ಹೋದ ವರ್ಷ ೨,೬೦೦ ಹಳ್ಳಿಗಳಲ್ಲಿ ಇದನ್ನು ಜಾರಿಗೆ ತರಬೇಕೆಂದು ಟಾರ್ಜೆಟ್ ಇಟ್ಟುಕೊಂಡಿದ್ದು ಅದರಲ್ಲಿ ೨,೦೦೨ ಗ್ರಾಮಗಳಿಗೆ ಮನೆ ಬಾಗಿಲಿಗೆ ಗೊಬ್ಬರವನ್ನು ಒದಗಿಸಿದ್ದೇವೆ. ಅಂದರೆ ೨೯,೨೪೧ ಮೆಟ್ರಿಕ್ ಟನ್ ಗೊಬ್ಬರವನ್ನು ಮನೆ ಬಾಗಿಲಿಗೆ ಸರಬರಾಜು ಮಾಡಲು ಮಳೆಗಾಲ ಬರುವುದಕ್ಕಿಂತ ಮೊದಲು ಸ್ಟಾಕ್ ಇಟ್ಟಿದ್ದೇವೆ. ಈ ವ್ಯವಸ್ಥೆಯನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರಾಗಲೀ, ಖಾಸಗಿಯವರಾಗಲಿ ಮಾಡುವುದಿಲ್ಲ. ಇವತ್ತಿನ ದಿವಸ ಮಾರ್ಕೆಟಿಂಗ್ ಫೆಡರೇಷನ್ ಎಷ್ಟರಮಟ್ಟಿಗೆ ಕೆಲಸ ಮಾಡಬೇಕಾಗಿತ್ತೋ ಅಷ್ಟರಮಟ್ಟಿಗೆ ಕೆಲಸ ಮಾಡುತ್ತಿಲ್ಲ. ಆಹಾರ ಸಂಗ್ರಹಣೆ ಮಾಡಬೇಕು, ಪ್ರೋಸೆಸಿಂಗ್ ಮಾಡಬೇಕು. ರೈತರಿಗೆ ತೊಂದರೆಯಾಗಬಾರದು ಎಂದು ೨೩ ಸಾವಿರ ಕ್ವಿಂಟಾಲ್ ತೊಗರಿ ಬೇಳೆಯನ್ನು ಕೊಂಡಿದ್ದೇವೆ. ನಾವು ತೊಗರಿಬೇಳೆಯನ್ನು

ಕೊಳ್ಳದಿದ್ದರೆ ಧಾರಣೆ ಏನಾಗುತ್ತಿತ್ತು ಎಂಬುದನ್ನು ಯೋಚನೆ ಮಾಡಬೇಕು. ೪೪ ಸಾವಿರ
ಕ್ವಿಂಟಾಲ್ ಮುಸುಕಿನ ಜೋಳವನ್ನು ತೆಗೆದಿಟ್ಟಿದ್ದೇವೆ. ೪೪೩ ಕ್ವಿಂಟಾಲ್ ಎಳ್ಳು, ೨,೩೦೦
ಕ್ವಿಂಟಾಲ್ ಕಡ್ಲೆಬೀಜ, ೩೧೨೫ ಕ್ವಿಂಟಾಲ್ ಸನ್‌ಫ್ಲವರ್ ಸ್ಟಾಕ್ ಇಟ್ಟಿದ್ದೇವೆ. ಇವರ ಜೊತೆಗೆ
೧೦ ಸಾವಿರ ಟನ್ ರಾಗಿಯನ್ನು ಕೊಂಡು ಇಟ್ಟುಕೊಳ್ಳುವುದಕ್ಕೆ ಸೂಚನೆ ಕೊಟ್ಟಿದ್ದೇವೆ. ಅದನ್ನು
ಕೊಳ್ಳುವುದಕ್ಕೆ ಪ್ರಯತ್ನ ನಡೆಸಿದ್ದೇವೆ. ಸಕ್ಕರೆ ಫ್ಯಾಕ್ಟರಿಗಳ ಬಗ್ಗೆ ಮಾನ್ಯ ಚೌಡಯ್ಯನವರು
ಹೇಳಿ ಪೊಟೆನ್‌ಷಿಯಾಲಿಟಿ ನೋಡದೆ ಲೈಸೆನ್ಸ್ ಕೊಟ್ಟರು ಎಂದು ಹೇಳಿದರು. ಇದನ್ನು ನಮ್ಮ
ಸರ್ಕಾರವೇ ಕೊಡಲಿ, ಹಿಂದಿನ ಸರ್ಕಾರವೇ ಕೊಡಲಿ ಒತ್ತಡದಿಂದ ಕೊಟ್ಟಿದ್ದಾರೆ. ಗೌರಿಬಿದನೂರಿ
ನಲ್ಲಿ ಕಬ್ಬು ಮೊದಲು ಚೆನ್ನಾಗಿ ಸಿಗುತ್ತಿತ್ತು. ಬರುಬರುತ್ತಾ ಬೆಳೆ ಕಡಿಮೆಯಾಯಿತು. ಕಾರಣ
ಇಷ್ಟೆ. ರೈತನಿಗೆ ಸರಿಯಾದ ಧಾರಣೆ ಸಿಗುತ್ತಿಲ್ಲ. ಒಂದು ವೇಳೆ ಅವರು ಕಬ್ಬು ಸಪ್ಲೈ ಮಾಡಿದರೂ
ಒಂದೆರಡು ತಿಂಗಳವರೆಗೆ ದುಡ್ಡು ಸಿಗುವುದಿಲ್ಲ. ಅವರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಮಳೆ
ಸರಿಯಾಗಿ ಬರುತ್ತಿಲ್ಲ. ಕೆರೆಗಳಲ್ಲಿ ಬಾವಿಗಳಲ್ಲಿ ನೀರಿಲ್ಲ. ಈ ಎಲ್ಲ ಕಾರಣದಿಂದ ಕಬ್ಬಿನ ಬೆಳೆ ಕಡಿಮೆ
ಯಾಗುತ್ತಿದೆ. ಇದಲ್ಲದೆ ಹೊಸ ಹೊಸ ಪ್ಲಾಂಟೇಷನ್ ಏರಿಯಾದಲ್ಲಿ ರೇಷ್ಮೆ ಬೆಳೆ ತೆಗೆದುಕೊಂಡಿದ್ದಾರೆ.
ಆದ್ದರಿಂದ ಗೌರೀಬಿದನೂರು ಸಕ್ಕರೆ ಕಾರ್ಖಾನೆ, ಮಹದೇಶ್ವರ ಸಕ್ಕರೆ ಕಾರ್ಖಾನೆ, ಶ್ರೀರಾಮ
ಸಕ್ಕರೆ ಕಾರ್ಖಾನೆ ಮತ್ತು ಹಿರಿಯೂರು ಸಕ್ಕರೆ ಕಾರ್ಖಾನೆಗಳಿಗೆ ಹೊಸ ಯೋಜನೆ ಹಾಕಿ ಮೂರು
ನಾಲ್ಕು ಸಾವಿರ ಬೋರ್‌ವೆಲ್‌ಗಳನ್ನು ಒಂದೊಂದು ಫ್ಯಾಕ್ಟರಿ ಪ್ರದೇಶದಲ್ಲಿ ಹಾಕಿಸಿ ಕಬ್ಬನ್ನು
ಬೆಳೆಸುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಸ್ಪಿನ್ನಿಂಗ್ ಮಿಲ್ಸ್ ಬಗ್ಗೆ
ಒಬ್ಬ ಸದಸ್ಯರೂ ಮಾತನಾಡಲಿಲ್ಲ. ಆದರೂ ನಾನು ಕೆಲವು ವಿಷಯಗಳನ್ನು ಸದನದ ಗಮನಕ್ಕೆ
ತರಬೇಕಾಗಿದೆ. ಈಗಾಗಲೇ ೭ ಸ್ಪಿನ್ನಿಂಗ್ ಮಿಲ್‌ಗಳು ಕೆಲಸ ಮಾಡುತ್ತಿವೆ. ಇನ್ನು ೮ ಮಿಲ್
ಗಳಿಗೆ ಭಾರತ ಸರ್ಕಾರದ ಎನ್.ಸಿ.ಡಿ.ಸಿ.ಯವರ ಅಪ್ರೂವಲ್ ಮತ್ತು ಹಣಕಾಸಿನ ವಿಷಯದ
ಬಗ್ಗೆ ಪೆಂಡಿಂಗ್ ಇದ್ದು ಈ ವರ್ಷ ಎರಡು ಮಂಜೂರು ಮಾಡಿದ್ದಾರೆ. ಇನ್ನು ಒಂದೆರಡು ವರ್ಲ್ಡ್
ಬ್ಯಾಂಕ್ ಸ್ಕೀಮಿನಿಂದ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಅದು ಸಫಲವಾಗ
ಬಹುದು ಎಂಬ ಭರವಸೆ ಇದೆ. ಅಡ್ಮಿನಿಸ್ಟ್ರೇಷನ್ ಬಗ್ಗೆ ಅನೇಕ ಸದಸ್ಯರು ಮಾತನಾಡಿ ಸಕಾಲದಲ್ಲಿ
ಆಡಿಟ್ ಆಗುವುದಿಲ್ಲ, ಕನ್‌ಕರೆಂಟ್ ಆಡಿಟ್ ಆಗುವುದಿಲ್ಲ. ಮಿಸ್ ಅಪ್ರೊಪ್ರಿಯೇಷನ್ ಮೇಲೆ
ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ
ಒಪ್ಪುತ್ತೇನೆ. ಇದರಲ್ಲಿ ಕೆಲವು ತೊಂದರೆಗಳಿದ್ದು ಇದನ್ನು ಬದಲಾಯಿಸಿ ಪರ್ಯಾಯ ವ್ಯವಸ್ಥೆ
ಮಾಡಲೇಬೇಕಾಗಿದೆ. ಈ ವಿಷಯದಲ್ಲಿ ಈಗಾಗಲೇ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ.
ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನು ಹಾಕಿ ಎಲ್ಲಾ ಆರ್ಬಿಟ್ರೇಷನ್ ಕೇಸ್‌ಗಳನ್ನು
ಅವರಿಗೆ ರೆಫರ್ ಮಾಡುವಂತೆ ಮಾಡಬಹುದು. ಒಂದು ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್,
ಒಬ್ಬ ಕೋ-ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರ್ ಅಥವಾ ಕೋ-ಆಪರೇಟಿವ್ ಡೆವಲಪ್ಮೆಂಟ್
ಆಫೀಸರ್‌ಗೆ ಪೂರ್ಣವಾದ ಜವಾಬ್ದಾರಿ ಕೊಟ್ಟು ಏನು ವ್ಯತ್ಯಾಸವಾದರೂ ಅವರೇ ಜವಾಬ್ದಾರಿ
ಹೊರುವಂತೆ ಮಾಡುವ ಬಗ್ಗೆ ಚರ್ಚೆ ನಡೆಸಿದ್ದೇವೆ. ಸಾಧ್ಯವಾದಷ್ಟು ಬೇಗ ಮಂತ್ರಿಮಂಡಲದ
ಮುಂದೆ ತಂದು ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡುತ್ತೇನೆ. ಇನ್ನು ಅಗ್ರಿಕಲ್ಚರಲ್
ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಗಳ ಬಗ್ಗೆ ಹೇಳುತ್ತೇನೆ. ಅಂದರೆ ರೆಗ್ಯುಲೇಟೆಡ್ ಮಾರ್ಕೆಟ್‌ಗಳ
ಬಗ್ಗೆ. ಅಲ್ಲಿ ಐದಾರು ವರ್ಷಗಳಿಂದ ಎಲೆಕ್ಷನ್ ಆಗಿರಲಿಲ್ಲ. ಈಗ ಪೂರ್ಣವಾಗಿ ಚುನಾವಣೆ
ಮುಗಿಸಿದ್ದೇವೆ. ಮೂರು ಕಮಿಟಿಗಳಿಗೆ ಹೈಕೋರ್ಟ್ ಸ್ಟೇ ಆರ್ಡರ್ ಇದ್ದುದರಿಂದ ಚುನಾವಣೆ
ಮಾಡಲಿಲ್ಲ. ಈಗ ಅಧಿಕಾರಿ ವಿಕೇಂದ್ರೀಕರಣ ಮಾಡಿದ್ದೇವೆ. ಮೊದಲು ಅಧಿಕಾರ ಕೇಂದ್ರಿಕೃತ
ವಾಗಿತ್ತು. ಅಲ್ಲಿ ಮೇ ೧೯೭೩ರಿಂದ ಜೂನ್ ೧೯೮೧ರವರೆಗೆ ೧೩ ಕೋಟಿ ರೂಪಾಯಿಗಳ ಕೆಲಸ
ವಾಗಿತ್ತು. ಆದರೆ ೧೯೮೩ನೇ ಜನವರಿಯಿಂದ ಫೆಬ್ರವರಿ ೧೯೮೪ರ ವರೆಗೆ ೯ ಕೋಟಿ ೭೫ ಲಕ್ಷ
ರೂಪಾಯಿಗಳ ಕೆಲಸಗಳನ್ನು ನಾವು ಮಂಜೂರು ಮಾಡಿದ್ದೇವೆ. ೧೯೮೪-೮೫ರಲ್ಲಿ
ಕೆಲಸ ಮುಗಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ೧೯೮೨ರಲ್ಲಿ ಕಮಿಟಿಯವರು
೨ ಕೋಟಿ ೭೨ ಲಕ್ಷ ರೂಪಾಯಿಗಳ ಕೆಲಸವನ್ನು ಮಂಜೂರು ಮಾಡಿದ್ದಾರೆ. ಈಗ
೧೯೮೫ರಲ್ಲಿ ಕಮಿಟಿಯವರು ೫ ಕೋಟಿ ರೂಪಾಯಿಗಳ ಕೆಲಸವನ್ನು ಮಂಜೂರು ಮಾಡಿದ್ದಾರೆ.

೫-೩೦ ಪಿ. ಎಂ.

ಮುಖ್ಯವಾಗಿ ಕಳೆದ ವರ್ಷ ಸುಮಾರು ೧೦ ಸಾವಿರ ಜನರಿಗೆ ರೆಗ್ಯುಲೆಟೆಡ್ ಮಾರ್ಕೆಟ್‌ಗಳನ್ನು
ಯಾವ ರೀತಿ ಉಪಯೋಗಿಸಬೇಕು ಹಾಗೂ ಅವುಗಳಿಂದ ಯಾವ ರೀತಿಯ ಸೌಕರ್ಯ ಸಿಗುತ್ತದೆ

ಎನ್ನುವ ಬಗ್ಗೆ ಅಂಚೆ ಮೂಲಕ ಟ್ರೈನಿಂಗ್ ಕೊಟ್ಟಿದ್ದೇವೆ. ಹಾಗೂ ಆ ಬಗ್ಗೆ ಪರೀಕ್ಷೆಯನ್ನು ಮಾಡಿದ್ದು ಅದರಲ್ಲಿ ಉತ್ತೀರ್ಣ ಹೊಂದಿದವರಿಗೆ ಬಹುಮಾನವನ್ನು ಕೊಟ್ಟಿದ್ದೇವೆ. ಜೊತೆಗೆ ಈ ಪರೀಕ್ಷೆಯಲ್ಲಿ ಯಾರು ೩ ಜನ ಮೊದಲಿಗರಾಗಿ ಉತ್ತೀರ್ಣ ಹೊಂದಿದ್ದಾರೆ ಅವರಿಗೆ ''ಕರ್ನಾಟಕ ದರ್ಶನ'' ಎಂದು ಹೇಳಿ ಎಲ್ಲೆಲ್ಲಿ ದೊಡ್ಡ ದೊಡ್ಡ ಮಾರ್ಕೆಟ್ ಯಾರ್ಡ್‌ಗಳು ಇರುತ್ತವೆ ಅವನ್ನು ತೋರಿಸಿದ್ದೇವೆ. ಹಾಗೂ ಅವರಿಗೆ ನಗದು ಬಹುಮಾನವನ್ನು ಕೊಟ್ಟಿದ್ದೇವೆ. ಇದರಿಂದಾಗಿ ರೈತರಲ್ಲಿ ಎ. ಪಿ.ಎಂ.ಸಿ ಗಳಲ್ಲಿ ಏನು ಅವ್ಯವಹಾರ ನಡೆಯುತ್ತದೆ ಎಂದು ಗೊತ್ತಾಗಿ ತಮ್ಮ ಹಕ್ಕು ಬಾಧ್ಯತೆಗಳು ಏನು ಎಂದು ಅರ್ಥ ಮಾಡಿಕೊಳ್ಳುತ್ತಾರೆ ಎನ್ನುವ ಸಲುವಾಗಿ ೧೦ ಸಾವಿರ ಜನರಿಗೆ ಟ್ರೈನಿಂಗ್ ಕೊಟ್ಟಿದ್ದೇವೆ. ಜೊತೆಗೆ ಯಾರು ಎ. ಪಿ. ಎಂ. ಸಿ ಗಳಿಗೆ ಚುನಾಯಿತರಾಗಿ ಬಂದಿದ್ದಾರೆ ಅಂತಹ ಸದಸ್ಯರಿಗೂ ಟ್ರೈನಿಂಗ್ ಕೊಡುವ ವ್ಯವಸ್ಥೆ ಮಾಡಿದ್ದೇನೆ.

ಇನ್ನು ೧೯೮೨ರ ಜನವರಿಯಿಂದ ಡಿಸೆಂಬರ್ ತಿಂಗಳವರೆಗೆ ಮಾರ್ಕೆಟ್ ಕಮಿಟಿಗಳಲ್ಲಿ ವಸೂಲು ಆಗಿರತಕ್ಕ ಹಣ ೧೦.೮೦ ಕೋಟಿ ರೂಪಾಯಿಗಳಾಗಿದ್ದರೆ ೧೯೮೩ರ ಜನವರಿ ಯಿಂದ ಡಿಸೆಂಬರ್ ತಿಂಗಳವರೆಗೆ ೧೩.೪೨ ಕೋಟಿ ರೂಪಾಯಿ ವಸೂಲು ಆಗಿರುತ್ತದೆ. ಚುನಾವಣೆಗಳು ಆದಮೇಲೆ ೧೯೮೩ರ ಜುಲೈನಿಂದ ಡಿಸೆಂಬರ್‌ವರೆಗೆ ೭ ಕೋಟಿ ರೂಪಾಯಿ ವಸೂಲು ಆಗಿದೆ. ಅದೇ ಕರೆಸ್ಪಾಂಡಿಂಗ್ ಪೀರಿಯಡ್‌ನಲ್ಲಿ ೫.೬೨ ಕೋಟಿ ರೂಪಾಯಿ ವಸೂಲು ಆಗಿದೆ. ಎಂದರೆ ಅದೇ ಜುಲೈನಿಂದ ಡಿಸೆಂಬರ್ ಅವರೆಗೆ ಚುನಾವಣೆ ಆದಮೇಲೆ ೧.೪೦ ಕೋಟಿ ರೂಪಾಯಿ ವಸೂಲಿ ಜಾಸ್ತಿ ಆಗಿದೆ. ಇನ್ನು ಮೊದಲನೇ ಬಾರಿಗೆ ಆರ್.ಎಂ.ಸಿ.ಗಳಲ್ಲಿ ಯಾರು ಕೆಲಸ ಮಾಡುತ್ತಿದ್ದರು ಅವರನ್ನು ವರ್ಗಾವಣೆ ಮಾಡುವ ಪ್ರಯತ್ನ ಮಾಡಿದ್ದೇವೆ. ಇನ್ನು ೧೯೭೩ ರಿಂದ ಮೈಸೂರಿನಲ್ಲಿ ಏನು ತರಕಾರಿಯನ್ನು ರೆಗ್ಯುಲೇಟ್ ಮಾಡಬೇಕೆಂದು ಪ್ರಯತ್ನ ಮಾಡಲಾಗುತ್ತಿದ್ದು ಅದನ್ನು ಹೋದ ವರ್ಷ ನಾವು ಸಾಧಿಸಿದ್ದೇವೆ ಎಂದು ಹೇಳುವುದಕ್ಕೆ ಸಂತೋಷಪಡುತ್ತೇವೆ. ಈಗ ಮೈಸೂರಿನಲ್ಲಿ ತರಕಾರಿ ಮತ್ತು ಹಣ್ಣುಗಳನ್ನು ರೆಗ್ಯುಲೇಟ್ ಮಾಡಿದ್ದೇವೆ. ಹಾಗೂ ತಮಗೇ ಗೊತ್ತಿರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಮಾರ್ಕೆಟ್ ಫೀಯನ್ನು ಏಪ್ರಿಲ್ ೧ ರಿಂದ ೨ ಪರ್ಸೆಂಟ್‌ನಿಂದ ೧ ಪರ್ಸೆಂಟ್‌ಗೆ ಇಳಿಸುವ ಬಗ್ಗೆ ತಿಳಿಸಿದ್ದಾರೆ. ಇನ್ನು ಎನ್.ಜಿ.ಆರ್.ಪಿ. ನಲ್ಲಿ ೨೫೦ ಗೋಡೌನ್‌ಗಳನ್ನು ತೆಗೆದುಕೊಂಡಿದ್ದೇವೆ. ಮತ್ತು ನಾವು ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ, ಪ್ರತಿಯೊಂದು ಮಾರ್ಕೆಟ್ ಯಾರ್ಡಿನಲ್ಲಿ ರೈತರು ಏನು ಸರಕುಗಳನ್ನು ತೆಗೆದುಕೊಂಡು ಬರುತ್ತಾರೆ ಅದು ಮಾರಾಟ ಆಗದೇ ಉಳಿದಾಗ ಅದನ್ನು ಸ್ಟೋರ್ ಮಾಡಿಕೊಳ್ಳುವ ಸಲುವಾಗಿ ಅವರಿಗೆ ೧ ಗೋಡೌನ್‌ನ್ನು ಮುಫತ್ತಾಗಿ ಬಿಟ್ಟುಕೊಡುತ್ತೇವೆ. ಅಲ್ಲಿ ಅವರು ತಮ್ಮ ಸಾಮಾನುಗಳನ್ನು ಇಟ್ಟು ತಮಗೆ ಇಷ್ಟಬಂದಾಗ ಅವನ್ನು ಮಾರಬಹುದು. ಮಾರ್ಕೆಟ್ ಯಾರ್ಡ್‌ಗಳಲ್ಲಿ ಎಲ್ಲಿ ತಕ್ಷಣ ಖಾಲಿ ಗೋಡೌನ್‌ಗಳು ಇವೆ ಅಲ್ಲಿ ಈ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನು ರಾಯಚೂರು ಹಾಗೂ ಗದಗ್‌ಗಳಲ್ಲಿ ಕಾಟನ್ ಮಾರ್ಕೆಟ್ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಅಲ್ಲಿ ಮಾಲನ್ನು ಟೆಂಡರ್ ಕರೆದು ಡಿಸ್‌ಪೋಸ್ ಮಾಡಬೇಕಾದರೆ ಸುಮಾರು ನಾಲ್ಕುವರೆ ಐದು ಗಂಟೆಗಳಕಾಲ ಹಿಡಿಯುವುದರಿಂದ ಅಲ್ಲಿ ಕಂಪ್ಯೂಟರೈಸ್ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈ ವ್ಯವಸ್ಥೆಯಿಂದ ಸುಮಾರು ಅರ್ಧ ಗಂಟೆಯಲ್ಲಿ ರಿಸಲ್ಟ್ ಬಂದು ರೈತರಿಗೆ ಬಹಳ ಅನುಕೂಲವಾಗುತ್ತದೆ. ಇನ್ನು ಮೈಸೂರು ಮಾರ್ಕೆಟ್‌ನಲ್ಲಿ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಒದಗಿಸುತ್ತಿದ್ದೇವೆ. ಇದರಿಂದ ಹಣ್ಣು. ತರಕಾರಿಗಳನ್ನು ಸರಿಯಾದ ಪ್ರಮಾಣದಲ್ಲಿ ತೂಕ ಮಾಡಬಹುದು. ಇನ್ನು ಬಹಳ ಮುಖ್ಯವಾದುದು ಎಂದರೆ, ಕೆಲವು ಕಡೆ. ಕೆಲವು ಮಾರ್ಕೆಟ್ ಸಂಸ್ಥೆಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ಸರಕುಗಳನ್ನು ಸಾಗಾಣಿಕೆ ಮಾಡಬೇಕಾಗಿದೆ ಆ ಬಗ್ಗೆ ಲಾಭ ನಷ್ಟ ಇಲ್ಲದ ರೀತಿಯಲ್ಲಿ ಲಾರಿ ವ್ಯವಸ್ಥೆಯನ್ನು ಅವರಿಗೆ ಒದಗಿಸಿಕೊಡಬೇಕೆಂದು ಹೇಳಿ ಈ ಯೋಜನೆಯನ್ನು ಈ ವರ್ಷ ಜಾರಿಗೆ ತರುತ್ತಿದ್ದೇವೆ. ಮತ್ತು ಕೆಲವು ತಾಲ್ಲೂಕುಗಳಲ್ಲಿ ೫೦ ಸಂತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಸೊಲ್ಲಾಪುರದ ಮಾರ್ಕೆಟ್‌ನ ವಿಷಯ ಕಳೆದ ೩೧ ವರ್ಷಗಳಿಂದ ಉಚ್ಚನ್ಯಾಯಾಲಯದಲ್ಲಿ ಇದ್ದು ಅದನ್ನು ನಾವು ಗೆದ್ದಿದ್ದೇವೆ, ಹಾಗೂ ಈಗ ಅದರ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ. ಮತ್ತು ಬೆಂಗಳೂರು ಹಾಗೂ ಕೆಲವು ಬಹಳ ಮುಖ್ಯ ಸ್ಥಳಗಳಲ್ಲಿ ತರಕಾರಿಯನ್ನು ಈ ವರ್ಷದಿಂದ ಏನಾದರೂ ಮಾಡಿ ರೆಗ್ಯುಲೇಟ್ ಮಾಡಬೇಕೆಂದು ಹೇಳಿ ಜಮೀನಿಗಾಗಿ ಬಿ.ಡಿ.ಎ. ಅವರಿಗೆ ಕೇಳಿದ್ದೇವೆ. ಇನ್ನು ಒಂದೆರಡು ತಿಂಗಳೊಳಗೆ ಈ ಬಗ್ಗೆ ನಮಗೆ ಜಮೀನು ಸಿಗಬಹುದೆಂದು ಹೇಳಿ ನಮಗೆ ವಿಶ್ವಾಸ ಇದೆ. ಇನ್ನು ಮಾನ್ಯ ಕರ್ಕಿಯವರು ಮಾತನಾಡುತ್ತಾ ಸಿದ್ದಾಪುರದಲ್ಲಿ ನೀವು ಗೆಲ್ಲುವುದಿಲ್ಲವೆಂದು ತಿಳಿದು ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೀರಿ ಎಂದು ಹೇಳಿದರು. ಮಾನ್ಯ ಸದಸ್ಯರು ಏನು ಹೇಳಿದರು ಅದು ಸತ್ಯಕ್ಕೆ ದೂರವಾದ

ಸಂಗತಿ ಎಂದು ನಾನು ಅವರಿಗೆ ಹೇಳುತ್ತೇನೆ. ೧ ಸೊಸೈಟಿ ಅಲ್ಲ ೧೦-೨೦ ಸೊಸೈಟಿಗಳು ಹೋಗಲಿ. ಪ್ರಜಾಪ್ರಭುತ್ವದಲ್ಲಿ ಎಲ್ಲದರಲ್ಲೂ ನಾನೇ ನಾನೇ ಇರಬೇಕು ಎಂದು ಹೇಳುವುದು ಸಾಧ್ಯವಿಲ್ಲದ ಮಾತು. ಆ ರೀತಿ ಪ್ರಯತ್ನಪಡುವುದು ಹುಚ್ಚುತನವಾದೀತು ಎಂದು ಹೇಳುತ್ತೇನೆ. ನಮ್ಮ ಪಕ್ಷ ಇಂತಹ ಸೊಸೈಟಿಯಲ್ಲಿ ಸೋಲುತ್ತದೆ ಎಂದು ಹೇಳಿ ನಾವು ಆ ಒಂದು ಮಟ್ಟಕ್ಕೆ ಇಳಿಯುವುದಿಲ್ಲ ಎಂದು ನಾನು ತಮಗೆ ಭರವಸೆ ಕೊಡುತ್ತೇನೆ. ಅಲ್ಲಿ ನಿಧಾನ ಆದ ಬಗ್ಗೆ ನಾನು ಈ ಸದನದಲ್ಲೂ ಸಹಾ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇನ್ನು ಭೂ ಅಭಿವೃದ್ಧಿ ಬ್ಯಾಂಕಗಳ ಬಗ್ಗೆ ಹೇಳಬೇಕೆಂದರೆ......

ಶ್ರೀ ಎಂ. ಮಲ್ಲಪ್ಪ.—ಗದಗ್-ಬೆಟಗೇರಿಯಲ್ಲಿ ಅದೇನೋ ಕಂಪ್ಯೂಟರೈಸ್ ಮಾಡಿದ್ದೇವೆಂದು ಹೇಳಿದಿರಲ್ಲಾ ಆ ಬಗ್ಗೆ ವಿವರ ಕೊಡುತ್ತೀರಾ ? ಅದೇನೋ ೪ ಗಂಟೆ ಕೆಲಸವನ್ನು ಅರ್ಧ ಗಂಟೆಯಲ್ಲಿ ಮಾಡುತ್ತದೆ ಎಂದಿರಲ್ಲಾ ಆ ಬಗ್ಗೆ ವಿವರಣೆ ಕೊಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ. ಈಗ ಸರಕನ್ನು ಡಿಸ್‌ಪೋಸ್ ಮಾಡಲು ಟೆಂಡರ್ ಕರೆಯುತ್ತೇವೆ. ಉದಾಹರಣೆಗೆ ೫೦ ಮೂಟೆ ಶೇಂಗಾ ಇರುತ್ತದೆ. ಅದನ್ನು ಕೊಳ್ಳಲು ೨೦ ಟೆಂಡರ್‌ಗಳು ಬರುತ್ತವೆ. ಈಗ ಆ ಟೆಂಡರ್‌ಗಳನ್ನೆಲ್ಲಾ ಲೆಕ್ಕ ಹಾಕಿ ಯಾರಿಗೆ ಮಾಲು ಕೊಡಬೇಕಾಗುತ್ತದೆ ಎನ್ನುವ ಬಗ್ಗೆ ನಾಲ್ಕುವರೆ, ಐದು ಗಂಟೆಗಳು ಆಗುತ್ತವೆ. ಆದರೆ ಈಗ ಕಂಪ್ಯೂಟರೈಸ್ ಮಾಡಿದ್ದು ಅದಕ್ಕೆ ಎಲ್ಲವನ್ನೂ ಫೀಡ್ ಮಾಡಿದರೆ ಯಾರಿಗೆ ಟೆಂಡರ್ ಕೊಡಬೇಕೆನ್ನುವುದರ ಬಗ್ಗೆ ೨ ನಿಮಿಷಕ್ಕೆ ಅದು ತಿಳಿಸುವುದರಿಂದ ಅಲ್ಲಿ ಸಮಯದ ಉಳಿತಾಯವಾಗುತ್ತದೆ.

ಶ್ರೀ ಎಂ. ಮಲ್ಲಪ್ಪ.—ದಾವಣಗೆರೆಯಲ್ಲೂ ಇದನ್ನು ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಈ ವರ್ಷ ಗದಗ್ ಹಾಗೂ ರಾಯಚೂರಿನಲ್ಲಿ ತರಲಿದ್ದು ಅವು ಸಕ್ಸಸ್‌ಫುಲ್ ಆದರೆ ಬೇರೆ ಕಡೆ ಕೂಡಾ ತರಬಹುದು. ಒಂದೇ ಸಾರಿ ಎಲ್ಲಾ ಕಡೆ ಮಾಡಿ ಅಕಸ್ಮಾತ್ ಕೈ ಸುಟ್ಟುಕೊಂಡರೆ ಹೇಗೆ ? ಈಗ ಮಾಡಿರುವುದರ ಬಗ್ಗೆ ಸಂತೋಷಪಡಿ ಸ್ವಾಮಿ. ಇನ್ನು ಸಂಗಮೇಶ್ವರ್ ಅವರು ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಇರಬೇಕೆಂದು ಹೇಳಿದ್ದಾರೆ. ಹಾಗೂ ಶಾಲೆಗಳಲ್ಲಿ ಟ್ರೈನಿಂಗ್ ಕೊಡುವ ವ್ಯವಸ್ಥೆ ಆಗಬೇಕೆಂದಿದ್ದಾರೆ. ಈಗಾಗಲೇ ಈ ಬಗ್ಗೆ ೧೦ ಸಾವಿರ ಜನರಿಗೆ ಟ್ರೈನಿಂಗ್ ಕೊಡಲಾಗಿದೆ. ಹಾಗೂ ಇದನ್ನು ಇಲ್ಲಿಗೇ ನಿಲ್ಲಿಸುವುದಿಲ್ಲ, ಈ ಟ್ರೈನಿಂಗ್ ವ್ಯವಸ್ಥೆಯನ್ನು ಮುಂದುವರಿಸುತ್ತೇವೆ, ಇನ್ನು ಮಾನ್ಯ ಪಾಟೀಲ್ ಅವರು ಕುಷ್ಟಗಿ ತಾಲ್ಲೂಕಿನ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಟಿ.ಎ.ಪಿ.ಸಿ.ಎಂ.ಸಿ ನಲ್ಲಿ ಅನ್ಯಾಯ ಆಗಿರುವುದರ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ನಾನು ನಮ್ಮ ಅಧಿಕಾರಿಗಳ ಹತ್ತಿರ ಹೇಳಿದ್ದೇನೆ. ಆದರ ಬಗ್ಗೆ ಹೋಗಿ ವಿವರ ತಿಳಿದುಕೊಂಡು ಬರುತ್ತಾರೆ. ಮತ್ತು ಮಾನ್ಯ ಕರ್ಕಿಯವರು, ನಾಮಿನೇಷನ್ ಮಾಡುವವರಿಗೆ ಓಟಿಂಗ್ ಪವರ್ ಇರಬಾರದೆಂದು ಹೇಳಿದ್ದಾರೆ. ಆದರೆ ಈ ಬಗ್ಗೆ ನನ್ನ ವೈಯುಕ್ತಿಕ ಅಭಿಪ್ರಾಯ ಏನೇ ಇದ್ದರೂ ಅದು ಪೊಲಿಟಿಕಲ್ ಡಿಸಿಷನ್ ಎಂದು ಹೇಳಿದ್ದಾರೆ. ಈ ಬಗ್ಗೆ ಎಷ್ಟು ಸಾಧ್ಯವೋ ಅಷ್ಟನ್ನು ನಾವು ನೋಡುತ್ತೇವೆ. ಇನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ತೆಗೆದುಕೊಳ್ಳುವಾಗ ಮೇಲಧಿಕಾರಿಗಳಿಂದ ಪ್ರಭಾವ ಹಾಗೂ ರಾಜಕೀಯ ಪ್ರಭಾವ ಬರುತ್ತದೆಂದು ಹೇಳುತ್ತಿದ್ದಾರೆ. ಆದರೆ ನಾವು ಸೆಕ್ಷನ್ ೧೧೧ರಲ್ಲಿ ಇದನ್ನು ಪ್ರೊವೈಡ್ ಮಾಡಿದ್ದೇವೆ. ಸಿಕ್ಕಾಪಟ್ಟೆ ಯಾರಿಗೂ ಹೆರ್‍ಯಾಕ್ ಮಾಡುವುದು ಬೇಡ ಪ್ರಾಸಿಕ್ಯೂಟ್ ಮಾಡುವುದಕ್ಕೆ ಅಧಿಕಾರಿಗಳೇ ಬಂದು ತೀರ್ಮಾನ ಮಾಡಲಿ ಎಂದು. ರಾಜಕೀಯ ಒತ್ತಡ ಇಲ್ಲದೇ ಅವರು ತೀರ್ಮಾನ ಮಾಡಲಿ ಎಂದು ನಾವು ಮಾಡಿದ್ದೇವೆ ಅದನ್ನು ಅವರೇ ಏನೂ ಉಳಿಸಿಕೊಂಡಿಲ್ಲ. ಆ ಅಧಿಕಾರವನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಈಗ ಎಲ್ಲಾ ಅಧಿಕಾರಿಗಳು ಮಂತ್ರಿಗಳು ಹೇಳಿದ್ದು ಮಾಡುತ್ತಾರೆಂದು ತಿಳಿದುಕೊಂಡಿದ್ದರೆ ಅಷ್ಟು ಸಮಂಜಸವಲ್ಲ ಎಂದು ನನ್ನ ಅಭಿಪ್ರಾಯ. ಈಗಾಗಲೇ ಸಿದ್ಧಾಪುರದಲ್ಲಿ ಹೇಳಿದ್ದೇನೆ. ಇನ್ನು ಮಾನ್ಯ ಚನ್ನಪ್ಪನವರು ಸುಸ್ತಿ ಬಡ್ಡಿ ವಿಚಾರ ಕೇಳಿದರು. ಈಗ ಡಿಫಾಲ್ಟರ್‌ಸ್‌ಗೆ ಅನುಕೂಲ ಮಾಡಿಯಿತು ಸಮಯಕ್ಕೆ ಸರಿಯಾಗಿ ಕಟ್ಟಿದವರಿಗೆ ಅನುಕೂಲವಾಗಿಲ್ಲ ಎಂದು ಹೇಳಿದರು. ಡಾಕ್ಟರಿಗೆ ಗೊತ್ತು ಖಾಯಿಲೆ ಇದ್ದವರಿಗೆ ಔಷಧಿ ಕೊಡುತ್ತಾರೆ ಔಷಧಿ ಕೊಟ್ಟ ಉದ್ದೇಶ ಬಹಳಷ್ಟು ಸೊಸೈಟಿಗಳು ನಿರ್ಜೀವಿಗಳಾಗಿದ್ದವು. ಹಣವನ್ನು ಕೊಡಲಿಕ್ಕೆ ಆಗುತ್ತಿರಲಿಲ್ಲ. ವಸೂಲಿಯಾಗದೆ ನಬಾರ್ಡ್‌ನಿಂದ ರಿಸರ್ವ್ ಬ್ಯಾಂಕಿನಿಂದ ಹಣ ಸಿಕ್ಕುತ್ತಾ ಇರಲಿಲ್ಲ. ಅನೇಕ ಕಾರಣಗಳಿಂದ ತೊಂದರೆಯಾಗಿರುತ್ತದೆ. ಒಂದು ಮಿಸ್ ಅಪ್ರೋಪ್ರಿಯೇಷನ್ ಫಂಡ್‌ನಿಕದ ಇರಬಹುದು ಎರಡು ಬಾವಿಯಲ್ಲಿ ನೀರು ಬರದೇ

ಹೋಗಿರಬಹುದು ಈ ತರಹದಲ್ಲಿ ಡಿಫಾಲ್ಟರ್ ಆಗಿರುತ್ತಾನೆ. ಆ ದೃಷ್ಟಿಯಿಂದ ಈ ಸಂಸ್ಥೆಗಳಿಗೆ ಶಕ್ತಿ ತುಂಬಬೇಕು ರೈತರಿಗೆ ಅಲ್ಪ ಸ್ವಲ್ಪ ಸೇವೆ ಮಾಡಬೇಕೆಂದು ಇಂಟರೆಸ್ಟ್ ಸಬ್ಸಿಡಿ ಕೊಟ್ಟಿದ್ದೇವೆ. ಸುಸ್ತಿದಾರರಿಗೆ ಎನ್‌ಕರೇಜ್‌ಮೆಂಟ್ ಮಾಡಿ ಎಲ್ಲರೂ ಸುಸ್ತಿದಾರರಾಗಲಿ ಎಂದು ಕನ್‌ಸೆಷನ್ ಕೊಟ್ಟಿಲ್ಲ. ಈಗ ಮುವತ್ತನೇ ತಾರೀಖು ಗಡುವು ಹೇಳಿದ್ದೇವೆ. ಅದಕ್ಕೆ ಮುಂದೆ ಹೋಗುವುದಿಲ್ಲ. ಕೆಲವರು ಏನೋ ಹೇಳಿಕೊಂಡು ಹೋಗುತ್ತಿದ್ದಾರೆ ಅದು ಅವರ ಹಣೆಯ ಬರಹ ಈಗ ಸರ್ಕಾರದ ಸೌಲಭ್ಯಗಳನ್ನು ಕೊಟ್ಟಿದ್ದೇವೆ. ಈ ವಿಚಾರದಲ್ಲಿ ನಾವು ಏನು ರಿಸ್ಕ್ ತೆಗೆದುಕೊಂಡಿದ್ದೇವೆ, ಎನ್ನುವುದು ಹಣಕಾಸು ಸಚಿವರು, ಮತ್ತು ಇತರೆ ಸಚಿವರಿಗೆ ಗೊತ್ತು. ೩೧-೩-೧೯೮೪ರ ಕೊನೆಯ ಗಡುವು ಅದರಿಂದ ಆಚೆಗೆ ಸುಸ್ತಿ ಬಡ್ಡಿ ರಿಯಾಯ್ತಿ ಮುಂದುವರಿಯುವುದಿಲ್ಲ ಎಂದು ಈ ಸದನದಲ್ಲಿ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ನಬಾರ್ಡ್‌ನವರು ಬರುತ್ತಾರೆಂದು ಗೊತ್ತಾಗಿದೆ, ಅವರನ್ನು ಕೇಳಿ ನಂತರ ಡಿಸಿಷನ್ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಾ|| ಆಚಾರ್ಯರವರು ಹೇಳಿದ್ದು ಏನೆಂದರೆ ಪ್ರಾಮಾಣಿಕವಾಗಿ ತಮ್ಮ ಕಂತುಗಳನ್ನು ಪ್ರತಿ ವರ್ಷ ಯಾರು ಕಟ್ಟಿಕೊಂಡು ಬಂದರೋ ಅವರಿಗೆ ತೊಂದರೆ ಆಯಿತು ಯಾರು ಯಾರು ದೊಡ್ಡ ದೊಡ್ಡ ರೈತರು ಟ್ರಾಕ್ಟರ್ ತೆಗೆದುಕೊಂಡು ಹಣ ಕಟ್ಟದೇ ಉಳಿಸಿಕೊಂಡಿದ್ದು ಡಿಫಾಲ್ಟರ್ ಆಗಿದ್ದರೂ ಅಂತವರಿಗೆ ಮಾಫಿ ಆಯಿತು ಎಂದು ಹೇಳಿದರು ಪ್ರಾಮಾಣಿಕತನಕ್ಕೆ ಏನು ಕೊಡುತ್ತಿದ್ದೀರಾ ಎಂದು ಅವರು ಕೇಳಿದ್ದು.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಆಗಲೇ ಹೇಳಿದ್ದೇನೆ. ಈ ತರಹ ಕನ್‌ಸೆಷನ್ ಬರುತ್ತದೆಂದು ಯಾರೂ ಎಕ್ಸ್‌ಪೆಕ್ಟ್ ಮಾಡಿರಲಿಲ್ಲ. ಹಲವಾರು ಕಾರಣಗಳಿಂದ ಸುಸ್ತಿದಾರರಾಗಿದ್ದರು ಈ ಸಂಸ್ಥೆಗಳಿಗೆ ಪುನರ್‌ಜೀವ ಕೊಡಬೇಕೆಂದು ಕೊಟ್ಟಿದ್ದೇವೆ. ಸುಸ್ತಾಗಿರುವವರಿಗೆ ಟಾನಿಕ್ ಕೊಟ್ಟಿದ್ದೇವೆ. ಗಟ್ಟಿಯಾಗಿರುವವರಿಗೂ ಟಾನಿಕ್ ಕೊಡಿ ಅಂದರೆ ಹೇಗೆ ? ಮೂರು ತಿಂಗಳ ಹಿಂದೆ ಸುಸ್ತಾಗಿದ್ದರೆ ನೋಡಬಹುದಾಗಿತ್ತು. ಇನ್ನು ಹೌಸ್ ಬಿಲ್ಡಿಂಗ್ ಸೊಸೈಟಿಗಳು ಗ್ರಾಮಾಂತರ ಪ್ರದೇಶದಲ್ಲಿ ಬಲಯುತವಾಗಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ಕಾರ್ಮಿಕರಿಗೆ ಜನತಾ ಮನೆಗಳು ಒದಗಿಸಿಕೊಡಬೇಕಾದ್ದು ನಮ್ಮ ಕರ್ತವ್ಯ ಇದೆ. ಇವೊತ್ತು ನಗರ ಪ್ರದೇಶಗಳಲ್ಲಿ ಸಾಕಷ್ಟು ಮನೆಗಳು ಬೆಳೆಯುತ್ತಿವೆ. ಇವೊತ್ತು ಬೆಂಗಳೂರು ನಗರದಲ್ಲಿರತಕ್ಕ ಹೌಸ್‌ಬಿಲ್ಡಿಂಗ್ ಸೊಸೈಟಿಗಳಲ್ಲಿ ಇತಿಮಿತಿಇಲ್ಲದಂತೆ ಅವ್ಯವಹಾರ ನಡೆಯುತ್ತಿದೆ. ಇದರ ಬಗ್ಗೆ ಯಾವ ರೀತಿ ಕಂಟ್ರೋಲ್ ಮಾಡಬೇಕೆಂದು ನಾನು ಮತ್ತು ಮಾನ್ಯ ಚಂದ್ರಶೇಖರ್‌ರವರು ಬಹಳಷ್ಟು ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಬೆಂಗಳೂರಿನಲ್ಲಿರತಕ್ಕ ಅನೇಕ ಸೊಸೈಟಿಗಳ ಬಗ್ಗೆ ದೂರುಗಳು ಬಂದಿರುವುದರಿಂದ ಇದಕ್ಕೆ ಏನಾದರೂ ಒಂದು ಮಿತಿ ಹಾಕಲೇಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗ ದೂರುಗಳು ಏನು ಬಂದಿವೆ ಅವುಗಳನ್ನು ಸಿಓಡಿ ಅಥವಾ ವಿಜಿಲೆನ್ಸ್‌ಗೆ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಇನ್ನು ಮಾನ್ಯ ಚಿಮ್ಮನಕಟ್ಟಿಯವರು ಮಾತನಾಡುತ್ತಾ ಪ್ರೈಮರಿ ಲ್ಯಾಂಡ್ ಡವಲಪ್‌ಮೆಂಟ್ ಬ್ಯಾಂಕ್ ಬಾದಾಮಿ ಅಲ್ಲಿ ಅವ್ಯವಹಾರವಾಗಿದೆ ಇರಿಗೇಷನ್ ವಿಚಾರದಲ್ಲೂ ಅವ್ಯವಹಾರ ನಡೆದಿದೆ ಎಂದು ಹೇಳಿದರು. ಅದರ ಬಗ್ಗೆ ಅವರಿಗೆ ರಿಪೋರ್ಟು ತರಿಸಿಕೊಟ್ಟೆ ಆದರೂ ಸಮಾಧಾನ ಆಗಿಲ್ಲ ಈ ಬಗ್ಗೆ ಒಂದು ಸಾರಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸಿ.ಓ.ಡಿ. ಗೆ ಅದನ್ನು ಕಳುಹಿಸುತ್ತೇನೆ. ನಮ್ಮಲ್ಲಿ ಏನು ಅಭಿಪ್ರಾಯ ಇದೆ. ಎಂದರೆ ಸಹಕಾರ ಸಂಸ್ಥೆಗಳು ಸರ್ಕಾರದ ಸಂಸ್ಥೆಗಳು ಎಂಬ ಅಭಿಪ್ರಾಯ ಮೂಡಿದಂತೆ ಕಾಣುತ್ತದೆ. ವಿದ್ಯಾವಂತರಲ್ಲೂ ಮತ್ತು ಅವಿದ್ಯಾವಂತರಲ್ಲೂ ಇದು ಇದೆ. ಯಾವುದೇ ಸಹಕಾರ ಸಂಘಗಳು ಕೆಲಸಮಾಡದೆ ಸರ್ಕಾರದ ಮೇಲೆ ನಂಬಿಕೊಂಡು ಕುಳಿತುಕೊಳ್ಳುವುದು ಬಂದಿದೆ. ಈಗ ಮಾನ್ಯ ಹೆಗಡೆಯವರು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಅವರು ಸಹಕಾರಿ ಸಂಸ್ಥೆಗಳಲ್ಲಿ ಅನುಭವ ಪಡೆದುಕೊಂಡು ಬಂದಿರುವವರು. ಸುಮಾರು ೧೫-೨೦ ಜನರು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿದಂಥ ಸದಸ್ಯರು ಎಂ.ಎಲ್.ಎ.ಗಳಾಗಿ ಬಂದಿದ್ದಾರೆ. ಮಾನ್ಯ ಚೌಡಯ್ಯನವರು ಮಾನ್ಯ ಜೋರೆ ಗೌಡರು ಮಾನ್ಯ ಬಿ.ಎಲ್. ಗೌಡರು. ಹೀಗೆ ಬಹಳ ಜನ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ೧೫-೨೦ ಜನರ ಸಹಕಾರಿ ಕ್ಷೇತ್ರದ ಅನುಭವ ಪಡೆದುಕೊಂಡು ಏನು ಬಂದಿದ್ದಾರೆ. ಅವರು ಇದ್ದ ಬದ್ದಂತ ಸೊಸೈಟಿಗಳಾದರೂ ಚೆನ್ನಾಗಿ ನಡೆದಿವೆಯೇನು ?

ಶ್ರೀ ಆರ್.ಎಲ್. ಜಾಲಪ್ಪ.—ತಮಗೂ ದೂರದ ಗಂದ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದೂ ಇಲ್ಲ, ಒಂದು ಸೊಸೈಟಿಗೂ ಸಂಬಂಧ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅನುಭವ ಇರಲಿ, ಅನುಭವ ಇದ್ದರೆ ಸಂತೋಷ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನುಭವಸ್ಥರು, ಇರಬೇಕು. ಆ ಸೊಸೈಟಿಗಳಾದರೂ ಚೆನ್ನಾಗಿ ನಡೆದಿವೆಯೋ ?

ಶ್ರೀ ಆರ್. ಎಲ್. ಜಾಲಪ್ಪ.—ಕೆಲವು ಚೆನ್ನಾಗಿ ನಡೆಯುತ್ತಿವೆ, ಸದಸ್ಯರ ಜವಾಬ್ದಾರಿ ಏನು ಎನ್ನುವುದು ಅರ್ಥವಾಗಿಲ್ಲ. ಸ್ಪಿನ್ನಿಂಗ್ ಮಿಲ್‌ನಲ್ಲಿ ಲಕ್ಷಾಂತರ ರೂಪಾಯಿ ನಷ್ಟವಾಯಿತು, ಸರ್ಕಾರ ಕೊಡಿ ಎಂದು ಹೇಳುವುದು, ಶುಗರ್ ಫ್ಯಾಕ್ಟರಿಯಲ್ಲಿ ಲುಕ್ಸಾನು ಆಯಿತು ಸರ್ಕಾರ ಕೊಡಿ ಎಂದು ಹೇಳುವುದು, ಯಾವುದೇ ಸಂಸ್ಥೆಯಲ್ಲಿ ಲುಕ್ಸಾನು ಆದರೂ ಸರ್ಕಾರ ಕೊಡಿ ಎಂದು ಹೇಳಿದರೆ ಆಡಳಿತ ಮಂಡಲಿಯ ಜವಾಬ್ದಾರಿ ಏನು ? ಮಿಸ್‌ಅಪ್ರೋಪ್ರಿಯೇಷನ್ ಬಗ್ಗೆ ಕನ್‌ಕರೆಂಟ್ ಆಡಿಟ್ ಮಾಡಬೇಕು. ತಾಲ್ಲೂಕು ಲೆವೆಲ್ ಇನ್‌ಸ್ಟಿಟ್ಯೂಷನ್, ಪ್ರೈಮರಿ ಟಿಎಪಿಎಂಎಸ್ ಳಿಗೆ ಆಡಿಟ್ ಮಾಡಬೇಕು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಸಹಕಾರ ಸಂಘಗಳಲ್ಲಿ ಅವರಿಗೆ ವಿಟಮಿನ್ ಎಂ ಇದ್ದರೆ ಸಾಕು, ಆಡಳಿತ ಮಂಡಲಿಯವರ ಜವಾಬ್ದಾರಿ ಏನೂ ಇಲ್ಲ. ಅವರು ಕೈಗೆ ಸಿಕ್ಕಿದ್ದು ತಿನ್ನುವುದು ಹೋಗುವುದು ಅಲ್ಲಿ ಸದಸ್ಯರ ಜವಾಬ್ದಾರಿ ಕೂಡ ಇಲ್ಲ. ಅಲ್ಲಿ ೯ ಜನ ಆಡಳಿತ ಮಂಡಲಿಯ ಸದಸ್ಯರು ಇರುತ್ತಾರೆ. ಅಲ್ಲಿ ಅಧ್ಯಕ್ಷರು ಗುರು, ಸೆಕ್ರೆಟರಿ ಶನಿ ಇದ್ದ ಹಾಗೆ. ಸದಸ್ಯರು ಜವಾಬ್ದಾರಿ ಇಲ್ಲ. ಜನರಲ್ ಬಾಡಿಯಲ್ಲಿ ಯಾರೂ ಏನೂ ಕೇಳುವುದಿಲ್ಲ. ಆಡಳಿತ ಮಂಡಲ್ಲಿ ಯಾರಿಗೂ ಅದು ಬೇಕಾಗಿಲ್ಲ. ಎಲ್ಲರನ್ನು ಅನುಸರಿಸಿಕೊಂಡು ಅಧಿಕಾರಿಗಳೂ ಸಾಮಿಲಾಗಿ ತಿಂದುಕೊಂಡು ಮನೆಗೆ ಹೋಗುತ್ತಿದ್ದಾರೆ. ಆದುದರಿಂದ ಸೆಕ್ಷನ್ ೧೧೯ ರಲ್ಲಿ ಪನಿಷ್‌ಮೆಂಟ್ ತಿದ್ದುಪಡಿ ತಂದಿದ್ದೇವೆ, ಇಲ್ಲದೇ ಹೋದರೆ ಡಿಪಾಜಿಟ್ ಹಣಕ್ಕೆ ರಕ್ಷಣೆ ಕೊಟ್ಟಂತೆ ಆಗುವುದಿಲ್ಲ. ಸಾವಿರಾರು ಕೋಟಿ ರೂಪಾಯಿ ಡಿಪಾಜಿಟ್ ಹಣ ಏನಿದೆ ಅದನ್ನು ಕಾಪಾಡಿಕೊಂಡು ಬರಲಿಕ್ಕೆ ಆಗುವುದಿಲ್ಲ, ಬಡವರಿಗೆ ಅನುಕೂಲ ಕೊಡಲಿಕ್ಕೆ ಆಗುವುದಿಲ್ಲ. ಷೇರುದಾರರು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಹಣವನ್ನು ತಿಂದು ತಪ್ಪಿಸಿಕೊಂಡು ಹೋಗುವ ಕಾಲ ಇನ್ನು ಮುಂದೆ ಆಗುವುದಿಲ್ಲ. ಇವೊತ್ತು ಈ ದಿಸೆಯಲ್ಲಿ ಹಲವಾರು ಬದಲಾವಣೆಗಳು ಬೇಕು, ಅದನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಯಾರು ಈ ಕ್ಷೇತ್ರದಲ್ಲಿ ಅರಿತು ನುರಿತವರು ಇದ್ದಾರೆ ಅವರ ಸಭೆ ಕರೆದು ಸಲಹೆಗಳನ್ನು ಪಡೆದು ಇದನ್ನು ಚೊಕ್ಕಟ ಮಾಡಬೇಕೆಂದು ಇದ್ದೇನೆ. ಏಕೆಂದರೆ ಈ ಮಿಸ್‌ಅಪ್ರೋಪ್ರಿಯೇಷನ್ ಏನ್ನುವುದು ನಿಲ್ಲುತ್ತಿಲ್ಲ. ಪೊಲೀಸರ ಕೈಗೆ ಕೇಸುಗಳನ್ನು ಕೊಟ್ಟರೆ. ಅವರಿಗೆ ಎಷ್ಟು ಸಮಯ ಬೇಕು ಅಷ್ಟು ಸಮಯ ಪಡೆದುಕೊಳ್ಳುತ್ತಾರೆ. ಆದುದರಿಂದ ಈ ಬಗ್ಗೆ ಕಾನೂನು ಬದಲಾವಣೆಯ ಅವಶ್ಯಕತೆ ಇದೆ. ಇದು ಏನಾಗುತ್ತದೆ ಎಂದರೆ ಜೇಡರ ಬಲೆಯಲ್ಲಿ ಸಣ್ಣ ಸಣ್ಣ ಹುಳುಗಳು ಸಿಕ್ಕಿಕೊಂಡ ಆಗಿಬಿಡುತ್ತದೆ. ದೊಡ್ಡ ದೊಡ್ಡ ಹುಳಗಳು ಆದರೆ ಆ ಬಲೆಯನ್ನೇ ಹರಿದು ಕೊಂಡು ಹೋಗುತ್ತವೆ. ಆದುದರಿಂದ ಇದನ್ನು ತಪ್ಪಿಸಲಿಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇವೆ.

ಮಾನ್ಯ ಅಧ್ಯಕ್ಷರೆ, ನಾನು ಇನ್ನು ಒಂದು ಮಾತನ್ನು ಹೇಳಿ ಉತ್ತರವನ್ನು ಮುಗಿಸುತ್ತೇನೆ. ಸಹಕಾರಿ ರಂಗದಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳುವುದಕ್ಕೆ ನಾನೇನೂ ಅಷ್ಟು ದಡ್ಡನಲ್ಲ. ಅದನ್ನು ನಾನು ಹೇಳುವುದಕ್ಕೆ ಸಾಧ್ಯವೂ ಇಲ್ಲ. ಆದರೆ ಕಳೆದ ೧೪ ತಿಂಗಳಿಂದ ನಾನು ಎಲ್ಲವನ್ನೂ ಸಾಧನೆ ಮಾಡಿದ್ದೇನೆಂದು ಹೇಳುವುದಕ್ಕೂ ತಯಾರಿಲ್ಲ. ಒಟ್ಟಿನಲ್ಲಿ ನಾನು ಈ ದಿಸೆಯಲ್ಲಿ ಮುಂದುವರಿಯುತ್ತಿದ್ದೇನೆ. ನನ್ನ ಕೈಲಾದಷ್ಟು ಈ ಇಲಾಖೆಯನ್ನು ಚೊಕ್ಕಟ ಮಾಡಲು ಪ್ರಯತ್ನ ಮಾಡುತ್ತಿದ್ದೇನೆ. ಬಹಳಷ್ಟು ಕೆಲಸವನ್ನು ಮಾಡದಿದ್ದರೂ ಅಲ್ಪಸಲ್ಪ ಆದರೂ ಈ ಸಹಕಾರಿ ರಂಗವನ್ನು ಅಭಿವೃದ್ಧಿ ಮಾಡುವುದಕ್ಕೆ ಮತ್ತು ಸಹಕಾರ ಇಲಾಖೆ ಎಂಬುದು ಒಂದು ಇದೆ ಎಂಬುದನ್ನು ಜನರಿಗೆ ತೋರಿಸಿಕೊಡುವುದಕ್ಕೆ ಸ್ವಲ್ಪಮಟ್ಟಿಗೆ ಕೆಲಸಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೆ, ಕಳೆದವರ್ಷ ಉತ್ತರವನ್ನು ಕೊಡುವಾಗ ೪ ಗಂಟೆ ಸಮಯ ತೆಗೆದುಕೊಂಡಿದ್ದೆ. ಕಳೆದಸಾರಿ ಬಹಳ ಜೋರಾಗಿತ್ತು. ಆದರೆ ಈ ವರ್ಷ ನಾನು ಹೇಳಿರತಕ್ಕ ಉತ್ತರದಿಂದ ಎಲ್ಲ ಮಾನ್ಯ ಸದಸ್ಯರಿಗೂ ಸಾಕಷ್ಟು ಸಮಾಧಾನವಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಎಲ್ಲ ಮಾನ್ಯ ಸದಸ್ಯರೂ ನನಗೆ ಕಳೆದ ೧೪ ತಿಂಗಳಿಂದ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು

ನನ್ನ ಜೊತೆ ಸಹಕರಿಸಿದ್ದಾರೆ. ಹೀಗೆ ಎಲ್ಲ ಸದಸ್ಯರ ಬೆಂಬಲ ಇದ್ದರೆ ಮಾತ್ರ ಒಳ್ಳೆಯ ಕೆಲಸವನ್ನು ನಾನು ಮಾಡ ವುದಕ್ಕೆ ಸಾಧ್ಯವಾಗುತ್ತದೆ. ಈ ಸಹಕಾರ ರಂಗವನ್ನು ನಾವು ಉಳಿಸಿಕೊಂಡು ಹೋಗಬೇಕು. ಇದಕ್ಕೆ ಬೇರೆ ಪರ್ಯಾಯ ವ್ಯವಸ್ಥೆ ಇಲ್ಲ. ಕಳೆದವರ್ಷ ನಾವು ೩೦ ಕೋಟಿ ರಿಯಾಯಿತಿಯನ್ನು ಕೊಟ್ಟಿದ್ದರಿಂದ ಈ ವರ್ಷ ೩೦ ಕೋಟಿ ಹೆಚ್ಚಿಗೆ ಕೊಟ್ಟಿದ್ದೇವೆ. ೨೦ ಕೋಟಿ ಅಲ್ಪಾವಧಿ ಸಾಲ, ಮತ್ತು ೧೦ ಕೋಟಿ ಧೀರ್ಘಾವಧಿ ಸಾಲವಾಗಿ ಕೊಟ್ಟಿದ್ದೇವೆ. ಕಳೆದವರ್ಷ ನಾವು ರಿಯಾಯಿತಿ ಕೊಡದೇ ಇದ್ದಿದ್ದರೆ ಈ ಸಂಘಗಳನ್ನು ಸ್ಟ್ರೀಮ್‌ಲೈನ್ ಮಾಡುವುದಕ್ಕೆ ಪ್ರಯತ್ನ ಮಾಡದೇ ಇದ್ದಿದ್ದರೆ ಬಹುಶಃ ೩೦ ಕೋಟಿ ರೂ. ಅಲ್ಲ, ಕಳೆದವರ್ಷ ಏನು ಕೊಟ್ಟಿದ್ದೆವು ಅದಕ್ಕಿಂತಲೂ ಕಡಿಮೆ ಹಣವನ್ನು ಕೊಡಬೇಕಾಗುತ್ತಿತ್ತು. ನಾವು ನಬಾರ್ಡ್‌ನಿಂದ ಸುಮಾರು ೨೦ ಕೋಟಿ ರೂ. ಹೆಚ್ಚಿಗೆ ಹಣವನ್ನು ಪಡೆದಿದ್ದೇವೆ. ನಾನು ನಬಾರ್ಡ್‌ನ ಜೊತೆ ಚರ್ಚೆಗೆ ಹೋದಾಗ ಕೂಡ "At least you must appreciate me I have become a bigger custome by borrowing Rs. 20 crores more. Why don't you give me concessions ?'' ಎಂದು ನಾನು ಹೇಳಿದ್ದೇನೆ. ಇಷ್ಟು ವಿಚಾರಗಳನ್ನು ಹೇಳಿ ಇವತ್ತು ನನ್ನ ಜೊತೆಯಲ್ಲಿ ಸಹಕರಿಸಿದ ಎಲ್ಲ ಮಾನ್ಯ ಸದಸ್ಯರಿಗೂ ವಂದನೆಗಳನ್ನರ್ಪಿಸಿ ಈ ಬೇಡಿಕೆಗಳನ್ನು ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಸಕ್ಕರೆ ಮತ್ತು ಅಕ್ಕಿಯನ್ನು ತಾಲ್ಲೂಕ್ ಸೊಸೈಟಿಗಳಿಗೆ ಕಳುಹಿಸಿಕೊಡುತ್ತೀರಿ. ಅವರು ಅದನ್ನು ಸಬ್ಸಿಡೈಸ್ಡ್ ರೇಟ್‌ನಲ್ಲಿ ಮಾರಬೇಕು. ಆದರೆ ಈ ಸಬ್ಸಿಡಿಯನ್ನು ಜಿಲ್ಲಾಧಿಕಾರಿಯವರು ಇಲ್ಲವೇ ಆಹಾರ ಇಲಾಖೆಯವರ ಕೊಡಬೇಕು. ಅವರು ೧ ವರ್ಷವಾದರೂ ಕೂಡ ಈ ಸಬ್ಸಿಡಿಯನ್ನು ಕೊಡುವುದಿಲ್ಲ. ಅವರು ಪುನಃ ಸಕ್ಕರೆ, ಅಕ್ಕಿಯನ್ನು ಕೊಂಡುಕೊಳ್ಳಬೇಕಾದರೆ ಜಿಲ್ಲಾ ಬ್ಯಾಂಕ್‌ನಿಂದ ೧೮ ಪರ್ಸೆಂಟ್ ಬಡ್ಡಿ ಕೊಟ್ಟು ಹಣವನ್ನು ತರಬೇಕಾಗುತ್ತದೆ. ಇದರಿಂದಾಗಿ ತಾಲ್ಲೂಕು ಸೊಸೈಟಿಗಳಿಗೆ ಬಹಳ ಕಷ್ಟವಾಗುತ್ತದೆ. ಈ ಮಾತನ್ನು ಕಳೆದಸಾರಿ ಕೂಡ ನಾನು ಹೇಳಿದ್ದೆ. ಇದನ್ನು ಮಾನ್ಯ ಆಹಾರ ಮಂತ್ರಿಗಳು ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಅದಕ್ಕೆ ಮಾನ್ಯ ಆಹಾರ ಮಂತ್ರಿಗಳೇ ಉತ್ತರವನ್ನು ಹೇಳಬೇಕಾಗುತ್ತದೆ.

ಡಾ|| ಹೆಚ್. ಎಲ್. ತಿಮ್ಮೇಗೌಡ.—ಇವರು ಇದನ್ನು ಒತ್ತಾಯಮಾಡಿ ಸರ್ಕಾರದಿಂದ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಎಂದರೆ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಲೆವಿ ಸಕ್ಕರೆಯನ್ನು ಸರ್ಕಾರದವರು ಲಿಫ್ಟ್ ಮಾಡುವುದಿಲ್ಲ. ಆ ಕಾರ್ಖಾನೆಯವರೂ ಕೂಡ ಅದನ್ನು ಮಾರುವಂತಿಲ್ಲ. ಅವರು ಹಾಕಿರತಕ್ಕ ದುಡ್ಡು ಡೆಡ್ ಸ್ಟಾಕ್ ಆಗಿ ಅವರು ಆ ಹಣಕ್ಕೆ ಬಡ್ಡಿಯನ್ನು ಕೊಡಬೇಕಾಗುತ್ತದೆ. ಆದ್ದರಿಂದ ಈ ಎರಡು ವಿಚಾರದಲ್ಲಿ ಅಂದರೆ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಮತ್ತು ಟಿ. ಎ. ಪಿ. ಎಂ. ಎಸ್. ಗೆ ಏನು ತೊಂದರೆಯಾಗುತ್ತಿದೆ ಅದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಈಗಾಗಲೇ ಹೇಳಿದ್ದೇನೆ. ಟಿ. ಎ. ಪಿ. ಸಿ. ಎಂ. ಎಸ್. ಲುಕ್ಸಾನು ಆಗುವುದಕ್ಕೆ ಇದೂ ಒಂದು ಕಾರಣ. ಈ ಸಬ್ಸಿಡಿ ನಿಧಾನವಾಗುತ್ತಿರುವುದರಿಂದ ಈರೀತಿ ತೊಂದರೆಯಾಗುತ್ತಿದೆ. ನಾನು ಸಂಬಂಧಪಟ್ಟ ಮಂತ್ರಿಗಳ ಜೊತೆ ಎರಡುಸಾರಿ ಚರ್ಚೆಮಾಡಿದ್ದೇನೆ. ಮತ್ತು ಫುಡ್ ಸೆಕ್ರೆಟರಿ ಹಾಗೂ ಡೈರೆಕ್ಟರನ್ನು ಕರೆದು ಚರ್ಚೆಮಾಡಿದ್ದೇನೆ. ಅನೇಕಸಾರಿ ನಾನು ಹೇಳಿದಮೇಲೆ ಅವರು ಹಣವನ್ನು ಕೊಟ್ಟಿದ್ದಾರೆ. ಇವತ್ತು ಹಣವನ್ನು ಕೊಡುವುದರಲ್ಲಿ ನಿಧಾನವಾಗಿದೆ. ಇದನ್ನು ಬೇಗ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಲೆವಿ ಸಕ್ಕರೆ ಮೇಲೆ ನಮಗೆ ಯಾವುದೇ ಹತೋಟಿಯೂ ಇಲ್ಲ. ಇದನ್ನು ಅಲಾಟ್ ಮಾಡತಕ್ಕದ್ದೂ ಕೂಡ ಕೇಂದ್ರ ಸರ್ಕಾರದವರು. ನಾವು ಒಂದು ಚಮಚವನ್ನೂ ಕೂಡ ಸ್ವತಂತ್ರವಾಗಿ ನಮ್ಮ ಬಾಯಿಗೆ ಹಾಕಿಕೊಳ್ಳುವುದಕ್ಕೆ ಅಧಿಕಾರವಿಲ್ಲ. ನಮಗಿರತಕ್ಕ ಒಂದೇ ಒಂದು ಅಧಿಕಾರ ಎಂದರೆ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಷೇರು ಕೊಡುವುದು, ಬ್ರಿಡ್ಜ್ ಲೋನ್ ಕೊಡುವುದು ಅನಂತರ ರೈತನಿಂದ ಬೈಸಿಕೊಳ್ಳುವುದು. ಇದನ್ನು ಬಿಟ್ಟರೆ ಇನ್ನು ಬೇರೆ ಯಾವ ಅಧಿಕಾರವೂ ಇಲ್ಲ. ಈ ವಿಚಾರವನ್ನು ಕೇಂದ್ರ ಸರ್ಕಾರದ ಮಂತ್ರಿಗಳ ಗಮನಕ್ಕೆ ಬಹಳಷ್ಟುಸಾರಿ ತಂದಿದ್ದೇನೆ. ದುರದೃಷ್ಟವಶಾತ್ ನಮಗೆ ಅಧಿಕಾರವೂ ಸಿಕ್ಕಿಲ್ಲ.

ಶ್ರೀ ವಿ. ಧನಂಜಯ ಕುಮಾರ್.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆ, ಬಹ್ಮಾವರ, ಇದಕ್ಕೆ ಆದಷ್ಟು ಬೇಗ ಆಡಳಿತ ಮಂಡಲಿಯನ್ನು ನೇಮಕ ಮಾಡುತ್ತೀರಾ? ಮತ್ತು ಎರಡನೆಯದಾಗಿ ಮಾನ್ಯ ಸದಸ್ಯರಾದ ತಿಮ್ಮೇಗೌಡರು ಹೇಳಿದಂತೆ ಟಿ.ಎ.ಪಿ.ಸಿ.ಎಂ. ಎಸ್. ಮತ್ತು ಜನತಾ ಬಜಾರ್‌ಗಳಿಗೆ ಕಳೆದ ತಿಂಗಳ ಅಂತ್ಯದವೇಳೆಗೆ ಒಟ್ಟು ೩೨ ಲಕ್ಷ ರೂ. ಸಬ್ಸಿಡಿ ಬರಬೇಕಾಗುತ್ತದೆ. ಜನತಾ ಬಜಾರ್ ಮೊದಲೇ ನಷ್ಟದಲ್ಲಿ ನಡೆಯುತ್ತಿದೆ. ಮಾನ್ಯ ಆಹಾರ ಮಂತ್ರಿಗಳೂ ಇಲ್ಲೇ ಇದ್ದಾರೆ. ಆದಷ್ಟು ಬೇಗ ಹಣವನ್ನು ಕೊಡಿಸುತ್ತೀರಾ ? ಇನ್ನು ಎರಡನೆಯದಾಗಿ ಕಳೆದ ೨ ದಿವಸದ ಹಿಂದೆ ರೇಡಿಯೋದಲ್ಲಿ ಒಂದು ವಿಚಾರವನ್ನು ಕೇಳಿದೆ. ಅದು ಏನೆಂದರೆ ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದೆಯಂತೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.—೭೮ ಲಕ್ಷ ಷೇರು ಕ್ಯಾಪಿಟಲ್ ವಸೂಲಾಗಬೇಕು. ಆದರೆ ಈಗ ಅವರದ್ದು ಕೇವಲ ೨೯ ಲಕ್ಷ ಮಾತ್ರ ಷೇರು ಕ್ಯಾಪಿಟಲ್ ವಸೂಲಾಗಿದೆ. ದಯವಿಟ್ಟು ಷೇರು ಕ್ಯಾಪಿಟಲ್ ಬೇಗ ವಸೂಲ್ಮಾಡಿಕೊಡಬೇಕು. ಇನ್ನು ಎರಡನೆಯದಾಗಿ ಸಹಕಾರಿ ಸಕ್ಕರೆ ಕಾರ್ಖಾನೆಗೆ ಆಡಳಿತ ಮಂಡಲಿಯನ್ನು ರಚನೆ ಮಾಡಬೇಕೆಂದು ಹೇಳಿದ್ದಾರೆ. ಆಡಳಿತ ಮಂಡಲಿ ಇದ್ದರೆ ರಾಜಕೀಯ ಬರಬಹುದೆಂದು ಇದುವರೆವಿಗೂ ಜಿಲ್ಲಾಧಿಕಾರಿಯವರನ್ನೇ ಛೇರ್‌ಮನ್ ಆಗಿ ಮಾಡಿಕೊಂಡು ಕಾಲವನ್ನು ತಳ್ಳಿಕೊಂಡು ಬಂದೆವು. ಈಗ ತಾವು ಈ ವಿಚಾರವನ್ನು ಹೇಳಿದ್ದೀರಿ. ಇದನ್ನು ಪರಿಶೀಲಿಸುತ್ತೇನೆ. ಇನ್ನು ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಹೇಳಿದ್ದೀರಿ, ಇದನ್ನು ನಾನು ನೋಡುತ್ತೇನೆ.

ಶ್ರೀ ಬಸವನಗೌಡ.—ಸ್ವಾಮಿ, ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಮಿಲ್ಕ್ ಪ್ರೊಡ್ಯುಸರ್ಸ್ ಕೋ-ಆಪರೇಟಿವ್ ಸೊಸೈಟಿ ಮತ್ತು ಹಾರ್ಟಿಕಲ್ಚರ್ ಸೊಸೈಟೀಸ್ ಎಂದು ಮಾಡಿಕೊಂಡಿದ್ದಾರೆ. ಇವು ಏನೇನೂ ಕೆಲಸ ಮಾಡುವುದಿಲ್ಲ. ೧ ವರ್ಷಕ್ಕೋ, ೨ ವರ್ಷಕ್ಕೋ ಒಮ್ಮೆ ಆಡಿಟ್ ಮಾಡುತ್ತಾರೆ. ಇವು ಒಂದು ಚೂರೂ ಕೆಲಸಮಾಡುವುದಿಲ್ಲ. ಆದ್ದರಿಂದ ಇವುಗಳನ್ನು ಏತಕ್ಕೆ ರದ್ದು ಮಾಡಬಾರದು. ಸಹಕಾರಿ ಸಂಘಗಳ ಹೆಸರಿನಲ್ಲಿ ಡಿ. ಸಿ. ಸಿ. ಬ್ಯಾಂಕ್‌ನಲ್ಲಿ ಅಕೌಂಟ್‌ನ್ನು ಓಪನ್ ಮಾಡಿರುತ್ತಾರೆ. ಒಂದು ಪೈಸೆ ಕೂಡ ಟರ್ನ್ ಓವರ್ ಆಗಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ೨೪೩೮ ಸೊಸೈಟಿಗಳು ಎಲ್ಲಿವೆ ಎಂಬುದೂ ಕೂಡ ಗೊತ್ತೇ ಇಲ್ಲವೆಂದು ಡೈರೆಕ್ಟರ್ ಆಫ್ ಆಡಿಟರ್ ರವರು ನನಗೆ ಹೇಳಿದ್ದಾರೆ ಆದ್ದರಿಂದ ಇವುಗಳನ್ನೆಲ್ಲಾ ಲಿಕ್ವಿಡೇಟ್ ಮಾಡಬೇಕೆಂದು ನಮ್ಮವರಿಗೆ ಹೇಳಿದ್ದೇನೆ.

ಇನ್ನು ಮಾನ್ಯ ಸದಸ್ಯರಾದ ಚನ್ನಪ್ಪನವರು ಮಾತನಾಡುತ್ತಾ ಹೇಳಿದರು, ಓಪನ್‌ವೆಲ್ಸ್ ಮಾಡುತ್ತಿದ್ದೇವೆ, ಅದರಲ್ಲಿ ನೀರು ಸಿಕ್ಕುತ್ತಿಲ್ಲ. ಆದ್ದರಿಂದ ಬೋರ್‌ವೆಲ್ಸ್ ಹಾಕಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ತಿಳಿಸಿದ್ದಾರೆ. ನಾವು ಬೋರ್‌ವೆಲ್ಸ್‌ನ್ನು ಮಂಜೂರು ಮಾಡಲು ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಮತ್ತು ಇದಕ್ಕೆ ಮಂಜೂರಾತಿ ಕೂಡ ನೀಡುತ್ತಿದ್ದೇವೆ ಫೇಲ್ಡ್ ವೆಲ್ಸ್ ಬಗ್ಗೆ ಹೇಳುವುದಾದರೆ ತಹಸೀಲ್ದಾರ್ ಅಥವಾ ಬಿ. ಡಿ. ಒ. ರವರು ಸರ್ಟಿಫೈ ಮಾಡಿದ್ದಕ್ಕೆ ಅಸಿಸ್ಟೆಂಟ್ ಕಮಿಷನ್‌ರವರು ಕೇವಲ ಸಹಿ ಹಾಕುತ್ತಾರೆ. ಆದರೆ ಆಸಿಸ್ಟೆಂಟ್ ಕಮಿಷನ್‌ರವರು ಏತಕ್ಕೆ ಸುಮ್ಮನೆ ಇಟ್ಟುಕೊಂಡಿದ್ದರೋ ಗೊತ್ತಿಲ್ಲ. ಸರ್ಕಾರದ ಆಜ್ಞೆಯಲ್ಲೂ ಸ್ವಲ್ಪ ವ್ಯತ್ಯಾಸ ಇದುದ್ದರಿಂದ ಅದನ್ನೆಲ್ಲಾ ನಾವು ವಾಪಸ್ಸು ತೆಗೆದುಕೊಂಡು ಒಳ್ಳೆಯ ಆರ್ಡರನ್ನು ನಾವು ಕೊಟ್ಟಿದ್ದೇವೆ. ಫೈನಲ್ ಇನ್‌ಸ್ಟಾಲ್‌ಮೆಂಟ್ ತೆಗೆದುಕೊಂಡ ಮೇಲೆ ಬಾವಿ ಫೇಲ್ ಆದರೆ ಅದಕ್ಕೆ ಏನೂ ಕೊಡುವಂತಿಲ್ಲ ಎಂದು ತೀರ್ಮಾನ ಇತ್ತು. ಈಗ ಅದನ್ನೂ ಕೂಡ ವಾಪಸ್ಸು ತೆಗೆದುಕೊಂಡು even after taking the final instalment if the well fails, the outstanding of the loan shall be waived of. ಎಂದು ಮಾಡಿದ್ದೇವೆ. ಅವರು ಯಾವ ದಿವಸ ಅರ್ಜಿಗಳನ್ನು ಕೊಟ್ಟಿದ್ದಾರೆ, ಅವತ್ತು ಅವರು ಎಷ್ಟು ಹಣ ಕೊಡಬೇಕಾಗಿತ್ತುಅದನ್ನೆಲ್ಲಾ ಮನ್ನಾ ಮಾಡಬೇಕೆಂದು ತಿಳುವಳಿಕೆಯನ್ನು ಕೊಟ್ಟಿದ್ದೇವೆ. ತಮಗೆಲ್ಲರಿಗೂ ಕೂಡ ಅದರ ಕಾಪಿಯನ್ನು ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಆರ್. ತಿಪ್ಪಯ್ಯ.—ಮೂಡಿಗೆರೆಯನ್ನು ಸಕಲೇಶ್ವರಪುರಕ್ಕೆ ಹಾಕಿದ್ದೀರಿ. ಕೊಪ್ಪವನ್ನು ಶಿವಮೊಗ್ಗಾಕ್ಕೆ ಹಾಕಿದ್ದೀರಿ. ನರಸಿಂಹರಾಜಪುರವನ್ನು ಕಡೂರಿಗೆ ಹಾಕಿದ್ದೀರಿ. ಇದರಿಂದ ಮಾರ್ಕೆಟಿಂಗ್ ಸೊಸೈಟಿ ಸದಸ್ಯರಿಗೆ ಚುನಾವಣೆ ಸಂದರ್ಭದಲ್ಲಿ ತೊಂದರೆಯಾಗಿದೆ. ಆದ್ದರಿಂದ

ಚಿಕ್ಕಮಗಳೂರು ಮತ್ತು ಮೂಡಿಗೆರೆಯನ್ನು ಸೇರಿಸಿ ಒಂದು ಮಾರ್ಕೆಟನ್ನೂ, ಶೃಂಗೇರಿ ಮತ್ತು ಕೊಪ್ಪವನ್ನು ಸೇರಿಸಿ ಒಂದು ಮಾರ್ಕೆಟನ್ನೂ ಮಾಡುವುದಕ್ಕೆ ಸಾಧ್ಯವೇ ? ಇನ್ನು ಎರಡನೆಯದಾಗಿ ಮೊನ್ನೆ ತಾನೇ ಮಾನ್ಯ ಮಂತ್ರಿಗಳನ್ನು ನಾವು ಭೇಟಿ ಮಾಡಿದ್ದೇವೆ. ಪ್ಲಾಂಟರ್ಸ್ ಕೋ-ಆಪರೇಟಿವ್ ಸೊಸೈಟಿ ಎಂದು ಇದೆ. ಪ್ಲಾಂಟರ್ಸ್ ಎಂದರೆ ಎಲ್ಲರೂ ಪ್ಲಾಂಟರ್ಸ್ ಆಗುವುದಿಲ್ಲ. ಚಿಕ್ಕಪುಟ್ಟ ಪ್ಲಾಂಟರ್ಸ್ ಕೂಡ ಇದ್ದಾರೆ ಮೂಡಿಗೆರೆ ಭಾಗದಲ್ಲಿ ಸುಮಾರು ೫೫ ಭಾಗದ ಷೇರನ್ನು ಕೊಟ್ಟು ಸಾಲವನ್ನು ಪಡೆದಿದ್ದಾರೆ ಕೂರ್ಗ್‌ನಲ್ಲಿ ಎಲ್ಲ ಅನುಕೂಲಗಳನ್ನೂ ಕೊಟ್ಟಿದ್ದಾರೆ. ಅದೇ ರೀತಿ ಇವರಿಗೂ ಕೂಡ ಸಬ್ಸಿಡಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಒಂದು ನಿಯೋಗ ಹೋಗಿತ್ತು. ಆದ್ದರಿಂದ ಈ ಎರಡು ವಿಚಾರಗಳಲ್ಲೂ ಮಾನ್ಯ ಮಂತ್ರಿಯವರು ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

೬ ಪಿ. ಎಂ.

ಶ್ರೀ ಆರ್. ಎಲ್. ಜಾಲಪ್ಪ.—ರೆಗ್ಯುಲೇಟೆಡ್ ಮಾರ್ಕೆಟ್ಸ್ ಮಾಡತಕ್ಕಂಥದ್ದು ಅಲ್ಲಿನ ವ್ಯಾಪಾರ ಮತ್ತು ಅಲ್ಲಿಗೆ ಬರತಕ್ಕಂಥ ಸಾಮಾನುಗಳು ಅದರ ಆಧಾರದ ಮೇಲೆ ಹೋಗುತ್ತದೆ. ಎಲೆಕ್ಷನ್‌ಗೋಸ್ಕರವಾಗಿ ರೆಗ್ಯುಲೇಟೆಡ್ ಮಾರ್ಕೆಟ್‌ಗಳನ್ನು ಮಾಡುವುದಕ್ಕೆ ಆಗುವುದಿಲ್ಲ.

ಎರಡನೆಯದಾಗಿ ಪ್ಲಾಂಟರ್ಸ್ ಬ್ಯಾಂಕ್‌ಗಳ ಬಗ್ಗೆ ಹೇಳಿದ್ದೀರಿ, ಅದಕ್ಕೆ ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ತಮ್ಮ ಅಭಿಪ್ರಾಯ ಏನು ಎಂದು ತಿಳಿಸಿ ಎಂದು ಹೇಳಿದ್ದೇವೆ, ಅಲ್ಲಿ ಏನು ತೊಂದರೆಯಾಗಿದೆ ಎಂದರೆ ಸಾಲ ಮಾಡುತ್ತಿದ್ದಾರೆ ವೆಜಿಟೇರಿಯನ್ಸ್ ಪ್ಲಾಂಟರ್ಸ್ ಬ್ಯಾಂಕಿನಿಂದ. ತಾವು ಕೂಡ ಇದರ ಬಗ್ಗೆ ಇಂಟರೆಸ್ಟ್ ಇದ್ದೀರಿ ಎಂದು ಕಾಣುತ್ತದೆ. ಒಂದು ಸಾರಿ ನನಗೆ ಫೋನ್ ಕೂಡ ಮಾಡಿದ್ದೀರಿ. ನಾನು ಅದನ್ನು ನೋಡುತ್ತೇನೆಂದು ಹೇಳಿದ್ದೇನೆ. ಅದರಲ್ಲಿ ಏನಾದರೂ ಅಡತಡೆಗಳಿದ್ದರೆ ಅದನ್ನು ಪರೀಕ್ಷೆ ಮಾಡುತ್ತೇನೆ. ಈ ವಿಷಯದ ಬಗ್ಗೆ ಗಮನ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರ ಮೊದಲು ಯಾದಗಿರ್‌ನಲ್ಲಿ ಕೋಆಪರೇಟೀವ್ ಸ್ಪಿನ್ನಿಂಗ್ ಮಿಲ್ ಪ್ರಾರಂಭ ಮಾಡುತ್ತೇವೆಂದು ನಿರ್ಣಯವನ್ನು ತೆಗೆದುಕೊಂಡಿತ್ತು. ಈಗ ಅದು ಯಾವ ಹಂತದಲ್ಲಿ ಇದೆ. ಚೀಫ್ ಪ್ರಮೋಟರ್‌ನ್ನು ಏನಾದರೂ ನೇಮಕ ಮಾಡಿದ್ದೀರಾ ? ಷೇರು ಕ್ಯಾಪಿಟಲ್ ಏನಾದರೂ ಕಲೆಕ್ಟ್ ಮಾಡಿದ್ದೀರಾ ? ಷೇರ್ ಕ್ಯಾಪಿಟಲ್‌ನ್ನು ಕಲೆಕ್ಟ್ ಮಾಡಲು ಏನಾದರೂ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಾ ? ಅದು ಈಗ ಯಾವ ಹಂತದಲ್ಲಿ ಇದೆ ಎಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಳಂದ್‌ನಲ್ಲಿ ಒಂದು ಷುಗರ್ ಫ್ಯಾಕ್ಟರಿ ಪ್ರಾರಂಭ ಮಾಡುತ್ತೇವೆಂದು ಹೇಳಿ ಈಗಾಗಲೇ ೫೦-೫೫ ಲಕ್ಷ ರೂಪಾಯಿಗಳನ್ನು ಎಲ್ಲರಿಂದ ಕಲೆಕ್ಟ್ ಮಾಡಿ ಡಿಪಾಸಿಟ್ ಕೂಡ ಮಾಡಿದ್ದಾರೆ. ಇದಕ್ಕೆ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ?

ಮೂರನೆಯದಾಗಿ ನಾನು ತಮಗೆ ಪತ್ರವನ್ನೂ ಕೂಡ ಬರೆದಿದ್ದೇನೆ. ಗುರುಮಿಠ್‌ಕಲ್‌ನಲ್ಲಿ ಸ್ಟೇಟ್ ಮಾರ್ಕೆಟಿಂಗ್ ಯಾರ್ಡನ್ನು ಕನ್‌ಸ್ಟ್ರಕ್ಟ್ ಮಾಡುತ್ತಿದ್ದಂಥ ಕೆಲಸ ನಿಂತುಹೋಗಿದೆ. ಅದು ಯಾವಾಗ ನಿಂತುಹೋಯಿತು, ಸಂಬಂಧಪಟ್ಟವರಿಗೆ ಏನಾದರೂ ಹೇಳಿರುತ್ತೀರಾ ? ಅವರಿಂದ ಉತ್ತರವೇನಾದರೂ ಬಂದಿರುತ್ತದೆಯೋ. ಅವರು ಏನು ಹೇಳಿದ್ದಾರೆ ಅದನ್ನು ಹೇಳಬೇಕು.

ನಾಲ್ಕನೆಯದಾಗಿ ಈಗಾಗಲೇ ಅನೇಕ ಕಡೆ ಯಾರು ಯಾರು ಡಿಫಾಲ್ಟರ್ಸ್ ಇರುತ್ತಾರೆ ಅವರಿಗೆ ಇಂಟರೆಸ್ಟನ್ನು ವೇವ್ ಮಾಡುತ್ತೇವೆಂದು ಒಂದು ದೊಡ್ಡ ನಿರ್ಣಯವನ್ನೇ ತೆಗೆದುಕೊಂಡಿರುತ್ತೀರಿ. ಅದೇ ರೀತಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹೌಸಿಂಗ್ ಕೋಆಪರೇಟೀವ್ ಸೊಸೈಟಿಗಳೆಂದು ಸ್ಟೇಟ್ ಲೆವಲ್‌ನಲ್ಲಿ ಏನು ಇವೆ, ಅವು ಸುಮಾರು ೧೫-೨೦ ವರ್ಷಗಳಿಂದ ಡಿಫಾಲ್ಟ್ ಆಗಿರುತ್ತವೆ. ಆದ್ದರಿಂದ ಅಲ್ಲಿ ಇಲ್ಲಿಯವರೆಗೂ ಯಾರಿಗೂ ಸಾಲ ಸಿಗುತ್ತಿಲ್ಲ. ಇದು ಒಂದು ಸ್ಟಾಂಡರ್ಡ್ ಆಗಿರತಕ್ಕಂಥ ಜನರಲ್ ಕೋಆಪರೇಟೀವ್ ಸೊಸೈಟಿಯಾಗಿರುತ್ತದೆ. ಅಲ್ಲದೆ ಇದು ಒಂದು ಸ್ಟೇಟ್ ಲೆವಲ್ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಹೌಸಿಂಗ್ ಕೋಆಪರೇಟೀವ್ ಸೊಸೈಟಿಯಾಗಿರುವುದರಿಂದ ಇದಕ್ಕೆ ಪುನರ್ ಜೀವನ ಕೊಡಲು ಏನಾದರೂ ಹಣವನ್ನು ಕೊಟ್ಟು ಮತ್ತೆ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಆಕ್ಷಂದ್‌ನಲ್ಲಿ ೬೧ ಲಕ್ಷ ರೂಪಾಯಿಗಳ ಷೇರು ಕ್ಯಾಪಿಟಲ್‌ನ್ನು ವಸೂಲು ಮಾಡಿರುತ್ತಾರೆ. ನಾವು ಇನ್ನೂ ಹಣವನ್ನು ಏನು ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೋಗಿ ನೋಡಿದಾಗ ಅದಕ್ಕೆ ೫೦ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡುತ್ತೇವೆಂದು ಹೇಳಿದಾರೆ. ಲೆಟರ್ ಆಫ್ ಇಂಡೆಂಟ್ ಬಂದಮೇಲೆ ಹಣವನ್ನು ಕೊಡಬೇಕಾಗುತ್ತದೆ. ಅದು ಬಂದ ಮೇಲೆ ಹಣವನ್ನು ರಿಲೀಸ್ ಮಾಡುತ್ತೇನೆ.

ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹೌಸಿಂಗ್ ಸೊಸೈಟಿ ವಿಷಯ ನನಗೂ ಗೊತ್ತಿರುತ್ತದೆ. ನಾನು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿದ್ದಾಗ ಅದು ಬಂದಿದೆ. ಅದನ್ನು ರೆವ್ಯೂ ಮಾಡುವ ಸ್ಥಿತಿಯಲ್ಲಿಲ್ಲ. ತಾವು ಸಲಹೆಯನ್ನು ಕೊಟ್ಟಿದ್ದೀರಿ, ಅದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಲ್ಕು ಸಾವಿರ ರೂಪಾಯಿಗಳಂತೆ ಪ್ರತಿಯೊಬ್ಬರಿಗೂ ಸಾಲವನ್ನು ಕೊಟ್ಟಿರುತ್ತೀರಿ. ಮತ್ತೆ ಯಾರಿಗೂ ಕೊಟ್ಟಿಲ್ಲ. ಸೊಸೈಟಿಯನ್ನು ಎಕ್ಸಿಸ್ಟಿಂಗ್‌ನಲ್ಲಿ ಇಡುವ ಸಲುವಾಗಿ ಹೇಳುತ್ತಿದ್ದೇನೆ. ಬೇರೆಯವರಿಗೆ ವೇವ್ ಮಾಡಲಿಕ್ಕೆ ಆಗುತ್ತದೆ, ದೊಡ್ಡ ದೊಡ್ಡ ಷಿಪ್ಪಿಂಗ್ ಕಾರ್ಪೊರೇಷನ್‌ಗಳು ಮುಳುಗಿಹೋಗುತ್ತಿದ್ದರೂ ಅವುಗಳನ್ನು ಕೇಳುತ್ತಿಲ್ಲ, ಇವರಲ್ಲಿ ಒಂದು ಕೋಟಿ ರೂಪಾಯಿ ಖರ್ಚಾಗಿರಬಹುದು. ಅನೇಕರು ಮನೆಗಳನ್ನು ಕಟ್ಟಿಸಿಕೊಂಡಿರಬಹುದು. ಸೊಸೈಟಿಯಲ್ಲಿ ಡಿಫಾಲ್ಟರ್ ಆಗಿರುವ ಕಾರಣ ಡಿಫಾಲ್ಟರ್ ಅಲ್ಲದವರಿಗೆ ಏತಕ್ಕೆ ತೊಂದರೆಯನ್ನು ಕೊಡಬೇಕು. ಡಿಫಾಲ್ಟರ್ ಆಗಿರುವವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಸರ್ಕಾರ ಒಂದೊಂದು ಜಿಲ್ಲೆಯಲ್ಲೂ ಒಂದೊಂದು ಹೌಸ್ ಬಿಲ್ಡಿಂಗ್ ಸೊಸೈಟಿಯನ್ನು ಮಾಡಿದರು. ಹರಿಜನ ಗಿರಿಜನರಿಗೆ ಸಹಾಯ ಮಾಡುವ ಸಲುವಾಗಿ, ಆ ಉದ್ದೇಶವನ್ನು ಇಟ್ಟುಕೊಂಡೇ ಜನತಾ ಹೌಸಿಂಗ್ ಸ್ಕೀಮ್ ಮುಖಾಂತರ ಮಾಡುತ್ತಿದೆ. They deserve to be liquidated. Waiving of loan is to be considered by the Chief Minister.

ಮತ್ತೆ ಯಾದ್‌ಗಿರ್‌ದು ತಾವು ಕೇಳಿದಿರಿ. ಡೆಪ್ಯುಟಿ ಕಮಿಷನರ್‌ರವರನ್ನೇ ಚೀಫ್ ಪ್ರೊಮೋಟರ್ ಆಗಿ ನೇಮಕ ಮಾಡಿದ್ದೇವೆ. ೧೬ ಸಾವಿರ ರೂಪಾಯಿಗಳ ವರೆಗೆ ವಸೂಲಾಗಿದೆ.

ಡಾ|| ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ ಗ್ರಾಹಕರ ಚಳುವಳಿ ಬಗ್ಗೆ ಹೇಳುತ್ತಾ ಸರ್ಕಾರ ಫೇರ್‌ಪ್ರೈಸ್ ಡಿಪೋಗಳನ್ನು ಯಾವ ರೀತಿ ಕೊಡತಕ್ಕಂಥದ್ದು ಎಂಬುದರ ಬಗ್ಗೆ ಘೋಷಿಸಿತ್ತು ಅದಕ್ಕೆ ವಿರುದ್ಧವಾದ ನೀತಿಯಾಗಿದೆ. ಸಹಕಾರಿ ಸಚಿವರು ಒಂದು ದೊಡ್ಡ ಆಘಾತವನ್ನೇ ನೀಡಿದ್ದಾರೆ. ಪಬ್ಲಿಕ್‌ಗೆ ಖಾಸಗಿಯವರ ಬದಲಾಗಿ ವಸ್ತುಗಳನ್ನು ಸಹಕಾರಿ ಮೂಲಕ ಕೊಡುತ್ತೇವೆಂದು ಘೋಷಣೆ ಮಾಡಿದರು. ಇದರಿಂದಾಗಿ ಅನೇಕರು ನಾನೂರು, ಐನೂರು ಸದಸ್ಯರನ್ನು ಗೊತ್ತುಮಾಡಿ, ೫ ಸಾವಿರ ಷೇರುಬಂಡವಾಳವನ್ನು ಹೂಡಿ ಹೊಸ ಹೊಸ ಗ್ರಾಹಕರ ಸಂಘಗಳನ್ನು ಪ್ರಾರಂಭ ಮಾಡಲು ಒಂದು ದೊಡ್ಡ ಸಂಖ್ಯೆಯಲ್ಲಿ ಚಳುವಳಿಯೇ ನಡೆದು ಅನುಮತಿಯನ್ನು ತೆಗೆದುಕೊಂಡು ಸಂಘಗಳನ್ನು ಮಾಡಿದರು. ಡಿಪಾಸಿಟ್‌ನ್ನು ಕೂಡ ಮಾಡಿದರು. ರಿಜಿಸ್ಟರ್ ಮಾಡಿಕೊಡಿ ಎಂದು ಹೇಳಿದರೆ ಸಂಬಂಧಪಟ್ಟ ಅಧಿಕಾರಿಗಳಿಂದ ಒಂದು ಆಜ್ಞೆ ಬಂದಿತು ಅದು ಏನೆಂದರೆ ೫ ಸಾವಿರವಲ್ಲ ೫೦ ಸಾವಿರ ರೂಪಾಯಿಗಳೆಂದು ೫ ಸಾವಿರ ರೂಪಾಯಿಗಳ ಬದಲಾಗಿ ೫೦ ಸಾವಿರ ರೂಪಾಯಿಗಳೆಂದು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಪ್ರಶ್ನೆ ಕೇಳುತ್ತಿರುವುದೇನೆಂದರೆ ೪೦ ಸಾವಿರ ಜನಸಂಖ್ಯೆ ಇರುವ ಊರುಗಳಲ್ಲಿ ಮುನಿಸಿಪಾಲಿಟಿ ಪ್ರದೇಶಗಳಲ್ಲಿ ಷೇರು ಬಂಡವಾಳ ೨೦ ಸಾವಿರಕ್ಕೆ ಇಳಿಸಿದ್ದೀರಿ, ಹಳ್ಳಿ ಪ್ರದೇಶಗಳಲ್ಲಿ, ೫ ಸಾವಿರ ಜನಸಂಖ್ಯೆ ಇರುವ ಕಡೆ, ಸಣ್ಣ ಸಣ್ಣ ಟೌನ್ ಮುನಿಸಿಪಾಲಿಟಿಗಳು ಇರುವ ಕಡೆಯೂ ೫ ಸಾವಿರ ರೂಪಾಯಿಗಳನ್ನು ಇಡಬೇಕಾಗಿದೆ. ೫ ಸಾವಿರ ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕ್‌ಗಳಿಂದ ತೆಗೆದುಕೊಂಡು ಡಿಪಾಸಿಟ್ ಮಾಡುವುದಕ್ಕೆ ಆಗುವುದಿಲ್ಲ ಇದು ಒಂದು ನಿರಾಶಾದಾಯಕವಾದ ವಿಷಯವಾಗಿರುತ್ತದೆ. ಆದ್ದರಿಂದ ದಯವಿಟ್ಟು ಟೌನ್ ಮುನಿಸಿಪಾಲಿಟಿ ಏರಿಯಾದಲ್ಲಿ ೫ ಸಾವಿರ ರೂಪಾಯಿಗಳನ್ನು ಕೊಟ್ಟು ಗ್ರಾಹಕರ ಚಳುವಳಿಗೆ ಅವಕಾಶವನ್ನು ತಾವು ಮಾಡಿಕೊಡಬೇಕು. ಇಲ್ಲದಿದ್ದರೆ ತಾವು ಘೋಷಿಸಿದ ತತ್ವಕ್ಕೆ ಅನುಗುಣವಾಗಿಲ್ಲವೆಂದು ವಿರೋಧಿಸಬೇಕಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಈ ಬಗ್ಗೆ ಈಗಾಗಲೇ ಮಾತನಾಡಿದ್ದೇನೆ. ಮಾಡಿರುವ ಉದ್ದೇಶ ಈಗಾಗಲೇ ಸರಿಯಾದ ರೀತಿಯಲ್ಲಿ ವಿವರವಾಗಿ ಹೇಳಿದ್ದೇನೆ. ಈಗ ಫೇರ್

ಪ್ರೆಸ್ ಡಿಪೋಗಳನ್ನು ತೆಗೆದುಹಾಕಿ ನಾವು ಕನ್‌ಸ್ಯೂಮರ್ಸ್ ಕೋಆಪರೇಟಿವ್ ಸೊಸೈಟಿಗಳನ್ನು ತೆಗೆಯತಕ್ಕಂಥವರಿಗೆ ಎನ್‌ಕರೇಜ್ ಮಾಡುತ್ತೇವೆಂದು ಹೇಳಿದಮೇಲೆ ಬಹುಶಃ ೨೯೦-೩೦೦ ಅರ್ಜಿಗಳು ಬೆಂಗಳೂರಿನಲ್ಲಿ ಬಂದಿರುತ್ತದೆ. ನಾವು ಹೇಳಿದ ತಕ್ಷಣವೇ ೪-೫ ದಿವಸಗಳಲ್ಲಿಯೇ ಚೀಫ್ ಪ್ರಮೋಟರ್ ಮಾಡಿ ಹಣವನ್ನು ಬ್ಯಾಂಕ್‌ಗಳಿಗೆ ಕಟ್ಟಿ ರಿಜಿಸ್ಟರ್ ತಂದು ಬಿಡುತ್ತಾರೆಂದು ನಾವು ಯೋಚನೆ ಮಾಡಿದೆವು, ನಮ್ಮ ಕಡೆ ಏನಾಗುತ್ತದೆ ಎಂದರೆ ಹುಬ್ಬೆ ಮಳೆ ಬಂದಾಗ ಹಣಬೆಗಳು ಹುಟ್ಟಿಕೊಳ್ಳುತ್ತವೆ ಆರೀತಿ ಒಂದು ಸೀಸನ್, ಆ ಸೀಸನ್ ಆದಮೇಲೆ ನಿಂತು ಹೋಗುತ್ತದೆ. ಒಂದು ಸಹಕಾರಿ ಸಂಘಕ್ಕೆ ಕಡೆಪಕ್ಷ ಐದುನೂರು ಕಾರ್ಡುಗಳನ್ನು ಕೊಡಬೇಕಾಗುತ್ತದೆ. ೫೦ ಸಾವಿರ ಅಲಾಟ್‌ಮೆಂಟ್ ಕೊಟ್ಟರೆ ಒಬ್ಬೊಬ್ಬರಿಗೆ ೧೦-೧೫ ರೂಪಾಯಿಗಳ ವರೆಗೂ ಆಹಾರವನ್ನು ಕೊಡಬೇಕಾಗುತ್ತದೆ. ಅದಕ್ಕೆ ಹಣ ಎಲ್ಲಿ ಎಲ್ಲಿಂದ ಒದಗಿಸಿಕೊಡುತ್ತಾರೆ ? ಒಂದು ಸಮಯ ಜಿಲ್ಲಾ ಬ್ಯಾಂಕ್ ಹೋಗುತ್ತಾರೆ ಎಂದರೆ ಹದಿನಾರರಿಂದ ಹದಿನೆಂಟು ಪರ್ಸೆಂಟ್ ವರೆಗೆ ಇಂಟರೆಸ್ಟ್ ಕೊಡಬೇಕಾಗುತ್ತದೆ ಆರೀತಿ ಇಂಟರೆಸ್ಟ್ ಕೊಡಬೇಕಾದರೆ ನೀವು ರಾಜ್ಯದ ಲೆಕ್ಕ ಮೇನ್‌ಟೈನ್‌ಮಾಡಿ ಸೇಲ್ಸ್ ಟ್ಯಾಕ್ಸ್‌ನ್ನು ಕೊಟ್ಟರೆ ಸೊಸೈಟಿಗಳು ಉದ್ಧಾರವಾಗುತ್ತದೆಯೇ ? ಈವತ್ತು ಟಿ.ಎ.ಪಿ.ಸಿ.ಎಂ.ಎಸ್. ನ ಗತಿ ಏನಾಗಿದೆ ? ಅದೇ ರೀತಿ ಇದಕ್ಕೂ ಆಗುತ್ತದೆಂದು ಹೇಳಿ ತಮ್ಮ ಕಾಲಮೇಲೆ ತಾವು ನಿಂತುಕೊಳ್ಳಲು ಕನಿಷ್ಟಪಕ್ಷ ೩೦ ಸಾವಿರ ನಗರಪ್ರದೇಶಗಳಲ್ಲಿ ಷೇರು ಕ್ಯಾಪಿಟಲ್ ಕಲೆಕ್ಟ್ ಮಾಡಲು ಕಾರ್ಡುದಾರರು ಯಾರು ಇದ್ದಾರೆ ಅವರನ್ನೇ ಮೆಂಬರ್ಸ್‌ಸನ್ನಾಗಿ ಮಾಡಿಕೊಂಡು ೧೫-೨೦ ರೂಪಾಯಿಗಳನ್ನು ವಸೂಲು ಮಾಡಿದರೆ ಹಣವನ್ನು ಸಂಗ್ರಹಣೆ ಮಾಡಿದಂತೆಯೂ ಆಗುತ್ತದೆ, ಮತ್ತು ಅವರಿಗೆ ನನ್ನ ಹಣ ಇದೆ ಎಂದು ಇಂಟರೆಸ್ಟ್ ಕೂಡ ಇರುತ್ತದೆಂದು ಸಹಕಾರಿ ಸಂಘಗಳನ್ನು ಯಾವ ಉದ್ದೇಶದಿಂದ ಮಾಡಬೇಕೆಂದು ಹೇಳಿರುತ್ತೇವೆಯೋ ಆ ಉದ್ದೇಶ ಸಫಲವಾಗಲು ತಾವು ಎಲ್ಲ ದಯವಿಟ್ಟು ಸಹಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ನನ್ನ ಮೂರನೆಯ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿಲ್ಲ. ಗುರುಮಿಠ್‌ಕಲ್ ಸಬ್ ಮಾರ್ಕೆಟ್ ಯಾರ್ಡ್‌ನ್ನು ಕೂಡಲೆ ಕನ್‌ಸ್ಟ್ರಕ್ಷನ್ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಕರ್ನಾಟಕ ಡೆಟ್‌ರಿಲೀಫ್ ಆಕ್ಟ್ ಅಂದರೆ ಋಣ ವಿಮೋಚನ ಕಾಯಿದೆ. ತಮಗೆ ಗೊತ್ತಿದೆ ೨೦ ಅಂಶ ಕಾರ್ಯಕ್ರಮದಲ್ಲಿ ಇದು ಒಂದು ಮಹತ್ವವಾದಂಥ ಕಾರ್ಯಕ್ರಮ ಇದರಿಂದ ಹಳ್ಳಿಗಳಲ್ಲಿರತಕ್ಕಂಥ ಬಡಜನರಿಗೆ ಸಹಾಯವಾಗುತ್ತದೆ. ಅದರ ಬಗ್ಗೆ ಒಂದು ಶಬ್ದವನ್ನು ಕೂಡ ಉತ್ತರದಲ್ಲಿ ಹೇಳಲಿಲ್ಲ. ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದೀರಿ ಹೇಗೆ ಎಂಬುದರ ಬಗ್ಗೆ ಹೇಳಬೇಕು.

ಅಧ್ಯಕ್ಷರು.—ಅದು ಅವರಿಗೆ ಸಂಬಂಧಪಟ್ಟಿದ್ದಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಗುರುಮಿಠಕಲ್ ಬಗ್ಗೆ ಹಿಂದೆ ಕಾಗದವನ್ನು ಬರೆದಿದ್ದೇನೆ. ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ತಮಗೂ ಕೂಡ ಕಾಗದ ಬರೆದಿದ್ದೇನೆ. ಕಂಟ್ರಾಕ್ಟರಿಗೂ ಮತ್ತು ಎ.ಪಿ.ಎಂ.ಸಿ. ಸದಸ್ಯರಿಗೂ ಕಾಂಟ್ರವರ್ಸಿ ಬಂದು, ಕೆಲಸ ನಿಂತುಹೋಗಿದೆ. ನಾನು ಹೇಳಿರುತ್ತೇನೆ ಕಂಟ್ರಾಕ್ಟರಿಗೆ ಫೈನಲೈಜ್‌ಮಾಡಿ ಬೇರೆಯವರಿಗೆ ಕೊಟ್ಟು ಕೆಲಸ ಮಾಡಿಸಿ ಎಂದು. ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಅದು ಬಹುಶಃ ನಮಗೆ ಟ್ರಾನ್ಸ್‌ಫರ್ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಸರ್ಕಾರದಿಂದ ಇನ್ನೂ ನಮಗೆ ಸೂಚನೆ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮಗಲ್ಲದೆ ಮತ್ತೆ ಯಾರಿಗೆ ಬರುತ್ತದೆ ?

ಶ್ರೀ ಆರ್. ಎಲ್. ಜಾಲಪ್ಪ.—ಅದರ ಬಗ್ಗೆ ಮಾಹಿತಿ ಇಲ್ಲ.

ಅಧ್ಯಕ್ಷರು.—ನೀವು ಪ್ರಶ್ನೆಯನ್ನು ಕಳುಹಿಸಿಕೊಡಿ, ಉತ್ತರವನ್ನು ತರಿಸಿಕೊಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ದಾರಿಯಲ್ಲಿ ಹೋಗುತ್ತಿರುವಾಗ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದಾರಿಯಲ್ಲಿ ಅಂದರೆ......ದಾರಿಯಲ್ಲಿ ಹೋಗೋದು ನಮಗೂ ಗೊತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದೆ, ಪ್ರಶ್ನೆ ಕೇಳಿ ಅಫಿಷಿಯಲ್ ಆಗಿ ಉತ್ತರವನ್ನು ತರಿಸಿಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಮ್ಯಾಂಡ್ ಇರುತ್ತದೆ. ನನಗೆ ಗೊತ್ತಿರುವ ಮಟ್ಟಿಗೆ ಹೇಳತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ. ಕಾನೂನಿನ ಪರ್‌ವ್ಯೂನಲ್ಲಿ ಬರುತ್ತದೆ. ೨೦ ಅಂಶಗಳ ಕಾರ್ಯಕ್ರಮದ ಮಹತ್ವ ತಮಗೆ ಗೊತ್ತಿದೆ. ಇವರ ಬಗ್ಗೆ ಏತಕ್ಕೆ ಹೇಳುತ್ತಿಲ್ಲವೆಂದು ಕೇಳಿದರೆ ಉತ್ತರ ತರಿಸಿಕೊಡುತ್ತೇವೆಂದು ಹೇಳಿದರೆ, ಡಿಮ್ಯಾಂಡ್ ಇದೆ ಅದಕ್ಕಾಗಿ ಕೇಳುತ್ತಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರವನ್ನು ತರಿಸಿಕೊಡುತ್ತೇವೆಂದು ಹೇಳುತ್ತಿದ್ದೇವಲ್ಲ.

ಶ್ರೀ ಜಿ.ಎಸ್. ಬಾಗಲಕೋಟೆ.—ಮಾನ್ಯ ಅಧ್ಯಕ್ಷರೇ, ಸೊಸೈಟಿಗಳನ್ನು ಅಮಾಲ್ಗಮೇಷನ್ ಮಾಡಿದ ಕಾರಣದಿಂದ ಜನರು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಒಂದು ಊರಿನಿಂದ ಮತ್ತೊಂದು ಊರಿಗೆ ಹತ್ತು-ಹನ್ನೆರಡು ಮೈಲಿಗಳ ಅಂತರವಿದೆ. ನಮ್ಮ ಜಮಖಂಡಿ ತಾಲ್ಲೂಕ್‌ನಲ್ಲಿ ಒಂದೆರಡು ಕಡೆ ಈ ರೀತಿ ತೊಂದರೆ ಬಂದಿರುವ ಕಾರಣದಿಂದ ಒಂದೊಂದು ಊರಿಗೆ ಒಂದೊಂದು ಸಹಕಾರ ಸಂಘ ಬರುವಂತಹ ವ್ಯವಸ್ಥೆ ಮಾಡುತ್ತೀರಾ ? ಮತ್ತೆ ಕೋಆಪರೇಟಿವ್ ಸೊಸೈಟಿಗಳ ಕಾಯಿದೆಗೆ ಸಂಬಂಧಪಟ್ಟಂತೆ ಕೆಲವು ತಿದ್ದುಪಡಿಗಳು ಈ ಸಭೆಯಲ್ಲಿ ಪಾಸಾಗಿರುವ ಕಾರಣದಿಂದ ೬ ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ಅಧಿಕಾರದಲ್ಲಿರುವವರ ಬಗ್ಗೆ ಮತ್ತು ಹಣವನ್ನು ದುರುಪಯೋಗಪಡಿಸಿಕೊಂಡಿರುವವರ ಬಗ್ಗೆ ತೀವ್ರವಾದಂಥ ಕ್ರಮ ಕೈಕೊಳ್ಳುತ್ತೀರಾ ? ಮಾನ್ಯ ಮಂತ್ರಿಗಳು ರಾಗಿಯನ್ನು ಹತ್ತು ಸಾವಿರ ಟನ್ನಿನವರೆಗೆ ಕೊಂಡು ಸಂಗ್ರಹ ಮಾಡುವುದಾಗಿ ಹೇಳಿದರು. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದೇ ರೀತಿಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಹಾಗೂ ಬಿಜಾಪುರದಲ್ಲಿ ಜೋಳವನ್ನೂ ಸಹ ಸಂಗ್ರಹ ಮಾಡುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಸಣ್ಣ ಸಣ್ಣ ಸೊಸೈಟಿಗಳಾದರೆ ನಡೆಸಿಕೊಂಡು ಹೋಗುವುದು ಕಷ್ಟವಾಗುವುದರಿಂದ ಅಮಾಲ್ಗಮೇಷನ್ ಮಾಡಬೇಕೆಂದು ರಿಜರ್ವ್ ಬ್ಯಾಂಕ್‌ನವರು ಕೊಟ್ಟ ಆದೇಶದ ಪ್ರಕಾರ ಅಮಾಲ್ಗಮೇಷನ್ ಮಾಡುವುದರ ಮೂಲಕ ವಯಬಲ್ ಸೊಸೈಟಿಗಳನ್ನಾಗಿ ಮಾಡಲಾಯಿತು. ಆದರೆ ಇದರಿಂದ ಜನರಿಗೆ ತೊಂದರೆಯಾಗುತ್ತಿದೆ ಎಂದು ಸರ್ಕಾರಕ್ಕೆ ಮನವಿಗಳು ಬರುತ್ತಿವೆ. ಈಗಾಗಲೇ ಏರಿಯಾ ಆಪರೇಷನ್ ಜಾಸ್ತಿಯಾಯಿತು ಎಂಬ ಕಾರಣದಿಂದ ಒಂದೆರಡು ಕಡೆ ಬೈಫರ್‌ಕೇಟ್ ಮಾಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಇಂತಹ ತೊಂದರೆ ಎಲ್ಲಿದೆ ಎಂಬ ಬಗ್ಗೆ ಬರೆದು ತಿಳಿಸಬಹುದು ಅಥವಾ ನನ್ನ ಹತ್ತಿರ ಬಂದು ಮಾತನಾಡಿದರೆ ಅಲ್ಲಿನ ಸೊಸೈಟಿಯನ್ನು ಬೈಫರ್‌ಕೇಟ್ ಮಾಡಲು ಯೋಚನೆ ಮಾಡುತ್ತೇನೆ, ಮತ್ತೆ ಕೋಆಪರೇಟಿವ್ ಸೊಸೈಟಿಗಳ ತಿದ್ದುಪಡಿ ಕಾಯಿದೆ ಮೊನ್ನೆ ತಾನೆ ಇಲ್ಲಿ ಪಾಸಾಯಿತು. ಅದು ಇನ್ನೂ ರಾಜ್ಯಪಾಲರಿಗೆ ಹೋದಂತೆ ನನಗೆ ಕಾಣಿಸಲಿಲ್ಲ. ಅಲ್ಲಿಂದ ಅಪ್ರೂವ್ ಆಗಿ ಬಂದ ಮೇಲೆ ಹಣ ದುರುಪಯೋಗದ ಬಗ್ಗೆ ಮತ್ತು ೬ ವರ್ಷಗಳ ಬಗ್ಗೆ ಕ್ರಮ ಕೈಕೊಳ್ಳುತ್ತೇವೆ. ಜೋಳವನ್ನು ಸಹ ಕೊಂಡು ಸಂಗ್ರಹ ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಅಧಿಕಾರಿಗಳ ಜೊತೆ ಮಾತನಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಮಾರ್ಕೆಟ್ ಸೆಸ್‌ನಿಂದ ಬರುವ ಹಣವನ್ನು ಆಯಾ ಪ್ರದೇಶದ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲು ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಯಾರು ಹಣ ದುರುಪಯೋಗ ಮಾಡುತ್ತಾರೋ, ಅಂತವರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕಾಗಿ ವಿಶೇಷ ನ್ಯಾಯಾಲಯಗಳನ್ನು ರಚಿಸಬೇಕೆಂದು ಹೇಳುತ್ತೇನೆ. ೬ ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರಾಗಿ ಮುಂದುವರೆಯುತ್ತಿರುವವರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ತಿಳಿಸಬೇಕು. ತೊಂಡು ಬಾವಿಗಳನ್ನು ತೆಗೆಸಲು ಹಣದ ಖರ್ಚು ದುಬಾರಿಯಾಗುತ್ತದೆ. ಆದ್ದರಿಂದ ಸರ್ಕಾರದವರು ಹಣದ ಸಹಾಯ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬರುವ ಏಪ್ರಿಲ್ ಒಂದನೇ ತಾರೀಖಿನಿಂದ ಮಾರ್ಕೆಟ್ ಸೆಸ್ಸನ್ನು ಎರಡು ಪರ್ಸೆಂಟ್‌ನಿಂದ ಒಂದು ಪರ್ಸೆಂಟ್‌ಗೆ ಇಳಿಸಲಾಗುತ್ತಿದೆ. ಈ ಮೊದಲು ೨ ಪರ್ಸೆಂಟ್

ವಸೂಲಿ ಮಾಡುವುದು ಸರಿಯಲ್ಲವೆಂದು ಕೆಲವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಆದ್ದರಿಂದ ಈ ಹಿಂದಿನ ಬಾಕಿಯನ್ನು ವಸೂಲಿ ಮಾಡಲು ಯಾವ ರೀತಿ ಕ್ರಮ ಕೈಕೊಳ್ಳುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಸದಸ್ಯರು ಮಾರ್ಕೆಟ್ ಸೆಸ್‌ನಿಂದ ಬರುವ ಹಣವನ್ನು ಗ್ರಾಮಾಭಿವೃದ್ಧಿ ಕೆಲಸಗಳಿಗೆ ಏತಕ್ಕೆ ಬಳಸಬಾರದೆಂದು ಕೇಳುತ್ತಿದ್ದಾರೆ. ಈ ಹಣವನ್ನು ರಸ್ತೆಗಳಿಗೋಸ್ಕರ ಖರ್ಚು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿತ್ತು. ಆದರೆ ಹೈಕೋರ್ಟಿನ ತೀರ್ಮಾನದ ಪ್ರಕಾರ ರಸ್ತೆಗಳಿಗಾಗಿ ಈ ಹಣವನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಈ ಹಣವನ್ನು ಸಂತೆಗಳ ಅಭಿವೃದ್ಧಿಗೆ ಅಂದರೆ ಗೋಡೌನ್‌ಗಳನ್ನು ಕಟ್ಟಿಸಲು ಮತ್ತು ಷೆಲ್ಟರ್‌ಗಳನ್ನು ಕಟ್ಟಿಸಲು ಬಳಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ೬ ವರ್ಷಗಳಿಂದಲೂ ಅಧಿಕಾರದಲ್ಲಿರುವವರ ಬಗ್ಗೆ ಹೇಳಿದರು. ಆದರೆ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿ ಮಸೂದೆ ಪಾಸಾಗಿ ಕೇವಲ ೫-೬ ದಿವಸಗಳಾಯಿತು. ಆದ್ದರಿಂದ ಅದು ರಾಜ್ಯಪಾಲರಿಂದ ಅಪ್ರೂವ್ ಆಗಿ ಬಂದ ಮೇಲೆ ಮುಂದಿನ ಕ್ರಮ ಕೈಕೊಳ್ಳುತ್ತೇವೆ ಮತ್ತೆ ತೋಡುಬಾವಿಗಳ ಬಗ್ಗೆ ಕೇಳಿದ್ದಾರೆ. ಈ ಒಂದೊಂದು ತಾಲ್ಲೂಕ್‌ನಲ್ಲಿಯೂ ನೂರು ಬಾವಿಗಳಿಗೆ ಹಣ ಕೊಟ್ಟಿದ್ದೇವೆ. ಇದಕ್ಕೆ ೩ ಸಾವಿರ ರೂಪಾಯಿಗಳ ಸಬ್ಸಿಡಿ ಉಂಟು. ಆದ್ದರಿಂದ ಎಷ್ಟು ತೋಡುಬಾವಿಗಳನ್ನಾದರೂ ತೆಗೆಯಬಹುದು. ಆದಕ್ಕೆ ನಮ್ಮ ಅಭ್ಯಂತರವಿಲ್ಲ.

MR. SPEAKER.—Now the questions is :

"That the respective sums not exceeding the amounts shown in the list of Demands be granted to the Government to defry the charges which will come in course of payment during the financial year ending 31st day of March 1985 in respect of Demand No.53 and 54."

The motion was adopted and the respective sums were granted.
(As directed by the Chair the Demands are reproduced below)

Demand No. 53

"That a sum not exceeding Rs. 22,08,70,000 on Revenue Account and Rs. 22,53,70,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Co-operation (Excluding Regulated Markets.)"

Demand No. 54

"That a sum not exceedings Rs. 4,77,30,000 on Revenue Account be granted to the Government to degry the charges which will come in course of payment during the financial year ending 31st March 1985 in respect of Regulated Markets."

ANNOUNCEMENT

MR. SPEAKER.—I have received the following message from the Chairman, Legislative Council as required by rule 114 of the Rules of the Procedure and Conduct of Business in the Legislative Council: